ಕ್ರಮಸಂಖ್ಯೆ

ಭಾಗ-2

ದಿನಾಂಕ 29/10/87

112

(206)

1205

ಪಿ. ಮಾ. ಮುತ್ತಣ್ಣನವರ

ಸಂಗ್ರಹ

ಮುತ್ತಣ್ಣನ

ಶ್ರೀ ಮದ್ಭಗವದ್ಗೀತೆ

(ಅಷ್ಟಪದಿಯಲ್ಲಿ)

1983

1206

ಪ. ಮಾ. ಮಸ್ಕೈಜ

ಮಸ್ಕೈನ

ಶಿಮಸ್ಕ್ಯನವೀಕ್ಷೆ

(ಅಪ್ರಕಟಿತ)

1 (೨೧೦)

1207

ಪವಿತ್ರ ಜ್ಞಾನ

ಶ್ರೀ ಪವಿತ್ರ ಭಗವದ್ಗೀತೆ.

(ಅಧ್ಯಯನ ದಿಯಲ್ಲಿ)

ಲೇ. ಮ. ಪವಿತ್ರಜ್ಞಾ.

1983

ಬ್ರಿಟಿಷ್ ಕೊಲಂಬಿಯಾ, ಕೆನಡಾ.
ವೆನ್ಕೂವರ್ ನಗರ.

1208

— ಶ್ರೀಮದ್ಭಗವದ್ಗೀತೆ —

ಅನುಕ್ರಮಣಿಕೆ.

—		ಪ್ರಸ್ತಾವನೆ —	ಪುಟ - ೧
—		ಮಂಗಳಸ್ತುತಿ —	" 22
ಅಧ್ಯಾಯ	೧ —	ವಿಷಾದ ಯೋಗ —	" 25
"	೨ —	ಸಾಂಖ್ಯ ಯೋಗ —	" 37
"	೩ —	ಕರ್ಮ ಯೋಗ —	" 55
"	೪ —	ಜ್ಞಾನ ಯೋಗ —	" 66
"	೫ —	ಸನ್ಯಾಸ ಯೋಗ —	" 77
"	೬ —	ಆತ್ಮಸಂಯಮ ಯೋಗ —	" 85
"	೭ —	ವಿಜ್ಞಾನ ಯೋಗ —	" 97
"	೮ —	ಅಕ್ಷರಬ್ರಹ್ಮ ಯೋಗ —	" 105
"	೯ —	ರಾಜವಿದ್ಯಾ ಯೋಗ —	" 112
"	೧೦ —	ವಿಭೂತಿ ಯೋಗ —	" 121
"	೧೧ —	ವಿಶ್ವರೂಪ ಯೋಗ —	" 132
"	೧೨ —	ಭಕ್ತಿ ಯೋಗ —	" 146
"	೧೩ —	ಪ್ರಕೃತಿ-ಪುರುಷ ಯೋಗ —	" 151
"	೧೪ —	ಗುಣತ್ರಯ ಯೋಗ —	" 160
"	೧೫ —	ಪುರುಷೋತ್ತಮ ಯೋಗ —	" 167
"	೧೬ —	ದೈವಾಸುರ ಯೋಗ —	" 172
"	೧೭ —	ಶ್ರದ್ಧಾತ್ರಯ ಯೋಗ —	" 178
"	೧೮ —	ಮೋಕ್ಷ ಸನ್ಯಾಸ ಯೋಗ —	" 186
—		ಫಲಶ್ರುತಿ —	" 206

I. Hc. Mallikarjuna?,
Aug - 1982.

ಮಹಾತ್ಮ್ಯ ಸಹಿತ

— ಶ್ರೀಮದ್ಭಗವದ್ಗೀತೆ —

ಪ್ರಸ್ತಾವನೆ.

ನಮ್ಮ ದೇಶದಲ್ಲಿ ಸುಮಾರು ೨೦೦ ವರ್ಷಗಳಿಂದೀಚೆಗೆ ಪ್ರಚಾರವಾಗಲಾರಂಭಿಸಿದ, ಮತ್ತು ಹಲವು ಬಾರಿ ಇಂಗ್ಲಿಷ್ ಮತ್ತು ಇತರ ಯುರೋಪಿಯನ್ ಭಾಷೆಗಳಿಗೆ ಭಾಷಾಂತರವಾಗಿ ಬಹುಸಂಖ್ಯೆಯಲ್ಲಿ ಪ್ರಕಟವಾಗುತ್ತಿದ್ದ ಕೃತಿಗಳಲ್ಲಿ ಶ್ರೀಮದ್ಭಗವದ್ಗೀತೆಯು ಪ್ರಧಾನವಾದುದೆಂದು ಹೇಳಬಹುದು. ಕ್ರಿ. ಶ. ಹದಿನೆಂಟನೇ ಶತಮಾನದಾರಂಭದಲ್ಲಿ ಈ ದೇಶದಲ್ಲಿ ಬ್ರಿಟಿಷ್ ಆಳ್ವಿಕೆಯು ಪ್ರಾರಂಭವಾದ ನಂತರ ಅವರು ಕೈಗೊಂಡ ಹಲವು ಕ್ರಾಂತಿಕಾರಕ ಯೋಜನೆಗಳಲ್ಲಿ ನಮ್ಮ ಪೌರಾಣಿಕ ಗ್ರಂಥಗಳ ಅನ್ವೇಷಣೆ ಮತ್ತು ಪ್ರಕಟಣೆಗಳು ಪ್ರಾಮುಖ್ಯವಾಗಿವೆ. ಆ ವರೆಗೂ ಭಗವದ್ಗೀತೆಯು ಮಹಾಭಾರತದ ಒಂದು ಭಾಗವಾಗಿ ಹಲವರಿಂದ ಓದಲ್ಪಡುತ್ತಿದ್ದಿತಾದರೂ ಅದರ ಪಾವಿತ್ರ್ಯವನ್ನು ಭಾರತೀಯರಿಗೆ ಮೊದಲ ಬಾರಿಗೆ ತಿಳಿಸಿದ ಮಹತ್ಸಾಧನೆಯು ಪಾಶ್ಚಾತ್ಯ ವಿದ್ವಾಂಸರದಾಗಿದೆ.

ಪೂರ್ವಕಾಲದಲ್ಲಿ ಭಾರತೀಯರಿಗೆ ರಾಮಾಯಣ, ಮಹಾಭಾರತ ಮತ್ತು ಭಾಗವತ ಕಥೆಗಳು ಪೂರ್ತಿ ತಿಳಿದಿದ್ದಿತಾದರೂ ಆ ಮಹಾಕಾವ್ಯಗಳನ್ನು ಧಾರ್ಮಿಕ ದೃಷ್ಟಿಯಿಂದ ವ್ಯಾಖ್ಯಾನಿಸಿ ಜನಸಾಮಾನ್ಯರಿಗೆ ತಿಳಿಸಲು ಅಲ್ಲಲ್ಲಿ ಕೆಲವು ಆಚಾರ್ಯರಿದ್ದರಲ್ಲದೆ ಹೆಚ್ಚು ಓದು ಬರಹ ತಿಳಿದ ಜನ ಈಗ ಇರುವಂತೆ ಅಂದಿರಲಿಲ್ಲ. ಮಹಾಭಾರತ ಯುದ್ಧಪರ್ವದ ಒಂದೆಡೆ ಹುದುಗಿಸಲಾಗಿದ್ದ ಈ ಭಗವದ್ಗೀತಾ ಪ್ರಸಂಗವನ್ನಂತೂ ಜನಸಾಮಾನ್ಯರು ತಿಳಿದಿರಲಿಲ್ಲವೆಂದೇ ಹೇಳಬಹುದು. ಕ್ರಿ. ಶ. ಎಂಟನೇ ಶತಮಾನದಲ್ಲಿ ಇದ್ದ ಆದಿ ಶಂಕರಾಚಾರ್ಯರು ಮೊದಲ ಬಾರಿಗೆ ಮಹಾಭಾರತದ ಒಂದು ಭಾಗವಾಗಿದ್ದ ಈ ಭಗವದ್ಗೀತೆಯನ್ನು ಕಂಡುಹಿಡಿದು ಜನರಿಗೆ ತಿಳಿಸಿದರೆಂದು ಕೆಲವರು ಹೇಳುತ್ತಾರೆ, ಅದೇನಿದ್ದರೂ ಸುಮಾರು ಹದಿನೇಳನೇ ಶತಮಾನದವರೆಗೂ ಈ ಗೀತೆಯು ಜನಸಾಮಾನ್ಯರ ಆಸ್ತಿಯಾಗಿರಲಿಲ್ಲ, ಕೆಲವು ವೈದಿಕರು ಮತ್ತು ವಿದ್ವಾಂಸರು ಮಾತ್ರ ಇದನ್ನು ತಿಳಿದಿದ್ದಿರಬಹುದು. ಹೇಗೂ ಕಳೆದ ಇನ್ನೂರು ವರ್ಷಗಳಿಂದ ಪಾಶ್ಚಾತ್ಯ

ವಿದ್ವಾಂಸರು ನಮ್ಮ ಎಲ್ಲಾ ಸಾಹಿತ್ಯ ಮತ್ತು ಧರ್ಮ ಗ್ರಂಥಗಳನ್ನು ಅನ್ವೇಷಿಸಿ, ಸಂಪಾದಿಸಿ, ಪ್ರಕಟಿಸಿದಾಗ ಅವುಗಳೊಳಗೆ ಈ ಭಗವದ್ಗೀತೆಯೂ ಹಲವು ಪ್ರಬಲ ಪಾಶ್ಚಾತ್ಯ ತತ್ವಜ್ಞರ ಮೂಲಕವಾಗಿ ಬೆಳಕಿಗೆ ಬರಲು ಪ್ರಾರಂಭವಾಯಿತು, ಹಿಂದೂಧರ್ಮಕ್ಕೆ ಅದೊಂದು ಕೈಪಿಡಿಯೆಂದು ಪ್ರಖ್ಯಾತವಾದುದು. ಕ್ರೈಸ್ತರಿಗೆ ಬೈಬಲ್, ಮುಹಮ್ಮದೀಯರಿಗೆ ಖುರಾನ್ ಹೇಗೋ ಹಾಗೆಯೇ ಹಿಂದುಗಳಿಗೆ ಭಗವದ್ಗೀತೆಯೆಂಬುದಾಗಿ ಇತ್ತೀಚೆಗೆ ಜನಜನಿತವಾಯಿತು. ಪ್ರಬಲ ಸಂಸ್ಕೃತ ವಿದ್ವಾಂಸ, ಭಾಷಾಶಾಸ್ತ್ರಜ್ಞ ಮತ್ತು ಪೌರ್ವಾತ್ಯಜ್ಞನ, Sir Charles Wilkins ಇವನು ಮೊದಲ ಬಾರಿಗೆ ಭಗವದ್ಗೀತೆಯನ್ನು ಇಂಗ್ಲಿಷಿಗಿಳಿಸಿದನು. ಆ ಇಂಗ್ಲಿಷ್ ಗ್ರಂಥಕ್ಕೆ, ಅಂದಿನ ಭಾರತದ ಮೊದಲ ಗವರ್ನರ್-ಜನರಲ್ ಆಗಿದ್ದ Warren Hastings ಇವನು ಎರಡು folio ಪುಟಗಳ ಮುನ್ನುಡಿಯನ್ನು ಬರೆಯುತ್ತಾ, ಬ್ರಿಟಿಷ್ ಸರಕಾರಕ್ಕೆ ಈ ರೀತಿಯಾಗಿ ಅದರ ಪರಿಚಯವನ್ನು ಮಾಡಿದನು:—

"---I presume to offer, and recommend through you, for an offering to the public, a very curious specimen of the literature, the Mythology and Morality of the ancient Hindus----I hesitate not to pronounce the Gita a great performance of great originality, of a sublimity of conception, reasoning and diction, almost unequalled; and a single exception, among all the known religions of mankind----."

ಭಗವದ್ಗೀತೆಯ ಮೊದಲ ಭಾಷಾಂತರಕಾರ Charles Wilkins ಇವನು ಅದನ್ನು ಕುರಿತಾಗಿ ಹೀಗೆಂದನು:—

'The Bhagavad Gita is certainly one of the most curious and the most characteristic work we have received from the East."

ಇದು 1783 ರಲ್ಲಿ ಹಿಂದೆಯೇ ಹೇಳಿದ ಮಾತಾಗಿದೆ. ಕನ್ನಡದಲ್ಲಿ ನಾಗರಸ ಕವಿಯು ಗೀತೆಯನ್ನು ಭಾಮಿನಿ ಷಟ್ಪದಿಯಲ್ಲಿ ಬರೆದಿದ್ದನು. ಅದನ್ನು ಕಳೆದ ಶತಮಾನದಲ್ಲಿ ಮುದ್ರಿಸಿ ಪ್ರಕಟಿಸಿದರಾದರೂ ಜನಸಾಮಾನ್ಯರು ಅದನ್ನು ಓದಿ ಅರಗಿಸಿಕೊಳ್ಳುವಂಥ ಕೃತಿಯಾಗಿ ಜನಪ್ರಿಯವಾಗಲಿಲ್ಲ. ಆದರೆ ಕನ್ನಡದಲ್ಲಿ ಮೊದಲ ಬಾರಿಗೆ ಭಗವದ್ಗೀತೆಯನ್ನು 1844 ರಲ್ಲಿ John Garrett ಇವನು ಭಾಷಾಂತರಿಸಿದನು. ಇದು 1846 ರಲ್ಲಿ ಬೆಂಗಳೂರಿನ ವೆಸ್ಲೀ ಪ್ರೆಸ್ಸಿನಲ್ಲಿ ಮುದ್ರಣವಾಯಿತು. John

Garrett ಎಂಬ ಹಳೆ ಮೈಸೂರು ರಾಜ್ಯದ ವಿದ್ಯಾ ಇಲಾಖೆಯ ಮಹಾಧ್ಯಕ್ಷರಾಗಿದ್ದನು. Folio ಪುಟಗಳಲ್ಲಿ ಮೊದಲ ಬಾರಿಗೆ ಕನ್ನಡ ಗದ್ಯರೂಪದಲ್ಲಿ ಕಾಣಿಸಿಕೊಂಡ ಈ ಗೀತಾಕೃತಿಯು ಇಂಗ್ಲೀಷ್ ಅನುವಾದದಲ್ಲಿ, ಮತ್ತು ಅದಕ್ಕೆ ಮೇಲೆ ಹೇಳಿದಂತೆ Warren Hastings ಇವನ ಮುನ್ನುಡಿ, Ralph Griffith ಇವನು ಗೀತೆಯನ್ನು ಕುರಿತಾಗಿ ಬರೆದ ಪ್ರಬಂಧ, George Weigle ಇವನು ಬರೆದ ಗೀತೆಯ ಜರ್ಮನ್ ಭಾಷಾಂತರ, Baron Humboldt ಇವನು ಜರ್ಮನ್‌ನಲ್ಲಿ ಬರೆದ ಗೀತೆಯನ್ನು ಕುರಿತಾದ ಟೀಕೆ, ಮತ್ತು A. G. Schelegel ಇವನು ಬರೆದ ಗೀತೆಯ ಲ್ಯಾಟಿನ್ ಭಾಷಾಂತರಗಳನ್ನೆಲ್ಲ ತನ್ನ ಕನ್ನಡ ಅನುವಾದದ ಜತೆಗೆ ಸೇರಿಸಿ John Garrett ಇವನು ಪರಿಶಿಷ್ಟವಾದ ಗೀತೆಯನ್ನು ಕರ್ನಾಟಕದಲ್ಲಿ (ಪ್ರಥಮ ಭಾರತದಲ್ಲಿಯೇ) ಮೊದಲ ಬಾರಿಗೆ ಒಂದ್ನೂರೈವತ್ತು ವರ್ಷಗಳಿಗೆ ಹಿಂದೆಯೇ ಪ್ರಕಟಿಸಿದನು. ಅಂದಿನ ಆ ಇವನ ಕನ್ನಡ ಅನುವಾದ ಶೈಲಿಯಾದರೋ ತುಂಬಾ ಸರಳವಾಗಿದೆ. ಉದಾಹರಣೆಗೆ:—

ಅಧ್ಯಾಯ ೧ — ಶ್ಲೋಕ ೧ — "ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಯುದ್ಧಾಪೇಕ್ಷೆಯುಳ್ಳವರಾಗಿ ಕೂಡಿರುವ ನನ್ನ ಮಕ್ಕಳಾದ ಕೌರವರೂ ಪಾಂಡವರೂ ಏನು ಮಾಡುತ್ತಾರೆ, ಹೇಳಯ್ಯಾ ಸಂಜಯಾ?"

ಶ್ಲೋಕ ೧೨: "ಆ ದುರ್ಯೋಧನನಿಗೆ ಸಂತೋಷವನ್ನು ಹುಟ್ಟಿಸುವವನಾಗಿ ಗುರುಕುಲ ಪಿತಾಮಹನಾದ ಭೀಷ್ಮನು ಪ್ರತಾಪಶಾಲಿಯಾದುದರಿಂದ ಗಟ್ಟಿಯಾಗಿ ಸಿಂಹನಾದವನ್ನು ಮಾಡಿ ಶಂಖವನ್ನು ಊದಿದನು."

ಹೀಗೆ ತಿಳಿಗನ್ನಡ ಶೈಲಿಯಲ್ಲಿ ಇವನ ಅನುವಾದವು ಉದ್ದಕ್ಕೂ ಹರಿದಿದೆ. ಇದರನಂತರ 1847 ರಲ್ಲಿ George Weigle ಇವನ ಬರಹದೊಡನೆ 1855 ರಲ್ಲಿ J. C. Thompson ಇವನ ಗೀತೆಯ ಇಂಗ್ಲೀಷ್ ಭಾಷಾಂತರವೂ ಪ್ರಕಟವಾಯಿತು. ಅದೇ ವೇಳೆಗೆ ಇಟಾಲಿಯನ್, ರಷ್ಯನ್, ಡಚ್, ಫ್ರೆಂಚ್ ಭಾಷೆಗಳಲ್ಲೂ ಗೀತೆಯ ಭಾಷಾಂತರಗಳಾದುವು. ಈ ಎಲ್ಲಾ ಭಾಷಾಂತರಕಾರರಿಗೆ Von Schelegel ಇವನು ಜರ್ಮನ್‌ನಲ್ಲಿ ಬರೆದ ಗೀತೆಯು ವಿಶೇಷ ಸ್ಫೂರ್ತಿಯನ್ನು ಒದಗಿಸಿತು. ಈ ಧರ್ಮಗ್ರಂಥವನ್ನು ಕುರಿತಾಗಿ ಇವನು ಹೀಗೆಂದಿದ್ದನು:—

"It (the Gita) is the most beautiful and perhaps the only true philosophical poem, that the whole range of literature known to us has produced

ಹೀಗೆ ಕಳೆದ ಶತಮಾನದ ಹಲವು ಶ್ರೇಷ್ಠ ಪಾಶ್ಚಾತ್ಯ ವಿದ್ವಾಂಸರಿಗೆ ತಮ್ಮ ತಾತ್ವಿಕ ವಿವೇಚನೆಗೆ ಹಿಂದಿನ ಹೊಸ ವಿಚಾರಗಳನ್ನು ಕೊಡಲು ಭಗವದ್ಗೀತೆಯು ಸಹಾಯಕವಾಯಿತು, W. Milman ಇವನು ಗೀತೆಯನ್ನು ಕುರಿತಾಗಿ ಹೀಗೆಂದಿದನು:-

"It (the Gita) reads like a noble fragment of Empedocles or Lucretius, introduced into the midst of the Homeric epic."

Wheeler Tolboys ಇವನು ಭಗವದ್ಗೀತೆಯ ಬಗ್ಗೆ ಈ ರೀತಿ ಬರೆದಿದನು:-

"There is something singularly striking and magnificient in the introduction of this solemn discussion on the nature of the godhead and the destiny of the man, in the midst of fury and tumult in which it occurs."

ಭಗವದ್ಗೀತೆಯನ್ನು "Song Celestial" ಎಂಬುದಾಗಿ ಕರೆದ ಮತ್ತು ಉಪನಿಷದ್ದ, Light of Asia - ಇತ್ಯಾದಿಗಳನ್ನು ಬರೆದು ಪ್ರಸಿದ್ಧನಾದ Sir Edwin Arnold (1832-1904) ಇವನು ಸಂಸ್ಕೃತಗಳಿಂದ ಕಾವ್ಯದಲ್ಲಿ ಇಂಗ್ಲೀಷಿಗೆ ಭಾಷಾಂತರಿಸಿದ್ದಾನೆ, ನಾಲ್ಕನೇ ಅಧ್ಯಾಯದ "ಇಮಂ ವಿವಸ್ವತೇ ಯೋಗಂ,"- ಈ ಶ್ಲೋಕವನ್ನು ಹೀಗೆ ಹೇಳಲಾಗಿದೆ:-

"This deathless (Karma) Yoga, this deep Union I taught Vivaswata (Sun), the Lord of Light, Vivaswata to Manu gave it; he to Ikshwaku; so passed it down the line of all my royal Rishis then with years, the Truth grew dim and perished, Noble Prince."

"ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ" - ಈ ಶ್ಲೋಕ ಹೀಗಿದೆ:-

" - - - - - - - Either being killed -
This wilt win Swarga's safety, or alive
And victor - thou wilt reign an earthy king;
Therefore, arise, thou son of Kunthi - - -."

Edwin Arnold ಇವನು 1825ರಲ್ಲಿ ಬರೆದ ಗೀತೆಯ ನಂತರ L. T. Barnett ಇವನು 1905ರಲ್ಲಿ Frankner Edgerton ಇವನು 1944ರಲ್ಲಿ ಭಗವದ್ಗೀತೆಯನ್ನು ಇನ್ನೂ ಆಧುನಿಕ ರೀತಿಯಲ್ಲಿ ಬರೆದು ಪ್ರಚಾರಪಡಿಸಿದರು.

ಭಾರತೀಯ ತತ್ವಶಾಸ್ತ್ರವನ್ನು ಮೊದಲಬಾರಿಗೆ ಭಾರತೀ

ಯತಿರಿಗೆ ಮಾತ್ರವಲ್ಲ, ಇಡೀ ಪ್ರಪಂಚಕ್ಕೆ ಪರಿಚಯ ಮಾಡಿಸುವ ಕಾರ್ಯದಲ್ಲಿ ಅಂದಿನ ಯುರೋಪಿಯನ್ ವಿದ್ವಾಂಸರು ನಮ್ಮ ವೇದೋಪನಿಷತ್ತುಗಳನ್ನೆಲ್ಲ ಬಹಳ ಗಂಭೀರವಾಗಿ ಕಂಡಿದ್ದಾರೆ. ಕ್ರಿ.ಶ. 15ನೇ ಶತಮಾನದಿಂದ್ಲೂ ಇವರು ಈ ದಾರಿಯಲ್ಲಿ ನಮ್ಮ ತತ್ವಶಾಸ್ತ್ರದ ಅನ್ವೇಷಣೆಗೆ ಆರಂಭಿಸಿದ್ದಾರೆ:—

"The study of Indian literature requires to be embraced by such students and patrons as in the 15th and 16th centuries, suddenly kindled an ardent appreciation of the beauty of classical learning----."

ವೇದಾಂತ, ವೇದ ಸಂಹಿತೆ, ಪುರಾಣ ಇತ್ಯಾದಿಗಳನ್ನೆಲ್ಲ ಭಾಷಾಂತರಿಸಿದ ಆ ಜನರ ಸಂಖ್ಯೆ ಅದೆಷ್ಟೋ! ಅವರಲ್ಲಿ Prof. Deusseau ಇವನು ವೇದಾಂತವನ್ನು ಕುರಿತಾಗಿ:—

"Vedanta, in its unfalsified form, is the strongest support of pure morality, and is the greatest consolation in the sufferings of life and death."

ಎಂಬುದಾಗಿಯೂ, ಉಪನಿಷತ್ತುಗಳನ್ನು ಕುರಿತಾಗಿ ಪ್ರಸಿದ್ಧ ಜರ್ಮನ್ ತತ್ವಶಾಸ್ತ್ರಜ್ಞ Von Schoponhaur ಇವನು:—

"Upanishads----have been the solace of my life, and they will be the solace of my death,"

ಎಂಬುದಾಗಿಯೂ ಹೇಳಿದರು, ಭಗವದ್ಗೀತೆಯಂತೂ J. W. Hauer ಇವನಿಗೆ "of imperishable significance" ಆದಂಥ ಮಹತ್ವಪೂರ್ಣವಾಗಿ ಕಂಡುಬಂದಿದೆ, "Here spirit is at work that belongs to our spirit" ಎಂಬುದಾಗಿ ಅವನು ಮನಗಂಡಿದ್ದಾನೆ. ಮತ್ತೊಬ್ಬ ಪಾಶ್ಚಾತ್ಯ ವಿದ್ವಾಂಸ Aldnous Huxley ಇವನು ಗೀತೆಯ ಬಗ್ಗೆ ಹೀಗೆಂದಿದ್ದಾನೆ:—

"The Gita is one of the clearest and most comprehensive summaries of the perennial philosophy ever to have been made. Hence its enduring value, not only for Indians, but for all mankind."

ಈ ದೃಷ್ಟಿಯಿಂದ ಮತ್ತು ತುಂಬಾ ಶ್ರದ್ಧೆಯಿಂದ ಗೀತೆಯನ್ನು ಅನುವಾದಿಸಿದವರಲ್ಲಿ K. T. Telang ಇವನು 1882ರಲ್ಲಿ ಮತ್ತು Doghlas Hill ಇವನು 1928ರಲ್ಲಿ, ಪ್ರಕಟಿಸಿದ ಗ್ರಂಥಗಳು ಬಹು ಜನಪ್ರಿಯವಾದವು. ಇವರೆಲ್ಲರಿಗಿಂತಲೂ ಗೀತೆಯನ್ನು

ನಿಷ್ಠೆಯಿಂದ ಓದಿ ಅರಗಿಸಿಕೊಂಡು ಭಾಷಾಂತರಿಸಿ ಕೃತಾರ್ಥರಾದವರಲ್ಲಿ Mrs. Annie Besant ಇವರು ಪ್ರಮುಖರಾಗಿದ್ದಾರೆ. ಇವರು ಬ್ರಹ್ಮವಿದ್ಯಾ ಜ್ಞಾನಿ, ವೇದಾಂತಿ, ತತ್ತ್ವಶೋಧಕಿ, ರಾಜಕಾರಣಿ ಪತ್ರಕರ್ತೆಯಾಗಿ 1893 ರಿಂದ 1933 ರ ವರೆಗೆ ನಲ್ವತ್ತು ವರ್ಷಗಳು ಕಾಲ ಈ ದೇಶದಲ್ಲಿದ್ದರು. ಇವರ ಕೃತಿಗಳು ವಿದ್ಯಾಂತರ ಕೃತಿಗಳಂತೆ ಪ್ರಕಾರವಾದುದು ಈ ಭಗವದ್ಗೀತೆಯೆಂದೆನ್ನಬಹುದು. ಕಳೆದ ಎಂಭತ್ತು ವರ್ಷಗಳ ಅವಧಿಯಲ್ಲಿ ಇವರ ಗೀತಾ ಕೃತಿಯು ಸುಮಾರು ಹದಿನೈದು ಬಾರಿ ಪುನರ್ಮುದ್ರಣಗೊಂಡಿದೆ. Dr. Annie Besant ಇವರ ಗೀತಾನುವಾದವು ಸರಳವೂ ಜನಾದರಣೀಯವೂ ಆಗಿದೆ. ಉದಾಹರಣೆಗೆ "ಶ್ರುತಿ ವಿಪ್ರತಿಪನ್ನಾ ತೇ ಯದಾ-" ಈ ಶ್ಲೋಕವು ಇವರಿಂದ ಹೀಗೆ ಭಾಷಾಂತರವಾಗಿದೆ:—

"When thy mind bewildered by the scriptures shall stand immovable, fixed in contemplation, then shalt thou attain unto Yoga."

ಇತರ ಗೀತಾನುವಾದಕರಂತೆ ಇವರೂ ಪದಾರ್ಥಸಹಿತವಾಗಿ ಟಿಪ್ಪಣಿಯನ್ನು ಪ್ರತಿ ಶ್ಲೋಕದ ಬಗ್ಗೆ ಕೊಟ್ಟು ಹೋಗಿದ್ದಾರೆ. ಈ ದೃಷ್ಟಿಯಿಂದಲೂ ಪಾಶ್ಚಾತ್ಯ ಜೀವಿ ಪುರಸ್ಕಾರ ಮಾಡುವ ಸರಿಪಕ್ಷವಾಗಿ ತೋರುತ್ತದೆ. ಪ್ರಪಂಚದ ಹಲವಾರು ಭಾಷೆಗಳಲ್ಲಿಯೂ ಈ ಗೀತಾನುವಾದ ಕಾರ್ಯವು ಕಳೆದ ಇನ್ನೂರು ವರ್ಷಗಳಿಂದಲೇ ನಡೆದಿದೆ. ಗೀತೆಯು ಮಹತ್ವವಾದೊಂದು ಧರ್ಮಗ್ರಂಥವೆಂದು ಲೋಕವಿಖ್ಯಾತವಾಗಿದೆ.

ಪಾಶ್ಚಾತ್ಯರು ಹಾಕಿದ ಈ ಮೇಲ್ಪಂಕ್ತಿಯನ್ನನುಸರಿಸಿ ಇತ್ತೀಚಿಗೆ ಭಾರತೀಯ ವಿದ್ವಾಂಸರು ಗೀತೆಯ ಮೇಲೆ ವ್ಯಾಖ್ಯಾನ ನಡೆಸಿದ್ದಾರೆ. ಮಹಾದೇವಶಾಸ್ತ್ರಿ (1901), ಬಾಲಗಂಗಾಧರ ತಿಲಕ ಇವರ "ಗೀತಾರಹಸ್ಯ", ಅರವಿಂದ ಘೋಷ್ ಇವರ ಗೀತಾ ಪ್ರಬಂಧಗಳು, ಮಹಾತ್ಮ ಗಾಂಧಿಯ "ಅನಾಸಕ್ತಿ ಯೋಗ", ಡಿ. ಎಸ್. ಶರ್ಮಾ ಇವರ ಗೀತಾನುವಾದ, ಸ್ವಾಮಿ ಪ್ರಭಾವಾನಂದ, ಸ್ವಾಮಿ ಸ್ವರೂಪಾನಂದ (ಟೀಕೆ, ಟಿಪ್ಪಣಿಗಳ ಸಮೇತವಾಗಿ), ಡಾ. ಎಸ್. ರಾಧಾಕೃಷ್ಣನ್, ಮಹದೇವ ದೇಸಾಯಿ, ಬೆಂಬಾಯಿಯ ಭಾಯಿರಾವ್ ಪಟೇಲ್, (ಪದ್ಯರೂಪದಲ್ಲಿ), ಹರಿಕೃಷ್ಣ ದಾಸರ ಭಕ್ತಿವೇದಾಂತ ಸ್ವಾಮಿ, ಹೀಗೆ ಹಲವರು ತಮ್ಮ ಟೀಕೆ ವ್ಯಾಖ್ಯಾನಗಳ ಸಮೇತವಾಗಿ ಬರೆದ ಭಗವದ್ಗೀತೆಗಳು ಇಂಗ್ಲಿಷ್ ಸಾಹಿತ್ಯಕ್ಕೆ ಇತ್ತ ಅಪಾರ ಕೊಡುಗೆಯಾಗಿವೆಯುಳ್ಳದೇ ಈ ಮೇಲಿನ ಶ್ರೇಷ್ಠ ವ್ಯಕ್ತಿಗಳು ಇಂಗ್ಲಿಷ್ ಭಾಷೆಯಲ್ಲಿ

ಬರೆದ ಗೀತಾ ಕೃತಿಗಳು ದೇಶ ವಿದೇಶಗಳಲ್ಲೆಲ್ಲ ವಿಶೇಷ ಪ್ರಚಾರವಾಗಿವೆ; ಹಾಗೂ ಜನಪ್ರಿಯವಾಗಿವೆ.

ಹೀಗೆ ಇಷ್ಟೆಲ್ಲ ಜನರು ಗೀತೆಯನ್ನು ಕುರಿತಾಗಿ ಬರೆದಿದ್ದರೂ ಗೀತಾನುವಾದ ಕಾರ್ಯವನ್ನು ನಡೆಸಿದ್ದರೂ, ಇದರ ಮೇಲೆ ನಿಷ್ಪಕ್ಷಪಾತವಾದ ಟೀಕೆಯನ್ನು ಮೊದಲ ಬಾರಿಗೆ ಬರೆದವರು ಪಾಶ್ಚಾತ್ಯರೇ ಎಂದೆನ್ನಬೇಕಾಗಿದೆ. ಉದಾಹರಣೆಗಾಗಿ ದ್ರಾವಿಡ ಭಾಷಾ ವಿಶಾರದನೂ, ಪ್ರಸಿದ್ಧ ಕ್ರೈಸ್ತ ಧರ್ಮ ಗುರುವೂ ಆಗಿದ್ದ ಶ್ರೇಷ್ಠ ವಿದ್ವಾಂಸ Bishop Robert Caldwell ಇವನು ಬೈಬಲ್ ವಿಮರ್ಶಕನ ದೃಷ್ಟಿಯಿಂದ ಬೈಬಲ್ ನೀತಿಯಾಗಿ ತನಗೆ ಕಂಡುಬಂದ ಕೆಲವು ವಿಷಯಗಳನ್ನು ಭಗವದ್ಗೀತೆಯನ್ನು ಕುರಿತಾಗಿ ಹೀಗೆ ಹೇಳಿರುವನು;—

"The Gita nowhere exhibits any sense of the evil of sin considered as violation of law, as defiling the conscience, and as counter-acting the end for which the man was created. It makes no provision for the re-establishment of the authority of the divine law-giver by the expiation of sin in such manners as to render forgiveness compatible with justice. It teaches us nothing and knows nothing respecting the forgiveness of sin. It makes no provision for the healing of the wound of sin-sick soul by the communication of sanctifying grace, and instructi[on] in sanctifying truth. The salvation it teaches is not a salvation from sin by means of new birth to righteousness, commencing in the present life and perfecting hereafter, but merely a salvation from the necessity of being born in repeated births, by means of final emancipation of spirit from matter.

The moral system of the Gita fails, therefore in the most essential points the vindication of the justice of the moral Governor of the Universe, and the restoration of harmony between man's moral nature and the consitution of things under which he is placed."

ಅಷ್ಟೇ ಅಲ್ಲ; ತನ್ನ ಕ್ರೈಸ್ತ ಧರ್ಮದ ದೃಷ್ಟಿಯಿಂದ ಗೀತೆಯು

ಬಗ್ಗೆ ಈ ರೀತಿ ಹೇಳಿದ Bishop Caldwell ಇವನು ಮುಂದುವರಿಯುತ್ತಾ ಹೀಗೆಂದುದು ಇನ್ನಷ್ಟು ಗಮನಾರ್ಹವಾಗಿದೆ!—

"The poem (the Gita) bears internal evidence that it was written by a Vaishnava Brahmin, who had the ordinary Hindu polytheistic and pentheistic ideas, who sought to uphold caste and privileges of his order, while he endeavoured to harmonise some doctrines of Hindu philosophy, and to give prominence to Krishna Bhakti. A blasphemous claim is made that "the Deity" spoke the words which he wrote and the book was foisted into the Mahabharata to get the support of its authority."

ಈ ಹೇಳಿಕೆಯನ್ನು ನಮ್ಮ ಗೀತಾಭಿಮಾನಿಗಳು ತಾವು ಶಾಂತದಿಂದ, ಸಹನೆಯಿಂದ ಗಮನಿಸಬೇಕಾಗಿದೆ. ಪಾಶ್ಚಾತ್ಯ ಧರ್ಮಗುರುವಾದ ಕಾಲ್ಡ್ವೆಲ್ಲನು ನಮಗೆ ಕಹಿಯೆನ್ನಿಸುವಂಥ ಕಟು ಮಾತುಗಳನ್ನು ಹೇಳಿದನಾದರೂ ಅದರಲ್ಲಿರುವ ಸತ್ಯಾಂಶವನ್ನು ನಾವು ಹಂಸಕ್ಷೀರ ನ್ಯಾಯಕ್ಕನುಸಾರವಾಗಿ ಪರಿಶೀಲಿಸಬೇಕಾಗಿದೆ. ಸಾಹಿತ್ಯ ದೃಷ್ಟಿಯಿಂದ ಅದೊಂದು ಅಮೋಘ ಕೃತಿಯೆಂಬುದಾಗಿ Robert Caldwell ಇವನು ಹೇಳುತ್ತಾನಾದರೂ ಅದೊಂದು ಧರ್ಮಗ್ರಂಥವೋ ಅಲ್ಲವೋ ಎಂಬ ಸಂದೇಹವನ್ನು ಖಚಿತವಾದ ನಿಲುವಿನಿಂದ ಹೇಳುತ್ತಾನೆ.

" The style of the composition is flowing and elegant but the philosophy taught is unsound and the doctrine immoral, It is poison administered in honey---,"

ಇದು ಬಹಳ ಕಹಿಯಾದ ಸತ್ಯವಾಗಿದೆ. ಕಳೆದ ಶತಮಾನದ ಪಾಶ್ಚಾತ್ಯ ವಿದ್ವಾಂಸರು ಭಗವದ್ಗೀತೆಯನ್ನು Bishop Caldwell ಇವನು ಅವಹೇಳನಿಸಿದಂತೆ ಅವಹೇಳನಿಸಲಿಲ್ಲ. ಅವರೆಲ್ಲ ಅದೇನೋ ಉತ್ಸಾಹದಿಂದ ಗೀತೆಯು ಮತ್ತೊಂದು ವಿಶಿಷ್ಟ ಭಾರತೀಯ ಕೃತಿಯೆಂಬುದಾಗಿ ಅದನ್ನು ಶ್ರದ್ಧೆಯಿಂದಲೇ ಜಗತ್ತಿಗೆ ತೋರಿಸಿದರು, ಆದರೆ Robert Caldwell ಇವನ ವಿಮರ್ಶೆಯನ್ನು ಅವರು ನೋಡಿದ್ದಿರಲಿಕ್ಕಿಲ್ಲ.

ಹೀಗೂ ಅಲ್ಲಿಂದ ನಂತರ ಶುದ್ಧ ಭಾರತೀಯರೇ ಆದ ನಮ್ಮ ಗೀತಾಚಾರ್ಯರೂ Robert Caldwell ಇವನ ಮಾತುಗಳನ್ನು ಕೇಳಿದ್ದರೂ ಕೇಳದೇ ಇದ್ದವರಂತೆ ಗೀತೆಯು ಬಹಳ ಪವಿತ್ರ ಗ್ರಂಥವೆಂದು ಹೇಳುತ್ತಾ ಬಂದರು. ಈ ಭಾರತೀಯ ಆಚಾರ್ಯಪುಂಗವರೆಲ್ಲ ಆಗ ಬ್ರಾಹ್ಮಣರು!

"ಬ್ರಾಹ್ಮಣಾಂ ಕ್ಷತ್ರಿಯವಿಶಾಂ ಶೂದ್ರಾಣಾಂ ಚ ಪರಂತಪ
ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವಪ್ರಭವೈರ್ಗುಣೈಃ"

ಈ ಬಗೆಯ ಶ್ಲೋಕಗಳಲ್ಲಿ ಇಲ್ಲಿ ಸೇರಿವೆ. ಭಾಗವತ ಧರ್ಮವನ್ನು ಕುರಿತಾಗಿ ಎತ್ತಿ ಹೇಳಿದೆ, ವೈಷ್ಣವ ಪಂಥವನ್ನು ಸಮರ್ಥಿಸಿದೆ. ಹೀಗಾಗಿ ಗೀತೆಯು ಎಲ್ಲಾ ವರ್ಗದ ಹಿಂದುಗಳಿಗೆ ಬೇಕಾದ ಧರ್ಮಗ್ರಂಥವಾಗಿದ್ದರೂ ಅದಕ್ಕೆ ಬ್ರಾಹ್ಮಣ್ಯ ಪ್ರಾಮುಖ್ಯತೆ ಮತ್ತು ಗೌರವವನ್ನು ಸಲ್ಲಿಸುತ್ತಾ ಬಂದಿದ್ದಾರೆ. ಮಹಾದೇವ ಶಾಸ್ತ್ರಿ, ಬಾಲಗಂಗಾಧರ ತಿಲಕ, ರಾಧಾಕೃಷ್ಣ, ಭಕ್ತಿವೇದಾಂತ ಸ್ವಾಮಿ, ಹೀಗೆ ಹಲವರು ಬ್ರಾಹ್ಮಣರು; ಬಹುಶಃ ವೈಶ್ಯರಿಂದಲೂ ಸರಿ. ಹಾಗಾದ್ದರಿಂದ ಅವರು ಗೀತೆಯನ್ನು ಮೆಚ್ಚಲೇಬೇಕು. ಆದರೆ ಬ್ರಾಹ್ಮಣರಲ್ಲದ ಅರವಿಂದ ಘೋಷ್, ಮಹಾತ್ಮಗಾಂಧಿ, ಬಾಬುರಾವ್ ಪಟೇಲ್ ಮತ್ತು ರಾಮಕೃಷ್ಣಾಶ್ರಮದ ಹಲವು ಸ್ವಾಮಿಗಳು ಗೀತೆಯನ್ನು ಕುರಿತಾಗಿ ಪಕ್ಕಾ ದೊಡ್ಡದಾಗಿ ಬರೆದರು. ಬಿಷಪ್ ಕಾಲ್ಡ್ವೆಲ್ ಹೇಳಿದ ವಿಚಾರವು ಅವರಿಗೆ ತಿಳಿಯಲಿಲ್ಲವೇ? ಬಹುಶಃ ಅವರೆಲ್ಲ ಗೀತೆಯ ಬಗ್ಗೆ ಹಿಂದಿನ ವಿದ್ವಾಂಸರು ಸಲ್ಲಿಸಿದ ಭಕ್ತಿ ಗೌರವಕ್ಕೆ ಮಣಿದು ಅದರ ಪ್ರಸಂಗವನ್ನು ನಡೆಸಿದ್ದಿರಬಹುದು. ಆ ಕಾಲವು ದೋಷಗಳನ್ನು ನಮ್ಮ ಗೀತಾಚಾರ್ಯರು ನಿರ್ಲಕ್ಷಿಸಿರಲೂ ಬಹುದು.

ಮಹಾಭಾರತ ಮಹಾಕಾವ್ಯವನ್ನು ಬರೆದ ವ್ಯಾಸನು ಮೂಲತಃ ಕವಿ! ಎರಡನೆಯದಾಗಿ ತಾತ್ವಿಕ! ಅಂಥ ಮಹಾಕವಿಯು ರಚಿಸಿದ ಗ್ರಂಥದ ಮಧ್ಯೆ ಅದಾವನೋ ಒಬ್ಬ ವೈಷ್ಣವನು ತನ್ನ ಧರ್ಮವನ್ನು ಸಾರಲೋಸುಗ ಭಗವಂತನ ಹೆಸರಿನಲ್ಲಿ ಗೀತೆಯನ್ನು ಬರೆದು ಸೇರಿಸಬಹುದೆಂದು ವಿದ್ವಾಂಸ ರಾಬರ್ಟ್ ಕಾಲ್ಡ್ವೆಲ್ಲನು ಹೇಳಿದ್ದನ್ನು ಗಮನಿಸಬೇಕಾಗಿದೆ. ಅದೇನಿದ್ದರೂ ಕಾವ್ಯದೃಷ್ಟಿಯಿಂದ ಹೇಳುವುದಾದರೆ ಗೀತಾಚಾರ್ಯನು ತನ್ನ ಗೀತೋಪದೇಶಕ್ಕೆ ತಕ್ಕುದಾದ ಹಿನ್ನೆಲೆಯನ್ನು ಕಲ್ಪಿಸಿದ್ದಾನೆ. ಕುರುಕ್ಷೇತ್ರ ಯುದ್ಧವು ಪ್ರಾರಂಭವಾಗುವುದಕ್ಕೆ ಮುಂಚೆ ಈ ಗೀತೋಪದೇಶದ ಹಿನ್ನೆಲೆಯನ್ನು ಕವಿ ನಿರ್ಮಿಸಿದ್ದಾನೆ. ವೇದೋಪನಿಷತ್ತುಗಳಲ್ಲಿ ಹೇಳಲಾದ ಪಾರಮಾರ್ಥಿಕ ವಿಚಾರಗಳನ್ನು ಒಳಗೊಂಡ ಗೀತೆಯು ಒಂದು ಪ್ರಸನ್ನ ಕಾವ್ಯವೆಂದೆನ್ನಬಹುದು. ಇದು ಭಾರತೀಯ ಸಂಸ್ಕೃತಿಯನ್ನು ಉಚ್ಛ್ರಾಯಗೊಳಿಸಲು ಸಹಾಯಕವಾಗಿದೆ. ಹಾಗಾದ್ದರಿಂದಲೇ ಬೌದ್ಧ ಧರ್ಮದೊಡನೆಯೇ ಗೀತೆಯು ಸಹ ಚೀನಾ, ಜಪಾನ್ ದೇಶಗಳಲ್ಲೆಲ್ಲ ತನ್ನ ಪ್ರಭಾವವನ್ನು ಬೀರಿದೆ. "ಮಹಾಯಾನ ಬೌದ್ಧಧರ್ಮದಲ್ಲಿರುವ ಮಹಾಯಾನ ಶ್ರದ್ಧೋತ್ಪತ್ತಿ

ಮತ್ತ ಸಿದ್ಧವರ್ತ ಪ್ರಾಂತರೀರ" – ಇವು ಗೀತೆಯಿಂದ ಪ್ರಭಾವಿತವಾಗಿವೆ; ಮಾತ್ರವಲ್ಲ, ಅವೆಲ್ಲ ಭಾರತೀಯ ತತ್ವಶಾಸ್ತ್ರದ ಭಾಷೆಯೂ ಆಗಿದೆ.

ವೈಕುಂಠವಾಸಿ ಶ್ರೀಮನ್ನಾರಾಯಣನೇ ಕೃಷ್ಣನ ಅವತಾರದಲ್ಲಿ ಉದಯಿಸಿ ಅರ್ಜುನನಿಗೆ ಈ ಗೀತಾಮೃತವನ್ನು ಉಣಿಸಿದನೆಂದು ಕವಿ ಚಿತ್ರಿಸಿದ್ದಾನೆ. ಋಗ್ವೇದದಲ್ಲಿ ವಿಷ್ಣುವಿನ ಪ್ರಸ್ತಾಪ ತುಂಬಾ ಇದೆ. ತೈತ್ತಿರೀಯ ಆರಣ್ಯಕದಲ್ಲಿ ನಾರಾಯಣ, ವಾಸುದೇವ, ವಿಷ್ಣು ಇತ್ಯಾದಿ ಹೆಸರುಗಳು ಇವೆ. ಅಲ್ಲಿ ಹೇಳಿದ ವಾಸುದೇವನು ವಸುದೇವನ ಮಗನಾದ ಕೃಷ್ಣನೇ ಆಗಿದ್ದಾನೆ. ಒಟ್ಟಾಗಿ ಕವಿ ವ್ಯಾಸ, ಗೀತಾಚಾರ್ಯರೆಲ್ಲರೂ ವೈಷ್ಣವರೇ ಆಗಿದ್ದರೆಂಬುದು ನಿಶ್ಚಯವಾಗಿದೆ. ಹರಿ ಕೃಷ್ಣ ಹೊಂದಿದ ಆಚಾರ್ಯರಲ್ಲಿ ಚೈತನ್ಯ ಭಕ್ತರು. ಹಾಗಾದ್ದರಿಂದ ಕೃಷ್ಣಾವತಾರ, ಮತ್ತು ವೈಷ್ಣವ ಧರ್ಮದ ಬಗ್ಗೆ ಪ್ರಸಂಗವೆಲ್ಲ ಪ್ರಚಾರಪಡಿಸುವ ಅವರ ಕಾರ್ಯರತ ಮನಸ್ಸು ಇಲ್ಲಿ ಸ್ಫುಟಿಸಿಕೊಳ್ಳುತ್ತದೆ.

ವೇದೋಪನಿಷತ್ತುಗಳಲ್ಲಿ ಹೇಳಿದ ಹಲವು ಮಾತುಗಳು ಗೀತೆಯಲ್ಲೂ ಬಂದಿವೆ. ಋಗ್ವೇದದಲ್ಲಿ ವಾಮದೇವನು "ನಾನು ಮನು, ನಾನು ಸೂರ್ಯ, ನಾನು ಋಷಿ" ಎಂದಿತ್ಯಾದಿಯಾಗಿ ಹೇಳುತ್ತಾ ಹೋಗುವ ಮಾದರಿಯಲ್ಲಿಯೇ ಗೀತೆಯ ಹತ್ತನೇ ಅಧ್ಯಾಯವೂ ಇದೆ. ಉಪನಿಷತ್ತಿನಲ್ಲಿ ಇಂದ್ರನು, "ನಾನು ಪ್ರಾಣ, ನಾನು ಆತ್ಮ, ನಾನು ಪ್ರಜ್ಞಾನ ಮಾಯಿ" ಎಂದೆಲ್ಲ ಹೇಳುವಾಗ, ಶ್ರೀ ಕೃಷ್ಣನು ಅವತಾರ ಪುರುಷ, ದೇವರು, ಭಗವಂತ ಎಂದು ಮೊದಲಾಗಿ ಹೇಳುವುದೆಲ್ಲ ವೈಷ್ಣವ ಧರ್ಮದ ಒಂದು ಅಂಗವಾಗಿದೆ. ಅದೇ ರೀತಿಯಲ್ಲಿ "ಯದಾ ಯದಾ ಹಿ ಧರ್ಮಸ್ಯ" ಶ್ಲೋಕವೂ ಕವಿಯ ಉತ್ತಮ ಕಾವ್ಯವಾಣಿಯಾಗಿ ವಿಶ್ವಮಾನ್ಯವಾಗಿದೆ.

ಪತಂಜಲಿಯು ತನ್ನ ಮಹಾಭಾಷ್ಯದಲ್ಲಿ "ವಾಸುದೇವ ಭಗವತ್" ಎಂದನ್ನುತ್ತಾನೆ. ವೈಷ್ಣವ ಪಂಥದಲ್ಲಿ ಭಗವತ್ ಅಥವಾ ಭಗವಂತ ಶಬ್ದವು ಸಾಮಾನ್ಯವಾಗಿದೆ. ಭಾಗವತ ಪುರಾಣ, ಭಾಗವತ ಧರ್ಮಗಳೂ ಇವೆ. ಗೀತೆಯನ್ನು ಉಪನಿಷತ್ಸಾರವಾಗಿ ಶ್ರೀಮದ್ಭಗವದ್ಗೀತೆಯೆಂದು ಕರೆಯಲಾಗಿದೆ. ಅಷ್ಟೇ ಅಲ್ಲ, ಗೀತಾಚಾರ್ಯನು ಗೀತೆಯನ್ನು ತಾನು ಮೊದಲ ಬಾರಿಗೆ ಹೇಳುವುದಲ್ಲ; ಹಿಂದಿನ ಕಾಲದ ಮಹರ್ಷಿಗಳು ಹೇಳಿದ್ದನ್ನೇ ತಾನು ಹಾಡಿದೆನೆಂದು ಹೇಳುತ್ತಾನೆ. ವಿವಸ್ವಾನ್ ಇದನ್ನು ಮನುವಿಗೂ ಮನುವು ಇಕ್ಷ್ವಾಕುವಿಗೂ ಬಹಳ ಹಿಂದೆಯೇ ಇದನ್ನೆಲ್ಲ ಹೇಳಿದನೆಂಬುದಾಗಿ ಕೃಷ್ಣನಿಂದ ಹೇಳಿಸಲಾಗಿದೆ.

ಒಟ್ಟಾಗಿ ಶ್ರದ್ಧೆಯೇ ಭಕ್ತಿಗೆ ಮೂಲ! ಭಕ್ತಿ — ಇದರ ಧಾತು 'ಭಜ್' - ಭಜನೆ, ಭಜನೆ! ಗೀತೆಯು ಈ ವಿಷಯಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತದೆ. ಭಕ್ತಿಯು ಜ್ಞಾನ ಮತ್ತು ಬುದ್ಧಿಗೆ ಕಾರಣವೆಂಬುದನ್ನು ಇಲ್ಲಿ ಸಮರ್ಥಿಸಲಾಗಿದೆ. ಇವೆಲ್ಲದಕ್ಕಿಂತಲೂ ಗೀತೆಯು ಕರ್ಮಯೋಗದ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಿದೆ. ಕರ್ಮ, ಕರ್ಮಫಲ, ಕರ್ಮತ್ಯಾಗ, ನಿಷ್ಕಾಮ ಕರ್ಮಗಳನ್ನು ಕುರಿತಾಗಿ ಸವಿಸ್ತಾರವಾಗಿ ಹೇಳಲಾಗಿದೆ. ಗುಣತ್ರಯಗಳನ್ನು ಕರ್ಮಫಲವೇ ರೂಪಿಸುವುದೆಂಬುದಕ್ಕೆ ಸಾಕಷ್ಟು ವಿವರಣೆಯನ್ನೀಯಲಾಗಿದೆ. ಲೋಕದ ಹುಲುಸಿಯೂ ಕರ್ಮಾನುಸಾರ! ನಾವೆಲ್ಲ ಕೇವಲ ನಟರು! ನಮಗೆ ನಟನೆಗೆ, ಆಟಕ್ಕೆ, ಸಲಕರಣೆಗಳನ್ನೀಯಲಾಗಿದೆ. ಒಳ್ಳೆಯದೋ ಕೆಟ್ಟದೋ ತಿಳಿಯೆವು, ಆಟವಾಡುವ ರೀತಿ ನಿಯಮಗಳನ್ನು ನಾವು ನಿರ್ಮಿಸಿಲ್ಲ. ಕೊಟ್ಟ ಪಾತ್ರದಂತೆ ಆಡುವುದೊಂದೇ ನಮ್ಮ ಕರ್ತವ್ಯ. ಚೆನ್ನಾಗಿ ಆಡಿದರೆ ಜಯ ಇದೆ; ಇಲ್ಲದಿದ್ದರೆ ಅಪಜಯ! ಇದರಲ್ಲಿ ಕರ್ಮಾಕರ್ಮಗಳು ಕೆಲಸಮಾಡದಿಲ್ಲದೇ ಇಲ್ಲವೆಂದು ಗೀತೆಯು ನಿರೂಪಿಸುತ್ತದೆ.

ಹೀಗೆ ಹಲವಾರು ವಿಷಯಗಳನ್ನು ಪ್ರತಿಪಾದಿಸಲಾದ ಈ ಗೀತಾಬೋಧೆಯು ಒಂದು ಯೋಗ! ಇದರ ಬೋಧಕನು ಯೋಗೇಶ್ವರನು. ಅಲ್ಲಿ ಶ್ರೀಕೃಷ್ಣನೇ ಸಂಕೇತರೂಪನಾದ ಭಗವಂತ! ಇವನು ವಿಷ್ಣುವಿನ ಅವತಾರ. ಹಾಗೆಂದೇ ಕವಿಯು ಇವನನ್ನು ಇಲ್ಲಿ ನಡೆಸುತ್ತಿದ್ದಾನೆ, ಆಡಿಸುತ್ತಿದ್ದಾನೆ. ಮಹಾಭಾರತ ಕಾವ್ಯದಲ್ಲಿ ಶ್ರೀಕೃಷ್ಣನೇ ಪ್ರಬಲ ಪಾತ್ರಧಾರಿ. ಕುರುಕ್ಷೇತ್ರದಲ್ಲಿ ಕೃಷ್ಣನು ಪಾರ್ಥಸಾರಥಿಯಾಗಿದ್ದಾನೆ. ಇದೇ ಪ್ರಪಂಚವೇ ಒಂದು ಯುದ್ಧರಂಗ! ಅಲ್ಲಿ ಪಾರ್ಥಸಾರಥಿಯು ವಿಶ್ವರೂಪವನ್ನು ತೋರಿಸುತ್ತಿದ್ದಾನೆ. ಹಿಂದೂ ಮತ್ತು 'ಬೌದ್ಧ ಗ್ರಂಥಗಳಲ್ಲಿ ಹೇಳಲಾದ ರಥವೇ ಇದು! ಆ ರಥದಲ್ಲಿ ಕಟ್ಟಲಾದ ಕುದುರೆಗಳೇ ಇಂದ್ರಿಯಗಳು, ಅಲ್ಲಿ ಉಪಯೋಗಿಸಲಾದ ಕಡಿವಾಣ ಇಂದ್ರಿಯ ನಿಗ್ರಹ! ಈ ರೀತಿ ಈ ವಿಶ್ವರೂಪವನ್ನು, ಜ್ಞಾನ, ಬುದ್ಧಿ, ಭಕ್ತಿ ಇತ್ಯಾದಿಗಳತ್ತ ಪಾರ್ಥಸಾರಥಿಯು ಒಯ್ಯುತ್ತಿದ್ದಾನೆಯೆಂಬುದಾಗಿ ಗೀತಾಚಾರ್ಯರ ಕವಿ ವ್ಯಾಖ್ಯಾನ ನಡೆಸಿದ್ದಾನೆ.

೨

ನನಗಂತೂ ಭಗವದ್ಗೀತೆಯು ಒಂದು ಕಾವ್ಯ ಗ್ರಂಥ! ಭಗವಂತನು ಹೇಳಿದ ಮಾತುಗಳು ಆಪ್ತನಿಂದ ಕವಿಯು ಹೇಳಿರುವುದರಿಂದ ಇದರಲ್ಲಿ

ಹಲವು ಧಾರ್ಮಿಕ ವಿಚಾರಗಳು ಇರುವುದು ಸಹಜವಾಗಿದೆ. ವೈಷ್ಣವ ಕವಿಯೊಬ್ಬನು ತನ್ನ ಮತಧರ್ಮಗಳನ್ನು ಪ್ರಚಾರ ಮಾಡುವ ಉದ್ದೇಶದಿಂದ ಈ ಕಾವ್ಯವನ್ನು ರಚಿಸಿ ಮಹಾಭಾರತದ ಭೀಷ್ಮಪರ್ವದೊಳಗೆ ಸೇರಿಸಿದನೆಂಬುದೂ ನಿಜವಿರಬಹುದು. ಆ ಎರಡೋ ಮೂರೋ ಸಾವಿರ ವರ್ಷಗಳಲ್ಲಿ ಏನೇನು ನಡೆದಿರಬಹುದು; ಅದೆಷ್ಟು ಕೃತಿಚೌರ್ಯಗಳಾಗಿರಬಹುದು.

ಈ ಗೀತಾ ಕಾವ್ಯ ಮತ್ತು ಕಥೆಯ ಪ್ರಾರಂಭವು ಚೆನ್ನಾಗಿದೆ. ಮೊದಲ ಅಧ್ಯಾಯವನ್ನು ಮೂವತ್ತೇಳು ಶ್ಲೋಕಗಳಲ್ಲಿ ಮುಗಿಸಿ ಉಳಿದ ವಿಷಯವನ್ನು ಮುಂದಿನ ಅಧ್ಯಾಯದಲ್ಲಿ ಹೇಳಬೇಕಾಗಿತ್ತೆಂದು ತೋರುತ್ತದೆ. ಎರಡನೇ ಅಧ್ಯಾಯವು ೭೨ ಶ್ಲೋಕಗಳಷ್ಟು ದೀರ್ಘವಿದೆ. ಕವಿಯು ಮುಂದಿನ ಅಧ್ಯಾಯಗಳಲ್ಲಿ ಹೇಳಲಾದ ಕರ್ಮಯೋಗ, ಗುಣತ್ರಯ, ಜೀವಾತ್ಮ-ಪರಮಾತ್ಮ ವಿಚಾರಗಳನ್ನೆಲ್ಲ ಇಲ್ಲಿ ತುಂಬಿದ್ದು ಅನುಚಿತವೆಂದೆನಿಸುತ್ತದೆ.

ಕರ್ಮಯೋಗವೆಂಬ ಮೂರನೇ ಅಧ್ಯಾಯದ ಪ್ರ ಕೆಲವು ಶ್ಲೋಕಗಳು ಅಲ್ಲಿಗೆ ಸರಿಯಲ್ಲವೆಂದು ತೋರುತ್ತದೆ. ಆತ್ಮಜ್ಞಾನ, ಗುಣತ್ರಯಾದಿಗಳು ವಿಷಯವಾಗಿ ಇಲ್ಲಿಯೂ ಹೇಳಲಾಗಿದೆ. ಅನಂತರ ನಾಲ್ಕು, ಐದು ಮತ್ತು ಆರನೇ ಅಧ್ಯಾಯಗಳಲ್ಲಿ ರಚಿಸಲಾದ ಕೆಲವು ಶ್ಲೋಕಗಳು ಇತರ ಅಧ್ಯಾಯಗಳಲ್ಲಿ ಕಂಡುಬರುತ್ತವೆ. ಈ ಗೀತಾ ರಚನೆಯಲ್ಲಿ ಕವಿಯು ತನ್ನ ಕವಿತಾ ಪ್ರೌಢಿಮೆ ಮತ್ತು ತಾತ್ವಿಕ ಜ್ಞಾನವನ್ನು ಪ್ರದರ್ಶಿಸಿರುವನಾದರೂ ಹೇಳಲಾದ ವಿಷಯಗಳನ್ನು ಆಯಾ ಶಿರೋನಾಮೆಯೊಳಗೆ ಅಡಗಿಸದೇ ಇರುವುದು ಒಂದು ನ್ಯೂನತೆಯಾಗಿದೆ.

ಅದೇ ರೀತಿ, ಭಗವದ್ಗೀತೆಯ ಹಲವು ಶ್ಲೋಕಗಳು ಪುನರುಕ್ತಿಗಳಾಗಿವೆ. ತಾತ್ವಿಕ ವಿಚಾರಗಳನ್ನು ಒಂದು ನಿರ್ದಿಷ್ಟನಿಯಮವಾಗಿ ಹೇಳಬೇಕೆಂಬುದೇ ಕವಿಯ ಧ್ಯೇಯವಾಗಿದ್ದರೂ ಕರ್ಮಫಲ, ಫಲಾಪೇಕ್ಷೆ, ಗುಣತ್ರಯ ಇತ್ಯಾದಿ ವಿಷಯಗಳನ್ನು ಮತ್ತೆ ಮತ್ತೆ ಪುನರುಕ್ತಿಗೊಳಿಸಲಾಗಿದೆ. ಹದಿನೆಂಟನೇ ಅಧ್ಯಾಯವನ್ನು ಈ ಕಾರಣದಿಂದ ದೀರ್ಘ ಬೆಳೆಸಲಾಗಿದೆ. ಅಲ್ಲಿ ಶ್ಲೋಕ ಐದು, ಆರು, ಒಂಬತ್ತು, ಇಪ್ಪತ್ತರ, ಇಪ್ಪತ್ತೆರಡನೇ ಶ್ಲೋಕಗಳಲ್ಲಿ ಹೇಳಿದ ವಿಷಯಗಳು ಪುನರುಕ್ತವಾದುವುಗಳೆಂದು ಹೇಳಬೇಕಾಗಿದೆ. ಇದೇ ಅಧ್ಯಾಯದಲ್ಲಿ ಶ್ಲೋಕ ಇಪ್ಪತ್ತರಿಂದ ನಲ್ವತ್ತರ ವರೆಗೆ ಇರುವ ಸತ್ವ, ರಜಸ್ ಮತ್ತು ತಮೋಗುಣಗಳು

ನನ್ನ ಕರ್ತರಾಗಿ ಹಿಂದಿನ ಅಧ್ಯಾಯಗಳಲ್ಲಿ ಹೇಳಿದಾಗ ಅಲ್ಲಿ ಎಲ್ಲೀ ಹೊಂದಿಕೆ ಇದೆಯಲ್ಲ ಎನ್ನುವುದು ಬರುತ್ತದೆ.

ಭಗವದ್ಗೀತೆಯು ವೈಷ್ಣವ ಸಂಪ್ರದಾಯದ ಗ್ರಂಥವೇ ಮಾತ್ರವೆಂದೂ ಬ್ರಾಹ್ಮಣ್ಯ ಧರ್ಮದ ವಿಷಯವಾಗಿ, ಜಾತೀಯವಾದದ ವಿಷಯವಾಗಿ ಸಾರ್ವತ್ರಿಕ ಸಂಗತಿ ಹೊಡೆಯಲಾಗಿದೆಯೆಂದೂ ಕೆಲವರು ಟೀಕಿಸುವುದಕ್ಕೆ ಆಧಾರವಾಗಿ ಕಡೆ ಅಧ್ಯಾಯದ 41, 42, 43 – ಇತ್ಯಾದಿ ಶ್ಲೋಕಗಳನ್ನು ಹೇಳುವುದು. ಅದರನಂತರ ಶ್ಲೋಕ 49 ರಿಂದ ಮೊದಲ್ಗೊಂಡು ಕರ್ಮಯೋಗದ ವಿಷಯವಾಗಿ ನಿರೂಪಣೆ ಮಾಡುತ್ತಲಿದೆ ಶ್ಲೋಕ 64 ಮತ್ತು ಹೊಂದಿರದಿರಲು ಭಕ್ತಿಯೋಗದ ವಿಷಯವಾಗಿ ಪುನಃ ಹೇಳಲಾಗಿದೆ, ಕಡೆ ಅಧ್ಯಾಯದಲ್ಲಿ ಶ್ಲೋಕ 67, 68, 69 ಇತ್ಯಾದಿಗಳು ಅನುಷ್ಠಾನ. ಅದನ್ನೋ ಉತ್ತಮರಿಂದ ಕವಿಯು ತನ್ನ ಮನಸ್ಸಿಗೆ ಹೊಳೆದುದನ್ನೆಲ್ಲ ಎಲ್ಲೆಲ್ಲಿ ಹೇಳಬೇಕೆಂಬ ಕಾತುರತೆಯಿಂದ ಹೇಳಿದಂತೆ ತೋರುತ್ತದೆ.

ಶ್ರೀ ಕೃಷ್ಣನು ತನ್ನ ಮಹತ್ವವನ್ನು ತುಂಬಾ ಹೆಚ್ಚಾಗಿ, ವ್ಯಕ್ತವಾಗಿ ಅಧ್ಯಾಯ 9, 10 ಮತ್ತು 11 ರಲ್ಲಿ ಹೇಳಿದನಷ್ಟೆ. ಅದರನಂತರ ಇತರ ಅಧ್ಯಾಯಗಳಲ್ಲೂ ಭಗವಂತನು ಪ್ರಧಾನ ಪುರುಷ "ನಾನು" ಎಂಬುದನ್ನು ಉಪಯೋಗಿಸಿದ, ಮತ್ತು ಅವನಿಂದ ಆಗಿಂದಾಗ್ಗೆ ಹಾಗೆ ಹೇಳಿಸಿದ ಕವಿಯ ಚಪಲತೆಯಂತೂ ಇಲ್ಲಿ ಮೇಲಿಂದ ಮೇಲೆ ಕಾಣಿಸುತ್ತದೆ, "ಸರ್ವವೂ ನನ್ನಿಂದಲೇ ನಡೆಯುತ್ತದೆ; ನನ್ನನ್ನೇ ಸೇರುತ್ತದೆ" ಎಂದು ಮೊದಲಾಗಿ ನೂರಾರು ಬಾರಿ ಭಗವಂತನಿಂದ ಹೇಳಿಸಿದ್ದು ಇಲ್ಲಿ ಅಭಾಸಕರವಾಗಿ ಧ್ವನಿಸುತ್ತದೆ, ಅಧ್ಯಾಯ 10 ಮತ್ತು 11 – ಇವು ಉತ್ತಮ ಕಾವ್ಯವೆಷ್ಟೋ ಅಲ್ಲದೆ ಹೆಚ್ಚೇನೂ ಅಲ್ಲ!

ಭಗವಂತನು ಹಾಗೆಂದನು ಎಂದೆನ್ನುತ್ತಾ, ಹಲವು ತಾತ್ವಿಕ ವಿಚಾರಗಳನ್ನು ಬರೆದ ಕವಿಯು ಒಮ್ಮೊಮ್ಮೆ ತಪ್ಪುಗಳಲ್ಲಿ ಎಡವುತ್ತಿರುವುದನ್ನು ಕಾಣುತ್ತೇವೆ, ಉದಾಹರಣೆಗೆ ಅಧ್ಯಾಯ 16 ಶ್ಲೋಕ 21, 22 ಇತ್ಯಾದಿಗಳಲ್ಲಿ ಕಾಮ, ಕ್ರೋಧ ಮತ್ತು ಲೋಭವನ್ನು ಮಾತ್ರ ಖಂಡಿಸಿದ್ದಾನೆ. ಆದರೆ ಶಾಸ್ತ್ರಗಳಲ್ಲಿವೂ ಖಂಡನೀಯವೆಂಬುದನ್ನು ಕವಿಯು ಸ್ಪಷ್ಟಪಡಿಸಬಹುದಿತ್ತು. ಅವುಗಳ ಜತೆಗೆ "ಭಯ" ಎಂಬುದು ಲೋಕದ ಎಲ್ಲಾ ಜೀವಿಗಳಿಗೂ ಮತ್ತು ಶಕ್ತಿ ಹಾನಿಕರವಾದ ಮನೋದೌರ್ಬಲ್ಯವೆಂಬುದನ್ನು ಎಲ್ಲರೂ ಹೇಳುವುದೆಂತು ಬಲ್ಲರು, ಶಾಸ್ತ್ರಗಳಲ್ಲಿ ಒಂದಾದ "ಮೋಹ"ವು ಕಾಮದ ಒಂದು ಅಂಗವಾಗಿರು

ಪ್ರದಿಂದ ಆ "ಮೋಕ್ಷ" ಇದರ ಬದಲು "ಜಯ" ಇದು ಇತ್ಯಾದಿ ಗಳಲ್ಲಿ ಹಿಂದಿಂದು ಹೇಳಬಹುದಿತ್ತೆಂದೆನ್ನಿಸುತ್ತದೆ.

ಭಗವದ್ಗೀತೆಯು ಒಂದು ಧರ್ಮಗ್ರಂಥವೆಂದು ತಿಳಿ ಗನೆನೆ ಭಗವಂತನೇ ಆ ಎಲ್ಲಾ ವಿಷಯವನ್ನು ಹೇಳಿದನೆಂದು ಭಾವಿಸಿ ಶ್ರದ್ಧಾಳುಗಳಾದ ನಾವು ಪಾರಾಯಣ ಮಾಡುತ್ತೇವಾದರೂ ಅದೊಂದು ಕಾವ್ಯಗ್ರಂಥವೆಂದು ಭಾವಿಸಿ ನೋಡಿದರೆ ಅದರ ನಿರೂಪಣೆಯಲ್ಲಿ ಪುನರುಕ್ತಿಗಳು, ವಿಷಯಗಳನ್ನು ಕ್ರಮಬದ್ಧವಾಗಿ ಹೇಳದ ದೋಷಗಳನ್ನೆಲ್ಲ ನಾವು ಕಾಣುತ್ತೇವೆ. ಗೀತೆಯು ಕೊನೆಗೊಂಡ ಕ್ರಮವೂ ಅಷ್ಟೇನೂ ಭಾವಪೂರ್ಣವಾಗಿಲ್ಲ.

ಗೀತೆಯು 9, 10 ಮತ್ತು 11 ನೇ ಅಧ್ಯಾಯಗಳು ಅದೇ ಕ್ರಮದಲ್ಲಿ ಕೊನೆಯಲ್ಲಿ 16, 17 ಮತ್ತು 18 ನೇ ಅಧ್ಯಾಯಗಳಾಗಿ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಶ್ರೀಕೃಷ್ಣನು ತನ್ನ ವಿಶ್ವರೂಪವನ್ನು ತೋರಿಸುವ ಅಪೂರ್ವವಾದ ಮತ್ತು ರೋಮಾಂಚನವನ್ನುಂಟುಮಾಡುವ ಮತ್ತು ಎಂದೆಂದಿಗೂ ಭಕ್ತಿ ಸ್ಫೂರ್ತಿಗಳನ್ನು ಹೊಮ್ಮಿಸುವ ಆ 'ಹನ್ನೊಂದನೇ ಅಧ್ಯಾಯ'ವನ್ನು ಕೊನೆಗೆ ತಂದು ಆ ರೀತಿ ಆ ಗೀತಾ ಕಾವ್ಯವನ್ನು ಮುಗಿಸಿದ್ದರೆ ಗೀತೆಯು ಮತ್ತಷ್ಟು ಪವಿತ್ರವಾದ ಧರ್ಮಗ್ರಂಥವೆಂದು ಸರ್ವಮಾನ್ಯವಾಗುತ್ತಿತ್ತು. ಆದರೆ ಕವಿ ಆ ರೀತಿ ಯೋಚಿಸಿಲ್ಲ. ವೇದೋಪನಿಷತ್ತುಗಳನ್ನು ಓದಿ ತಿಳಿದ ವಿಚಾರಗಳನ್ನು ಭಾವಪರವಶನಾಗಿ ಕವಿಯು ಇಲ್ಲಿ ಹೇಳಿದ್ದಾನೆಂಬುದನ್ನು ಓದುಗರು ತಿಳಿಯಬಲ್ಲರು. ಎಲ್ಲವೂ "ನಾನೆ" ಎಂಬುದಾಗಿ ಶ್ರೀಕೃಷ್ಣನಿಂದ ಕವಿಯು ಹೇಳಿಸುವಾಗ ಆ "ಕೃಷ್ಣ" ಶಬ್ದವು ದೈವದ ಸಂಕೇತ (symbol) ಮಾತ್ರ ಎಂಬುದನ್ನು ಕವಿಯು ಹಿಂದೆಯೇ ಶ್ಲೋಕಗಳಲ್ಲಿ ಹೇಳಬಹುದಿತ್ತು. ಹಾಗೂ ಅದರ ಬಗ್ಗೆ ಅರ್ಜುನನೇ ಒಂದೆರಡು ಪ್ರಶ್ನೆಗಳನ್ನು ಕೇಳಿದ್ದಾನೆ. ಅದಕ್ಕೆ ಕೃಷ್ಣನು ಕೊಟ್ಟ ಉತ್ತರವು ಸಾಕಷ್ಟು ತೃಪ್ತಿಕರವಾಗಿದೆಯೆಂದಷ್ಟೇ ನಿದ್ಯಕ್ಕೆ ಹೇಳಬಹುದು:—

"ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ
ಜಿತ್ವಾ ವಾ ಭೋಕ್ಷ್ಯಸೇ ಮಹೀಂ;" — ಅ೨
"ವಾಸಾಂಸಿ ಜೀರ್ಣಾನಿ ಯಥಾ ವಿಹಾಯ" — ಅ೨
"ಜಾತಸ್ಯ ಹಿ ಧ್ರುವೋ ಮೃತ್ಯು
ಧ್ರುವಂ ಜನ್ಮ ಮೃತಸ್ಯ ಚ" —

ಎಂಬುದಾಗಿರುವ ಹಲವು ಸುಂದರ ಶ್ಲೋಕಗಳು 2 ನೇ ಅಧ್ಯಾಯದಲ್ಲಿಯೇ ಕಾಣಸಿಕೊಂಡಿವೆ. ಇವನ್ನೆಲ್ಲ ಅಲ್ಲಿ ಹೇಳಿದ ಇತರ ಹಲವು ವಿಷಯಗಳನ್ನು ಹೇಳಿದನೆಂಬ

ಕಡೆಯದಾಗಿ ಹೇಳಿದ್ದರೆ ಉಚಿತವಿತ್ತೆಂದು ನಮಗನ್ನಿಸುತ್ತದೆ. ಅಷ್ಟೇ ಅಲ್ಲ, ಇಂದಿನ ಪ್ರಪಂಚಕ್ಕೆ ಮಾದರಿಪ್ರಾಯವಾಗಿ ತೋರುವ ಈ "ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ," ಎಂಬ ಶ್ಲೋಕವು ಹಿಂದಿನ ಕಾಲಕ್ಕೆ ಸರಿಯಾಗಿದ್ದಿರಬಹುದಾದರೂ ಇಂದಿಗಲ್ಲ, ಮಾನವನ ಅವಿವೇಕದ ಪರಿಣಾಮವಾಗಿ ಯುದ್ಧಗಳಾಗುತ್ತವೆ, ಹಾಗೆ ಯಾವ ಅವಿವೇಕಿಯೂ ಜನರನು ಆಸೆ ಪ್ರಭುತ್ವ ತನ್ನ ಸ್ವಾತಂತ್ರ್ಯದ ಸಾಧನೆಗಾಗಿ ಯುದ್ಧವನ್ನು ಹೂಡಿದಾಗ ಅದು ಅವನ ಧರ್ಮವೆಂದು ಹೇಳಿಕೊಂಡರೂ ಇತರರಿಗೆ "ಧರ್ಮ" ಆಗಬೇಕಿಲ್ಲ. ಅಂಥ ವಾದಗ್ರಸ್ತ ವಿಷಯದ ಬಗ್ಗೆ ಹೂಡಿದ ಯುದ್ಧದಲ್ಲಿ ಭಾಗವಹಿಸಿ ಸಾಯುವವನು ಮತ್ತೊಬ್ಬ ಅವಿವೇಕಿ! ಅಂಥವರು ವೀರರಾಗಲಾರರು, ಅಂಥವರಿಗೆ ಸ್ವರ್ಗವೂ ತೆರೆದಿರಲಾರದು. ಹಾಗೆ ಅವಿವೇಕದಿಂದ ಕಾದಾಡಿ ಗೆದ್ದು ಪಡೆದ ರಾಜ್ಯವು ಶಾಶ್ವತವಲ್ಲವೆಂಬುದಾಗಿ ಇಂದಿನ ಪರಿಸ್ಥಿತಿಯಿಂದ ಅದೇ ಚರಿತ್ರೆಯಿಂದ ನಾವು ತಿಳಿಯುತ್ತೇವೆ. ಇಂಥ ವಿಷಯವನ್ನೆಲ್ಲ ಗೀತಾಚಾರ್ಯನು ಶ್ರೀಕೃಷ್ಣನ ಬಾಯಿಂದ ಹೇಳಿಸಿದ್ದು ಸೋಜಿಗವಾಗಿ ನಾವು Bishop Robert Caldwell ಇವನು ಹೇಳಿದ ಮಾತುಗಳನ್ನು ಇಲ್ಲಿ ಮತ್ತೊಮ್ಮೆ ನೆನೆಸಿಕೊಳ್ಳಬಹುದು.

ಹೀಗೂ ಹಲಕೆಲವು ನ್ಯೂನತೆಗಳು ಈ ಕಾವ್ಯಗ್ರಂಥದಲ್ಲಿ ಇವೆ. ಆದರೆ ಅದನ್ನು ಧರ್ಮಗ್ರಂಥವೆಂದು ಪರಿಮಿತವಾಗಿ ಅಂಥ ಕೆಲವು ಕೊರತೆಗಳನ್ನು ಮರೆತು ಅದೊಂದು ಶ್ರೇಷ್ಠಗ್ರಂಥವೆಂದು ಭಾವಿಸಿಕೊಳ್ಳಬೇಕಿದೆ. ಹಾಗೆ ಭಾವಿಸಿದ್ದರಿಂದಲೇ ಭಗವದ್ಗೀತೆಯು ಹಲವು ಶತಮಾನಗಳ ಕಾಲ ಅದರ ದೈವಿಕ ಪ್ರಭಾವವನ್ನು ಬೀರುತ್ತಾ ಬಂದಿದೆ. ನಮ್ಮಲ್ಲಿ ಧಾರ್ಮಿಕ ಚಿಂತನೆಗೆ ಅವಕಾಶವನ್ನಿತ್ತಿದೆ!

ನನಗಂತೂ ಭಗವದ್ಗೀತೆಯು ಕೇವಲ ಧರ್ಮಗ್ರಂಥವಲ್ಲ; ಕಾವ್ಯಗ್ರಂಥವೂ ಅಲ್ಲ. ಅದು ಮನಃಶಾಸ್ತ್ರವನ್ನು ಪ್ರತಿಪಾದಿಸುವ ಶಾಸ್ತ್ರೀಯ ಗ್ರಂಥವಾಗಬಹುದೆಂದು ಹಿಂದಿನಿಂದಲೇ ಕಂಡುಬಂದಿದೆ, ಅಧ್ಯಾಯ 13 - ಪ್ರಕೃತಿ-ಪುರುಷ ಯೋಗ, ಅಧ್ಯಾಯ 14 - ಗುಣತ್ರಯ ಯೋಗ, ಅಧ್ಯಾಯ 16 - ದೈವಾಸುರ ಯೋಗ, ಮತ್ತು ಅಧ್ಯಾಯ 17 - ಶ್ರದ್ಧಾತ್ರಯ ಯೋಗ, ಇವುಗಳಲ್ಲಿ ಮಾನವನ ನಿತ್ಯದ ನಿಲುವು, ಮನೋಗುಣಗಳನ್ನು ವಿವಿಧ ರೀತಿಯಲ್ಲಿ ಚಿತ್ರಿಸುತ್ತವೆ, ತಜ್ಞ ಮನಃಶಾಸ್ತ್ರಜ್ಞರು ಈ ಗೀತೆಯಿಂದ ಹಲವು ವಿಷಯಗಳನ್ನು ಕಲಿಯಬಹುದು. ಸಾತ್ವಿಕ, ರಾಜಸ ಮತ್ತು ತಾಮಸ ಗುಣಗಳ ವಿವಿಧ ಭಾವೋನ್ಮಾದತೆಯನ್ನು ವರ್ಣಿಸಿದುದರ ಜೊತೆಗೆ ಜ್ಞಾನಯೋಗ, ಭಕ್ತಿಯೋಗ ಮತ್ತು ಕರ್ಮಯೋಗಗಳನ್ನು ಕುರಿತಾದ ಅಧ್ಯಾ

ಯುಗಗಳನ್ನು ನೋಡುವಾಗ ಗೀತಾಚಾರ್ಯನು ಅನುಮಾನ ಪಡುವ: ಶ್ರೀ ಕೃಷ್ಣನಿಂದ ಹೇಳಬಹುದು. ಭಾಷೆಯನ್ನೂ ಶೈಲಿಯನ್ನೂ ಕುರಿತು ಪರಿಚಯವಾಗಿಸಿಕೊಂಡು ಕವಿಯು ಸುಂದರ ಶ್ಲೋಕಗುಚ್ಛಗಳನ್ನು ಹೆಣೆದಿದ್ದಾನೆ. ಕವಿಯ ವರ್ಣನಾ ಸಾಮರ್ಥ್ಯಕ್ಕೆ ಉತ್ತಮ ಮತ್ತು ಉನ್ನತವಾದ ಈ ಸ್ಥಾಯಿಗಳು ನಿದರ್ಶನವಾಗಿವೆ.

ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಮತ್ತು ಅರ್ಜುನರ ಪಾತ್ರಗಳು ಕೇವಲ ಕಾಲ್ಪನಿಕ! ಅವು ಕಾವ್ಯವೂ ನಾಟಕೀಯವೂ ಹೌದು! ನಮ್ಮ ಪ್ರಸಿದ್ಧ ನಾಟಕಕಾರರು ಅವರಿಷ್ಟದ ಧರ್ಮತತ್ವ ವಿಚಾರಗಳನ್ನು ತಮ್ಮ ನಾಟಕ ಕೃತಿಗಳಲ್ಲಿ ವಿವಿಧ ಪಾತ್ರಗಳ ಬಾಯಿಂದ ಹೇಳಿಸಿಲ್ಲ! ಅದೇ ರೀತಿ ಗೀತಾಚಾರ್ಯನು ಶ್ರೀಕೃಷ್ಣನಿಗೆ ಪಾರ್ಥಸಾರಥಿಯ ಕೆಲಸವನ್ನು ಒಪ್ಪಿಸಿ ಮತಧರ್ಮ ಹಾಗೂ ಮನೋಧರ್ಮಗಳ ವಿಷಯವಾಗಿ ಹೇಳಿಸಿದ್ದಾನೆ.

ಭಗವದ್ಗೀತೆಯಲ್ಲಿ ಒಟ್ಟಾಗಿ 701 ಶ್ಲೋಕಗಳಿವೆ. ಇದರಲ್ಲಿ ಪುನರುಕ್ತವಾಗಿವೆಯೆಂದು ಕಂಡುಬಂದ ಶ್ಲೋಕಗಳು ಎಪ್ಪತ್ತನ್ನು ಮೀರಿವೆಯೆಂದು ನನಗೆ ತೋರುತ್ತದೆ. ಒಂದೇ ವಿಷಯವನ್ನು ಮನಮುಟ್ಟುವಂತೆ ಹೇಳಬೇಕೆಂಬ ಪ್ರಯತ್ನದಿಂದ ಗೀತಾಚಾರ್ಯ ಕವಿಯು ನಿರೂಪಣೆಯನ್ನು ದೀರ್ಘಗೊಳಿಸಿದ್ದಾನೆಂದು ತೋರುತ್ತದೆ. ಹಾಗಿದ್ದರೂ ಅಷ್ಟು ಹಿಂದಿನ ಕಾಲದಲ್ಲಿ ಸಾಹಿತಿಗಳು ತಾವು ಬರೆದುದನ್ನು ಪುನಃ ನೋಡಿ ಪರಿಷ್ಕರಿಸುವ ತೊಂದರೆಯನ್ನು ತೆಗೆದುಕೊಳ್ಳುತ್ತಿರಲಿಲ್ಲವೋ ಎಂದು ಊಹಿಸಬೇಕಾಗಿದೆ.

ಕನ್ನಡದಲ್ಲಿ ಭಗವದ್ಗೀತಾ ಭಾಷಾಂತರಗಳು ಹಲವು ಇವೆಯೋ ತಿಳಿಯದು. ಪದ್ಯರೂಪದಲ್ಲಂತೂ ಈ ಮೊದಲೇ ಹೇಳಿದಂತೆ ನಾಗರಸ ಕವಿಯ ಭಾಮಿನೀ ಷಟ್ಪದಿ ಕೃತಿಯಲ್ಲದೆ ಬೇರಾವುದಾದರೂ ಇದೆಯೋ ತಿಳಿಯದು. ಈ ಕೃತಿ ಮಾನ್ಯ ಕನ್ನಡ ಪ್ರಕಟಣೆಗಳಲ್ಲಿ ರಾಮಚಂದ್ರ ದಿವಾಕರರ ಇವರ "ಗೀತೆಯ ಹುಟ್ಟು ಅಧ್ಯಾಯ ಮಾತ್ರ ಯೋಗ" ಇದು ನಾಲ್ಕಾರು ಬಾರಿ ಪುನರ್ಮುದ್ರಣವಾದ ಮತ್ತು ಜನಾದರಣೀಯವಾದ ಕೃತಿಯಾಗಿದೆ. ಸಮಗ್ರ ಮಹಾಭಾರತದ ಕನ್ನಡ ಪ್ರಕಟಣೆಗಳಲ್ಲಿ ಭಗವದ್ಗೀತೆಯ ಭಾಷಾಂತರವೂ ಸೇರಿದೆಯಲ್ಲದೆ ಇತ್ತೀಚೆಗೆ ಹಲವರು ಗೀತೆಯ ಭಾಷಾಂತರವನ್ನು ಮಾಡಿ ಕೃತಾರ್ಥರಾಗಿದ್ದಾರೆ. ಅವುಗಳಲ್ಲಿ ಹಲವು ಕಿರುಹೊತ್ತಿಗೆಗಳಾಗಿ ಪ್ರಕಟವಾಗಿವೆ.

ಇನ್ನೀಗ ಈ ನನ್ನ ಕೃತಿಯನ್ನು ಕುರಿತಾಗಿ ಒಂದು ಮಾತನ್ನು ಹೇಳಲು ಇಚ್ಛಿಸುತ್ತೇನೆ. ನಾನು ಭಗವದ್ಗೀತೆಯನ್ನು ನನ್ನ ಹದಿನೇಳನೇ ವರ್ಷ ವಯಸ್ಸಿನಲ್ಲಿಯೇ ಕನ್ನಡದಲ್ಲಿ ಆಗಲೇ ಭಾಮಿನೀ ಷಟ್ಪದಿಯ ಶೈಲಿಯಲ್ಲಿ ಬರೆದಿದ್ದೆ. ಅಂದಿನ

ನನ್ನ ಬಂದುದು ಉತ್ಸಾಹ ಮಾತ್ರ. ಈಗ ನಾನು ಅದನ್ನು ಸರ್ವ ಪ್ರಸಿದ್ಧ ವಿದ್ವಾಂಸರಿಗೆ ತೋರಿಸಿ ಅವರಿಂದ ನಾನು ಪಡೆದ ಸಲಹೆಯು ವಿಶಿಷ್ಟವಾಗಿ ನಾನು ಹಿಂದೆಯೇ ನನ್ನ ಬಂದಿರುವ ಕೃತಿಗಳಲ್ಲಿ ಹೇಳಿದ್ದೇನೆ. ಅದು 1937ರಷ್ಟು ಹಿಂದೆಯೇ ನಡೆದ ವಿಚಾರ. ಆ ನನ್ನ ಕೃತಿಯನ್ನು ನನಗೆ ಉಳಿಸಿಕೊಳ್ಳಬೇಕೆಂಬ ಅವಶ್ಯವಂತೂ ತೋರಲಿಲ್ಲ. ಆನಂತರ 1941ರಲ್ಲಿ ನಾನು "ಗೀತೆಯ ಹುಟ್ಟು" ಎಂಬುದಾಗಿ ಬರೆದ ಕವನದ ಕೆಲವು ಪಂಕ್ತಿಗಳು ಹೀಗಿದ್ದುವು:-

ಧರ್ಮಕ್ಷೇತ್ರದ ಭೂಮಿ
ಅಸಮ ಬಲ ಇಕ್ಕೆಡೆಯೊ
ನಡುಮಧ್ಯ ಗಂಭೀರ ಶ್ರೀಕೃಷ್ಣನು
ಕುರುಕ್ಷೇತ್ರ ಕುರುಕುಲನ
ಕೌರವನ ಸ್ವಾರ್ಥಾಕಾಂಕ್ಷೆ—
ದೀನನಿ ಫಲ್ಗುಣನು ಬಾಗಿಹನು!

× × ×

ಪವಿತ್ರಯೋಗಿಯು ಕೃಷ್ಣ
ರಾಜಯೋಗಿಯು ಪಾರ್ಥ
"ಹರಿ ಕರ್ಮ ಪವಿತ್ರ" ಗೀತ ಪಾದಗಳಲಿ
ತತ್ವರಾಜನ ತಮದ
ಹುಟ್ಟುಸಾವಿನ ಬಲದ
ವಿಶ್ವರೂಪದ ಗೂಢ ರಹಸ್ಯಗಳನು.

× × ×

ಜ್ಯೋತ್ಸ್ನ ಬಾಳಿಯ ಶ್ಲೋಕ
ಸೃಷ್ಟಿ ಸೂತ್ರರ ಮಾತು
ಎಂತು ಹೊಂಗಿರ್ಪ ಅವರ ಸಂತೃಪ್ತಿ ಸ್ಫೂರ್ತಿ!
ತುಂಬು ಸಾಮರ್ಥ್ಯದ ಮಾತು!
ಉಪನಿಷತ್ಸಾರದ ಮಧುರತ್ವ!
ವಿಶ್ವವ್ಯಾಪಕ ವಾಣಿ— ಅಮರ ಗೀತೆ!

× × ×

ಇದು ನನ್ನ ಬಹು ಹಿಂದಿನ ರಚನೆ! ಈಗ ನಾನು ತಿಳಿದಿರುವಷ್ಟು ತಿಳಿಯದೇ ಇದ್ದ ಆ ಕಾಲದ ಹೇಳಿಕೆ! ಇದೀಗ ನನ್ನ ಈ ಗೀತಾ ಕೃತಿಯು ಅಚ್ಚುಪಡಿಯುತ್ತಲಿದೆ. ಅದರ ಪಾಠ ಸಾಮಾನ್ಯವಾಗಿ ಹಾಡಿಸುತ್ತಿದೆ, ಹಿಂದೆಯೇ ಬರೆದ "ಮಹಾತ್ಮನ ಬಾಲರಾಮಾಯಣ" ಮತ್ತು "ಮಹಾತ್ಮನ ಬಾಲಮಹಾಭಾರತ" - ಈ ಕೃತಿಗಳಿಗೆ ಬಳಸಲಾದ ಗಣ ಮಾತ್ರೆಗಳ ಕ್ರಮವನ್ನೇ ಅನುಸರಿಸಲಾಗಿ ಭಗವದ್ಗೀತೆಯನ್ನು ಇಂಗ್ಲಿಷಿಗೆ ಅನುವಾದಿಸಿದ ಪ್ರಸಿದ್ಧ

ವಿದ್ವಾಂಸರು ಪ್ರತಿಯೊಂದು ಶ್ಲೋಕವನ್ನು ನಿಷ್ಠೆಯಿಂದ ಮತ್ತು ಶ್ರದ್ಧೆ
ಕ್ಕೆ ತಕ್ಕಂತೆ ಅನುವಾದಿಸಿ ಅದರ ಮೇಲೆ ಟೀಕೆ ಟಿಪ್ಪಣಿ
ಗಳನ್ನು ಪ್ರತ್ಯೇಕವಾಗಿ ಕೊಟ್ಟು ತಮ್ಮ ಬರಹಗಳನ್ನು ಪರಿಪೂರ್ಣ
ಗೊಳಿಸಿದ್ದಾರೆ. ಆದರೆ ನಾನು ಎಂಟು ಪಂಕ್ತಿಗಳ ಪದ್ಯಭಾಗದಲ್ಲಿ
ಪ್ರತಿಯೊಂದು ಶ್ಲೋಕದ ಅರ್ಥವನ್ನು ಮೂರು, ನಾಲ್ಕು ಅಥವಾ
ಐದು ಪಂಕ್ತಿಗಳಲ್ಲಿ ಕೊಟ್ಟು ಉಳಿದ ಪುಟಗಳಲ್ಲಿ ಅದಕ್ಕೆ ಪೂರ್ಣ
ವಿವರಣೆಯನ್ನು ಕೊಡಲು ಪ್ರಯತ್ನಿಸಿದ್ದೇನೆ. ಹೀಗೆ 701 ಶ್ಲೋಕ
ಗಳನ್ನು 701 ಪುಟಗಳಲ್ಲಿ ಬರೆದಿದ್ದೇನೆ. ಮೂಲವನ್ನು ಸ್ಪಷ್ಟ
ವಿವರಣಾತ್ಮಕವಾಗಿ ಎರಡು ಪುಟಗಳಲ್ಲಿ ಹೇಳುವುದು ಪ್ರ
ಯಾಸಕರವಾಗಿ ತೋರಲಿಲ್ಲ.

ನಿಷ್ಠೆಯ ಗೀತಾಭ್ಯಾಸಿಗಳಿಗೂ ವಿದ್ಯಾರ್ಥಿಗಳಿಗೂ ಇ
ದೊಂದು ಕಾವ್ಯಗ್ರಂಥವಾಗಿ ನಿತ್ಯದ ಪಾರಾಯಣಕ್ಕೆ ತಕ್ಕ
ದಾಗಿ ಕಂಡುಬರುವುದೆಂದು ನಂಬಿದ್ದೇನೆ. ಭಗವದ್ಗೀತೆಯ ಮಾ
ತ್ರೆಯು ಮೂರು ಗುಣಗಳು ಮತ್ತು ಮೂರು ಅಥವಾ ನಾಲ್ಕು
ಮಾತ್ರೆಯ ಗ್ರಂಥಗಳನ್ನು ಅನುಸರಿಸಿ ಈ ಕೃತಿಯ
ನ್ನು ಹೊರತರಲಾಗಿದೆ. ನಮ್ಮ ನಾಡಿನ ಉತ್ಸಾಹೀ ಗಮಕಿ
ಗಳು ನನ್ನ ರಾಮಾಯಣ ಮತ್ತು ಮಹಾಭಾರತ ಅಷ್ಟಪದಿ
ಗಳನ್ನು ಗಮಕ ಕಲಾಪ್ರದರ್ಶನವಾಗಿ ಓದುವ ಕಾವ್ಯ
ಸವನ್ನು ಪ್ರದರ್ಶಿಸಿದ್ದಾರೆ. ಈ ಭಗವದ್ಗೀತೆಯ ಪಾರಾಯ
ಣಕ್ಕೂ ಅದೇ ಕ್ರಮವನ್ನು ಅನುಸರಿಸಿ ಇದು ಜನಪ್ರಿ
ಯವಾಗುವಂತೆ ಗಮಕಿಗಳವರಿಂದ ಭಾವಿಸುತ್ತೇನೆ.
ಅದಕ್ಕಾಗಿ ತಮ್ಮ ಸಹಕಾರವನ್ನು ಕಲ್ಪಿಸುವರೆಂದೂ ನಾನು
ನನ್ನ ವಿನಂತಿಯ ನೀತಿಯಿಂದ ನಿರೀಕ್ಷಿಸುತ್ತೇನೆ.

ಈ ಕೃತಿಯನ್ನು ಕೆಲವು ವರ್ಷಗಳಿಗೆ ಹಿಂದೆಯೇ
ಸಿದ್ಧಗೊಳಿಸಿದ್ದೆನಾದರೂ ಇದರ ಮುದ್ರಣಕ್ಕೆ ಪ್ರಕಾಶಕ
ರಾಗಿ ಮತ್ತು ವಿದೇಶದಲ್ಲಿರುವ ನನ್ನ ಶಿಷ್ಯ ನಿಷ್ಠೆಯಿಂದ
ಪ್ರಯತ್ನ ತಪ್ಪಿದಂತೆ ಮುದ್ರಿಸಿದೆ. ಮತ್ತು ಅಕ್ಷರ
ಜೋಡಣೆ ಸ್ವಲ್ಪ ಮಟ್ಟಿಗಾದರೂ ನ್ಯಾಯ ಮತ್ತು ದಮನ
ವನ್ನು ಅನುಸರಿಸುವ ಮುದ್ರಕರು ಮತ್ತು ಮಿತ್ರರು
ದೊರಕದೆ ಇರುವುದು ನನ್ನ ದುರದೃಷ್ಟ ಕಾರಣವಾಗಿದೆ.
ಈ ವಿಷಯದಲ್ಲಿ ತುಂಬಾ ತೊಂದರೆಯನ್ನು ಅನುಭವಿ
ಸುತ್ತಲಿದ್ದೇನೆ. ನನ್ನ 84ನೇ ವಯಸ್ಸಿನ ಅವಿಶ್ರಾಂತ ವರ್ಷದ ವಿ
ಯನ್ನು ನೋಡಿ ಕಂಗೆಟ್ಟಿದ್ದೇನೆಂದು ಹೇಳುತ್ತಿದ್ದೇನೆ!

ಪ್ರಪಂಚವು ಇಷ್ಟರಮಟ್ಟಿಗೆ ಅವನತಿ ಹದಗೆ
ಟ್ಟಿದೆ; ಮಾನವರಿಗೂ ಮಾನಸಿಕವಾಗಿ ಏರಿ ಇಳಿತ ಬದಿ
ಗೆ ಇಟ್ಟಿದೆಯೆಂಬುದಕ್ಕೆ ನನಗೆ ಇನ್ನೂ ಸರಿಯಾದ ಉತ್ತರ

ವು ದೊರೆಯುತ್ತಿಲ್ಲ, ಈ ಭಗವದ್ಗೀತೆಯು ಗುಣತ್ರಯ ಯೋಗ, ಶ್ರದ್ಧಾತ್ರಯ ಯೋಗ, ಪ್ರಕೃತಿ ಪುರುಷ ಯೋಗ ಇತ್ಯಾದಿಗಳಲ್ಲಿ ಸಾರತತ್ವ ವಿಚಾರಗಳನ್ನು ಹೇಳಿರುವುದಾದರೂ ನಮ್ಮ ಯೋಗವು ಮಾನಸಿಕವಾಗಿ ಆದರ್ಶ ಇದ್ದು ಬಹುಮಾಗಿರಬೇಕೆಂದೇ ಇಂದಿನ ಸಮಸ್ಯೆಯಾಗಿದೆ, ಇದರ ಬಗ್ಗೆ ನಾನು ಆಗಿಂದಾಗ್ಗೆ ಹೇಳುತ್ತಲೇ ಇದ್ದೇನೆ. ಏನೂ ಉಪಾಯವಿಲ್ಲ ಎಂಬಂತಾಗಿದೆ.

ಹೀಗೂ ನಾನೀ ಗೀತೆಯನ್ನು ಒಂದು ಸಾಹಿತ್ಯ ಕೃತಿಯಾಗಿ ಪರಿಗಣಿಸಿ ಅಂತೆಯೇ ಬರೆದಿದ್ದೇನೆ; ಹಾಡಿದ್ದೇನೆ. ಪ್ರತಿಯೊಂದು ಶ್ಲೋಕವನ್ನು, ಮೇಲೆ ಹೇಳಿದಂತೆ ಐದು ಮಾತ್ರೆಗಳ ಮೂರು ಗಣ ಮತ್ತು ಕಡೆಯಲ್ಲಿ 3 ಅಥವಾ 4 ಮಾತ್ರೆಗಳ ಪಂಕ್ತಿಯ ಷಟ್ಪದಿಯಲ್ಲಿ ಬರೆದದ್ದು ಸವಿತರಗಳು ಅಭ್ಯಸಿಸಿದ್ದಾರೆ, ಇದಾಗಲೇ ಅವರು ನನ್ನ ಇತರ ಅಪ್ರಕಟಿತ ಕೃತಿಗಳನ್ನು ಸಭೆಗಳಲ್ಲಿ ಹಾಡಿದ್ದಾರೆ, ನನ್ನ ಪ್ರಯತ್ನವನ್ನು ಪ್ರೋತ್ಸಾಹಿಸಿದ್ದಾರೆ, ನನ್ನ ಈ ಕೃತಿಯೂ ಅದೇ ರೀತಿಯಲ್ಲಿ ಸಹಾನುಭೂತಿಯ ಸ್ನೇಹಿಯರಿಂದ ಭಾವಿಸುತ್ತೇನೆ, ಈ ಮುದ್ರಣದಲ್ಲಿ ಏನಾದರೂ ಅಕ್ಷರದೋಷಗಳು ಇದ್ದರೆ ಅವುಗಳನ್ನು ಮುಂದಿನ ಆವೃತ್ತಿಯ ವೇಳೆಗೆ ತಿದ್ದಿ ಪ್ರಕಟಿಸುವ ವರೆಗೂ ವಾಚಕರು ಕ್ಷಮಿಸುವರೆಂದು ಹಾರೈಸುತ್ತೇನೆ,

"ನಾದಗಳನಾಲಿಸುನಿಸ್ ಪದ್ಯದಲಿ ಹೇಳ್ದೆ
ಶ್ರೀಕೃಷ್ಣ ಪಾದಪದ್ಮದಿಯಲಿ ಶಿಷ್ಯ ಜನಕೆ!

× × × ×

"ಅಕ್ಷರಗಳವ ನೆಯ್ದು ಪದಗಳವ ಕೋದು
ಪಂಕ್ತಿಗಳ ಹಂತವನು ಕಂತೆಯೊಳ್ಗಿಟ್ಟು
ಕಿರಿಯರಿಗೆ ಇದನೊರೆದೆ — — — —,"

× × × ×

"ಪೂರ್ವದಲಿ ಕಾನನದೆ ಮುನಿ ಹೇಳ್ದ ಗಾನ
ನಗರದಲಿ ಇಂದೊಪ್ಪ ಕಿಂಕರನೊ ಆದನಾ
ತೊದಳ್ನುಡಿಯೊಳಿಂತೊರೆದು ಹಾಡಿದನೊ ಇಲ್ಲಿ
ಪಂಡಿತ ಕವಿವರರ ಪದತಲದಲಿರಲಿ!"

×

ಓಂ ತತ್ ಸತ್.

×

ವೆಸ್ಟ್‌ಮಿನ್‌ಸ್ಟರ್; ಬ್ರಿಟಿಷ್ ಕೊಲಂಬಿಯಾ
ಕೆ ನ ಡಾ } ಡಾ. ಮಾ. ಮುತ್ತಣ್ಣ

ಮಹಾತ್ಮನ

ಶ್ರೀ ಮಹಾತ್ಮ ಗಾಂಧೀಗೀತೆ.

ಮಹಾ ಸನ್ನುತಿ.

೧

ಹಲವಾರು ಯೋಜನಗಳಾ ದೂರದಲ್ಲಿ
ಹಿಮವಂತನ ತಪ್ಪಲಾಚೆ ನಾಡುಗಳು ನೂರು
ಹಲತರದ ಹೆಸರಾಂತ ಗೀತಗಳುಂ ನೂರ್ಕು
ಹಲವಾರು ಜನಪದರ ಕವಿತೆಗಳುಂ ನೀತಿ;
ಕೌತುಕರದ ಕೋರಿಕೆಗಳುಂ ಶಾಸ್ತ್ರಗಳುಂ ಎಷ್ಟು
ತತ್ವಗಳುಂ ನೀತಿ ಸಂಸ್ಕೃತಿಗಳುಮ ಎಷ್ಟು;
ಕಾಲದೇಶಗಳ ಉರುಳಿ ತೋರಿದವೊ ಎಲ್ಲ
ಜೀವನದ ನೂರು ಸಂಪತ್ತುಗಳುಂ ಎಲ್ಲ —

" ೨ "

ಅಲಿಸವಿಸದೊ ನಾನು ಕಳೆಯುತಿರುವ ದಿನವು
ಬೂದಿಯಾಗಿವೆ ಇನಿಸೋಮವು ತೋರುಗಳು ಹರಿಯು,
ಜಗದಂದ ಜನಗಳಂದ ಜಡ ಜೀವದಲ್ಲಿ
ಈ ದರ್ಶನದೊ ಕವಿದ ರವಿಚಾರ ನೋಡಿ
ಈ ರೀತಿಯ ನುಡಿ ಪತ್ತಲಾಚೆ ಅದು ಇರುತ್ತ
ಬಾರತದ ಭವ್ಯತೆಯ ಬಾಳ್ವೆಯ ನೆನೆದು
ಆ ತೆರಿಗೆ ನೆಡೆದೆಯು ರಣಪಾರಿ ಹರಿಸ
ಪಾವನತೆ ಉಕ್ಕಿದವೊ ಪಾಗ್ದೆರೆಯು ಇಲ್ಲಿ —

" ೩ "

ಕಾವ್ಯ ಮಹಾಭಾರತ ಸಾಗರವ್ಯವದು ನಿರುತ
ಕವಿ ಶ್ರೀವ್ಯಾಸರೆನೆ ಹಲರು ಹಾಡಿದರು ದಾದನಾ!
ದಿನದಿನದ ಜೀವನದ ಜೀವಯೋಗವ ನೆನಸಿಲ್ಲಿ
ಚಿತ್ರಿಸಿದ ಕವಿ ಕಲಾವಿದನೊ ಈ ಜಗದಿ,
ಉಪನಿಷತ್ತುಗಳನು ಸತ್ಯ-ದರ್ಶನಗಳ ಎಡೆಯಲಿ
ಸಮದಾಗಿಸಿದನೊ ಕವಿ ಕಾವ್ಯರವಿ ದಾವನೊ;
ಗೀತಾಮೃತವ ಸುರಿಸಿದಾ ಯೋಗಿವರನು —
ಹಾಡಿ ಹೊಗಳಿ ರವಿ ಜಗವನ್ನೆತ್ತಿ ಕೃಷ್ಣಾ ಮಾತ್ರೆ!

" ೪ "

ಮಹಾರಾಷ್ಟ್ರಗಳಿಂದ ಮಹಾನಿ ಬಂದು ಉದಯ
ವ್ಯಾಸ ಮಹರ್ಷಿಯಾ ಮಹದರ ಹಿರಿಮೆ ಬೆಡರ ಲಹರಿ;
ಯುಗಗಳಲ್ಲಿ ಹರಿದಂತೆ ಜಗವೆಲ್ಲ ಹೋಳ್ಳಾ

ಭಾರತದ ಯುಗಯುಗಂ ಬದುಕುಗಳನೆಲ್ಲ
ಶಕ್ತಿ ವ್ಯಕ್ತಿಗಳೊಡಗೊಂಡ ಕವಿತೆಯಂತೆ ಹರಿಸಿ
ಉತ್ಕೃತದ ಪರಮಾದರ್ಶದ ಪರಿಗತಿಯೊ!
ನವರಾಗಗಳಾದ ಮಾಧುರ್ಯವನದುವೊ ಮಾತು
ಇಹಪರಗಳಾ ಗೂಢ ಸವಿ ವಿಚಾರವಂತರ! —.

॥ ಈ ॥

ತೇಲಿಸದೆ ಹಾರಿಸದೆ ನಾಟಿಸದೆ ಇದನಾ
ಕೃತಿಯುದಿಸ ರತಿಮುದದ ಪ್ರತಿಯಾಗಿಸುತೆನಾ
ಹಾಡಿದೆನೊ ದಿನವೆಲ್ಲ ಇರುಳೆಲ್ಲ ಗೀತಾ
ದೇಶಾಂತರದಲೆರತ ಸರಸದಲಿ ಇದನಾ!
ಸವಿದುಯದ ಮನವಿದನು ಆಸ್ವಾದಿಸುತಿಹೆನೊ
ದಕ್ಷಿದಿಹ ಜೀವವದ ಕೇಳ್ ಕಾಪಾಡಿಸುತಿಹೆನೊ!
ಆಸ್ ಪೊಂದಿದಾನಂದದಾ ಸಿಂಧು ಹಾಲು
ಬಲವಿನಿಂದೆಳೆ ಗೆಳೆಯರಿಗೆ ನೀಡುತಿಹೆನೊ.

॥ ಉ ॥

ನಾ ನನನ ನನನ ನಾ ನನನಾನ ನನನಾ
ಈ ತೆರನ ಸ್ವರಮಾತ್ರೆಗಳ ಕೂಡಿ ಬರೆದ
ಹಾಡುಗಳನಾದರೂ ಹಿಡಿದು ಹೇಳ್ವೆ
ಶ್ರೀಕೃಷ್ಣ ಮಾಧುರ್ಯದಿಯಂತೆ ಶಿಷ್ಯ ಜನಕೆ;
ಕರ್ನಾಟಕ ಜನಮನದ ಹರ್ಷಗಳನಿತ್ತ
ಶ್ರೀಕೃಷ್ಣ ಶಾಸ್ತ್ರಿಗಳ ಸಂಘಾಸಕ್ತಿಯೊಡನೆ
ಹೇಳುತಿಂತೆ ಕಲಿಸಿದೆನೊ ಗೆಳೆಯರಿಗೆಂದು
ಮನವಾಗಿ ಉದಿಸಿದಾ ಕಾತರದಿಂದ —.

॥ ಊ ॥

ಪೂರ್ವದಲಿ ಕಾನನದಿ ಮುನಿ ಹೇಳ್ವ ಗಾನ
ನಗರದಲಿ ಇಂದೀರ್ವ ಕಿಂಕರನೊ ಇದನಾ
ತಿಳಿದಿಲ್ಲದೆಯೊಳಿಂತೊರೆದು ಹಾಡಿದೆನೊ ಇಲ್ಲಿ
ಬಂದಿನಾ ಕವಿವರರ ಪದತಲದಲಿರಗಿ!
ಇಂತೆಯೇ ಇನಿದನಿಯ ಮಿದುವಾತಿನಲ್ಲಿ
ಆಸ್ ಕಲಿತ ಆ ಲಲಿತ ಸವಿಗನ್ನಡದಲಿ
ಗೆಳೆಯರಿಗೆ ಇದನೊರೆದೆ ನಲ್ನುಡಿಯನೊಂದು
ಸೊರಗುತಿಹ ಈ ಇರವ ಮರುಗಿ ಗೋಳಿಂದ.

॥ ಋ ॥

ಹಾಡಿದೆನೊ ಕಡಲಾಚೆ ನಾಡಿನಲಿ ಇರುತ
ಮೆಚ್ಚುತಲಿ ಹೊತ್ತುಗಳನೆಲ್ಲದಲಿ ಇಟ್ಟು
ಪರಿತೃಪ್ತ ಮನಕೆ ಮುದ್ದಾಗಿರುವ ಮುದ್ದಾಗಿ ಬರಲು

ರಸಿಕರೆಯರು ಸಿರಸಿದರು ತ್ರೀಲಿಸದಿನಿಂದರು;
ಸರಸಿಗಳು ತ್ರಿರವಿದಕೆ ಕಾಸಲದಿ ಕಲಿಸ
ಕೊರತೆಗಳ ತಾಪ್ ಮರೆತರು ಮಮತೆಯನರು ತೋರಿ
ದಾಕ್ಷಿಣ್ಯದ ಆಸೆಯಲಿ ಪ್ರೋತ್ಸಾಹಿಸಿದರು ಇದನು
ಎಡೆಬಿಡದೆ ನಡೆಯುತಿದೆಗಿರುವುದರಿಂದರು ಶೀಘ್ರ —

॥ ಶುಭಾ ॥

— × —

ವಿನಮ್ರ ಪರ್ ಕೆನಮಾ.
ತಾ॥ ೧-೧೦-೧೯೮೬

ಪಿ. ಮಾ. ಮಲ್ಲಿತ್ತ್ಯ

— ಅ ಪಿ ನ ಗೆ —

ಮಹಾ ತ್ರಿ ಪ್ರಾಸ

ಶ್ರೀಮದ್ಭಗವದ್ಗೀತೆ.

ಅಧ್ಯಾಯ ೧ — ವಿಷಾದ ಯೋಗ.

ರಾಷ್ಟ್ರಪತಿ ಧೃತರಾಷ್ಟ್ರ ಪ್ರಶ್ನಿಸಿದನಂತು —
"ಸಂಜಯನೆ ಹೇಳೆನಗೆ ಅಂಜದೆಯೆ ಇಂದು
ಕುರುಕ್ಷೇತ್ರವೆಂಬ ನಮ್ಮ ಧರ್ಮಕ್ಷೇತ್ರ
ಹೇಳೆತ್ತ ಹೋರಾಡಲಿಳಿದವರ ಪಾತ್ರ!
ಕುರುಪುತ್ರರೊಡಗೊಂಡ ಕೌರವನೇನು ಇಂದು
ಪಾಂಡುಸುತರ ಸೇನಾ ತಂಡದೊಡನೆಂದು
ರಣಾಂಗಣದಿ ಭಂಗಕೊಳಗಾಗದಂತೆ
ಏನೆಸಗುತಿಹರೆಂದು ಹೇಳೆನ್ನ ನನಗೆ!"

॥ ೧ ॥

"ಕುರುಕುಲ ಕುರುವೀರ, ನಿನ್ನ ಕುವರ ಸಮರ
ಆ ಸಮರ ಭೂಮಿಯಲಿ ನಿಂತಿಹರನಿಲ್ಲ,
ಪಾಂಡವರ ಸೈನ್ಯವದರಾಕ್ರಮಿಸುವುದನು
ನೋಡುತ್ತಲೆ ಸುತ ಸುಯೋಧನನಂತು ಸುತ್ತು
ಹೋದನಾಗ ಗುರುದ್ರೋಣನ ಬಳಿಗೆ ಬಿಡದೆ
ಹೇಳಿದನು ಬಿಚ್ಚುಮಾತು ಕಂಡುದನು ಅಲ್ಲಿ,"
ಎಂದೆನುತ ಸಂಜಯನು ಹೇಳಿದನು ಪ್ರಭುವಿಗೆ
ಧೃತರಾಷ್ಟ್ರನಿಗೆ ನಡೆದುದೇನೆನುತ ಬಲದೆ!

॥ ೨ ॥

ಕೌರವನು ಕೈಮುಗಿದು ಹಾಗವಗೆ ಒರೆದಾ:
"ನೋಡ ಗುರುವೆ ಪಾಂಡುಸುತರ ಸೈನ್ಯವನು
ಸೇರಿಸಿಹರವರತ್ತ ಬಿಲ್ಲಾಳುಗಳನಾ,
ದಕ್ಷರಹ ಶಿಷ್ಯವೀರರಕೊ ಅಲ್ಲಿ ಇಹರಾ
ದ್ರುಪದ ಸುತ ನಿನ್ನ ಪ್ರತಿಪಕ್ಷ ಸಾರಥಿ ವೀರ;
ಸೇನಾನಿಯಾಗಿಹನ ನೋಡುತ್ತ ಬೇಗ,"
ಎಂದು ದುರ್ಯೋಧನ ದ್ರೋಣನಿಗೆ ತಾನು ಬಂದು
ಹೇಳುತಲೆ ತೋರಿಸಿದನಾ ಸೈನ್ಯವನ್ನು!

॥ ೩ ॥

"ಸೈನ್ಯವಿದ ನೋಡುತ್ತ ನಿಂತಿಹರನಿಲ
ಪಾಂಡವರ ಸೈನ್ಯಬಲವದನಂತು ಪ್ರೋತ್ತು
ಭೀಮಾರ್ಜುನರಿಗೊಪ್ಪುದಾ ವೀರರಿಹರೊ

ಬಿಲ್ಲಾಳುಗಳ ತುಮುಲಮಧ್ಯದಲ್ಲಿ ನೋಡಿದೆ 1232
ಚತುರ ಯುಯುಧಾನನೂ ಅಲ್ಲಿ ಸಿಮನಿಂದು ಇಹನು;
ನೃಪ ವಿರಾಟನು ದ್ರುಪದರಿಹರಲ್ಲಿ ನೋಡು,"
ಎಂದೆನುತ ಕೌರವನು ಹಾತೊರೆದು ಪೇಳ್ದ
ಗುರುವರಗೆ ತೋರಿಸಿದ ನಿಂದಿಹರನೆಲ್ಲ.

" ೪ "

"ನೋಡಲ್ಲಿ ಆಚಾರ್ಯ, ಇತ್ತಲಿದೊ ಇಹರು
ಧೃಷ್ಟಕೇತುವೊ ಅಲ್ಲಿ ದೃಷ್ಟಿಸುತಲಿಹನು,
ಚೇಕಿತಾನನು ಕಾಶಿರಾಜ ವೀರರು ಜತೆಗೆ
ಪುರುಜಿತನು ನಿಂದಿಹರು ವೀರಾಗ್ರಣಿಗಳು,
ಕುಂತಿ ಭೋಜನು ಶೈಬ್ಯರೊಡಗೂಡಿ ಅಲ್ಲಿ
ಕಾಲಾಗಿ ನಿಂದಿಹರನೆಲ್ಲರನು ನೋಡಿ"
ಕೌರವನು ದ್ರುತಗತಿಯೊಳು ಪೇಳ್ದನಂತು
ಶೂರಕ್ಷತ್ರಿಯದಾ ಸೈನ್ಯದಾ ವಿವರವನ್ನು!

" ೫ "

"ಉತ್ತಮೌಜರು ಶತ್ರುದಮನು ನಿಂತು ಇರಲ್ಲಿ
ನೋಡಿದರೆ ಶರಿ ಸೌಭದ್ರಿಯು ಶತ್ರುಸಸಲ್ಲಿ
ಪಾಂಚಾಲಿಯಾ ಸುತರನು ಯುವಜನವು ಸುತ್ತು
ಯುಧಾಮನ್ಯುವು ಉತ್ತಮಾಜನನು ನಿಂದು
ನೋಡುತಿಹುದನು ತೋರಿಸಿದ ಗುರುವಿಗಂದು,
ದ್ರೋಣನಿಗೆ ಪೇಳುತಲೆ ದುರ್ಯೋಧನನು ನಿಂದು —
ಇಲ್ಲಿಹರು ಅಲ್ಲಿಹರು ಇನ್ನಿಹರು ಎಲ್ಲ,
ಎಂದೆನುತ ಸುತ್ತೆಲ್ಲ ತೋರಿಸುತ ಪೇಳ್ದ!

" ೬ "

"ಎಲೆ ದ್ವಿಜೋತ್ತಮನೆ ಕೇಳು, ತೋರಿಸುವೆ ನನ್ನ
ಕುರುಸೇನೆಯಾ ವೀರಾಗ್ರಣಿಗಳನ್ನು ಇನ್ನು!
ಲೋಕವೀರರು ಎಂದ್ಯರಿಹ ಸೇನಾಜನವು
ಇಹರೆಮ್ಮ ಸೈನ್ಯದಲಿ ಪೇಳುತಿಹೆ ನಾನು!
ಹೆದರಲೇತಕೆ ನಾವು ಜಗಜ್ಜೇತರಿರಲು
ಇತ್ತಲಿಹರೆಮ್ಮವರು ನೋಡಲ್ಲಿ ಗುರುವೆ,"
ಎಂದೆನುತ ಧೃತರಾಷ್ಟ್ರ ಸುತನಂದು ಗುರುವಿಗೆ
ಪೇಳಿದನು ತನ್ನ ಬಲವೆಲ್ಲವನು ನಿಜದಿ.

" ೭ "

"ಬಲ್ಲೋಜನಿಹನಾ ಪಿತಾಮಹನೊ ಭೀಷ್ಮ
ಕೃಪಾಚಾರ್ಯನಿಹನಲ್ಲಿ ಕರ್ಣನೂ ಅಲ್ಲಿ,
ಇರೆ ಯಾರು ಬೇರಾರು ಬೇಕಿನ್ನು ವರನೆ?

ವರ ಅಶ್ವತ್ಥಾಮನು ಕೃಪ ಅರ್ಜುನಬಲನಿಹನ್ನೆ 1233
ಅಗೋ ವಿಕರ್ಣನು ಇಹನು ನಸುತ ಸೋಮದತ್ತ
ಜಯದ್ರಥನೆ ಅವನು ಜಯಶ್ರೀಯಹ ನಿತ್ಯ"
ಎಂದು ಮುದಗೊಂಡು ಕುರುಕುಲದ ನೃಪನಂತು
ಆಚಾರ್ಯನಾ ದ್ರೋಣನಿಗೆ ಹೇಳ್ದನಂದು।

॥ ೮ ॥

"ಇಹರು ಅತಿರಥರು ಮಹಾರಥರೊಡೆಯರು ನೋಡ್ವೆ
ಶಸ್ತ್ರದೊಳಗೆ ಶ್ರೇಷ್ಠಗಳು ಹೊತ್ತು ಇಹರ್ವೆ,
ಶಸ್ತ್ರಗಳು ಸಹಸ್ರಾರು ಹೊಳ್ ಹೊಳೆಸುತಿಹವೊ
ಸಮರ ನಿಷ್ಣಾತರು ಅನುಪಮ ಬಲರಿಹರೊ,
ವೀರಜನ ಸಂದೋಹಿಯು ಸಾಲಾಗಿ ನಿಂತು
ತನಗಾಗಿ ತನುವನ್ನು ಅರ್ಪಿಸಲು ಎಂದು
ನಿರ್ಧರಿಸಿ ಇಹರನ್ನು ನೋಡಿತ್ತೆ ಗುರುವೆ"
ಎಂದೆನುತ ಹಿರಿದಾಗಿ ಹೇಳ್ದ ಸುಯೋಧನನು.

॥ ೯ ॥

"ಮುಂದಿಹುದು ಗಾಂಗೇಯನಾ ಸೈನ್ಯವದುವೊ
ಬಲ ಪರಾಕ್ರಮದಲಿ ಅಭೇದ್ಯವಾಗಿಹುದೊ,
ಅಗಣಿತವು ಸೇನಾನಿಗಳ್ ನೆರವಲ್ಲಿ
ಕುರುಸೇನಾ ಶರಧಿಯು ಪರಿಮಿತಿಯಿಲ್ಲಿ!
ಪಾಂಡವರ ಸೈನ್ಯವದು ತುಂಬ ನೋಡಿದೆ,
ಭೀಮನನು ಮುಂದಿಟ್ಟು ನಿಂತಿಹುದನಂತು,
ಅದುವೊ ಅರಿಸೇನೆ ಕೇಳ್— ಇಷ್ಟಿದೆಯು ಅಂದು
ಕಾದಾಡಲಿಳಿಸುತಲಿ ನಿಂದಿಹುದ ನೋಡು.

॥ ೧೦ ॥

"ಪಳಿರಲ್ಲಿ ಎಡೆಗಳ್ಳಿ, ವೀರಾಗ್ರಣಿ ಪಳಿ—
ಕುರುಸೇನಾ ದಳ್ಪದ ಸುಸಜ್ಜಿತರ ಪಳಿ,
ಕಾದಾಡಲಿರಲೊ ಶೀಲ ಶಿಸ್ತಿನಲಿ ನಿಂದು
ಪದಗತಿಗೆ ಅನುವಾಗುವ್ರಲು ಎಲ ನಡೆದು
ಆಗ್ ಬೆಲನ ಮನವದ ಕೋಡಿಯಾಗಿ ನಿಂದು
ಸೇನಾನಿ ಭೀಷ್ಮನನು ಅನುಸರಿಸಿ ಇಂದು
ಕಾದಿರಲ್ಲಿ!" ಎಂದು ಸುಯೋಧನ ಹೇಳ್ದನಾಗ
ಗುರು ದ್ರೋಣನೊಡೆ ವೀರಜನ ಸ್ತೋಮಕಲ್ಲಿ!

॥ ೧೧ ॥

ಅನಿತರಲಿ ಕುರುವೀರ ಅನುಪಮಬಲ ಭೀಷ್ಮ
ಕುರು ಪಿತಾಮಹನು ಸೇನಾನಿ ವರಭೀಷ್ಮ
ನೃಪ ಸುಯೋಧನನ ಮುದಗೊಳಿಸಲೆಂಬಂತೆ

ಕೌರವಾರಿದಿ ಶಂಖವನು ಎತ್ತಿ ಹಿಡಿದು
ಊದಿದನೋ ಸಿಡಿಲ್ದನಿಯು ಮೊರೆಯುತ ತಾನು
ಮೊಳಗಿದ ದಿಗಂತವನೆ ನಡುಗಿಸುವೊಲು ಅಂದು!
ಸೇನಾಂಗಣವೆ ನಡುಗಿತ್ತೋ ಸಿಂಹನಾದಾ
ಆರ್ಭಟಗಳನೆ ಹೆಚ್ಚರಿಸುವಾ ಶಂಖಗಾನಾ – !

॥ ೧೨ ॥

ಆನಂತರನಂತರೆ ಸಂಗಾತನಿಯರನು ಸೈನ್ಯ
ಊದಿದರು ಮೊಳಗಿದರು ಬಾರಿಸಿದರಲ್ಲಾ
ಶಂಖವು ತಮಟೆಗಳು ಭೇರಿ ಮೃದಂಗ
ಡೋಲುಗಳು ನಗಾರಿಗಳು ಕಹಳೆಗಳ ನಾದಾ;
ಡಮರುಡಮರುನೆ ಡಮರುಗಳು ಬಡಿತಕ್ಕೆ ಎಲ್ಲಾ
ಕೌರವಸೈನ್ಯದಾ ವೀರಾಗ್ರಣಿಗಳು ಬೇಗ
ಮುಂದಾಗುತಲಿ ಯುದ್ಧಕದೋ ಸಿದ್ಧರಾಗಿ
ರಣರಂಗವದು ನಾದಮಯವಾಗೆ ನಡೆಸೆ —

॥ ೧೩ ॥

ಮೊಳಗಿದರು ಶ್ರೀಕೃಷ್ಣ ಪಾಂಡವರು ಅಲ್ಲಿ
ಶ್ವೇತಾಶ್ವ ರಥಗಳು ತಾವು ಒಡಗೂಡಿ
ಹೊಂದೇರುತಿಗಳು ಭವ್ಯಸ್ಥಿತದಲಿ ಇರುತ
ದೇವಲೋಕದ ಶಂಖಗಳನೆತ್ತಿ ಹಿಡಿದು
ಗಗನದಲ್ಲಿ ಬಿರಿವಂತೆ ಮೊಳಗಿದರೋ ಎಲಾ
ನಾದಮಯವೀ ಲೋಕವೆಂಬವೊಲು ಕೇಳಾ!
ಅದುವೆ ಹರಿ-ಪಾರ್ಥರೊಳಗಾದ ಗೆಳೆತನಕೆ
ಮೂಲವೋ ಪ್ರಸಂಗವದು ರಣರಂಗದಾಗೆ —

॥ ೧೪ ॥

ಹರಿ ಹೃಷೀಕೇಶ ತಾನ್ ಊದಿದನು ಒಡನೆ
ಪಾಂಚಜನ್ಯವನೆತ್ತಿ ಮೊಳಗಿದನೋ ಭರದಿ;
ಅದರೊಡೆಯೆ ವೀರ ಧನಂಜಯ ತಾನು ಅಲ್ಲಿ
ವರ ದೇವದತ್ತ ನರನ ಶಂಖವನು ಎತ್ತಿ
ರಣರಂಗವನೆ ಭಂಗಕೊಳ್ಳ ಸಿಡಿಸುವಂತೆ
ಊದುತಿರೆ ಕೇಳಿ ವೃಕೋದರನಿದ್ದು ನಿಜದಿ
ಸಿರಿ ಶಂಖ ಪೌಂಡ್ರಕದ ನಾದದೊಡೆ ಲೋಕ
ಬೆರಗಾಂತು ಜೋಲುವೊಲು ಊದಿದನೋ ಬೇಗ —

॥ ೧೫ ॥

ತೆರೆಗೂಡಿ ಬರಿಯಿತೆ ಧ್ವನಿ ಪ್ರತಿಧ್ವನಿಯು ಕೂಡಿ
ಪಾಂಡುಸುತನೆನೋ ಯುಧಿಷ್ಠಿರನಿದು ಅಲ್ಲಿ
ಊದಿದ ಅನಂತವಿಜಯವೋ ದಿವ್ಯ ಶಂಖ

1235

ಸತ್ತಿ ಮಾದ್ರಿಯಾ ಸುತನು ನಕುಲ ತಾನ್ ಬೇಗ
ಮೊಳಗಿಸೆ ಸುಘೋಷವನು ಅವನ ಸಹೋದರನು
ಸಹದೇವನಾ ತನ್ನ ಮಣಿಪುಷ್ಪಕವನು
ಪಿಡಿಯುತ್ತಲಿ ಊದಿದರು ಶಂಖಗಳನಂತೆ
ಗಗನವದು ನಡಿಯುವೊಲು ಊದಿದರು ಕೇಳಿತ್ತೆ!

॥ ೧೬ ॥

ಬಿಲ್ಲೋಜನಕೆ ಧೀರ ಕಾಶಿಯಾ ಅರಸ
ಸಮರ ಸೇನಾನಿ ಶಿಖಂಡಿಯೂ ಇಹನಾ—
ಧೃಷ್ಟದ್ಯುಮ್ನಾದಿಗಳು ಅರಿಬಲವನಿರಿಯೆ
ನೃಪ ವಿರಾಟನು ವಿಜಯಶಾಲಿಗಳು ಪಿಡಿಯೆ
ಜಗದಲಾರಿಂದ ಸೋಲದಿಹ ವೀರ ನೋಡಾ
ಸಾತ್ಯಕಿಯು ಅಲ್ಲಿಹನು ಎಂದೆನುತಲಾಗ
ಸಂಜಯನು ಧೃತರಾಷ್ಟ್ರನಿಗೆ ಎಲ್ಲ ಪೇಳಿ
ಒಪ್ಪಿಸಿದ ಸೇನಾನಿಗಳನೆಲ್ಲ ಅಲ್ಲಿ—.

॥ ೧೭ ॥

"ದರ್ಶಿಸನೆ ಕೇಳಿತ್ತೆ ಇಹರು ಪಾಂಚಾಲ
ದ್ರುಪದನೂ ಅವನೊಡೆಯ ವೀರಕುಲ ವೃಂದಾ,
ಅಲ್ಲಿಹರು ಧೀರೆ ಸತಿ ದ್ರೌಪದಿಯ ಸುತರು,
ಸತಿ ಸುಭದ್ರೆಯು ಬಾಹುಬಲ ವೀರ ಸುತನು.
ಇಲ್ಲಿಹನು; ಸುತ್ತೆಲ್ಲ ನಿಂತಿಹರು ನೋಡಾ
ಊದುತಿಹರ್ ತಮ್ಮ ಶಂಖಗಳನೆಲ್ಲ;
ಮೊಳಗಿಸಿದರೆಲ್ಲ ದೇವಘೋಷವನೆ ಕೇಡಿವ
ತೆರದಲವರೊಂದಾಗಿ ನಿಂತರದು ಎಲ್ಲಾ!

॥ ೧೮ ॥

"ನಾದವದು ಮೊರೆ ಭೇರಿವಾದ್ಯದಾ ಗಲಭೆ
ಭೂಮಿ ಆಕಾಶಗಳನೊಡೆವಂತೆ ಪ್ರತಿಭೆ;
ಪಾಂಡವ ಸೇನಾನಿಗಳು ಸೇವಿತವದು ನಿಂತು
ಅರಿಬಲವೆ ತತ್ತರಿಸುವೊಲು ನಡಿಸೆ ಸುತ್ತ
ಧೃತರಾಷ್ಟ್ರ ಶತಪುತ್ರರಾ ಹೃದಯವನ್ನು
ಕೊರೆದವೊಲು ದನಿ ಬೆರೆಯು ಭೋರ್ಗರೆದು ಆಗ,
ಪರಿಯುತಿರಲದುವೆ ಹರಿ ಮಾಯೆ ಎಂಬಂತೆ
ಕುರುಕ್ಷೇತ್ರವದು ಕ್ಷಾತ್ರ ಭೂಮಿಯುಂತಾಗೆ!

॥ ೧೯ ॥

"ಕೇಳಿತ್ತೆ ಕುರುಕುಲದ ಕುರುಪತಿ ನೃಪ ಕೇಳಾ,
ಕೌರವರು ನಮ್ಮವರ ಸನ್ನದ್ಧರೊಲಾಗ,
ಗಾಂಡೀವಗಳು ಮೆಲ್ಲಗೆ ಹರಿಯುವಂತಿರಲು ಕ್ಷಣದಿ
ಹನುಮದ್ಧ್ವಜನಾ ಪಾರ್ಥ ರಥದಿಂದಲಂತೆ

ಸುತ್ತೆಲ್ಲ ನೋಡುತ್ತಲಿ ಪೊಸ್ ತೆರವನಂದು
ಮೇಲೆತ್ತುತಲಿ ಮೊರೆದು "ತಡೆ ತಡೆ"ಯೆಂದಂತು,
ಮನದುಮ್ಮ ಮುನಿದಾಗಿ ಉದಿಸುತದು ಮನ್ಮ
ಪೇಳಿದ ಮುರಾರಿಗೀ ಜದನವಿದನಿಂತು:—

"೨೦"

"ನಿಲ್ಲಿಸಿತ್ತ ಮುದ್ದುಗೂದನನೆ ರಥವ ನೀನು
ಉಭಯ ಸೇನೆಯು ಮಧ್ಯೆ ನಿಲ್ಲಿಸಿತ್ತ ಇಂದು;"
ಎಂದೆನುತ ಅರ್ಜುನನು ಅಂಜದೆಯೆ ಪೇಳ್ದ
ಸುಮುರಾಂಗ ಕೇದಿ ಸಮರವನೆ ಬಿಟ್ಟು ನಿಂದಾ!
ಪೊಂದೇರನದನೇರಿ ಪಲ್ಗುಣನು ಅಂದು
ಸುತ್ತೆಲ್ಲ ನೋಡಿದನು ಸ್ವಸೈನ್ಯ ಪರಜನ್ನ!
ಇದುವೆ ಗೀತೆಯು ಹುಟ್ಟುವೆಂಬಂತೆ ಇರುವಾ
ಬೃಹತ್ಸೇನೆಗಳ ಮಧ್ಯೆ ಮನದುಮ್ಮ ಗಹನಾ!

"೨೧"

"ನೋಡುತಿಹೆ ಪಡೆಯಾಳಿಗಳ ತಂಡವನ್ನು
ಸಮರಕ್ಕೆ ನಿಂದಿಹರ ಪರಿವಾರವನ್ನು;
ಎಲೆ ಸಖನೆ, ಪೇಳುವೆಗೆ ಅರಿಯೆನೆ ಇಲ್ಲಿ
ಕಾದಲಿಹೆನೋ ಎಂದು ತೋರಲಿಕ್ಕೆ ಹರಿಯೆ,"
ಎಂದೆನುತ ಪಾರ್ಥ ಪೇಳುತ್ತಿರೆ ನೋಡಿಕ್ಕೆ
ಹರಿ ಪಾರ್ಥನರಥವಯು ಮುಂಗಲ್ಲ ಗುತ ತಾನೆ
ಮತ್ತೆ ಕಾರ್ಯವನು ಪೂರೈಸಿ ತಾನಿಂದು
ಯೋಚಿಸುತಲೀ ರಥವ ನಿಲ್ಲಿಸಿದನಂತು —

"೨೨"

"ಕುರುಸೇನೆಯನು ನೋಡಲೆಂದು ಇನಿಂದು
ನೆರೆದಿಹ ಸೇನಾನಿಗಳ ನಿಲ್ಲರನು ಸುತ್ತ
ನಿರುಪಾಯರಾದ ಜನವನು ಮುದದಲೆಂದು
ಕೌರವನ ಪರ ನಿಂತು ಕಾದಲಿಹರನ್ನು
ಕುಹಕಿ ಈ ಮನೋಜಿ ನಿಂತು ಬದುಕುತಿಹರನ್ನು
ನೋಡಲೆಂದಿಚ್ಛಿಸುವೆ ಕೇಳಲಿಕ್ಕೆ ಕೃಷ್ಣಾ,"
ಎಂದು ಧನಂಜಯನಂತು ಉದ್ಗರಿಸೆ ತಾನು
ಕುರುಕ್ಷೇತ್ರ ನಡು ನಿಂದು ನೋಡಿದನು ಸುತ್ತ.

"೨೩"

ಪಾರ್ಥಯುದ್ದೆಲ್ಲವನು ಸಂಜಯನು ಆಗ
ಧೃತರಾಷ್ಟ್ರ ನೃಪ ಚಂದ್ರವಂಶಜಗೆ ಪೇಳ್ದ:—
"ಗುಡಾಕೇಶ ಕೌಂತೇಯನು ಹರಿಗೆ ಅಂತು
ಹೇಳುತ್ತಿರಲಾ ಹೃಷೀಕೇಶ ತಾನ್ ಎದು
ಸೇನೆತ್ರಯಗಳ ತೇರನಾ ಭೂಮಿಯಾಗೆ

ಅಕ್ಷೋಹಿಣೀ ಸೈನ್ಯಗಳಂ ಎರಡರೆಡೆಯಂ
ನಿಲ್ಲಿಸಿದನಾ ರಥವ ನೋಡುತಿರ್ಪ ರಾಜಾ,"
ಎಂದು ಧೃತರಾಷ್ಟ್ರನಿಗೆ ಹೇಳ್ದ ತಾನ್ ಆಗ!

॥ ೨೪ ॥

"ತಿರುಗಿಸಿದನೋ ಪಾರ್ಥ ಸಾರಥಿಯು ರಥವ
ಭೀಷ್ಮ ದ್ರೋಣರ ಎದುರು ನಿಲ್ಲಿಸಿದನವನಾ,
ಭೂಮಿಯಾಳುವರೆಲ್ಲರಾಗಲವನು ಆಳ್ವ ನೃಪರಾ
ಕೌರವಸೇನೆ ಸೇನಾನಿಗಳಂ ಎಂದು ಇಹರಾ
ಮುಂದು ಕೊಂಡೊಯ್ದನಾ ನಿಲ್ಲಿಸುತ ಕೃಷ್ಣ
ಹೇಳಿದನು ಫಲ್ಗುಣಗೆ "ನೋಡುತಿರ್ಪ ಪಾರ್ಥ,
ಕೌರವಸೇನೆ ಬಿಲ್ಲಾಳುಗಳನೆಲ್ಲ ನೋಡು,"
ಎಂದೆನುತ ಸವುರಾಂಗಳಿಂದ ಎಡೆಯೆ ಹೇಳ್ದ!

॥ ೨೫ ॥

ನೋಡಿದನು ಇಕ್ಕಡೆಯು ಸೈನ್ಯಗಳನೆಲ್ಲ
ಪಾರ್ಥನಿಪ್ಪರಾಗಿ ತಾತಂದಿಯರನಾ,
ಗುರುಹಿರಿಯರಂತೆ ಹಲವರಲ್ಲಿ ಇರೆ ಅಲ್ಲಿ
ಮಾವಂದಿಯರು ಬಳಗ ಮಿತ್ರರಿಂದಲ್ಲಿ,
ಆರವರು ಬಂಧುಗಳಂ ಸೋದರರು ಸುತರ್
ದಾಯಾದಿಯರು ಭಾವಮೈದುನರ ಗುಂಪು,
ಮಕ್ಕಳಂ ಮೊಮ್ಮಕ್ಕಳಾ ಪರಿವಾರವೆಲ್ಲ
ನಿಂದಿಹರು ಅತ್ತಿತ್ತ ಕಾದಾಡಲೆನುತ!

॥ ೨೬ ॥

ನಿಂದಿಹರೆಲ್ಲರ ಕುಂತೀತನಯಂ ನೋಡಿ
ಸೇನಾನಿಗಳಂ ತಮ್ಮ ಸ್ಥಾನಕನುವಾಗಿ
ರಾಜಾಜ್ಞೆಗೊಪ್ಪಿ ತಾವ್ ಕಾದಾಡಲೆಂದು
ಗುರುಹಿರಿಯರೊಡೆ ಬಂಧುಗಳಂ ಸಮರವೆಂದು
ಕೈದುಗಳ ಪೊತ್ತು ತಾವ್ ನಿಂದಿಹುದ ಕಂಡು
ಸ್ವಜನವನೆ ವಧಿಸ ಮನಸ್ಸಂತ್ರಸ್ತಗೊಂಡು
ಬಂದಿಹನೆಂದ ನೋಡಿ ದುಃಖದಿ ಮುಳುಗಿ
ಮನಮರೆ ಮರುಗಿದನು ಕಲಿಪಾರ್ಥನಲ್ಲಿ!

॥ ೨೭ ॥

"ಹೇ ಕೃಷ್ಣ, ನೋಡುತಿರ್ಪ ಬಂಧುಗಳಂ ಎನ್ನ
ಸೋದರರು ಗುರುಹಿರಿಯರಾ ಬಳಗವೆಲ್ಲ
ಕಾದಾಡಲಕೋ ಸಿದ್ಧವಾಗಿಹುದ ನೋಡೆನ್ನ
ವದನವಾರೆ ಅಂಗಾಂಗಗಳು ಬೆವರುತಿಹುದೆನ್ನ,
ಎದೆಗುಂದಿ ನಾಲಗೆಯು ಒಣಗಿಹುದು ಎನ್ನ

ಹೇಳುತೇನ್ ಈ ವ್ಯಥೆಯಂ ಕಡೆಯಂ ಆನ್ ಇನ್ನು?" 1238
ಎಂದೆನುತ್ತಲಾ ಸವ್ಯಸಾಚಿ ತಾನ್ ಹೇಳ್ದ
ಮಾತುಗಳ್ ಮುಗಿಯುತ ಆಲಿಸಿದನಾ ಹರಿಯು ದೇವನಾ —

॥ ೧೮ ॥

"ನಿಶ್ಚೇಷ್ಟನಾಗಿಹೆನೊ ನಿಲಲಾರದೆಯೆಂ ನಾನ್
ನಡುಗುತಿವೆ ಮನಗುಂದಿ ಕೈ ಮೈಗಳೆಲ್ಲಾ,
ಮೈಗೂದಲುಂ ನಿಮಿರಿ ಕಂಪಿಸುತ ಮಾಗಿ
ಸೊರಗುತಿಹೆನೀ ಮನದಿಂ ತಿರುಗುತಾರಮಾಗಿ;
ಗಾಂಡೀವವಿದ ಹಿಡಿಯಲಾರದೆಯೆಂ ನೋಡಾ
ನನಗರಿಯಂದೆಯೆಂ ಜಾರುತಿಹುದು ಕೈಯಿಂದಾ,"
ಎಂದೆನುತ ಫಲ್ಗುಣನು ದುಃಖಿತನು ಆಗಿ
ಹಿಂಜರಿಯುತ ತಿರುಗದಂತೆಂದನಲ್ಲಿ —

॥ ೧೯ ॥

"ನಿಲ್ಲನೆಯೆಂ ನಿಲಲಾರದೆಯೆಂ ಇಹೆನು ನೋಡಾ
ಕೇಶವ ಜನಾರ್ದನನೆ ಮನಸಿನಲಿಯೊ ಇನ್ನು?
ತಿರುಗುತಿಹುದು ಮನ ಮರುಗುತ ಕಣ್ ತೋರುತ ಎನಗೆ
ಹಂಬಲಿಸುತಿಹ ಆನು ಕಾಣುತಿಹುದೇನಾ!
ಅಪಶಕುನವದೆ ಬಿಡಿಸ ಮನಸಿನಲಿಯೊ ಕೃಷ್ಣಾ
ಬಾಳ್ ಭವಿಷ್ಯವೊ ಅಗಂಭವನೆ ತೋರುತಿಹುದಾ,"
ಎಂದು ದೀನರುಚಿಯಂ ಹಿಂದುಮುಂದಾಗಿ ಮನದಿ
ಕಳವಳದಿ ಕೊರಗಿದನು ಸಮರಾಂಗಣದಲಿ!

॥ ೨೦ ॥

"ಏನೆಂದೆನಾ ನನ್ನ ಕೇಳ್ವೆ, ಉದ್ವೇಗವಿದನಾ,
ಏನ್ ಹೆಚ್ಚೆಯಂ ತಹೆನೊ ಈ ಸಮರವನು ಹೂಡುತ್ತ!
ಸ್ವಜನರನು ಕೊಂದು ತಾನ್ ಪಡೆವ ಸುಖ ಏನ್ಸೆ?
ಗೆಲುವುಮದ ನಿಚ್ಚ ಹೆನೊ ನಿಶ್ಚಯವು ನಿಜನೆ.
ರಾಜ್ಯ ಸಾಮ್ರಾಜ್ಯಗಳು ಬೇಡವು ನನಗೆ
ರಕ್ತದಲಿ ಮೈದೊಳೆದು ಪಡೆವ ಸುಖವೇತಕೆ?
ಮನಶ್ಶಾಂತಿಯಿಲ್ಲದಿಹ ಬಾಳ್ವೆಯಿದು ಏಕೆ?"
ಎಂದೆನುತ ಹಲುಬಿದನು ಅರ್ಜುನನು ಭರದಿ.

॥ ೨೧ ॥

"ಗೋವುಗಳ ಕಾಯ್ವ ಹರಿ ಗೋವಿಂದ ಕೇಳ್ವೆ,
ಏತಕೀ ನೆಲ ಹೊಲವು ರಾಜ್ಯಗಳು ಏಕೆ?
ಸಿರಿ ಉಡುಗೆ ತೊಡಿಗೆಗಳ ಭೋಗವದೇಕೆ?
ಗುರಿಯಿಲ್ಲದ ಜೀವನದಿ ಪಡೆಯಲಿಹುದೇನ್ಸೆ?
ಎಂದೆನುತ ನಿಟ್ಟುಸಿರಮಾಡಿ ಇರವ ಕಂಡು

1939

ಕ್ಷತ್ರಿಯನಿಗೊಪ್ಪದಿಹ ಸೂತ್ರವದ ನೆನೆದು
ಶ್ರೀ ಅರ್ಜುನನು ದುಃಖದಿ ಹೇಳಿದುದ ಎಲ್ಲ
ಮುರಹರನು ಮುಗುಳ್ನಗುತ ಆಲಿಸಿದನಾಗ!

॥ ೨೧ ॥

"ಯಾರ ನೆರಳಿಗೆ ಕೀರ್ತಿಯು ಆಹುತಿಯು ಜನದ
ರಾಜ್ಯವನು ಪ್ರಾಜ್ಯದೊಡೆ ಪಡೆಯುವ ಸೊಗವೇನು?
ಬಿಲ್ಲತಿಯನು ನೀಗಿ ನೆಟ್ಟ ಆತ್ಮನಾಶ ಮಾಡಿ
ಪಡೆದ ಸಂತೋಷವದು ನೀಡುವುದು ಎಂತು?
ಕೀರ್ತಿಯನು ಮಧುಸೂದನಾ ಕೇಶವನೆ ಕೇಳು
ಐಸ್ವರತಿಯ ಬಾಳ್ವೆಗೇ ಸಮರವೇಕಾ?"
ಎಂದೆನುತ ಮನನೊಂದು ನಿಂತ ಕೌಂತೇಯ ಕ್ಷಾತ್ರ
ಹೇಳಿದನೊ ಮುನ್ನೊಮ್ಮೆ ಎಂದೆನುತ ನಂತ್ರ!

॥ ೨೨ ॥

"ಆಚಾರ್ಯರೂ ಗುರು ಪಿತಾಮಹರೂ ಎಲ್ಲ
ಸೋದರ ದಾಯಾದಿಯರು ಬಂಧುಗಳೂ ಎಲ್ಲ,
ಮಕ್ಕಳನು ಹಿರಿಯರನು ಸ್ವಾರ್ಥಕೆಂದೆನುತ
ಸಮರಾಂಗಣದಿ ಕೊಂದು ಕೊಂಡೊಡದು ಎಂತು?
ಯಾರೊಡನೆ ಬಗೆಯು ನೀತಿಯನು ಹೇಳು
ಯಾರಿಗೇ ತೆರನ ಸಮರದ ಶಾಸ್ತ್ರವೇನಾ?"
ಎಂದು ಪ್ರಾರ್ಥಿತನಾಗಿ ಪ್ರಶ್ನಿತನಾಗಿ
ಲೋಕವನು ಬಿಟ್ಟು ಪ್ರಸಂಗವನು ಹೇಳ್ದ —

॥ ೨೩ ॥

"ಮಧುರ ಮಧುಸೂದನನು ಮಂದಹಾಸದೆ ಕೇಳು,
ಕೌರವರೇನಾ ಮೀರಿದರೋ ಕೊಲೆಗಳನೆಸಗಿ
ಆನೆ ಮದಿಸಿದವರನು ಉಪೇಕ್ಷಿಸಲು ಆಗದೆ,
ಸಾಮ್ರಾಜ್ಯವದ ಪಡೆದು ರಾಜನೆಂದೆನಿಸಿ
ತ್ರಿಲೋಕಗಳನಾಳ್ವ ಸೌಭಾಗ್ಯ ಪಡೆಯುವೆ;
ಈ ಬಗೆಯು ಅಲ್ಲ ಜನಪ ಪದಿಸಿ ಆನೆ ಕೇಳ್ವೆ
ನಿರಾಕರಿಯುತ ಈ ಬಗೆಯು ಬಾಳ್ವೆಯನು ಭುವಿಯ
ಇಚ್ಛಿಸೆನೊ, ಪಾಪವದು ಘೋರಲಾಭಿ ಹರಿಯೆ!

॥ ೨೪ ॥

"ಕುರುಕುಲದ ಸೋದರರ ವಧಿಸಿ ಫಲವೇನಾ?
ದೊರಕಲಿಹುದೇನೆಮಗೆ ಸುಖವೆಂತೊ ಹೇಳು!
ಹೇ ಜನಾರ್ದನ ಕೌರವರು ಕ್ರೂರಿಗಳೊ
ಕೊಂದು ಅವರನು ಪಡೆವುದೇನೆಂದು ಹೇಳೊ,
ಮನೆಮಂದಿಗಳನು ನಿತ್ಯ ಕೊಲ್ಲು ಜನವಂತು

1940

ಆದೊಡೆಯು ಪಾಪವನು ಹೊರಲಿಹವೊ ಎಂತು;
ಪೋಷಿಪುದ ನಾವೇಕೆ ರಾಜ್ಯವನು ಪಡೆದು
ಪಡೆಯಲೇಕೆಂದೆನುತ ಕೇಳುತಿಹನಿಲ್ಲಿ —

"೨೬"

"ಧೃತರಾಷ್ಟ್ರ ಸುತರಿವರ್ ಬಂಧುಗಳು ಕೇಳ್ದೆ,
ನರನಾಡಿ ರಕ್ತವದು ಒಂದಾಗಿ ಹರಿಯೆ,
ಕೊಂದೊಡೆನ್ ಕುಲವೊ ಪೇಳ್ ಮಾಧವನೆ ಇವರ
ಬಳರಾದೊಡೆಯು ಪೋಗಲಿವರತ್ತ ಕೇಳ್,
ಹೊರಲೇಕೆ ಪಾಪವನು ನಾವೇಕೆ ಇಂತು,
ಕೊಲ್ಲುತಲಿ ಜನ್ಮಗಳ ಕೆಡಿಸಲೇಕಿಂತು?"
ಎಂದೆನುತ ಫಲ್ಗುಣನು ಮರುಗಿದೊಡೆ ಎಂದು
ಪ್ರಶ್ನಿಸಿದನಾ ಹರಿಯವನ ಬಗೆಯಲಿಂತು!

"೨೭"

"ಕೌರವರು ಮತಿಗೆಟ್ಟು ಕಾದಾಡಲೆಂದು
ಲೋಭದಲಿ ಮೋಹ ಮತ್ಸರದಲ್ಲಿ ಬಂದು,
ವಂಶವನು ಕೆಡಿಸುತ ನಿಷ್ಪಾಪಿವನು ಪಡೆದು
ಲೋಕವನು ಕಲಹದಾ ಕಿಚ್ಚಿಗೆಯಲಿರಿಸಿ
ಗಳಿಸಿದಾ ಪಾಪವದನರಿಯದೆಯೆ ಕೊಟ್ಟು
ಆದರಿಂದ ಪಾರಾಗುವುದು ಎಂತೆಂದಲ್ಲಿ
ತಿಳಿಯದೆಯೆ ನ್ಯಾಯವಾದುದು ದುರ್ಬುದ್ಧಿಯು ಇವರ,"
ಎಂದೆನುತ ಅರ್ಜುನನು ಪ್ರಶ್ನಿಸಿದನೊ ಆಗ!

"೨೮"

"ವಂಶವನು ಕೆಡಿಸಿ ತಾವ್ ಪೊಂದುವರೊ ಪಾಪ,
ಅದನರಿಯದೆಯೆ ಬಾಳ್ವರದು ನಿತ್ಯ ದೋಷ;
ಮತ್ತೆ ಈ ಮನುಜನದನರಿಯದೆಯೆ ನಿರತಾ
ಮುದದಿ ಪೋರಾಡುತಿಹನೇಕೆ ತಾನ್ ತನ್ನ
ದೌರ್ಜನ್ಯವನು ಅರಿತು ಜೀವಿಸನದೇಕೆ?
ಆ ಜನ್ಯವನು ತಾಳಿ ಚಿಂತಿಸನದೇಕೆ?"
ಎಂದೆನುತ ಗಾಂಡೀವಿ ದಿಗ್ಗೆಟ್ಟಲಾಗಿ
ಪೇಳಿದನೊ ಮುಕುಂದನೆಂದೆನುತ ಅಲ್ಲಿ!

"೨೯"

"ಕೇಳಿಲ್ಲಿ ಸತ್ಯವದು ಕುಲನಾಶದಿಂದ
ವಂಶವೇ ಗತಿಗೆಟ್ಟು ಅಳಿಯುವುದು ನೋಡಾ,
ಕೇಳ್ ಸನಾತನ ಜಾತಿ ಧರ್ಮವದು ಎಲ್ಲ
ಕುಲಗೆಟ್ಟು ಮಾನವರೊಡೆಯೆ ನ್ಯಾಯವಿಲ್ಲಾ
ನೀತಿಯದನು ಕೆಡಿಸೆ ದೂರಗೆಯೆ ಉಳಿಯುವುದು ಏನು?

ಕಾಲನಾಶದೊಳೆ ಜಗವೆ ಕೀಟಸ್ಥಿತಿಪದಂತೆ,"
ಎಂದೆನುತ ಪಾರ್ಥನತಿ ಚಿಂತೆಯಿಂ ಕೂಡೆ
ತೋರುವನೆ ಚಿಂತನೆಯುಂಟಿದ್ದಿದ ತಾನ್ ಅಲ್ಲಿ!

" ೪೦ "

"ಹೇ ಜನಾರ್ದನ ಕೇಳ್ ಈ ನಾಶಾರದೊಳೆಯಿಂ
ಕಾಲಸ್ತ್ರೀಯು ಶಕ್ತಿ ಬಿಟ್ಟು ಕಾಲಗೆಟ್ಟು ಅಳಿಯಿಂ,
ಕೇಳ್ ಜಗದ ಕಾಲಕ್ಷಯಕೆ ಅದೆ ನಾಂದಿಯಾಗಿ
ಜನಗೆಟ್ಟು ಕಾಲಗೆಟ್ಟು ಮತಿಗೆಟ್ಟುದಾಗಿ
ದಿಗ್ಭ್ರಾಂತಿಗೆಡೆಗೊಂಡಿತು ಅದೆ ಕ್ರಾಂತಿಯಾಗಿ
ಅತಿದಾರುಣರು ಮನುಜರ್ ತೋರುವರ್,"
ಎಂದು ಧನಂಜಯನಂದು ಕಂಗೆಟ್ಟು ಕೇಳ್ದ,
ಮಾಧವಂದು ಮರದಿಂತಿಂದನದ ತೋರುತಿರ್ದ!

" ೪೧ "

"ನಡೆಯೆ ಜಗದಿ ವರ್ಣಸಂಕರವು ಇಂತು
ಜಾತಿಮತ ಕುಲಗಳ ನಾಶಗೊಂಡು ಮೂಲವು!
ಕುಲಕ್ಷಯವ ಸಾಧಿಸಿದ ಪಾಪಿಗಳು ಎಲ್ಲ
ಪರಿಹಾರವನೆ ಪಡೆಯದವರು ನೋಡೆ.
ಶ್ರಾದ್ಧಾದಿ ಪಿತೃತರ್ಪಣಾದಿ ಆಚಾರವಿಲ್ಲ
ನಿರ್ನಾಮವಾಗುವುದು ಕುಲನಾಶದೊಡನೆ,
ಮನದಲ್ಲಿ ನಿಂದ ತೋರಲೀ ಸಮರವೇಕೆ?
ಎಲ್ಲಿಗೆ ದಿಕ್ಸೂಚಿಯಾಯ್ತು ಅದೆ ಕೇಳುತೀಕೆ?

" ೪೨ "

"ಕುಲದ ಕಾಡಿನೊಳು ಕುಲದೇವಿಯರುಗಳು ಇರಲು
ಕೇಳ್ ಕುಲಾಚಾರವನೆ ಕಾಣ್ಗೆಡಿಸಿರಲು
ಯಾರಿಗೆ ಕುಲವ ಸಾಧಿಸಿದ ಕುಲಧರ್ಮವಿಲ್ಲ
ಆಚಾರ ಸುವಿಚಾರ ಸದಾಚಾರವಿಲ್ಲ
ನಿರ್ನಾಮವಾಗುವುದು ಕ್ಷಣದಲ್ಲೆ ಕೇಳು
ಆದುದೆ ಕಲಿಕಾಲವದರ ಅರಿವಾಗಿ,"
ಎಂದು ಧನಂಜಯನು ದಿನನಿತ್ಯ ಕಂಗೆಟ್ಟು
ಚಿರಗಾರವು ಚಿಂತಿಸಿದ ಕಾಲಗತಿಗೆಂದು!

" ೪೩ "

"ಹೇ ಹರಿಯೇ ಈ ಪರಿಯ ಹಿಡಿದ ನನದಿಂದು
ಮನಿಸಲೋ ಕುಲಕ್ಷಯದ ದಿಗ್ಭ್ರಮೆ ಜಾಲಂದು
ವಿಧಿ ನಿಯಮವ ಸತ್ಕರ್ಮಗಳ ಗಮನಿಸದೆಯೆ
ಮಂದದೆ ನಿರ್ಮೂಲವನೆ ಸಾಧಿಸುತ ಕಡೆಗೆ
ಚೀರ್ಳುರಕ್ಕೆ ನರಕದಾ ಕೂಪದೊಳು ಗಂತು—

1242

ಎಂಬುದನು ಅರಿತಿಹೆವು ಹಿಂದಿನಿಂದ ನಾವು,"
ಎಂದೆನುತ ಉದ್ಧರಿಸಿದನು ಪಾರ್ಥನಂದು,
ಮುಂದಿನ್ನೆಲ್ಲಿಗೆ ಹೋಗುವೆನೆ ತಿಳಿಯೆನೆಂದು —.

" ೪೪ "

"ಏನಿದೇನ್ ಮಹಾಪಾಪವಿದು ವಿಧಾತ್ರನೇ ?
ರಾಜ್ಯಸುಖದಾ ಲೋಭಕಿದೆ ಮಾಡುವ ಬಯಕೆ,
ಸ್ವಜನರನು ವಧಿಸುತಲಿ ಪಡೆಯಲೆಳಸಿಹರು
ಕುರುಕುಲ ಮೋಹವಿಲಾಸದಾ ಸುಖವನವರು !
ಏನಿನಲು ಹೋ ಕೃಷ್ಣ ಈ ತೃಷ್ಣೆಯಿದನು
ಮಾಗಿಪನ ಮಾನವು ತೀರಿಗೆನೆನಲು ಹೇಳಾ,"
ಎಂದನು ಪಾರ್ಥನಯ್ಯ ತಾನ್ ಕೊರಗಿದನು ಅಲ್ಲಿ
ಯುಗವೆಲ್ಲ ಹೇಳುತಿಹ ಪರಿಯಾದುದನು ನೆರೆ !

" ೪೫ "

"ಕಾದಲೆಂದೆಳಸಿ ಇಹ ಕೌರವರು ಬಂದು
ಶಸ್ತ್ರಗಳನೆತ್ತಿ ತಾವ್ ನಿಶ್ಶಸ್ತ್ರನೆಡೆ ನಿಂದು
ಶಸ್ತ್ರಾಸ್ತ್ರಹೀನ ಆನ್ ಮಾನದಲಿ ಇರಿತೊಡೆಂತು
ಇರಿತಿಹನ ತರಿದಿರಿದು ಕೊಂದೊಡೆಯು ಅವರು
ಅದುವೆ ಹಿರಿಸುಖವೆಂದು ಭಾವಿಸುವೆ ನಾನು
ಇಹದಲಿ ಸುಯೋಗವದೆ ಎಂದ್ರೀವೆನಂತು,"
ಎಂದೆನುತ ಆ ಜರ್ಜರ ವಿಷಾದ ಪರಿಪೂರ್ಣ
ಯೋಗವನು ಹೇಳಲದ ನಾಲಿಗದ ಕೃಷ್ಣ !

" ೪೬ "

"ಕುರುಕ್ಷೇತ್ರ ಸಮರಾಂಗಣದಿ ರಥವನಿಂತು
ನಿಲ್ಲಿಸುತ ಕೃಷ್ಣಾರ್ಜುನರು ಮಾತನಾಡುತ
ಅಳಲಿಂದಾ ಪಾರ್ಥ ಬಿಲ್ಬಾಣಗಳನು
ಕೆಳಗಿಟ್ಟು ಸುತ್ತೆಲ್ಲ ನೋಡುತ್ತಲಿ ನಿಂದು
ಹೇಳಿದ ವಿಷಾದಯೋಗದ ಸಾರ್ಥಕವನು,
ಹೇಳಿ ಹೊಂದಿರೆ ರಥದಿ ಯುದ್ಧ ಶಾಂತಿಯು
ಕುಸಿದು ಕುಳಿತನು," ಎಂದು ಸಂಜಯನು ಅಲ್ಲಿ
ಅಂಧನೃಪ ಧೃತರಾಷ್ಟ್ರನಿಗೆ ಹೇಳ್ದನಾಗಲೆ!

" ೪೭ "

—×—

ಒಂದನೇ ಅಧ್ಯಾಯವು ಸಂಪೂರ್ಣವು

ಅಧ್ಯಾಯ — ೨ — ಸಾಂಖ್ಯಯೋಗ.

"ಹೇ ರಾಜ ಕರುಣೆಯಿಂದಲಿ ತೇಜ ಪೂಜ್ಯ
ಕೇಳುತ್ತಿ ಕಣ್ಣೀರ್ ದುಃಖದೊಳಾಗ
ಸಜ್ಜನರನು ಮಿತ್ರರನು ಸ್ವಜನರನು ತಾನು
ಎದುರಿನೊಳು ನೋಡುತಾ ಬಗೆಯೊಳು ಎಂದು,
ಎಂದೆನುತ ಕಂಬನಿಯ ತುಂಬುತಲಿ ಇರುವ
ಶೋಕಿತನೊಳು ಸಮ್ಯಕ್ ತಾನ್ ಇರಲು
ಮಧುಸೂದನನು ಹೇಳ್ದನೀ ವಾಕ್ಯವ" ನುತ
ಸಂಜಯನು ಧೃತರಾಷ್ಟ್ರನಿಗೆ ಹೇಳ್ದನಾಗ!

॥ ೧ ॥

ಮೌನದಲಿ ಮುಗುಳ್ನಗೆಯ ಶ್ರೀಹರಿಯು ಆಗ
ಹೇಳಿದನು ಅರ್ಜುನಗದೇಕೆಂದು ಎನುತಾ
"ಮೋಹದಲಿ ದುಃಖಿತನೆ ಮರೆತಿಹ ಸಖನೆ,
ಕಾರ್ಯಮಾರ್ಗಕೆ ನೀ ಅಡ್ಡಿಗಿದು ರಾಗಿ ನಿಂತೆ?
ಇಹಲೋಕದಲ್ಲಿ ಅಪಕೀರ್ತಿಯನು ತರುವಾ
ಮನೋದೌರ್ಬಲ್ಯವಿದು ಎಂತಾಯ್ತು ಹೇಳು,"
ಎಂದೆನುತ ನಗುನಗುತಲೀ ಅರ್ಜುನನನ್ನು
ಕೇಳಿದನಿದೆಂತೇಕೆ ಎಂದೆನುತ ಕೃಷ್ಣ!

॥ ೨ ॥

"ಹೇ ಪಾರ್ಥನೆ ಕೇಳ್, ಎದ್ದೇಳು ಬಿಲ್ಲು,
ಮತ್ತೆ ಆರ್ಯರಿಗೆ ಯೋಗ್ಯವಲ್ಲ ಈ ರೀತಿ ನಿಲುವು,
ಜಗದೊಳು ಸ್ವರ್ಗದೊಳು ಮುಗ್ಗರಿಸದೆಯೆ ನೀ
ಮನೋದೌರ್ಬಲ್ಯವನು ತೊರೆದುಬಿಟ್ಟು ನೀ,
ನಿಮ್ಮ ಸನ್ನದ್ಧನಾಗಿ ಯುದ್ಧ ಮಾಡದೆ
ನಿಮಗಾಗೆ ಮೃತ್ಯು ದುರ್ಗತಿಯೆಂದು ಬೆಳ್ದು,
ಅರಿತಿಹನು ಶ್ರೇಯಕ್ಕೆ ಇಂದು,
ಪಾಂಡವನೆ ಕೇಳೆನ್ನ" ನೆಂದನಾ ಹರಿಯು.

॥ ೩ ॥

"ಅರಿಗಳನು ಕೆರಳಿದು ಮಧುಸೂದನ ಹರಿಯೆ,
ಹೇಳುತಿಹೆ ಕುರುಕ್ಷೇತ್ರದೊಳು ಕಾದಲೆಂದೆ;
ಬಿಲ್ಲಿಂಗಳನಿತ್ತು ಹಿಡಿಯಲೆಂತೀಗ ?
ಆಚಾರ್ಯರ ಭೀಷ್ಮ ದ್ರೋಣರೊಡೆ ಎಂತಾ ?
ಕಾದುವುದು ಎಂತೆನುತ ಕೊರಗುತಿಹೆ ಹರಿಯೆ
ಪೂಜ್ಯರನೆ ಎದುರಿಂದೆಂತು ಕೊಲ್ಲಲಿನ್ನು ?"
ಎಂದು ಧನಂಜಯ ಧನುವ ಹಿಡಿಯದೆಯೆ ಆಗ
ಕನಿಕರವ ತಾನ್ ಹೇಳ್ದ ಮನೋದ್ವೇಗವನು ಕೇಳು —

"ಏನಿದೇನಿದು ಜೀವ? ಬದುಕಲಾರೆನೊ ಎಂತು?
ಪರಗುರು ಮಹಾತ್ಮರನು ಮಡಿಸುತಲಿ ಕೊಂದು!
ರಾಜ್ಯ ಸಾಮ್ರಾಜ್ಯವನು ಕಟ್ಟುವುದರಿಂದು
ಭಿಕ್ಷಾನ್ನವನು ಉಂಡು ಬಾಳುವುದೆ ಹಿತವಾ!
ತ್ರಿಲೋಕ ಪದದ ಮೋಹದಿಂದುಳ್ಳ ಹಸನಿಲ್ಲ
ಕೊಂದು ಆ ರಕ್ತದಲಿ ತೊಯ್ದ ದುರ್ಯೋಗ
ಭೋಗವದನನು ಬಯಸುವುದೇ ತೆರದ ನೀತಿಯೊ,
ಕೇಳುತ್ತೆ ಹರಿಯೆ ಇದನರಿಯು ತಿಳುಸುವೆಯೊ.

॥ ೫ ॥

"ಸಮರದಲಿ ಹಿರಿಯರಿಹ ಜಯವದುವು ಏಕಾ?
ಕೌರವರ ಜಯಿಸುವೊಡದೇನದುವೊ ಯೋಗಾ?
ನಾವ್ ಜಯಿಸುವೊಡೆ ಏನು ಬಿಡಬಾಳು ನಮಗೆ
ನೆತ್ತರಲಿ ಮಿಂದು ಹಿಡಿದಾ ಜಯವು ಏಕಾ?
ಆಗಾರನಿದ ಎದಿಸಿ ಕೊಲ್ಲದೆಯೆ ಇಹೆನೊ
ಧೃತರಾಷ್ಟ್ರ ಪುತ್ರರವರೇ ಬಂದು ಕೊಂತೆ
ನಿಂದಿರಲು ಜಯವು ಅಹಿಜಯವೆಂತು ನನಗೆ
ಒಂದಾಗಿ ತೋರುತಿರಲದೆ ಮನದ ಮರುಳ್ಕೆ!

॥ ೬ ॥

"ಚಿತ್ತಕ್ಷೋಭೆಯೊ? ಬುದ್ಧಿ ಭ್ರಮೆಯೊ ಇದೇನು?
ದೈವತ್ವವದೇನೆಂಬುದನು ಅರಿಯೆ ತಿಳುಸಿಹೆನು!
ಶ್ರೇಯೋವಿಲಾಸ ಬಯಸ್ಯಕೆಯೊಳ್ ಎನುತ
ಮನೋವ್ಯಾಕುಲತೆಗಿಂತೊಳಗಾಗಿ ಇಹೆನೊ
ಹೇ ಹರಿಯೆ ಅನುಗ್ರಹಿಸಿ ಬೋಧಿಸುತಿಹೆನಿಂದು
ಶಿಷ್ಯನಿಹೆ ಆನ್ ನಿನ್ನ ಎಂದೆಣಿಸಿ ಕೇಳ್ವೆ
ತೋರೆನಗೆ ಬೆಳಕನ್ನು ಮುಂದೊಯ್ಯ ಎನ್ನ",
ಎಂದು ತಲೆ ಬಾಗುತಲಿ ಬೇಡಿದನು ಹರಿಯಾ!

॥ ೭ ॥

"ಎಲೆ ವಾಸುದೇವ ಕೇಳ್ ಲೋಕವಿದು ಎಲ್ಲ
ಸಾಮ್ರಾಜ್ಯವೆಂದೆನಗೆ ದೊರೆತುದೊ ಈಗ
ಸುರಲೋಕದಾ ಸಂಪತ್ತು ಮತ್ತದ ರಾಜ್ಯ
ಎನಗೊದಗಿದೊಡೆಯು ಕೇಳ್ ದುಃಖದಲಿ ತೊಯ್ದ
ಇಂದ್ರಿಯಗಳನು ಸ್ಥಿಮಿತದಲ್ಲಿಡುವ ಬಗೆಯು
ಅರಿಯದೆಯೆ ಕೊರಗುತಿಹೆ ಯತಕದೊ ಏನಾ!"
ಎಂದೆನುತ ಅರ್ಜುನನು ದಿಗಿಲ್ಬಿಲಾಗಿ
ಇರುತನಾ ರಥದಲ್ಲಿ ಸುತ್ತೆಲ್ಲ ನೋಡಿ!

॥ ೮ ॥

ಹೇಳುತಪ್ಪದನಿಲ್ಲವನು ಹೇಳುತ್ತಲಿ ಪಾರ್ಥ 1245
ವೈರಿಗಳ ಹುಟ್ಟಡಗಿಸುವ ಗುಡಾಕೇಶ,
ಮುಂದೋನು ಎನಗಲಿನ್ನು ಎಂಬುದನು ಅಂದು
ತಿಳಿಯುತದಯೆ ಗೋವಿಂದನನು ನೋಡಿ ಅಂತು
ತಾನ್ ಕಾದಲಾರೆ ಕೇಳ್ ಎಂದೆನುತ ಹರಿಗೆ
ಮೌನದಲಿ ಇರುತಿದನು ಸಂಜಯನು ನೋಡಿ
ಕುರುಕುಲದ ಕುರುಡುನೃಪನಿಗೆ ಹೇಳ್ದನದನಾ
ಎಸಗಲಿಹ ಸಮರವನು ಎಸಗಲಿಹದನ್ನು!.

॥ ೯ ॥

"ಹೇ ರಾಜ ಧೃತರಾಷ್ಟ್ರ, ಅಲ್ಲಿಹರು ಇವರು
ಸೇನಾದ್ವಯದ ಮಧ್ಯೆ ಸಂಭ್ರಮಿಸುತಿರಲು;
ಅರ್ಜುನನ ಅವಿವೇಕದಾ ಮರುಕವನ್ನು
ಕಾಣುತ್ತಲಿ ಮುಗುಳ್ನಗುತಲೇ ಅಂತು ಹರಿಯು,
ಆ ನಗುವಿನೊಡೆ ಪಾರ್ಥನಾ ದುಃಖ ತಿಳಿಸಿ
ಪಾಂಡವನ ಪಡೆದವಿ ಹೇಳ್ದನಕೊ ಒಡನೆ,"
ಎಂದೆನುತ ಸಂಜಯನು ಪರಿದಿಯದನಲ್ಲಿ
ವೃದ್ಧನೃಪನಿಗೆ ವಿವರದಲಿ ಹೇಳ್ದನಾಗ —

॥ ೧೦ ॥

ಅತ್ತಲಾ ಹರಿ ಪಾರ್ಥನಾ ರಥದಿ ಇರುತ
ಹಿತೋಕ್ತಿಗಳನು ಗೀತೋಕ್ತಿಯಂತವರು
ವಾದಿಸಿರೆ ಹರಿ ಕೇಳ್ದನದೇಕೆಯಾ ಮರುಕ!
"ಸರ್ವವನು ಅರಿತಿಹನವೊಲು ಮಾತು ಏಕಾ?
ಸಾಯಬಹುದಕೆಳಸಹರಿಗೇಕೆ ಅಳುತಿರುವೆ?
ಹೋರಾಟಕಿಳಿದವರನೇಕೆ ನೀನ್ ತಡೆವೆ?
ಜ್ಞಾನಿಯು ವಿವೇಕಿಗಳು ದುಃಖಿಸರೊ ಇಂತು,"
ಎಂದು ಗೋವಿಂದ ಧನಂಜಯಗಂದನಂದು.

॥ ೧೧ ॥

"ಕೇಳ್ ಸವ್ಯಸಾಚಿ ಈ ಜಗದಲಿಹ ನಾವು
ರಾಜವರರೂ ಸರ್ವರೂ ನಿತ್ಯ ಇಹರು;
ಎಂದೆಂದಿಗೂ ಮುಂದು ಇರಲಿಹೆವು ನಿಜವೊ
ಹಿಂದೆಯೇ ಇದ್ದವೊಲು ನಿತ್ಯವಿರಲಿಹೆವೊ,"
ಎಂದೆನಲು ಇದೆ ಆತ್ಮವಿದ್ಯೆಯು ರಹಸ್ಯ
ಎಂದೆಂದಿಗೂ ಜಗವು ಅರಿಯಲಿಹ ತತ್ವ,
ಇದುವೆ ಗೀತಾಮೃತದ ತನಿರಸ ಮಹತ್ವ
ಲೋಕೋಕ್ತಿಯಾಗುಳಿದಿಹ ಹರಿ ಸಂದೇಶಾ!

॥ ೧೨ ॥

ನಶ್ವರವೀ ದೇಹವಿದು ದಿನದಿಂದ ದಿನಕೆ
ಬಾಲ್ಯವು ಯೌವನ ಮುಪ್ಪು ಎಂದೆನುತ ಜರಿಯೆ,
ದೇಹವಿದು ಕಡೆಗಂತು ನಶಿಸಲದೆ ಸಾವು
ಸತ್ತು ಮರಳಿ ಪಡೆಯುತಿಹ ಜನ್ಮವದೆ ಹುಟ್ಟು,
ದಿವ್ಯತ್ವದಾ ಗಹನವಿದುವೀ ಕೇಳ್ ಪಾರ್ಥ,"
ಎಂದು ಮುಕುಂದನನು ವಿವರಿಸಿದನಿಲ್ಲ,
ಆ ಜ್ಞಾನದೊಳು ಅದ್ದಿದ ಜೀವನಗೆ ಕೇಳ್ದ
ಇಹಪರಗಳೇನೆಂಬುದರ ಸೌಖ್ಯವನು!

" ೧೩ "

"ಕೇಳೆಲೆತ್ತೆ ಜೀವಿಗಳಿಗೀ ಜಗದಿ ಇಹುದೈ
ಇಂದ್ರಿಯಂಗಳಾ ಸ್ಪರ್ಶಾಸ್ಪರ್ಶಗಳು ತೆರನೆ,
ಹೇ ಪೃಥಾತನಯ ಕೇಳ್ ಶೀತೋಷ್ಣವೆಂತೊ
ದುಃಖವು ಸಂತೋಷಗಳು ಒಡಗೂಡಿ ಇಹುದೈ,
ಕ್ಷಣಿಕವಿವು ಮರುಕ್ಷಣದೆ ಮರೆಯುವವು ಎನುತೆ
ತೋರ್ಪಡಿಸುತಿಹುದು ಸ್ವರತೆಯ ಈ ಜನಾ—
ಸ್ಥೈರ್ಯವನು ತಾಳಿ ಅದ ಸಹಿಸುವುದೆ ಬಾಳು,"
ಎಂದೆನುತಲಾ ಕೃಷ್ಣ ಹೇಳಿದನು ಒಲಿದೆ.

" ೧೪ "

"ಶೀತೋಷ್ಣಕದೊ ಜಗದಿಹನೆ ಜಗವೀರ
ಸುಖದುಃಖವನು ಸಮತೆ ನೋಳ್ಪವನೆ ಧೀರ,
ಭವದೆರೆಯೊಳೀ ಜನ್ಮವನು ಶಾಂತಮನದೆ
ಕಳೆಯುವವನೀ ಸ್ವರ್ಗವನು ಪಡೆಯುವವನೈ—
ಸ್ಥೈರ್ಯದಾ ಬುದ್ಧಿಗತ್ಯಾಗದವೆ ನೀಡಿ ಪಾರ್ಥ
ಚಿರಂಜೀವಿಯಾಗಿಹ ಯೋಗವದೆ ಮಿತ್ರಾ,"
ಎಂದೆನುತ ಭಗವಂತ ಆತ ತೃಪ್ತನಂತೆ
ಹೇಳಿದನಿದನೆಂದು ಆ ಅರ್ಜುನನ ಚಿಂತೆ.

" ೧೫ "

"ಜಗದಲ್ಲಿ ಇರದುದಕೆ ಇರುವಿಕೆಯೆ ಇಲ್ಲ,
ಇರುವುದೆಲ್ಲವದಾವೊ ಇಲ್ಲದವು ನಿತ್ಯ,
ಸ್ವರಾಸ್ವರದೀ ಸತ್ಯದಾ ಸೂಕ್ಷ್ಮವರಿತಾ
ಜ್ಞಾನಿಗಳು ತಿಳಿದಿಹರು ಗಹನವಿದನಿಲ್ಲಿ;
ತೋರ್ಕದಿಹ ವಸ್ತುಗಳು ಜಗವು ನಶ್ವರವೊ
ನಿತ್ಯವಿಹುದೀ ಸ್ವರೂಪ ಆಹ ದೇವನೀಲಿಯೊ,"
ಎಂದೆನುತ ಗೀತಾರಹಸ್ಯವನೆ ಕೃಷ್ಣ
ಬಿಡಿಸುತಿಯಲಿಂದೊಂದನದ ಹೇಳ್ದನಾಗ.

" ೧೬ "

"ಸ್ವರವಿಹೀನದಕೆಂದಿಗೂ ನಾಶವದುಂಟಿಲ್ಲ,
ನಾಶರಹಿತವಪ್ಪುದಾವ್ಯೊ ಅವೆ ಸ್ವರವು ನಿತ್ಯ.
ಚಿರಂಜೀವ ಚಿರಂಜ್ಯೋತಿಯೆನು ನಂದಿಸಲುವ್ಯೊ
ವಿಶ್ವಶಕ್ತಿಯದು ಬೇರೆ ಇಲ್ಲವೆಂದೆಣಿಸಿ!
ವಿಶ್ವವಿದ ಹೊತ್ತಿಯಿಹ ಶಕ್ತಿಯದು ಸ್ವರವ್ಯೊ
ಆ ಶಕ್ತಿಯದೀ ದೈವಲೀಲೆಯದು ನಿಜವ್ಯೊ,"
ಎಂದೆನುತ ಸ್ವರಾಸ್ವರತೆಯು ಗಹನವನು
ಮುಂದುವರಿದಾ ಹಿರಿಯ ಹೇಳಿದನು ಕೇಳು.

॥ ೧೭ ॥

"ನಿರಾಕಾರವ್ಯೊ ಜೀವ ಅವಿನಾಶಿ ಅದುವ್ಯೊ
ದೇಹವಿದು ಆ ಸ್ವರವು ಸಾಯುತಿಹುದಂತೆಯೊ;
ಕಾಯವಿದ ಹೊತ್ತ ಈ ಜೀವಾತ್ಮ ಸ್ವರವ್ಯೊ
ಆತ್ಮವನು ವಧಿಸಲು ಅಸಾಧ್ಯವದು ನಿಜವ್ಯೊ!
ಹೇ ಭರತ ವಂಶಜನೆ, ಎದ್ದು ನೀನ್ ಇಂದು,
ಸಮರಾಭಿಮುಖನಾಗಿ ಕಾದೆಲೆ ನಿಂದು."
ಎಂದೆನುತಲಾ ಪಾರ್ಥಸಾರಥಿಯು ರಥವಾ
ತಿರುಗಿಸಿದ ಸೇನಾಭಿಮುಖನಾಗ ಕೇಳು!

॥ ೧೮ ॥

"ಜೀವಾತ್ಮವಿದು ಸಾಯುವುದು ಎಂದು ಜನವು
ಕೊಲ್ಲಲ್ಪಡುವುದಾತ್ಮ ಎಂದೆನುತ ಎಲ್ಲ
ತಿಳಿದಿಹರು ಅಜ್ಞಾನಿಗಳು ಜಗದಿ ನಿಜವು
ಸತ್ಯವಿದನರಿಯದೆಯೆ ತೊಳಲುತಿಹರವರು;
ಕೊಲ್ಲದಿಹ ಆತ್ಮವನು ಕೊಲ್ಲಲು ಅಸಾಧ್ಯ
ಆತ್ಮವಿದು ಚಿರಂಜೀವ ಎಂದರಿತರಿಹರಾ,
ತಾತ್ವಿಕರು ಅವರೆಲ್ಲ ಹೇ ಪಾರ್ಥ ಕೇಳು,"
ಎಂದೆನುತ ಹೇಳ್ದನಾ 'ಶಾರ್ಙ್ಗಿ'ಯು ಅಂದು.

॥ ೧೯ ॥

"ಜೀವಾತ್ಮನಿಗೆ ಹುಟ್ಟು ಸಾವುಗಳು ಇಲ್ಲ,
ಆದಿಯಿಲ್ಲದ ಆತ್ಮನಿಗೆ ಅಂತ್ಯವಿಲ್ಲ;
ಇಂದಿದ್ದು ಮುಂದೆಂದೂ ಅಗಲುವವನಲ್ಲ
ಆತ್ಮವು ಚಿರಾಯು ಕೇಳ್ ಕೊನೆ ಅದಕೆ ಇಲ್ಲ,
ದೇಹವಿದು ಅಳಿದೊಡೆಯು ಆತ್ಮವಿಹುದಂತೆ
ಸಾಯದಿಹುದಾತ್ಮವಿದರಾ ಸೂಕ್ಷ್ಮ ತಿಳಿಯೆ,"
ಎಂದು ಮಧುಸೂದನನು ಪರಸಾಂಖ್ಯಯೋಗ
ಗಹನವಿದನು ವ್ಯಕ್ತಗೊಳಿಸಿದನೊ ಆಗ—

॥ ೨೦ ॥

"ಆತ್ಮನಿಗೆ ಜನನ ಮರಣವು ಎಂಬುದಿಲ್ಲ 1248
ಆತ್ಮವು ನಿರಂತರವು ಬೆಳಗುತಿಹುದೆಂಬಾ
ನಿತ್ಯವನು ಅರಿತವನೆ ನಿತ್ಯವು ವಿವೇಕಿ
ಜೀವಿಯನು ವಧಿಸಿದೊಡೆ ಆತ್ಮವದನಳಿದು
ಕೊಲ್ಲುವನೊ ಕೊಲ್ಲಿಸುವನೆಂತೆನ್ನೆ ಅದನಾ
ನಿರಾಕಾರದಾ ಶಕ್ತಿ ದಿವ್ಯಾತ್ಮವದರಾ
ಗೂಢವದನರಿಯುವುದೆ ಪರವಿದ್ಯೆ ಕೇಳ್ವೆ
ಹೇ ಪಾರ್ಥವದೆ ಸೂಕ್ಷ್ಮವದೆ ಆತ್ಮ ನಿಜವು —

|| ೨೧ ||

"ಕೇಳೆಲೆನ್ನೆ ಮಾನವರು ಹರಿದು ಹರಕಾದ
ಹಳತು ಬಟ್ಟೆಗಳನು ಕಳಚಿ ತೊಡುವವೊಲು ಹೊಸತಾ
ಕೇಳ್ ಅನಾರೋಗ್ಯದಿಂ ಮುಪ್ಪಿನಿಂ ಸೊರಗಿ
ಜೀರ್ಣಿಸಿದ ದೇಹವನು ಜೀವಾತ್ಮನಗಲಿ
ಹೊಸತು ಎಳೆದೇಹವನು ಹೊಂದುತ್ತಲಿ ನೋಡಾ
ಹಸನಾಗಿ ತಿಳಿವಾದ ಬಗೆರೀತಿಯೊಲಂತಾ
ಜೀವಾತ್ಮ ತನುವಿಂದ ತನುವದಕೆ ಹಾದು
ಪೇಳ್ಗೆಯನುದ್ಧಾರನಾಗಿಪುದು ಪಾರ್ಥ !

|| ೨೨ ||

"ಮನದೇನದು ಶಕ್ತಿ ಆತ್ಮಬಲ ಸ್ವತಂತ್ರ,
ಶಸ್ತ್ರಗಳು ಹತ್ತಿಗೆಟುಕದಾತ್ಮವದೆ ಜ್ಯೋತಿ!
ಅಗ್ನಿ ಕಾಲಾಗ್ನಿಯಿಂದ ದಹಿಸದುವೊ ಅದನಾ
ನೀರ್ದರಿಯು ನೆನೆಸದದು ಜೀವಾತ್ಮವನ್ನು
ಬಿರುಗಾಳಿಯಾ ಪ್ರಾಳಿ ತಟ್ಟದವು ನೋಡಾ
ಆತ್ಮವು ನಿರಾವೃತವು ಅದುವೊ ನಿರಾಕಾರಾ,"
ಎಂದು ಹರಿ ಬಹುತರಿಯಲಾ ಗೂಢವಾದ
ವಿಷಯವನು ವಿಶದಗೊಳಿಸಿದ ಪ್ರೇಮಸೂತ್ರ.

|| ೨೩ ||

"ಶಸ್ತ್ರಗಳು ಛೇದಿಸದ ಅಗ್ನಿಯು ಸುಡದ
ಜಲರಾಶಿ ತೋಯಿಸದಿಹ ವಸ್ತುವದೆ ನೋಡಾ,
ಪ್ರಚಂಡ ಮಾರುತ ವೇಗಕದು ಜಗ್ಗದಿಹುದು
ನಿಶ್ಚಲವೊ ದ್ವೈತಾಂತವದೆ ನಿತ್ಯವಸ್ತು;
ಭೂತ ಭವಿಷ್ಯವೆಂಬುಲದ ಅನಾದಿ ಆತ್ಮ
ನಿಜವದೆನ್ನೆ ಪಾರ್ಥ ಅದು ನಿತ್ಯಾತ್ಮ ರೂಪಾ,"
ಎಂದು ಜನಾರ್ದನನೊ ಜನನಿ ಬಿತ್ತಿದಾಗ
ನಿಮಿರಾಂಗಿಕಾದ ಮತ್ತ್ಯೆ ಹೇಳ್ವನಿದನಿಲ್ಲಾ!

|| ೨೪ ||

1249

"ನಿರಾಕಾರವಾ ಆತ್ಮ ಆಗೋಚರವು ಮಹುದು
ಮನಸಿಗೆಟಕದಾ ರೂಪು ಸಂಜೀವ ಪ್ರಾಣ!
ಪಂಚೇಂದ್ರಿಯಕೆ ತಗದ ಅನುಭವವದುವೊ
ಕದಲಾರದ ಕಲ್ಪತರುವಂತೆ ಇಹುದೊ —
ತಿಳಿದು ಇದನಿದ್ದೀಗ ಧೀರನೊಲು ಬಾಳು
ದುಃಖಿಪ ತೆರವಲ್ಲ ಕಲಿಪಾರ್ಥ ಕೇಳು,"
ಎಂದು ಗೋವಿಂದ ಪರಮಾನಂದದಲಿ
ಮುಕುಂದ ಮುದದಿಂತೆಂದ ಕುರುಕ್ಷೇತ್ರದಲ್ಲಿ!

॥ ೨೫ ॥

"ಆತ್ಮವದು ಹುಟ್ಟುವುದು ಸಾಯುವುದು ಎಂದು
ಬಾಹ್ಯಾಂತರಂಗದಲಿ ಯೋಚಿಸುತಲಿದ್ದು
ತಿಳಿ ಹೇಳ್ವೆ ತಾಳುಮನು ಮರೆದುವೊ ಪಾರ್ಥ
ಆತ್ಮವದನರಿಯದೆಯೆ ಚಿಂತಿಸುವೆ ಏಕಾ?
ದುಃಖಪಡು ತೆರವಲ್ಲ ಸಾಯುವುದನು ಅರಿತು
ಅದರಂತೆಯೆ ಪಾಪಿಗಳು ತಾಪಿಗಳು ಸತ್ತು
ಪೋಗುತಿರೆ ಮತ್ತೇಕೆ ಕೊರಗುವಿಯೊ ಇಂತು,"
ಎಂದೆನುತ ಸಲ್ಲಲಿತ ನುಡಿಪೇಳ್ದನಂದು —

॥ ೨೬ ॥

"ಹುಟ್ಟಿದಕೆ ಸಾವು ಅದು ಸಹಜವೆಂದರಿಯಾ,
ಸತ್ತವಗೆ ಪುನರ್ಜನ್ಮ ನಿಶ್ಚಯವೊ ಕೇಳಾ,
ತಪ್ಪಿಸಲಸಾಧ್ಯವಾ ನಿಯಮವಿದನಿಲ
ಅನಿವಾರ್ಯವೋ ಜಗದ ವಿಧಿವಿಯರ್ಕವಿಲ್ಲ!
ವಿಶ್ವವಿಧಾ ವಿವರವನು ವಿಶದವಾಗಿ
ತಿಳಿಯೊ ಕೇಳ್ ಬಿಡಿಸುವಿದು ಬೇಡಲ್ಕೆ ಇಲ್ಲಿ!
ಮತ್ತೇಕೆ ತೆರದಲ್ಲಿ ದುಗುಡವಿದ ತಾಳ್ದನ?
ಗುಣವೇನು? ಫಲವೇನು? ಪೇಳಲ್ಕೆ ಸುಜನಿ!

॥ ೨೭ ॥

"ಜಗದ ಅಸಂಖ್ಯಾತವಾ ಜೀವಿಗಳು ಎಲ್ಲಾ
ಮನುಷ್ಯಾದಿ ಜಾತಿಗಳೊ ಅಂಶವವುಯೆಲ್ಲ,
ಅವ್ಯಕ್ತವಾಗುವವು! ಕಡೆಗಂತು ವ್ಯಕ್ತ —
ಎಂಬ ವ್ಯಕ್ತತೆಯಿಂದ ಅವ್ಯಕ್ತಕನನು
ಮಾಡಿಟ್ಟು ಅದೃಶ್ಯವಾಗಲದೆ ಜೀವ
ಕ್ಷಣಿಕವಹ ಬದುಕು ಕಡು ರದೆ ಬಾಳು ನೋಡಾ,
ಅಂತಹ ~~ಈ~~ ಜೀವವನು ನೆಚ್ಚುತಿಹೆ ಏಕೆ?
ನಶ್ವರವಾದೀ ಇರುಕೆ ದುಃಖಿಸುವೆ ಏಕೆ?

॥ ೨೮ ॥

"ಆಶ್ಚರ್ಯದಿಂದಾ ಆತ್ಮವನು ಕೆಲರು ನೆನೆಯೆ
ಅದ್ಭುತವೊ ಅದುಯೆಂದು ಕೆಲವರುದ್ಗರಿಸೆ,
ಮನುಜಕುಲ ಜೀವಾತ್ಮ ಚಾರಿತ್ರ್ಯವದನಾ
ವಿಸ್ಮಯಜನದಿಂದರಿತು ಬೆರಗಾಗಿ ಅದನಾ
ವರ್ಣನೀಯದು ಎಂದು ಬೊಬ್ಬಿರಿದರಂತು
ಆತ್ಮವದರಾ ಗಹನವನು ಜಗದೊಳಂತು
ತಿಳಿದವರಾರಿಲ್ಲ ಕೇಳ್ ಅದೆ ದೈವಮಾಯೆ
ಆತ್ಮವದರಾ ಯೋಗದಾ ಗೂಢವದುವೆ !

॥ ೨೯ ॥

"ಜೀವಕೋಟಿಗಳಲ್ಲಿ ಹೊತ್ತಿಹ ದೇಹ,
ದೇಹವನ್ನು ಕೊಲೆಗಾಹುತಿಯದು ಆದೊಡಂತಾ
ಆತ್ಮವನ್ನು ನಶಿಸದವು ಎಂದೆಂದಿಗೂ ಪಾರ್ಥ
ಆತ್ಮವದೆ ಜೀವಾಂಶ ದೈವಾಂಶ ನೋಡಾ!
ಅಂತರಾಳದು ದು:ಖವದೇಕೆ ನಿನ್ನನಾಳೆ,
ದೇಹವದು ಅಳಿದೊಡೇಕಿಂತು ಈ ಭ್ರಾಂತಿ ?"
ಎಂದು ವಸುದೇವ ಸುತ ಹೇಳಿದನೊ ಒಲಿದೆ,
ಅರ್ಜುನನ ಮನಮಾಯೆಯನು ಬಿಡಿಸಲೆಂದೆ.

॥ ೩೦ ॥

"ಕ್ಷತ್ರಿಯನು ಕ್ಷಾತ್ರಗುಣ ಸಂಪನ್ನ ನೀನು
ಕ್ಷಾತ್ರಕುಲ ಧರ್ಮವನು ಅನುಸರಿಸೆ ನೀನು,
ಕಾದಲಿಕ್ಕೆ ಹೇ ಪಾರ್ಥ ಅಂಜಿಕೆಯು ಬೇಡ
ಕೇಳ್ ಧರ್ಮಯುದ್ಧವನು ಮೀರಿದುದು ಯಾವುದೊ?
ಧರ್ಮರಕ್ಷಣೆಗೆಂದು ಕಾದುವುದೆ ಕರ್ತವ್ಯ
ಬದುಕಿಗೆ ಸದವಕಾಶ — ಅದೆ ನೀನ್ ಧನ್ಯ!"
ಎಂದನು ಕ್ಷತ್ರಿಯ ಧರ್ಮ ಕರ್ಮವನು ಎಲ್ಲ
ಬಿಡಿಸುತಲಿ ಹೇಳಿದನೊ ಹರಿಯು ಆಗ!

॥ ೩೧ ॥

"ಸ್ವರ್ಗದಾ ದ್ವಾರವದು ತೆರೆದಿಹುದು ನಿನಗೆ,
ಬಂದಿಹುದು ಕಾಲವು ಸುಸಮಯವಿದು ನೋಡಿಕ್ಕೆ,
ಸಿದ್ಧವಿರ್ದ ಕರಿಗೆ ಓಗೊಡುತಲಿಂದು
ಹೋರಾಡಲಿಕ್ಕೆ ಧರ್ಮಯುದ್ಧದಲಿ ನಿಂದು;
ಧೈರ್ಯದಿ ಕ್ಷತ್ರಿಯರಿ ಪಡೆಯುವರು ಕೇಳು
ಈ ಹಿರಿಯ ಸಿರಿವರಿವ ಸಕಾಲದಲಿ ಇಂತು,"
ಎಂದೆನುತ ಕಂಗೆಡುತ ದು:ಖಿತನ ಅದರ
ಪಾಂಡವಗೆ ಹೇಳಿದನೊ ಹಸನ್ಮುಖದಿ ಕೃಷ್ಣ!

॥ ೩೨ ॥

"ಕ್ಷತ್ರಿಯಧರ್ಮಕ್ಕೊಪ್ಪಿದಾ ಸಮರವಿದನೀಗ
ನಡೆಸದೆಯೆ ಮೌಢ್ಯದಲಿ ಹಿಂಜರಿದೊಡಿಂತಾ
ಧರ್ಮವನು ಕೀರ್ತಿಯನು ಒಡಗೂಡಿ ಕಳೆವೆ
ಕೆಡುವೆ ಕೀಡೆಕೆಸುತ್ತಿಹೆ ಕೆಡಿಸುತ್ತಿಹೆ ಕೀರ್ತಿ,
ಕರ್ತವ್ಯವೆಯೊ ಪಾಪವನು ಹೊಂದುತಲಿ ತಾಪ,
ನಡೆಸಲಿನ್ನು ಸದ್ಧರ್ಮದಾ ಯುದ್ಧವಿದನಾ —"
ಎಂದನು ಅಸುರಾರಿ ಮನಕೊಪ್ಪುವೊಲು ಪೇಳ್ದ
ಪಾರ್ಥೆ ಅದುವೇ ಜಗದಿ ಪ್ರತಿಧ್ವನಿಸೆ ಗೀತಾ!

|| ೨೨ ||

"ವೀರ ಪಾಂಡವ ನೀನು ಗಾಂಡೀವ ಪೊತ್ತು
ಪಡೆದಿರುವೆ ಖ್ಯಾತಿಯನು ಜಗದುದ್ದ ನಿಜವು.
ಸಮರವಿದರಿಂದ ನೀನ್ ಹಿಂದಿರುಗಲಂತು
ಅಪವಾದ ಅಪಕೀರ್ತಿ ಹೊಂದುವಿಯೊ ಕೇಳು;
ವೀರನೆಂದಿಹ ಖ್ಯಾತಿಗೀ ಪರಿಯು ಹಾನಿ
ಒದಗಿದೊಡೆ ಮನ್ಸುಖವೊ ಬದುಕಿಗಿನ್ನೆಲ್ಲಿ?
ಸಾಯುವುದೆ ಮೇಲು ಅಪಮಾನವನು ಹೊತ್ತು
ಬಾಳುವುದಕಿಂತ" ನುತ ಪೇಳಿದನು ಹರಿಯು.

|| ೨೩ ||

"ಬಂಧುಗಳು ಸೋದರರು ಎಂದು ಕನಿಕರಿಸಿ
ಎದುರಿಸದೆಯೆ ಅವರ ನೀನ್ ಸಮರದಲ್ಲಿ
ಮಾನದಲಿ ಇರಿತೊಡೆಕೊ ಮಹಾರಥರೆಲ್ಲ
ಅರಿಬಲವ ಕಾಣುತಲೆ ಭಯವಹುತಲೀಗ
ಸಮರಾಂಗಣವ ಬಿಟ್ಟು 'ನೀನ್ ಓಡಿಹೋದೆ'
ಎಂದೆನುತ ಪೇಳುತಲಿ ಹಂಗಿಪರು ನೋಡು,
ಸೌಹಾರ್ದತೆಯು ಅಂದು ಕಂಡವರು ನಿನ್ನ
ನಿರ್ಲಕ್ಷಿಪರೊ ಇನ್ನು ನಿಜವಿದ್ದು ಮಿತ್ರಾ!

|| ೨೪ ||

"ಕಂಡೆನೊ ಉದಾತ್ತಗುಣವದು ನಿನ್ನ ಸಖನೆ,
ಸ್ವಜನರಿಗೆ ಎದುರಾಗಿ ಸೆಣಸದೆಯೆ ಇರುವೆ,
ಸಹಿಷ್ಣುತೆಯು ಸೌಜನ್ಯವನು ಅರಿವರಾರೊ
ದಯೆ ಧರ್ಮವನು ಲೋಕದಲಿ ತಿಳಿವರಾರೊ?
ವೈರಿಗಳು ಅಣಕಿಪರು ನಗುವರಕೊ ಜನವು
ನಿಂದನೆಯು ನುಡಿಕಿಡಿಗಳನು ತೂರಿಸುವರು;
ಅದ ಮೀರಿದಾ ದುಃಖ ಬೇರೆ ಇನ್ನಿದೆಯೆ
ಪ್ರಸನ್ನದ ಗುಣಮಾನವರಿಯುವದಿಹ ಜಗದಿ?

|| ೨೫ ||

"ಸಮರದಲಿ ಹೋರಾಡಿ ಮಡಿದೊಡದೊ ಸಿಖನೆ,
ಹೊಂದುವಿಯೊ ನೀನ್ ವೀರಸ್ವರ್ಗವನೆ ನಿಜದಿ,
ಕಾದಾಡಿ ಜಯಿಸಿದೊಡೆ ಪಡೆವೆ ನೀನ್ ಜಗದ
ರಾಜ್ಯಸುಖ ಭಾಗ್ಯವನು ನಿಶ್ಚಯವೊ ಕೇಳೌ;
ದೃಢಚಿತ್ತದಿಂದ ನೀನ್ ಎಚ್ಚವೆತ್ತು ಸೆಣಸು
ಎದುರಾಳಿಗಳ ಜಯಿಸು ವೀರನೊಲು ಬಾಳು;
ಕೌಂತೇಯನು, ನಿಶ್ಚಿಂತನಾಗುತಲಿ ಏಳು,
ಎದ್ದೇಳುತಲಿ ಯುದ್ಧಃ ಟೊಂಕನೆಂಬಿನ ಸಿದ್ಧ!

॥ ೩೭ ॥

"ಸುಖವು ದುಃಖವು ಸಮದಿ ಲೋಕದಲಿ ಇರಲು
ಚಿಂತೆಯೇ! ಲಾಭದಲು ನಷ್ಟದಲು ಸಮವು,
ಜಯ ಅಪಜಯಗಳಲ್ಲಿ ಕಾಣುವುದು ಸಮತೆ,
ಅದುವೆ ನಿಷ್ಕಾಮಿಕನ "ಸಮದೃಷ್ಟಿ" ಲೀಲೆ!
ಸಮಾನವನು ಸಮದಾಗಿ ಅಸಮತೆಯು ಇಲ್ಲ,
ಲೋಭ ಮೋಹದ ತೆರೆಯು ಕಾಣುವೆ ಸಮತ್ವ,
ಗಣಿಸಿ ಅದನೆದ್ದೇಳು ಹೋರ್ವ ಎನ್ ಗೆಳೆಯಾ
ಪಾಪದರಿಕೆಯಿಲ್ಲದೆಯೆ ಬಾಳ್ವೆ ನೀನ್ ನಿತ್ಯ!

॥ ೩೮ ॥

"ಹೇಳಿದೆ ನಿಗೂಢವಹ ಜೀವಾತ್ಮ ವಿವರ,
ಆತ್ಮಜ್ಞಾನದ ರೂಪವದೆ ಸಾಂಖ್ಯ ತತ್ತ್ವ,
ಕೇಳಿನ್ನು ಸದ್ಬುದ್ಧಿಯಿಂದೆ ಸಿಗುವಂಥ
ಕರ್ಮವನು ನಡೆಸುತ ಸುಯೋಗವನು ಪಡೆವ
ಕರ್ಮಬಂಧನದಿಂದೆ ಜೀವಿಗಳು ಜಗದಿ
ಪಾರಾಗುವಾ ವಿಧಿಯು ಏನಿದೆಯೊ ಅದನೆ
ವರ ಕರ್ಮಯೋಗದ ವೈಶಿಷ್ಟ್ಯವನೆ ಇಂದು
ಹೇಳುವೆನೊ ಹೇ ಪಾರ್ಥ ಆಲಿಸೈ ಅದನು!

॥ ೩೯ ॥

"ಸತ್ಕಾರ್ಯ ಸಾಧನೆಯು ಎಲ್ಲಿಯೊಂದನಂತರ
ವಿಧಿಯುಕ್ತವಾಗಿಸಿರೆ ಅದೆ ಕರ್ಮತಂತು,
ಅಪೂರ್ಣವಹ ಶ್ರಮಕೆ ಕೊನೆಯಂತು ಇಲ್ಲ,
ನಿಷ್ಠೆಯ ಸುಕಾರ್ಯವದರಲಿ ದೋಷವಿಲ್ಲ,
ಧರ್ಮದಾಚರಣೆಯಲಿ ಹಿಂದಿಕ್ಕರಲ್ಲ
ಅಂಶಮಾತ್ರದ ಕರ್ಮದಾ ಯೋಗದಲ್ಲಿ
ಜೀವಿಗಳನಕೊ ಹಲವು ಬಗೆಯ ಭಯದಿಂದ
ಪಾರಾಗಿಸುವ ಫಲವು ಇಹುದೆಲ್ವೆ ಪಾರ್ಥ—

॥ ೪೦ ॥

"ನಿಷ್ಫಲತೆಯಾ ಬುದ್ಧಿಯನು ಧ್ಯೇಯವಾಗಿ 1253
ಮೋಕ್ಷ ಸಾಧನೆಯನ್ನು ಪರಮಾರ್ಥವಾಗಿ
ಎಣಿಸುತ್ತ ತದೇಕ ಚಿತ್ತದಿ ಮನವನಿಟ್ಟು
ಬಾಳಿದೊಡೆ ಅದೆ ಸತ್ಯ ನಿತ್ಯಮಾರ್ಗದಂತಾ!
ನಿಶ್ಚಯಾತ್ಮಕವಲ್ಲದೀ ಮನವು ನೋಡೆ
ಹಿಮ್ಮರದ ಶಾಖೆಗಳೋಪಾದಿಯಲಿ ಅಂತೆ
ಯಾವಾವೊ ಕಡೆ ಹಬ್ಬಿ ಜೋಲುವುದ ನೋಡುತ್ತ,"
ಎಂದೆನುತ ಹೇಳಿದನು ಗೋವಿಂದನಂದು.

॥ ೪೧ ॥

"ಕಲುಷಿತದ ತರತಲತೆಯು ಪ್ರಾಮುಗತೆಗಳುಗಳುನಿ
ಸೊಗಸಿಗಂ ಬೊಲು ಮಾತ್ರ ಮೇಲ್ ಕಾಣಿಸುಂತೆ,
ವೇದಗಳನರಿಯದಿಹ ಕವಿತ್ರಿಗಳು ಹಲರು
ಪಾರಮಾರ್ಥಿಕ ವಿಷಯವನು ತಿಳಿಯದಿಹರು;
ವಾದಿಪರು ಬೋಧಿಪರು ಕೇವಲರವರಿಲ್ಲ
ವಿಷಯವನು ಪ್ರಾರ್ಥನದಲಿ ಹೇಳುವರು ನೋಡಾ,
ಕವಿತೆಯದ ರಹಸ್ಯವನಾಶಿಸ್ಯದಲಿ ಹೇಳ್ವ
ಜನವು ತಾತ್ವಿಕರಲ್ಲವೆಂ ಬುದನು ತಿಳಿಯಾ!

॥ ೪೨ ॥

"ಕಾಮದಲಿ ಮೋಹದಲಿ ಆಸಕ್ತಿ ತೋರಿ
ಅಂತಿಮೆಂ ಸ್ವರ್ಗದಲಿ ಸುರತ ಸ್ವಾರ್ಥ ಬಯಸಿ
ಹೇಳುವರು ಜನ್ಮ ಕರ್ಮ ಜನ್ಮದ ವಿಚಾರ
ಪಿಡಿಯ ತಿಳಿಸುವರು ಭೋಗೈಶ್ವರ್ಯಗಳನಾ
ಕವಿತೆಯಲದಾ ಕ್ರಿಯಾ ಭೇದಗಳನೆಲ್ಲಾ
ಹೇಳುತ್ತಲಿ ಪ್ರಾಪಂಚಿಕಾ ಬಾಳ್ವೆ ಗತಿಯ
ಮಿತಿಯಿಲ್ಲದೆ ಹರಿಸುವರು ಸುವಿಲಾಸಗಳವೊ
ಅದರಿಂದ ಕಂಗೆಟ್ಟಿಹುದು ಜಗವು ನಿಜವೊ!

॥ ೪೩ ॥

"ತಾತ್ವಿಕ ವಿಚಾರಗಳನಾರರಿಯಲಂತು
ಸ್ವಾರ್ಥ ಸಿರಿ ಭೋಗದಾ ಜೀವನಕೆ ತಂದು
ಆ ವಿಚಾರದೊಡಗೊಂಡ ಜನವನ್ನು ನಿಜದಿ
ಮರುಳಾಗಿಸುತ ಕೇಳ್ವೆ ಕಡಿಸುತಿಹರಿಹದಿ,
ಸ್ಥಿರಬುದ್ಧಿಯಾ ಆತ್ಮಜ್ಞಾನವಿಲ್ಲದಿಹಗೆ
ಮನೋವಿಕಾಸವದು ಸಾಧಿಸದು ನಿಜವೈ,"
ಎಂದೆನುತ ಸಿಮರಾಂಗನಾ ಮುದ್ದೆ ನಿಂತು
ಹರಿ ಹೇಳ್ದ ನಿದನಲ್ಲಿ ಪಾರ್ಥನಿಗೆ ಅಂದು.

॥ ೪೪ ॥

"ತಿಳಿಯುತಿಲ್ಲ ವೇದಗಳು ತೋರಿದ ಗುಣತ್ರಯವು 1254
ಸತ್ವ ರಜಸ್ತಮವನ್ನು ನಿಂದೊಡಗೊಂಡ ಮನವು,
ಪಾರ್ಥ ಕೇಳು, ನಿತ್ರೈಗುಣಕೊಳಗಾಗದಿರೆಲ್ಲ
ಸಾತ್ವಿಕನು ಸತ್ವಸ್ವರೂಪದವನು ನಿಶ್ಚಿಂತ ಬಾಳ್ವೆ!
ಸುಖದು:ಖವನು ಜಯಿಸಿ ಆತ್ಮಿಯನು ತೋರಿದು
ಯೋಗಕ್ಷೇಮದಾ ಚಿಂತೆಯನು ಬಿಟ್ಟು
ದೃಢಮನದಿ ಧ್ಯೇಯದಲಿ ನಡೆಯೊ ಸಾಯುಜ್ಯ,
ನಿತ್ಯ ಗುಣಾತೀತನೆಂದೆನಿಸೊ ಆದೆ ಪ್ರಾಜ್ಞ!

" ೪೫ "

"ಕೆರೆದಂಬ ತೆರೆ ಕೋಡಿ ಹರಿಯುತ್ತಿರೆ ಸುತ್ತಮು
ತೃಷೆಯಿಂದ ಬಳಲಿಹನು ಬೇಗೆಯಿಂದಿದ್ದು
ತಿಳಿನೀರ ನೊಂದಿದ್ದು ಹೀರುವೊಲು ನೋಡಾ
ಜ್ಞಾನಿಯಹ ಬ್ರಹ್ಮಜ್ಞನು ವೇದಾದಿಗಳನಾ
ಹಿತಿಸಿ ಅವುಗಳ ಸಾರವನು ಮಾತ್ರ ಗ್ರಹಿಸಿ
ಆತ್ಮಸ್ಥಿತಿಯನು ಭಾವಿಸಿ ತೃಪ್ತಿಯನ್ನು ತಳೆಸಿ
ಜೀವಿಪುದೆ ಯೋಗಿಗಳ ಮಾನವದು ಕೇಳಾ
ಅದುವೆ ಗೀತೆಯು ಸಾರ ಜೀವನ ವಿಚಾರಾ!

" ೪೬ "

"ನಿತ್ಯ ವಿಧಿ ಕರ್ಮವನು ಶ್ರದ್ಧೆಯಲಿ ನಡೆಸಿ
ಆಚಾರಗಳ ಆಚರಣೆಯು ಗುರಿಯೆನಿಸಿ
ಬಾಳುತಿರಲದರ ಫಲವನ್ನು ಕೋರದಾಗ
ಚಿಂತಿಸದೆ ತಲೆಬಾಗಿ ಬೇಡಮ್ಮ ಜಗದಿ!
ಕರ್ಮಾಕರ್ಮಗಳ ಫಲವನಪೇಕ್ಷಿಸದೆ
ನಡೆಸಲ್ಲಿ ಕರ್ಮವನು ಧರ್ಮಕ್ಕನುವಾಗಿ,
ಕರ್ಮಫಲವದು ಕ್ಷಣದೆ ಕಾಣಿಸದು ಎನುತ
ಕರ್ಮಾನುಚಾರಣೆಯು ಬಿಡದಿರೈ ನಿರುತಾ!

" ೪೭ "

"ಫಲವನ್ನಪೇಕ್ಷಿಸದೆ ಗೈಯುತ್ತಿಹ ಜಿತೆ
ಲಾಭವನು ಇಚ್ಛಿಸದೆ ನಡೆಸುತಿಹ ಕರ್ಮ,
ಬಿರು ಹೀನವದು ಸ್ವಾರ್ಥವದು ನಿತ್ಯ ವ್ಯವಹಾರ
ಫಲದ ಉದ್ದೇಶವದೆ ದುರುದ್ದೇಶ ನಿಷ್ಕರ್ಮಾ!
ತಿಳಿಯುತಲೆ ರಹಸ್ಯವಿದ ಗಾಂಡೀವಿ ಕೇಳಾ,
ಫಲವನ್ನು ಇಚ್ಛಿಸದೆ ಬಾಳದಿರೊ ಬಿಸಿಸ.
ಜಗದ ಜನರ ಗಹನವರಿಯದೆಯು ನೋಡೋ
ಫಲಾಪೇಕ್ಷೆಯು ಕಾಂಕ್ಷೆಯಲಿ ಸಾಯ್ವರಂತೆ!

॥ ೪೮ ॥

"ಸಮತ್ವದೃಷ್ಟಿ ಸಮತ್ವಭಾವವನು ಇಟ್ಟು ನಡೆಯುತ 1255
ಕರ್ಮಫಲಗಳನು ಬಿಟ್ಟಿಯಾಗಲು ಸಮತ್ವವೆಂದೆನಿಸಿ,
ಸಮಬುದ್ಧಿ ಸಮಸಿದ್ಧಿ ಕರ್ತೃತ್ವ ವೃದ್ಧಿ
ಕೇಳ್ ಮುಕ್ತರಾಗಿರುವರು ಜನುಮನೀ ಭುವದಿ;
ಹೀಗಾಗಿರುವ ಪುಣ್ಯ ಪಾಪಗಳಿಂದೆಲ್ಲಾ
ಸಮಬುದ್ಧಿ ಯೋಗವದು ರಕ್ಷಿಪುದು ಕೇಳ್!
ಹಾಗಿನ್ನೆ ಸತ್ಕರ್ಮ ಕೌಶಲವಿರುವುದು
ಅದೇ ಮನೋಜ್ಞತೆಗಿಹ ಸೂತ್ರವೆಂದೆನಿಸಿ!

॥ ೫೦ ॥

ಫಲಾಪೇಕ್ಷೆಯನ್ನಿಡದೆ ಸಮಬುದ್ಧಿಯಿಂದ
ಕರ್ಮನಿರತರಾದ ಜ್ಞಾನಿಗಳು ತಾವು ನಿತ್ಯ
ಜನನ ಮರಣಗಳೆಂಬ ಬಂಧನಗಳಿಂದ
ತಪ್ಪುತಲಿ ಸುರಲೋಕ ಸುಖಭೋಗವನ್ನು
ಪಡೆಯುವವರು ಅದೆ ಕರ್ಮಯೋಗದಾ ಫಲವು
ನಿತ್ಯಮುಕ್ತ ಸಿದ್ಧಪದಹೊಂದಿಗೊಂಡು ಇರುವ್ರು;
ಕೇಳಲೀನದು ಬುದ್ಧಿ ಜ್ಞಾನವಿದು ಎರಡು
ಕರ್ಮಾನುಸಾರನೆಗೆ ದ್ವೀಪವಿದು ನಿಜವು!

॥ ೫೧ ॥

"ಮೋಹ ಮಾಯಾಭ್ರಮೆಯು ದಟ್ಟಡವಿ ದಾಟಿ
ಅಜ್ಞಾನದಾ ಗಂಡಿ ಹಳ್ಳಗಳು ಬಳಸಿ
ಮುಂದುವರಿದೊಡೆ ಹೊಂದುವಾ ಬುದ್ಧಿಜ್ಞಾನ,
ಈ ವರೆಗೆ ನಾವ್ ಕೇಳ್ದುದುವು ಮುಂದಕೆನ್ನು
ಕೇಳುವ ವಿಷಯಗಳುದುದಾಸೀನತೆಯು
ಹುಟ್ಟಿಸಲದೆ ಮನೋವಿಕಾಸವೆಂದೆನಿಸಿ!
ಎಲೆ ಪಾರ್ಥ ಕೇಳ್, ಅದುವೆ ಸದ್ಬುದ್ಧಿ ಜ್ಞಾನಾ
ಮನಮಾಯೆ ಅಳಿದುದಕೆ ಅದೆ ಸತ್ಪ್ರಮಾಣ!

॥ ೫೨ ॥

"ತಾತ್ವಿಕವು ಪಾರಮಾರ್ಥಿಕವು ಎಂದೆನುತ
ಹಲವಾರು ವೇದೋಕ್ತ ಸುವಿಚಾರವನ್ನು
ಆಲಿಸಿದ ಮನ ನಿನ್ನ ಕಲುಷಿತ ವಾದಿರಲು
ದಿವ್ಯತ್ವ ಜ್ಞಾನವನು ಪಡೆದಾಗಲಂದು
ನಿಶ್ಚಲತೆಯನು ನೀನು ಹೊಂದಿಹ ಕ್ಷಣದಿ
ಪಡೆಯುವಿ ನೀ ಯೋಗವದರಾ ಸಿದ್ಧಿಯನ್ನೆ!"
ಎಂದೆನುತಲಾ ಕೃಷ್ಣ ಹೇಳುತಿರೆ ನೋಡಾ
ಆ ಅರ್ಜುನನು ಪ್ರಶ್ನಿಸಿದನೀ ರೀತಿಯಲಾಗ!

॥ ೫೩ ॥

"ಕೇಶವನೆ ಕೇಳುತಿಹೆನು ಸಂದೇಹವೊಂದಾ ? 1256
ಮಾನವನು ಸುಜ್ಞಾನದಾ ಬುದ್ಧಿಯನ್ನು
ಹೊಂದುತ್ತ ಸಮಾಧಿಯಲಿ ನೆಲೆಗೊಂಡ ವೇಳೆ
ಎಂತಿಹನು ಗುಣವಂತನವನೆಂತಿಹುದು ತಿಳಿಸೈ;
ಸ್ಥಿರಜ್ಞಾನವನು ಹೊಂದಿದವನೆಂತು ಇಹನು ?
ಏನ್ ಅನುವವನವನು ? ಗುಣವಂತನವನೆಂತಿರ್ಪನು ?
ನೀತಿ ನಡತೆಗಳೆಂತು ? ತಿಳಿಸಿನ್ನು ನನಗೆ,
ಗುಣವಂತನೆಂತಿಹನು ಭಗವಂತ ತಿಳಿಸೈ !"

॥ ೫೪ ॥

"ಸ್ಥಿತಪ್ರಜ್ಞನಾ ಇರವ ಎಂತೆನಲು ಪಾರ್ಥ,
ಕಾಮ ಮೋಹಾದಿ ಷಡ್ವೈರಿಗಳನೆಲ್ಲಾ
ದೂರವಾಗಿಸಿ ತೃಪ್ತಿಯನು ಹೊಂದಿ ಮನದಿ
ಆಸೆ ಆಕಾಂಕ್ಷೆಗಳನಾಕರ್ಷಿಸದೆಯೆ,
ಆತ್ಮಜ್ಞಾನದೆ ನಿತ್ಯ ಸಂತೃಪ್ತನಾಗಿ
ಚಿತ್ತ ಶಾಂತಿಯ ಹೊಂದಿ ಯೋಗಿವರನಾಗಿ
ಇರ್ದೊಡವನೇ ಜಗದಿ ಸ್ಥಿರಜ್ಞಾನಿಯಹನು,
ಆತ್ಮಬಲದಲಿ ಜ್ವಲಿಪ ಸ್ಥಿತಪ್ರಜ್ಞನವನು !

॥ ೫೫ ॥

"ದುಃಖದಲಿ ದುಗುಡಕೊಳಗಾಗದೆಯೆ ಇರುವ
ಸುಖದಾಗೆ ಹಿಗ್ಗದೆಯೆ ಯೋಗಿಯೊಲು ಬಾಳ್ವ
ಭಯ ಲೋಭ ಮನೋವ್ಯಾಧಿಯದನೆಲ್ಲ,
ಕ್ರೋಧಾದಿ ಷಡ್ವೈರಿಗಳ ಬಳಗವನ್ನು
ತ್ಯಜಿಸುತಲಿ ನಿಶ್ಚಿಂತ್ಯ ನಿರ್ಲಿಪ್ತನಾಗಿ
ಇರುವವನೆ ಸ್ಥಿತಪ್ರಜ್ಞನೆಂದೆನಿಸಿ ಜಗದಿ
ಬೆಳಗುವವನು ಆತ್ಮಬಲದಲಿ ವೀರನವನೈ,
ಎಂದೆನುತಲಂದನಾ ಗೋಪಾಲನೊಲಿದೆ.

॥ ೫೬ ॥

"ಜಗದಲಾವೊಂದು ವಿಷಯವು ಮೋಹಿಸದೆಯೆ,
ಹಿತಾಹಿತಗಳಿಗಂತು ಜಗ್ಗದೆಯೆ ಮನದಿ
ಹಿಗ್ಗದೆಯೆ ಸುಖಕಂತು ಕುಗ್ಗದೆ ಅಸುಖಕೆ,
ಶುಭಾಶುಭವನು ತದೇಕಾ ಚಿತ್ತದಲಿ
ಕಾಣುತಿಹನೇ ಜ್ಞಾನಿ ಸ್ಥಿತಪ್ರಜ್ಞನವನೈ
ಗುಣವಂತನಹ ಮುನಿಯೋಗಿ ಎಂದೆನಿಸುತಿಹನೈ,
ವೀರಗುಣ ಸೌಂದರ್ಯವನು ಮಿಂಚಿಪನು ಸುತ್ತ
ಅದುವೆ ಜನಕೊಪ್ಪುದಾ ಸುರಯೋಗ ನೋಡು !

॥ ೫೭ ॥

"ಆಮೆ ಅದು ಕಾಲ್ಗಳನು ಉಡುಗಿಸುವಂತೆ
ಸ್ಥಿತಪ್ರಜ್ಞತೆಯ ಹೊಂದಿದಾ ಯೋಗಿವರನೊ,
ಇಂದ್ರಿಯ ಭೋಗಾದಿ ವಿಷಯಗಳಿಂದ ತನ್ನ,
ಇಂದ್ರಿಯಗಳನು ತಾನು ಹಿಂದಕೆಳೆದಿಡುತ
ಮನಸ್ಸಂಯಮದಿ ತನಗೆ ಬೇಕಾದ ತೆರನೆ,
ನಿಶ್ಚಲತೆಯಾ ಆತ್ಮಶಕ್ತಿಯನು ಅಂತೆ
ಸ್ವಾಧೀನದಲಿ ಇಟ್ಟು ಮೆರೆವನೊ ಸಮಾಧಿ
ಕೇಳ್ ತಪೋಬಲ ಶ್ರೇಷ್ಠ ಅವನೆಯೆ ತಪಸ್ವಿ!

॥ ೫೮ ॥

"ವಿಷಯೇಂದ್ರಿಯಗಳನ್ನು ಸಂಯಮಿಸಿ ಯೋಗಿ
ನಿರಾಹಾರಿಯಾಗುತ್ತಲಿ ಸಾಧನೆಯ ನಡೆಸೆ
ನಿರಂತರವಾ ಮನೋಹಾರ್ದ್ಯವನು ಬೆಳೆಸಿ
ಆತ್ಮಜ್ಞಾನದ ಶುದ್ಧ ಸೌಂದರ್ಯ ಗಳಿಸೆ
ಕೇಳ್ ಕಳೆಯುವನು ವಿಷಯ ವಾಸನೆಗಳನ್ನು
ಕಾದಿ ಮನೋಬಲ ಪರಾಕಾಷ್ಠತೆಯು ನೋಡೈ,"
ಎಂದೆನುತ ಭಗವಂತನು ಹೇಳ್ದನಂದು
ದುಃಖಿಸ ಯೋಗಿಯಂತಾಗಿಸಲು ಎಂದು!

॥ ೫೯ ॥

"ಕಲಕುವವು ಮನವನ್ನು ಬುದ್ಧಿಬಲವನ್ನು
ಇಂದ್ರಿಯಗಳವು ಕೊರೆಯುತಿಹವು ಮನವನೆಂದೂ
ಸ್ಥಿರಮನವನಸ್ಥಿರವು ಆಗಿಹುದೊ ಕೇಳಾ,
ಜ್ಞಾನವನು ಸಿದ್ಧಿಯನು ಹೊಂದಿಹರ ಮನವಾ,
ಕಾಡಿಸುವವು ವಿಷಯೇಂದ್ರಿಯಗಳು ಕೇಳ್ ನಿಜವೈ,
ಅದುವೆ ಬೆಸನಕೆ ಕಾರಣವು ಜಗದಿ ನೋಡೈ"
ಎಂದು ಪೃಥಾತನಯನಿಗೆ ವಸುದೇವ ಸುತನು
ಹೇಳ್ದನು ಮನೋವಿಕಲತೆಯ ಪರಿಯನಂದು.

॥ ೬೦ ॥

"ಇಂದ್ರಿಯಗಳೆಲ್ಲವನು ತಡೆದಿಟ್ಟು ನಿತ್ಯ
ದೈವಬಲವೇ ಮುಖ್ಯವೆಂದೆನಿಸಿ ಕೇಳಾ
ಜ್ಞಾನವನು ಹೊಂದಿ ತಾನ್ ಯೋಗಿವರನೆನಿಸಿ
ನನ್ನನೆ ನಿರಂತರವು ಭಾವಿಸಿರೆ ಮುದದಿ
ಅವನೆ ಸ್ಥಿತಪ್ರಜ್ಞತೆಯ ಸ್ಥಿರಮನವು ಕೇಳೊ,
ಇಂದ್ರಿಯದ ಸಂಯಮವು ಸಮಗ್ರವಾಗಿಹುದೊ;"
ಎಂದು ಮನೋಸ್ವಾಧೀನದಾ ಗಹನವಿದನಾ
ಬಿಡಿನುಡಿಗಳಲಿ ಅಂದು ಹೇಳಿದನು ಕೃಷ್ಣ!

॥ ೬೧ ॥

"ವಿಷಯಾಸಕ್ತಿಯೊಳು ನಿರತ ವಿಷಯಗಳನೆಲ್ಲ 1258
ಮನದಲ್ಲೆ ತುಂಬಿ ಇಂದ್ರಿಯವ ತಡೆಯದ
ದೋಷದಿಂದಲೆ ಮಮಕಾರದಲಿ ಬಿದ್ದು
ಆಸೆ ಆಕಾಂಕ್ಷೆಗಳಿಂದ ಮನವನಿಟ್ಟು
ನಿರತನಾಯ್ತಂದಲೆ ಆಸೆಯಾ ಪಾತ್ರದಲ್ಲಿ
ತೊಳಲುತಿರೆ ಆ ಕ್ರೋಧಕೆಡೆಗೊಡುವುದಲ್ಲ!"
ಎಂದೆನುತಲಾ ವಿಷಯದಾ ಸಮಸ್ಯೆಯನ್ನು
ಮುಂದುವರಿದಾ ಹರಿಯು ಪೇಳಿದನೊ ಬಿಡದೆ!

॥ ೬೨ ॥

"ಕ್ರೋಧಕ್ಕೊಳಗಾಗಿ ಮನೋಬಲವಂತು ಕೆಟ್ಟು
ಮಾನವನು ಅವಿವೇಕಿಯಾಗುವನೊ ಅಂತು,
ಸ್ಮೃತಿಹೀನನಾಗಿ ತರತಮ ಭಾವವಿಲದೆ
ಕರ್ತವ್ಯ ಅಕರ್ತವ್ಯದ ವಿವೇಚನೆಯು ಇಲದೆ
ಬುದ್ಧಿಗೆಡಲಾ ಬುದ್ಧಿ ನಾಶದಲೆ ಕೇಳೈ
ಮಾನವನು ಪರಿಪೂರ್ಣ ನಾಶವನೆ ಕಡೆಗೆ
ಹೊಂದುವನು ಎಂಬುವೊಲು ಸಾಗುವುದು ಜೀವ
ಅವನರಿತು ಎದ್ದೇಳಲಿತ್ತು ಇಂದು ಪಾರ್ಥ!"

॥ ೬೩ ॥

"ಇಂದ್ರಿಯಗಳನು ಅಂತು ಷಡ್ವೈರಿಯಿಂದ
ತಪ್ಪಿಸುತೆ ಮನವನಂಕಿತದಲಿಟ್ಟು ಪಾರ್ಥ
ದಿನದಿನದ ಜೀವನವನೊಲವಾಂತು ನಡೆಸಿ
ದೇಹವನು ದ್ವೈತ್ಯಗಳಿಂದ ತಾವ್ ಉಳಿಸಿ
ದುರ್ವಿಷಯಗಳಿಗೆ ಮನವಿಡದೆಯೆ ಕೇಳಾ
ನಡೆಯುವಾತನು ಆತ್ಮಸುಖವನ್ನು ನಿತ್ಯ
ಪಡೆಯಬಲ್ಲನು," ಎಂದು ಪೇಳಿದನೊ ಹರಿಯು
ಸಂದೇಹದಿಂ 'ಮುಳುಗಿದಾ ಅರ್ಜುನನಿಗಂದು!

॥ ೬೪ ॥

"ಮನಶ್ಶಾಂತಿಯಾ ಸುಖವ ಹೊಂದಿದಾ ಮನವು
ಷಡ್ವೈರಿಗಳ ಬಾಧೆಯಿಲ್ಲದೆಯೆ ಅಂತು
ಮನೋಪ್ರಸನ್ನತೆಯು ಪಡೆಯಲದು ಕೇಳಾ
ದುಃಖಗಳು ತಾವಾಗ ಅಳಿಯುವುವು ಪಾರ್ಥ!
ಅಂತಾಗಲಾ ಸ್ಥೈರ್ಯವನು ಮರಳಿ ಪಡೆಯೆ
ಅದರೊಡನೆಯೆ ಬುದ್ಧಿಬಲ ಹೆಚ್ಚುವುದು ನಿಜವೈ!
ಅದೆ ಮನೋಬಲ ಸೂತ್ರವೆಂದೆನಿಸು ಸಖನೆ,"
ಎಂದು ಗೋವಿಂದನೆಂದನೊ ಪಾಂಡವನಿಗೆ.

॥ ೬೫ ॥

"ಇಂದ್ರಿಯದ ಸ್ವಾಧೀನವಿಲ್ಲದವನೆಂತು
ಆತ್ಮಜ್ಞಾನದ ಗಹನವರಿಯುವನೊ ಹೇಳು;
ಯೋಗಬಲವಿಲ್ಲದವನೆಂತು ಈ ಜಗದ
ಪರಮಾತ್ಮನನು ತಿಳಿಯುವನೊ ಎನತು ಹೇಳ್ವೆ?
ಅದನರಿಯದಾ ಜ್ಞಾನಬಲಹೀನನಿಹದ
ಶಾಂತಿಯನು ಪಡೆಯೆ ಸಾಧ್ಯವು ಎಯ್ತೊ ಎನ್ತೆ!
ಮನಶ್ಶಾಂತಿಯಿಲ್ಲದವಗೇ ಜಗದೆಯೊಳು
ಸುಖವು ಸಂತೋಷಗಳಿಗೆಡೆಯುಂಟೆ ಹೇಳ್ವೆ?"

|| ೬೬ ||

"ಎಡೆ-ತಡೆಯು ಇಲ್ಲದೊಲು ಇಂದ್ರಿಯವು ಹಾಯೆ
ಅದನನುಸರಿಸಿ ಮನವು ವರ್ತಿಸಿರೆ ನೋಡ್ವೆ
ಸಾಗರದ ಹಡಗುಗಳು ಬಿರುಗಾಳಿಯನ್ನು
ಅನುಸರಿಸಿ ಓಡುವೊಲು ಮಾನವನ ಮನವು
ಹೊಂದಿಹ ವಿವೇಕವು ವಿವೇಚನೆಗಳನ್ನು
ಸೆಳೆದೊಯ್ದು ಹಾಯುತಿದೆ ತಿಳಿಯೊಲ್ವೆ ಹದನ್ನು,"
ಇದುವೆ ಭಗವಂತನಾ ನಲ್ನುಡಿಯ ಸಾರ
ಮನಶ್ಶಾಸ್ತ್ರದಿಂ ಸೂಕ್ತ ತಾತ್ವಿಕ ವಿಚಾರ!

|| ೬೭ ||

"ಹಲವಾರು ವಿಷಯಾಭಿಲಾಷೆಗಳು ಅಲ್ಲಿ
ಭೋಗ್ಯವಹ ವಿಷಯಗಳು ಇಷ್ಟಿಷ್ಟು ಸೇರಿ
ಮಾನವರ ದಾರಾರ ಮನಸ್ಪೃಹೆಯದನಾ
ಇಂದ್ರಿಯದ ಸಂಯಮದ ಆತ್ಮಬಲವನ್ನು
ಕೆಡಿಸದೊಡೆ ಇದ್ದೊಡದಾ ಮನವದುವೆ ಸ್ಥಿರವೊ
ಬುದ್ಧಿಬಲ ಜ್ಞಾನಬಲಗಳ ಮೇಳವದುವ್ಹೊ,
ಎಲೆ ಮಹಾಬಾಹೊ ನೀನ್ ಗಾಂಡೀವಿ ಕೇಳ್ವೊ
ಮನಸ್ಸ್ಥಿರತೆಯಾ ಯುಕ್ತಿಗದೆ ಸಾಕ್ಷ್ಯ ನೋಡೊ.

|| ೬೮ ||

"ಜೀವಿ ಜಂತುಗಳಿಗೆಲ್ಲ ರಾತ್ರಿಯಲಿ ಮಲಗಿ
ನಿದ್ರಿಸಿರೆ ದುಃಖವನು ಜಯಿಸಿದಾ ಯೋಗಿ
ಇಂದ್ರಿಯಗಳಾ ಘೋರಕಲವು ಹೊಗದಂತೆ
ನಿದ್ರಿಸದೆಯೇ ಕಾವಲಿರುವನಹೊ ನೋಡ್ವೆ!
ಜೀವರಾಶಿಗಳೆಲ್ಲ ಎಚ್ಚರದಲಿರಲು
ಸಂಯಮಿಗೆ ಅದೆ ಕತ್ತಲೆಯಂತೆ ಇಹುದು,
ಆತ್ಮಬಲವೇ ಬೆಳಕು ಮುನಿಗಳಿಗೆ ನಿತ್ಯ
ಕತ್ತಲೆಯು ವಿಷಯಾಭಿಲೋಲುಪತೆ ತಿಳಿಯಾ!

|| ೬೯ ||

1260

"ನೂರಾರು ನದಿನದಗಳವು ಉಕ್ಕಿ ಹರಿದು
ಹಲವಾರು ಕಡೆಯಿಂದ ಸಾಗರವ ಸೇರಿ
ಕಡಲಿಗಂತು ಗರುವಿ ಆದರೂ ಉಕ್ಕದೊಲವು
ನಿರ್ಲಕ್ಷಿಸುತ್ತ ವಿಷಯದ ಬಿರುಗಾಳಿಗಳನು,
ಮೋಹ ಮದ ಲೋಭಾದಿ ವ್ಯಸನಗಳ ಸಂಗ
ಇಹ ಸ್ಥಿತಪ್ರಜ್ಞ ಕೇಳು ಪಡೆಯುವನು ಶಾಂತಿ!
ಭೋಗದಾಶೆ ಕಂಗೆಟ್ಟು ಮಾನವನು ಕಡೆಗೆ
ದುರದೃಷ್ಟವಶಕ್ಕೊಳಗಾಗಿ ನರಳುವನು ನಿಜವು!
" ೭೦ "

"ನಾನು ನನ್ನದು ಎಂದು ತಾನ್ ತನ್ನದೆಂಬ
ಮಮಕಾರ ಅಹಂಕಾರವನು ತೊರೆದಿರುವ,
ಆತ್ಮ ಸಾಕ್ಷಾತ್ಕಾರವನು ಪಡೆದಿರುವ
ಯಾರಿರುವರೋ ಅವರು ಮುನಿಯೋಗಿವರರು;
ಹೊಂದುವರು ಅವರು ಸುಖ ಶಾಂತಿಯನು ನಿಜದಿ
ಬೆಳಗುವರು ನಿತ್ಯ ಇಹಪರಗಳಲಿ ಸೊಗದಿ,"
ಎಂದೆನುತಲಾ ಪಾರ್ಥನಿಗೆ ಪೇಳ್ದ ಕೃಷ್ಣ,
ಯುಗವೆಲ್ಲ ನೆನೆವವೊಲು ಸಂದೇಶವಿದನಾ!
" ೭೧ "

"ಫಲ್ಗುಣನೆ, ಸ್ಥಿತಿ ಇದುವೆ ಪರಬ್ರಹ್ಮ ಸ್ಥಿತಿಯು,
ನಿರ್ಮಮತೆ ನಿರಹಂಕಾರ ಇಂದ್ರಿಯ ವಿಜೇತಾ,
ಮೋಹರಹಿತನು ಎನಿಸಿ ಬಾಳುವವನಂತು
ಜೀವನದ ಕಡೆದಿನಗಳಲಿ ಪಡೆಯಲಹನು;
ಆನಂದಮಯ ಪಾರಮಾರ್ಥಿಕ ವಿಚಾರ
ಪರಬ್ರಹ್ಮಪ್ರೀತ ಸುಖ ಶಾಂತಿಯು ಅಪಾರ,"
ಎಂದೆನುತ ಸಾಂಖ್ಯಯೋಗದ ತಿರುಳನಂತು,
ಪೇಳಿದನು ಶ್ರೀಕೃಷ್ಣನರ್ಜುನನಿಗಂದು!
" ೭೨ "

(ಎರಡನೇ ಅಧ್ಯಾಯ ಸಂಪೂರ್ಣವು.)

ಅಧ್ಯಾಯ ೩ — ಕರ್ಮಯೋಗ!

"ಹೇ ಜನಾರ್ದನ ಕೇಳು ವಚನವ ಎಂತಾ,
ಕರ್ಮಯೋಗವ ಮೀರಿಯಿಹುದೆಂದು ನೀನಾ
ಹೇಳುವೆಯು ಪರಜ್ಞಾನ ಯೋಗವದೆನಲ್ಲ;
ಅಂತಾದೊಡಿದ ಕೇಳಲಿಕ್ಕೆ ಘಾತದೋಷ—
ವ ಕರ್ಮಕ್ಕೆನ್ನ ನೀನ್ ಆಹವಕೆ ಇಳಿಯು
ಪ್ರೇರೇಪಿಸುವಿಯೋಕೆ ಎಂದರಿಯದಿಹೆನ್ನೆ,"
ಎಂದು ಧನಂಜಯನು ಸಂದೇಹದಲಿ ಕೂಡಿ
ಪ್ರಶ್ನಿಸಿದನಾ ಹರಿಯು ನಿಂತೆಂದು ಅಲ್ಲಿ!

॥ ೧ ॥

"ಕರ್ಮಯೋಗದ ನಿಷ್ಠೆಯನು ಬಣ್ಣಿಸುತಲಿ
ಜ್ಞಾನಯೋಗದ ಮೇಲ್ಮೆಯನು ಹೇಳ್ದೆನಂತೆ;
ಕದಡಿಸಿದೆ ಮನವನ್ನ ಗೋವಿಂದ ನೀನು
ಹೇಳಲಿಕ್ಕೆ ಆಪ್ತದಿಪ್ಪಗೆಲ್ಲಂತು ಮೇಲು,
ಶ್ರೇಯಸ್ಕರವು ಮಾನವನಿಗಾವುದೆಂದು
ನಿಶ್ಚಯದಿ ಸ್ಪಷ್ಟಪಡಿಸಲಿಕ್ಕೆ ನನಗೆ ಇಂದು,"
ಎಂದು ಪೃಥಾತನಯನು ತಾನ್ ವಿನ್ನವಿಸಿ ಎಂದು
ಕೇಳಿದನು ಕೃಷ್ಣನನು ತವಕದಿಂ ಅಂದು!

॥ ೨ ॥

"ನಿಜವದಕ್ಕೆ ಪಾರ್ಥ ಕೇಳ್ ನಾನ್ ಹೇಳ್ದೆನಲ್ತೆ?
ಜ್ಞಾನಿಗಳು ತಾವ್ ಜ್ಞಾನಯೋಗದಲಿ ಕೇಳ್ತೆ
ಕರ್ಮಾನುಚಾರಿಗಳು ಕರ್ಮಬಲದಿಂದ
ಪಡೆಯುವರು ಬುದ್ಧಿಯನು ಸಿದ್ಧಿಯನು ನಿರುತ್ತ,
ಎಂದೆನುತ ಇಬ್ಬಗೆಯು ವ್ರತದ ಅನುಷ್ಠಾನ
ಲೋಕದಲಿ ಇಹುದೆಂದು ತಿಳಿಯಲಿಕ್ಕೆ ಈಗ,"
ಅಂತೆನುತ ಕರ್ಮಯೋಗದ ವಿವರವನ್ನು
ಹೇಳಿದನು ಹಲವಾರು ನುಡಿಗಳಲಿ ಹರಿಯು!

॥ ೩ ॥

"ಸೂತ್ರವಿದುವೇ ಕ್ಷೇತ್ರದಲ್ಲಿಹುದು ತಿಳಿಯಾ?
ಕರ್ಮವನು ಎಸಗದಿರ್ದೊಡೆಯಂತು ಜಗದ
ಜ್ಞಾನವನು ಸಿದ್ಧಿಯನು ದೊರಕಿಸುವ್ರ ನಿಜವು;
ಕರ್ಮವನು ತೊರೆದು ಸನ್ಯಾಸಯೋಂದೆನುತ
ಎನಿಸಿದೊಡೆಯೂ ಸಿದ್ಧಿ ನಿತ್ಯಶಿವಗಳು ಇಹುದೆ
ದೊರಕದುವು ಮಾನವನ್ನೆ," ಎಂಬುದನು ಅಂತೆ

1262

ಗೋಪಾಲನನು ವಿವರದಲಿ ವಿನಂತಿಯಗೆ
ತಿಳಿಸಿದನು ಕರ್ಮಯೋಗದ ರಹಸ್ಯವನ್ನೆ!

॥ ೪ ॥

"ಮಾನವನು ಕರ್ಮಗಳನಾರಂಭಿಸದೆ ನಿತ್ಯ
ಕ್ಷಣಮಾತ್ರವೂ ಏನುಗದಿರಲಾರನೆನುತಾ
ತಿಳಿಯಲಿಕ್ಕೆ ಜೀವಿಗಳು ತಮಗರಿಯದಂತೆ
ಹುಟ್ಟುಗುಣ ವಿಧಿಯ ಪ್ರೇರೇಪಣೆಯು ಬಲದೆ
ಕರ್ಮಗಳ ನಾರಿಗಳು ಎಂದೆನಿಸ ಇಹರೊ;
ಮೌನದಲಿ ಇರಲಾರದೀ ಧರೆಯು ಲವ್ಯೊ,"
ಎಂದೆನುತ ಮುಂದುವರಿದಂದನಾ ಕೃಷ್ಣ
ಪ್ರಕೃತಿಯ ಗುಣ ಕರ್ಮ ಧರ್ಮದಾಗಹನ.

॥ ೫ ॥

"ಕರ್ಮವನೆಸಗುವ ಇಂದ್ರಿಯಗಳನ್ನು
ಸಂಯಮಿಸಿ ಅಡಗಿಸಿರುವವನಿಹನೆ ತನ್ನ
ಮನದಲಿ ಕರಿಯವೊಲು ಪಲವು ವಿಷಯ-
ರಾಗಗಳ ನೆನೆಯುತಲಿ ಇರುವವನು ನಿತ್ಯ
ಮೂಢ ತಾನ್ ಎಂತೊ ವಿದ್ಯಾಚಾರಿಯೆನುತ
ಪೇಳುವುದು ಜಗವಂತು ನಿಜವದ್ದೆ ಗೆಳೆಯಾ,
ಕರ್ಮಗುಣ ಜ್ಞಾನವದು ಒಂದಾಗಲದುವೆ
ಕರ್ಮಯೋಗದ ಪ್ರಭೆಯು ಬೆಳಗುವುದು ನೋಡೈ!

॥ ೭ ॥

"ಇಂದ್ರಿಯಗಳೆಲ್ಲವನು ನಿಗ್ರಹಿಸಿ ಮನದಿ
ಫಲವಪೇಕ್ಷಿಸದೆ ಕರ್ಮವನು ಎಸಗಿ
ಕರ್ಮೇಂದ್ರಿಯಗಳಿಂದ ಸದ್ವಿಷಯನು ಗೆಳೆಸಿ
ಅಂತೆಯೆ ನಿತ್ಯ ಕರ್ಮದಾ ಯೋಗಗಳ ಬೆಳೆಸಿ
ಬಾಳುವವನೇ ಶ್ರೇಷ್ಠವದುವಂತು ನಿಜವೈ,
ವರ ಕರ್ಮಯೋಗಿಯವನೆಂದೆನಿಸಿಹನೆ"
ಎಂದನು ಮಾಧವನು ಪಾರ್ಥನಿಗೆ ಪೇಳ್ದನಂದು
ಗೀತಾವಚನವವರ ನುಡಿಯೊಂದನಿಂತು!

॥ ೮ ॥

"ಎನಗೆಲ್ಲಿ ವಿಧಿಯುಕ್ತ ಕರ್ಮಗಳ ನಿತ್ಯ
ಮಾನದಲಿ ನಿಷ್ಕ್ರಿಯನಾಗದಿರೊ ಮಿತ್ರಾ,
ಕ್ರಿಯಾಹೀನನಾಗದಿಹ ಮಹತ್ವತಿಯ ಅರಿತು
ಕರ್ಮವ ನಿಶ್ಚಿಂತೆಯಿಂದೆಸಗು ಮಾಡೆ ಮೇಲು,
ನಿಷ್ಕ್ರಿಯಿಂದೆಸಗದಾ ಕರ್ಮದಿಂದಂತು
ಜ್ಞಾನವನು ಪಡೆಯಲಿಂದಿಳೆಸಲೊದೆ ನೀನು

ಕಾಯವಿದರಾ ರಕ್ಷಣೆಯು ಸಿದ್ಧಿಸದೆಯು 1263
ನಿರಲಸವಂತಾಗುವುದು ನಿಯತನಾಗಿ ಕೇಳಿವ!

॥ ೮ ॥

"ಕಾಮಿತಾರ್ಥಕೆ ಕಾಮ್ಯ ಕರ್ಮಗಳನಿಸಿಗೆ
ಕರ್ಮಗಳ 'ಕರ್ತೃ' ಆದರಿಂದಲೇ ಜಗವೆ
ನಡೆಯುತಿರಲಿಕೆ ತೋರಿತ್ತು ಆದನು ಬಿಟ್ಟು
ಫಲಾಪೇಕ್ಷೆಯ ಅಳಿಯನ್ನಿಡದೆ ಕ್ರಮವು
ಪರಮಾತ್ಮಗರ್ಪಿತವಹ ಯಜ್ಞ ಕರ್ಮಕ
ದೈವಾರ್ಪಣಾ ಕರ್ಮ ವಿಧಿಯುಕ್ತ ಹೋಮವು—
ಆದನಿಸಗುತಲಿ ಸ್ವಧಾತನು ನೀನು ನಡೆಸೊ
ಯಜ್ಞವಿಧಿಗದೆ ದಾರಿ ಸಾರಿರೊ ಹಿರಿದಾರಿ!

॥ ೯ ॥

"ಕೇಳಲಿ ಅನಾದಿ ಯುಗದಾ ಕಾಲದಾಗ
ಪರಮಾತ್ಮನೇ ಯಜ್ಞವನು ಆಚರಿಸುತ
ಮಾನವನ ಸೃಷ್ಟಿಸದೆ ಕಾಲದಲಿ ತಾನು
ಹೇಳಿದನು ಹೀಗಿಹ ಪಿತಾಮಹನೆಂದು—
ಪರ ಕಾವುದೇನು ಮಹಾತ್ಮಾ ತಾನ್ ನಿರತ
ಬೇಡಿದ್ದ ನೀವೆಲ್ಲರೂ ಆಚರಿಸಿ ಯಜ್ಞ
ಸ್ವಾರ್ಥನಿಜದಿಲ್ಲವು ಕೇಳ್ ದೊರಕಲೆಂದೆನುತ
ಅನುವಿತ್ತನೋ ದೇವ ಯುಗದಾದಿಯಾಗ!

॥ ೧೦ ॥

"ಯಜ್ಞವದು ಆರಾಧನೆಯು ಆದುವೆ ಪೂಜೆ
ಯಜ್ಞವಿದರಿಂದ ಕೇಳ್ ದೇವಗಣ ಜಗಕೆ
ಮಳೆ ಬೆಳೆಗಳನು ಇತ್ತು ಸಂತೃಪ್ತಗೊಳಲೊ
ಆದುದೆ ಯಜ್ಞದ ಫಲವು ದೈವ ವಿಧಿ ವರವೊ—
ಅಂತೆಯೇ ಮಾನವರು ದೇವತೆಗಳೆಂದು
ಅನ್ಯೋನ್ಯದಲಿ ಕ್ಷೇಮ ಚಿಂತನೆಯು ಬಗೆದು
ಇಹಪರಗಳೆರಡರಲಿ ಸುಖವನ್ನು ಪಡೆವ
ಶ್ರೇಯಸ್ಸು ಆದೆ ಯಜ್ಞಫಲವದುವೆ ದೈವಾ!

॥ ೧೧ ॥

"ಹೋಮ ಯಜ್ಞಾದಿಗಳ ಮಾಡುತಲಿ ಅಂತು
ದೇವತೆಗಳನು ತೃಪ್ತಿಪಡಿಸದೊಡೆ ಕೇಳು,
ಕಾಯುವರು ಅನ್ನ ಭೋಗೈಶ್ವರ್ಯಗಳನು
ಪೊರೆಯುತಿವರು ಜನವನ್ನು ಲೋಕವನು ಸರ್ವ,
ನಿರಕ್ಕಲವ ಪೂಜಿಸದೆಯೇ ತಾವೆ ಎಲ್ಲ
ಸ್ವಾರ್ಥದಲಿ ಭುಜಿಸುವವರೇ ಜಗದೆ ಕೇಳು;

1264

ಚೋರರಿಂದೆನಿಪರದು ನೆನೆಯೆಂತೆನ್ನೆ ಪಾರ್ಥಾ,"
ಎಂದೆನುತ ಹೇಳಿದನು ಗೋಪಾಲಕೃಷ್ಣಾ!

॥ ೧೨ ॥

"ಯಜ್ಞಾನ್ನವನು ದೇವರಿಗೆ ಅರ್ಪಿಸುತ್ತ
ಶೇಷಾನ್ನವನು ಮಾತ್ರ ಭುಜಿಸುವವರಂತೆ
ಪಾಪಗಳಿಂದಲೊ ಮುಕ್ತರಾಗುವರು ಅವರು
ಸಾಧುಸಜ್ಜನರವರೊ ಪ್ರಾಜ್ಞರವರು!
ಯಜ್ಞಾನ್ನ ನಿತ್ಯಾನ್ನದಡುಗೆಯನು ಮಾಡಿ
ಅದನುತ್ತರರಿಗೆ ಇಕ್ಕದೆಯೆ ತಾವೆ ಜಗದಿ
ಭುಜಿಸುವವರಲ್ಲೊ ಪಾಪವನೆ ಕಲಿಸಿ ತಾವು
ತಿನ್ನುವವರೆಂದೆನುತ ಭಾವಿಸೈ ಅದನು!

॥ ೧೩ ॥

"ಕರ್ಮಯೋಗದ ಫಲವೆ ಯಜ್ಞದಾಚರಣೆ,
ಯಜ್ಞದಿಂದಲೆ ಮೇಘವು ವರ್ಷಧಾರೆ,
ಮಳೆಯಿಂದಲೇ ಜಗದಿ ಕಾಳನ್ನ ಕೂಳು,
ಅನ್ನದಿಂದಲೆ ಭೌತಿಕ ಜೀವಿ ಬದುಕಲು;
ಕೇಳೆಂತೆನ್ನೆ ಹೇ ಪಾರ್ಥ ಯಜ್ಞದ ಪ್ರಭಾವ
ದೇವಾದಿಗಳ ತರ್ಪಣ ಪರಯೋಗ ಮಾರ್ಗ,"
ಎಂದೆನುತ ಹೇಳಿದನೊ ಪುಂಡರೀಕಾಕ್ಷಾ
ಕರ್ಮಯೋಗದ ಶಕ್ತಿ ಸೂಕ್ತಿಗಳನಿಲ್ಲಿ!

॥ ೧೪ ॥

"ಕರ್ಮವದರ ಉತ್ಪತ್ತಿ ಅದುವೆ ಪರಬ್ರಹ್ಮ-
ಕ್ಷಯವಾಗದಿಹ ಜೀವಾತ್ಮನೆ ವೇದಬ್ರಹ್ಮ,
ಸರ್ವೇಶ್ವರ ಮಾಧವ ದೇಹಕದೊ ಆತ್ಮಬ್ರಹ್ಮ,
ಯಜ್ಞ ಹೋಮಾದಿಗಳಿಗಿಹ ಮೂಲ ಬ್ರಹ್ಮ,
ಎಲ್ಲೆಡೆಯು ಹಬ್ಬಿಯಿಹ ನಿರಾಕಾರ ಶಕ್ತಿ
ವಿಶ್ವವನೆ ನಡೆಸುತಿಹ ಪರಬ್ರಹ್ಮ ಸೃಷ್ಟಿ,
ಪಾಲಿಸಲೆ ಅದುವೆ ಕೇಳ್ ಯಜ್ಞಾದಿಗಳಿಗೆ
ಮೂಲವೆಂದೆನಿಸುತಲಿ ಗೋಚರಿಸುವುದೈ!

॥ ೧೫ ॥

"ಇನಿತಿಹ ಪರಬ್ರಹ್ಮನಾ ವಿಶ್ವಚಕ್ರ —
ಅನುಸರಿಸದಿಹರು ಯಜ್ಞಾದಿಗಳನಾ
ನಿಷ್ಠೆಯಿಂದಾಚರಿಸದೀ ಲೋಕ ಜನರು
ಪಾಪಿಗಳು ಎಂದೆನಿಸುವರೊ ಅಂತೆ ನಿಜವು;
ಇಂದ್ರಿಯದ ಸುಖಲೋಲುಪತೆಯಲ್ಲಿ ಮುಳುಗಿ
ಲೋಕದಿ ನಿರರ್ಥಕವೊ ಜೀವನವ ನಡೆಸಿ

1265

ಕಡುವರುವರೆಗೂ ಸಹ್ಯಸಾಧಿ ಈ ಜನುಮ,
ಮನಸಿನತ್ತೊ ಬರಿದಾದ ಬಾಳ್ ಕದನದಿಂದ!

"೧೬"

"ಜೀವಾತ್ಮನಾ ಮೇಲ್ಮೈಯನು ಪ್ರೀತಿಸುತ್ತ
ಜೀವಾತ್ಮನಲಿ ನಿತ್ಯ ತೃಪ್ತನಾಗಿರುವ
ಜೀವಾತ್ಮನನು ನೆನೆದು ಸುಖಿಯಿಂದು ಎನಿಸಿ
ಜೀವಾತ್ಮನೇ ತನಗೆ ಭಾಗ್ಯವೆನಿಸಿ
ಇಹ ಮನುಜನಿಗೆ ಜಗದಿ ಮಾಡಲೇನಿಲ್ಲ
ಕಾರ್ಯವದು ಕರ್ಮವದೇನಂತು ಕೇಳ್ ಇಲ್ಲ,"
ಎಂದೆನುತಲಾ ಹರಿಯು ನುಡಿದನಾ ನರಗೆ
ಕರ್ಮಯೋಗದಾ ಒಂದು ಬಿಂದುವನು ಇಂತು!

"೧೭"

"ಆತ್ಮದಲಿ ಸಂತೃಪ್ತನಾಗಿಹನು ಇಹದಿ
ನಡೆಸಲಿಹ ಕರ್ಮದಲಿ ಹಿತವದೇನಿಲ್ಲವು,
ಕರ್ಮವನು ತ್ಯಜಿಸಿದೊಡೆ ದೋಷವದು ಇಲ್ಲ,
ತನಗೆ ಪ್ರಾಪ್ಯವಾ ವಸ್ತುವೇನ್ ಜಗದಿ ಇಲ್ಲ—
ಎಂದೆನಿಸಿ ನಿರ್ಲಿಪ್ತನಾಗಿಹನೊ ಅವನು
ಆತ್ಮಸುಖದಲಿ ಮಗ್ನನಾಗುತಲಿ ಇಹನು,"
ಎಂದು ಕಲಿಪಾರ್ಥನಿಗೆ ಆತ್ಮಗತ್ತ್ವಗಾನಾ
ಕೊಳಲೂದಿ ಹಾಡಿದೊಲು ಹೇಳಿದನೊ ಕೃಷ್ಣ.

"೧೮"

"ಕರ್ಮಫಲದಾ ಆಸೆಯನ್ನಿಡದೆ ನೋಡೆ
ನಡೆಸುತಿರೊ ಕರ್ಮವನು ನಿತ್ಯವಾ ಸಖನೆ,
ಕರ್ತವ್ಯವನು ನಡೆಸಿ ಫಲವದಕೆ ನಿತ್ಯ
ಕಾಯದೆಯೆ ಕರ್ಮನು ಸಾಕ್ಷಿಯು ಇರುವಾ
ಮಾನವನು ಪಡೆಯುವನು ಮೋಕ್ಷವನು ನಿಜದಿ,
ಅವನೆ ನಿಷ್ಕಾಮಿಯೆಂದೆನಿಸುವನು ಇಹದಿ,"
ಎಂದೆನುತ ಮನಮಾಂತು ಹೇಳಿದನೊ ಎಲ್ಲಾ
ಕರ್ಮಾಕರ್ಮದ ಗಹನವನೆ ಮತ್ತು ಆಸೆತಾ!

"೧೯"

"ಕೇಳ್ ಕರ್ಮನಿಷ್ಠರಹ ಜನಕನೇ ಮೊದಲು
ಕರ್ಮಯೋಗಿಗಳು ಎಂದೆನಿಸಿ ತಾವು
ಹಿಡಿದರೋ ಜ್ಞಾನವನು ಸಿದ್ಧಿಯನು ಅವರು;
ಕರ್ಮವು ಜೀವಿತದೊಳೆಯು ಕೇಳು ಅಂತು
ಲೋಕಸಂಗ್ರಹ ಮಹಿಮಾನ ಜ್ಞಾನವನು ಪಡೆಯೆ
ಇತರರನು ಸತ್ಕರ್ಮ ಮಾರ್ಗದಲಿ ಒಯ್ಯೆ

ಆಚರಿಸಲಿಕ್ಕೆ ಕರ್ಮಯೋಗವನು ಮುಂದಿದೆ 1266
ಸಂತೃಪ್ತ ಸಮೃದ್ಧಿಗಿದೆ ಮೂಲ ನೋಡಿತ್ತೆ!

" ೨೦ "

"ಅನುಕರಣೆಯು ಲೋಕವಿದರಲ್ಲಿ ನೋಡಾ
ಹಿರಿಯರ ಪ್ರಭಾವಿತರ ರೀತಿಗಳನೆಲ್ಲ;
ಜನವು ಅದನನುಸರಿಸಿ ನಡೆಸುವರು ನಿತ್ಯ
ನಂಬುತಲಿ ಬಲ್ಲಿದರ ನೀತಿಗಳನೆಲ್ಲ;
ಪಾಲಿಸುವರಂತೆಯೇ ಮತಿಗೆಟ್ಟಿರುವ ಜನವು
ಇದೆ ಪರಂಪರೆಯೆನಿಸಿ ಸಾಗುತಿದೆ ಇರವು.
ಅಂತಿರಲು ಕರ್ಮವದು ನಿತ್ಯವೂ ನೋಡಾ
ಅನುಕರಣೆ ಅನುಸರಣೆಯೊಳಿದೆ ಎನಗೆ ಧರ್ಮಾ!

" ೨೧ "

"ಲೋಕವಿದು ಮೂರರಲು ಆನ್ ನಡೆಸುವಂಥ
ಕರ್ತವ್ಯವದಾವುದು ಇಲ್ಲ ಅರ್ಜುನನೆ ಕೇಳು,
ಆನ್ ಪಡೆಯಲಿಹುದಿಲ್ಲ ಲಭಿಸದೇನಿಲ್ಲಾ
ಎಲ್ಲವನು ಪಡೆದಿಹೆನೊ ಹೇಳಲಿಕ್ಕೆ ಮಿತ್ರಾ,
ಆನಿತಾದೊಡೆಯು ನಾನು ಜನಕೋಟಿಯಂತೆ
ಕರ್ಮದಲಿ ಕರ್ಮಾಚರಣೆಯಲಿ ನಿಜದೆ
ನಿರತನಹೆನು ಇರುತಿಹೆನು ನಡೆಯುತ್ತಲಿಹೆನು,"
ಎಂದೆನುತಲಾ ಹರಿಯು ಹೇಳಿದನೊ ಹದನು!

" ೨೨ "

"ನಿತ್ಯವೂ ತಿರುತಿರುಗುವ ವಿಶ್ವಚಕ್ರ
ತಿರುಗಿಸುತಲಿಹ ನಾನು ಕ್ಷಣಕಾಲ ಮಾನ
ತಾಳುತಲಿ ಬೇಸರದಲಿ ಕುಳಿತರದೊ ಕೇಳು
ಕರ್ಮವನು ನಡೆಸದೆಯೆ ಇರ್ದೊಡೀ ಜಗದ
ಮಾನವರು ಎನ್ನನೇ ಅನುಸರಿಸಿ ಅಂತೆ
ಧರ್ಮ ವಿಧದಲಿ ಎಲ್ಲ ನಿಶ್ಚಿಂತೆಯಲಿಂತೆ
ನಿಷ್ಕ್ರಿಯರಾಗೆ ಕೇಳು ಉಹಿತಮೋಲೋಕ
ದಿಗ್ಭ್ರಾಂತಗೊಂಡ ಜನ ಜೀವಿಗಳು ನರಕಾ!"

" ೨೩ "

ಎಂದು ಗೋವಿಂದ ಧನಂಜಯನಿಗಿದನಂತು
ಹೇಳುತ್ತಲಿ ಕರ್ಮವದೇನೆಂದನರುಹೊ ತಾನು: —
"ಆನ್ ಕರ್ಮವನ್ನೆಸಗದಿರ್ದೊಡೆಯು ಲೋಕಾ
ಕೆಡುವುದದು ಕೇಳ್ ಅದುವೆ ಇನ್ನೊಂದು ನರಕಾ;
ಅಂತಾದೊಡೆಯು ಜಗದಿ ಮುಂದಾಗಲಿಹುದಾ
ಆನ್ ವರ್ಣಸಂಕರ್ಯಕೆಡೆಗೊಟ್ಟಂತಿರಲಾ

ಭೂತಲದಿ ಜನಗಳನು ಕೇಳ್ಕೆಡಿಸದಂತೆ
ಆಗುವುದು ನೋಡೆಲೈ ಇದೆ ಜಗದ ಚಿಂತೆ!

"೨೫"

"ಎನಿಸಲು ಜೀವಾತ್ಮನು ಇರುವನಂತು
ಅರಿಯದಿಹ ಅಜ್ಞಾನಿಗಳು ನಿತ್ಯಕರ್ಮ
ನಿಷ್ಠೆಯಿಂದಾಚರಿಸುವೊಲು ಕೇಳೆಲೊ ಇಲ್ಲಿ
ಫಲಕಾಂಕ್ಷೆಯನ್ನಿಡದ ವಿರಕ ಕರ್ಮಯೋಗಿ
ಲೋಕವನು ಒಂದಾಗಿ ಕಟ್ಟಲೆಂದೆನುತಾ
ಉತ್ಸಾಹದಲಿ ಪ್ರೀತಿಯಲಿ ಕರ್ಮವನ್ನು
ನಡೆಸಿ ಮುನ್ನಡೆಸುತಲಿ ಇರಬೇಕೆಂ"ದೆನುತ
ಹೇಳಿದುದೆ ಕರ್ಮಯೋಗದ ಒಂದು ಅಂಗ!

"೨೬"

"ಅವಿವೇಕದಲಿ ಕಾಮ್ಯ ಕರ್ಮಗಳಲಂತು
ನಿರತರಾಗಿಹರನ್ನು ಜ್ಞಾನಿಗಳು ಅರಿತು
ಕರ್ಮವನು ಸಾಧಿಸುವದಕಿಂತಲೂ ಬೇರೆ
ಮೋಕ್ಷದಾ ಸಾಧನೆಗೆ ದಾರಿಯಿಹುದೆನುತ
ಮನವನ್ನು ಕದಡಿಸದೆ ಕರ್ಮಗಳನೆಲ್ಲ
ನಡೆಸುತ್ತಲಿ ದಿನನಿತ್ಯ ನಿಷ್ಠೆಯಲಿ ಎಲ್ಲ
ಪಾರಮಾರ್ಥಿಕ ವಿಧವನನುಸರಿಸುವಂತೆ
ಶ್ರಮಿಸುವುದೆ ಹಿತವದು ಕೇಳೆಲೈ ನರನೆ!

"೨೭"

"ಸತ್ವ ರಾಜಸ ತಮೋಗುಣಾವು ಪ್ರಕೃತಿಯು
ಕರ್ಮ ವ್ಯವಹಾರಗಳು ನಡೆಸುತಿಹುದೆಂಬ
ಕರ್ಮಯೋಗ ರಹಸ್ಯವನು ತಿಳಿಯದಿಹದೆ
ಅಜ್ಞಾನಿ ತಾನ್ ದೇಹವಿದು ಆತ್ಮವೆನುತೆ
ಭ್ರಮೆಯಾಗಂತು ತಿಳಿಯುವನು ಕರ್ತೃವೆ ಅಹಂಕಾರ
ಹುಟ್ಟಿಗದು ಪ್ರಕೃತಿಯನರಿಯದ ಅವಿಚಾರ,"
ಎಂದೆನುತ ವಸುದೇವಸುತನಂದನದನೆ
ಮುಂದುವರಿದಾ ಕರ್ಮದಾ ಗಹನವನ್ನೆ!

"೨೮"

"ಅರಿತಿರುವ ಪಾರ್ಥ, ಗುಣತ್ರಯವದನು ಅರಿತಾ
ಹುಟ್ಟಿಗದಾ ಪ್ರಚೋದಕವದುವೆ ಕರ್ಮ
ಪ್ರಕೃತಿಯು ಬೇಹಾರದಲಿ ಲೋಕ ಜೀವಾ,
ಎಂಬುದನು ಬಲ್ಲವನೆ ಜ್ಞಾನಿಯೆಂದರಿಯಾ!
ಅಂತಿಹ ನಿರಹಂಕಾರಿಯೇ ಕರ್ಮಯೋಗಿ,
ಕರ್ಮಫಲಕನುವಾಗಿಯೇ ಬಾಳ್ವ ನೀತಿ,

ನಿಯಮವ ಮದನರತಿವನಿಯೊ ನಿರಹಂಕಾರಿ
ಕರ್ಮಯೋಗಿಯು ಅವನೆ ಜಗದೆ ಸುವಿಚಾರಿ!

॥ ೧೮ ॥

"ಸತ್ವ ರಾಜಸ ತಮೋಗುಣಗಳನು ನೆಚ್ಚಿ
ಪ್ರವೃತ್ತಿಗುಣಗಳು ಕರ್ಮನರಿಯುದೆಂದು ಅಲ್ಲಿ,
ಕರ್ಮಾಭಿಮಾನದಲಿ ಜೀವಿಸುತಲಿಹರು
ಜ್ಞಾನ ಪರಿಪೂರ್ಣತೆಯು ಪಡೆಯದಿಹ ಜನವು!
ಆ ನೀತಿಹರ ಮನವನ್ನು ಕದಡಿಸದೆ ಕೇಳು
ಕರ್ತವ್ಯ ಭ್ರಷ್ಟರನ್ನಾಗಿಸದೆ ಅವರಾ
ಇರುವುದೆ ಯೋಗವು ಸರಿ ಸ್ವಧರ್ಮವನು ಅರಿತ
ಪರ ಆತ್ಮಜ್ಞಾನಿಗಳಿಗಿಹದಲ್ಲಿ ನಿರುತಾ!

॥ ೧೯ ॥

"ಕೇಳಿಲ್ಲಿ ಪಾರ್ಥ, ನೀನು ಸತ್ಕರ್ಮಗಳನಾ
ಅಧ್ಯಾತ್ಮದಾ ಜ್ಞಾನಬಲದಿಂದ ನಿತ್ಯ
ಎಸಗುತಲಿ ಅದನ್ನೆನಗೆ ಅರ್ಪಿಸಿ ಮಿತ್ರಾ
ಕರ್ಮಾಕರ್ಮಗಳಲ್ಲಿ ಆಸೆಯನು ಬಿಡುತ,
ಸಾಧನೆಗಳವು ಸರ್ವ ತನ್ನಿಂದಲೆಂಬಾ
ಮಮಕಾರ ಅಹಂಕಾರವನು ಬಿಟ್ಟು ಎಲ್ಲಾ,
ನಿಶ್ಚಿಂತನಾಗಿ ನಿಂತು ನಿರ್ಮಮತೆಯಿಂದ
ಕಾದಲೆಂದೆದ್ದೇಳು, ಕ್ಷಾತ್ರಕುಲ ವೀರಾ!

॥ 20 ॥

"ಆರಿನ್ನು ಮತ ಸ್ವಧರ್ಮವನು ಪಾಲಿಸುತ್ತ,
ಅಂತರದೆ ಇರ್ದೊಡೆಯು ಶ್ರದ್ಧೆಯನು ಇರುವಾ,
ನಂಬುವರದಾರಿನ್ನ ಅವರಿಯುತನೆ ನಿರುತಾ
ದೋಷವನು ಕಲ್ಪಿಸದೆ ದ್ವೇಷವನು ಇಡದಾ
ಸುಮತಿಗಳಾದೆ ಲೋಕದಲಿ ಒಪ್ಪಾಗಿ ಬಾಳ್ವ
ಜನಗಳವರು ಕರ್ಮಫಲದಾ ಕಟ್ಟಿನಿಂದಾ
ಮುಕ್ತರಾಗುವರೆಂಬುದನು ತಿಳಿಯೊ ನರನೆ,
ದೈವ ವಿಧಿಯಲಿ ಶ್ರದ್ಧೆಯದೆ ಶ್ರೇಷ್ಠ ಇಹದೆ!

॥ ೨೧ ॥

"ಈ ನನ್ನ ನುಡಿಗಳನು ಆಲಿಸದೆ ಇದ್ದು
ಮತ್ಸರದೆ ಮತವನ್ನ ಪಾಲಿಸದೆ ಅಂತು
ಹಿತವಾಣಿಯನು ಅನುಸರಿಸದಿಹರು ನಿಜದಿ
ಅಜ್ಞಾನಿಗಳು ಮೂಢರೆಂದೆನಿಸಿಹರದೆ —
ಅವಿವೇಕಿಗಳು ಅಧಮರೆಂದವರು ನಿತ್ಯ
ನರಳುವರು ಕಷ್ಟದಲಿ ತೋರದೆಯೆ ದಿಸೆಯಾ" —

ಎಂದೆನುತಲಾ ಕೃಷ್ಣ ಹೇಳಿದನು ಜಗದ
ರೀತಿಯನು ನೀತಿಯನದೆಂತೆಂದು ಆಗ!

" ೨೧ "

"ಪ್ರಕೃತಿಯು ವಿಷಯಗಳಿಗನುಸಾರವಾಗಿ
ಜ್ಞಾನಿಗಳು ವರ್ತಿಸುವರು ಪ್ರಾರಬ್ಧದ ಬಲದಿ,
ನೆಲ ಜಲಗಳ ಜೀವಿರಾಶಿಯುವು ಎಲ್ಲಾ
ಪ್ರಕೃತಿಯನನುಸರಿಸಿ ಬಾಳುವುವು ನೋಡಾ,
ಇಂದ್ರಿಯಗಳನು ಕಟ್ಟಿ ಹಿಡಿವುದು ಜಗದಿ
ಶಾಸ್ತ್ರಗಳ ನಿರ್ಬಂಧಗಳು ಆವಕಡೆ ವರೆ?
ಮಾನವನ ಬುದ್ಧಿಗಳಾದಾ ಮಿತಿಯನರಿತು
ಸಾಗುತಿವೆ ಭೂತಗಣವೀ ಜಗದಿ ಇಂತು!

" ೨೨ "

"ಜ್ಞಾನ ಕರ್ಮೇಂದ್ರಿಯಗಳಿರುತಿರಲು ಅಂತು
ನಡೆನುಡಿಗೆ ಅನುವಾಗಿ ಹಲತರದ ಗುಣವು
ಅನುರಾಗ ದ್ವೇಷಗಳು ಸುಖದುಃಖದೊಲವು
ಒಡಗೂಡಿ ಮನವನ್ನು ಕಾಡುವುದು ನೋಡೊ!
ಅಂತಾಗಲವು ವೈರಿಗಳು ಜೀವಾತ್ಮನಿಗೆ
ವಶವಾಗದಿರು ಅದಕೆ ಮಾನವನು ಮನದಿ
ಇಂದ್ರಿಯದ ಸಂಯಮವನವನೆ ಸಾಧಿಸುತ್ತ
ಇದ ನೋಡದೆ ಆತ್ಮಸುಖವೆಂದೆನಿಸಿ ಮಿತ್ರ!

" ೨೩ "

"ಧರ್ಮಗಳು ಸ್ವ-ಪರಗಳೆಂದು ಇರೆ ಪಾರ್ಥ
ಸ್ವಧರ್ಮವಾ ಹಳಿದು ಪರಧರ್ಮವನ್ನು
ಪಾಲಿಸರೆ ಮತಿದ್ರೋಹವದುವೆಂದು ಎಣಿಸು!
ಅರಿತವಾ ಸ್ವಧರ್ಮ ಎಂದೊಡದು ಅಂತು
ಕ್ಷಾತ್ರಕುಲ ಧರ್ಮವೆ ಸ್ವಧರ್ಮವೆಂದೆನಿಸಾ,
ಸಮರದಲಿ ಹೋರಾಡೆತ್ತು ಕ್ಷತ್ರಿಯು ವೀರಾ!
ಧರ್ಮವನು ಪೊರೆಯು ಕೇಳ್ ಸಾಯುವುದೆ ಮೇಲು,
ಪರಧರ್ಮವದುವು ಭಯಕಾರಣವು ನಿಜವು!"

" ೨೪ "

"ಹೇ ಪುಂಡರೀಕಾಕ್ಷ, ಹೇಳೈ ನೀನ್ ಇಂತು
ಮನೋಯೋಗದಾ ರಹಸ್ಯವನೆ ಇಂದು ನಿಂದು;
ಮಾನವರು ತಮಗೊಲ್ಲದಿಹ ಪಾಪವನ್ನು
ಪಲತರ ದುರಾಚಾರಗಳನೇಕೆ ಅವರು,
ಪ್ರೇರಣೆಯು ಹೀನ್ ಬಲಾತ್ಕಾರವದು ವನ್ನೆ
ಆರವರನಾ ಬಗೆಯು ಪಾಪಗಳನಂತೆ

ಎಸಗಲು ಪ್ರೇರಿಪರಾರಿಂದು ಹೇಳೆನ್ನೆ,
ಹೇ ಜನಾರ್ದನನೆ, ಅದನರಿಯಲಿಚ್ಛಿಸುತಿಹೆನು!"

॥ ೩೭ ॥

ಆ ಅರ್ಜುನನ ಕೋರಿಕೆಯನಾದರದಿ ಹರಿಯು
ಆಲಿಸುತಲಿಂತೆಂದನತಿ ವಿಶದವಾಂತರ:—
"ಪಾರ್ಥನೇ ಕೇಳಿದುದು ಅನುಭವಿಸದ ಪಾಪ
ಉತ್ಪತ್ತಿಯು ಮನದಲ್ಲಿ ಕಾಮಾದಿಗಳಿಂ;
ಉದ್ರೇಕಿಸುವುದೀ ಮನ ವೈರಿಗಳನು,
ರಾಜಸಗುಣಗಳಿಂ ಜನಿತವಹ ಕಾಮವನು;
ರಾಕ್ಷಸ ತಮೋಗುಣಗಳಿಂದ ನಿಲಿಸೆ ಮನದಿ,
ತಮೋಲ್ಬಣಗಳೀ ವೈರಿಯೆಂದರಿ ಜನದಿ!

॥ ೩೮ ॥

"ಧೂಮದಿಂದಲು ಬೆಂಕಿಯನೆ ಕವಿಯುವುದ ತೆರದಿ
ದೂಳು ಮುಸುಕಿ ಕನ್ನಡಿಯನು ಕೊಳೆಯಾದಂತೆ
ಗರ್ಭಕೋಶವು ಗರ್ಭವನು ಮುಚ್ಚುವಂತೆ
ಆವರಿಸುವುದು ಮನವನಾ ಕಾಮ ಚಿಂತೆ!
ಜ್ಞಾನವನು ವಿಷಯ ಭೋಗವು ಕವಿದು ನೋಡೆ
ಕ್ರೋಧವಾ ಬುದ್ಧಿಯನು ಕೆಡಿಸುವುದು ನಿಜವು;
ಮನವ ಮರುಳುಗೊಳಿಸಿ ವಿರಿಯೆಂತು ಪಾಪವು,
ಹೇ ಧನಂಜಯ ಮನದ ಶತ್ರುಕದ ಇರವು!

॥ ೩೯ ॥

"ಇಂಧನಗಳಿಂದಗ್ನಿಯನು ಉರಿಸಿದ ತೃಪ್ತಿ
ಮತ್ತೆ ತೃಪ್ತಿ ಇಂಧನವು ಬೇಕಾಗುವಂತೆ
ಕಾಮಾದಿ ಅಗ್ನಿಯನು ಆದಿಜ್ಞಾನವೆಂಬ
ಇಂಧನದಿ ಉರಿಸಿದರೂ ಅಂತ್ಯ ಕಾಮ
ಮೇಲಿದರು ತೀರದು ಮತ್ತೆ ವೈರಿ ಮನಕೆ;
ಜ್ಞಾನವನೆ ಆವರಿಸಿಹುದು ಕಾಮ ನೋಡೆ
ಮೋಹ ಕಾಮಾದಿಗಳ ವಿಷಯಗಳೆ ಕಟ್ಟು,
ಕಟ್ಟುವುದು ಬಿಗಿಸುವುದು ಜೀವನದ ಗಂಟು!

॥ ೪೦ ॥

"ಪಂಚೇಂದ್ರಿಯವು ಮನವು ಬುದ್ಧಿಯು ಸೇರಿ
ಕಾಮವದರಾಶ್ರಯವನೀಯುವುದೊ ಹರಿ!
ಕಾಮವದು ಮೋಹವದು ಹಲವಾರು ರೂಪ
ಜ್ಞಾನವನು ತಳ್ಳಿ ಕಡ್ಡಿ ತೇಲುತಿಹ ಹೆಪ್ಪು;
ಜ್ಞಾನವನು ಬುದ್ಧಿಯನು ಮರೆಸುತ್ತಲಿದಂತೆ
ದೇಹಿಯನು ಮೋಹಿಯಂತಾಗಿಪುದು ನೋಡು;

1271

ಆದುದರಿ ಕಡೆಗೋಳಿಸುತ್ತಿಹ ಬಾಳುವೆಯು ಮೂಲ,
ಸವಿರುವದಕಂತು ಅದೆ ಕಾರಣವು ಮಿತ್ರಾ!

॥ ೪೦ ॥

"ಅರ್ಜುನನೆ ಕೇಳಿಲ್ಲಿ, ಅಂತಿರಲು ಬದುಕಲಿ,
ಇಂದ್ರಿಯಗಳನು ಅಡಗಿಸಲು ಶ್ರಮಿಸು ಮೊದಲು;
ಪಾಪಿಯೆ ನೀನದರಿಂದ ಸಂತೃಪ್ತಿಯನು,
ಆತ್ಮಸ್ವರೂಪದಿದ್ಧ ಜ್ಞಾನವನು ಅಂತು;
ಜ್ಞಾನವದನಾ ಬುದ್ಧಿ ಸಿದ್ಧಿಯನು ಎಲ್ಲಾ
ಸವಿಚಾರ ಸಮರ್ಥನವದನೆ ಕೆಡಿಸೆ ನೋಡಾ,
ಪಾಪಕಾರಿಯತಕವೊ ಕಾಮ ಇಷ್ಟ್ವರಿಗಳವೊ,
ಶ್ರಮಿಸಿಲ್ಲಿ ಹೋ ಪಾರ್ಥನವನೆ ಎನಗಿಷ್ಟ ಪ್ರಾರ್ಥ!

॥ ೪೧ ॥

"ಕೆಡಿಸುವವು ಬುದ್ಧಿಯನು ಜ್ಞಾನವನು ನಿಜವೊ,
ವಿಷಯೇಂದ್ರಿಯಗಳಿಂದ ತಿಳಿದಿಹರು ಜನವೊ!
ಇಂತಿರಲು ಕೇಳಿಲ್ಲಿ ಮನವಿದುವೆ ಮುಖ್ಯ
ಮನೋಬಲಕಿಂತಲಾ ಬುದ್ಧಿಯೆ ಪ್ರಧಾನ!
ಬುದ್ಧಿಯು ವಿವೇಕಗಳ ಮೀರಿಹುದೆ ನೆನೆಯಾ
ಜೀವಾತ್ಮವೆಂಬುದನು ಮರೆಯದಿರೊ ಮಿತ್ರಾ!
ಆತ್ಮವದನರಿಯುವುದೆ ಜ್ಞಾನಿಗಳ ಗುರಿಯು,
ಗೀತಾ ಸಂದೇಶವಿದ್ದೆ," ಎಂದನಾ ಹರಿಯು!

॥ ೪೨ ॥

"ಹೇ ನರನೆ ತಿಳಿಯಿಲ್ಲಿ, ಕಾಮವು ದುರ್ಜಯವೊ,
ಬುದ್ಧಿಯನು ಜ್ಞಾನವನು ಮೀರಿಹುದು ಅದುವೊ!
ತಡೆ ಮನೋವ್ಯಾಧಿಯನು ಬುದ್ಧಿಬಲದಿಂದಾ
ಬೆಳೆಸಿಲ್ಲಿ ಜ್ಞಾನವನು ಆತ್ಮಬಲದಿಂದ!
ಆದರಿಸಿ ಪ್ರಯತ್ನಿಸಿ ಆಜೀವ ಮಹ ಕಾರ್ಯ
ಇಂದ್ರಿಯವ ನಿಗ್ರಹಿಸಿ ವಿಷಯಗಳ ಜಯಿಸಾ;"
ಎಂದೆನುತಲಾ ಹರಿಯು ಪೇಳಿದನು ಇಲ್ಲಿ
ಕರ್ಮಯೋಗ ರಹಸ್ಯ ಬಿಡಿಸುತಾಗಳಿಲ್ಲಿ!

॥ ೪೩ ॥

(ಮೂರನೇ ಅಧ್ಯಾಯವು ಸಂಪೂರ್ಣವು)

1272

ಅಧ್ಯಾಯ ೪ — ಜ್ಞಾನಯೋಗ!

"ಹೇ ಪುರಾತನಯ ನೀನ್ ಕೇಳುತ್ತಿ ಇಂದು
ಯೋಗದಾದಿಯ ಅನಾದಿ ಕಾಲದಿ ನಿಂದು,
ಆನ್ ಕರ್ಮಯೋಗದ ರಹಸ್ಯವನು ಸಹಜದಿ
ಬೋಧಿಸಲು ಸೂರ್ಯನಿಗೆ ಆ ರವಿಯು ಅದನು
ಮಗನಾ ಮನು ವೈವಸ್ವತನಿಗದನು ಹೇಳಿ
ಮನುವು ಅಂತೆಯೇ ಪೇಳ್ದ ಇಕ್ಷ್ವಾಕು ನೃಪನಿಗೆ,
ಸೂರ್ಯಕುಲದಾ ಮೂಲ ಕ್ಷಾತ್ರಕುಲ ವೀರ,"
ಎಂದನು ಶ್ರೀಕೃಷ್ಣ ನಂದನಂದನ ದೇವಾ!

॥ ೧ ॥

"ಉಪದೇಶದಾ ಧ್ಯೇಯವನು ಗಮನಿಸುತ್ತ
ನುಡಿಗಳು ಪರಂಪರಾಗತವಾಗಿ ಬರಲ್
ನಿಮಿ ಅಜರು ಮೊದಲಾದ ನೃಪವರರು ಅದನು
ತಿಳಿದಿರುವರಂತು ಬಹು ಕಾಲವದು ಅಂದೇ;
ಯೋಗಶೀಲವು ಉರುಳಲು ಸಂದೇಹವಿಲ್ಲ
ಲೋಕದಲಿ ಉಳಿಯದೆಯೇ ಅಳಿಯುತಿರೆ ಕೇಳಾ
ಜನಕೋಟಿಗದು ನಷ್ಟವೆಂಬಂತೆ ಕೆಟ್ಟು
ಹಳಗಾಲದಾ ಕಾರ್ಯವೆ ವ್ಯರ್ಥವೆನಿಸಿತ್ತು! —

॥ ೨ ॥

ಎಂದನುತ್ತ ಗೋವಿಂದನಿಂತೆಂದನಂದು
ಕುರುಕ್ಷೇತ್ರದಲಿ ತನ್ನ ಮಿತ್ರನಿಗೆ ಇಂತು! —
"ಹೇ ಪಾರ್ಥ ನೀನೆನ್ನ ಭಕ್ತನಿಹೆ ಕೇಳಿತ್ತೆ
ಸಖ ನೀನು ವೀರ ಬಹುಮುಖ ಧೀರನಿರುವೈ;
ಹೇಳಿದೆನು ಹಳಗಾಲದಾ ಸೂಕ್ತಿಗಳನಾ
ಕರ್ಮಯೋಗದ ಗುಟ್ಟು ಗಹನವದನೆಲ್ಲಾ;
ತಿಳಿಯೊಲ್ವೆ ಮಹತ್ತ್ವಪೂರ್ಣಗಳು ಗಾಢವೆನ್ನ
ಮುಮುಕ್ಷುವರರೆ ಅರಿಯದ ರಹಸ್ಯವದು ಕೇಳಾ!"

॥ ೩ ॥

"ಹೇ ಕೃಷ್ಣ ಮನನವೆ? ತಿಳಿಯೆ ಆನ್ ಇದನಾ
ಇಂದಿಪ್ಪ ಎದುರಲಿಯಾ ನೀನಿಂತು ಆಗ
ಹುಟ್ಟಿದೆಯೆಂದೆನ್ನುವಿಯು? ಎಂತಿತ್ತೆ ಪೇಳಾ,
ಕೇಳ್ ಮನ್ವಂತರಗಳಿಗೂ ಹಿಂದೆಯೇ ಎಂತಾ?
ಸೂರ್ಯನಿಗೆ ಯೋಗಾಗಿ ವಿವರಗಳನಿಂತು
ಉಪದೇಶಿಸಿದೆಯೊ ನೀನ್ ಹೇಳೆನ್ನ ಅದನು!

ನೀನರಿದುದನು ಇಂದು ನಂಬುವುದು ಎಂತು?" 1273
ಎಂದೆನುತಲಾ ಪಾರ್ಥ ಪ್ರಶ್ನಿಸಿದನಂದು!

" ೪ "

ವಸುದೇವಸುತನದನು ಆಲಿಸುತಲಾಗ
ಹೇಳಿದನಿಂ ಅರ್ಜುನಗೆ ಪರಜ್ಞಾನಯೋಗ—
"ಕೇಳೆಲೈ ಪಾಂಡವನೆ ಸೂಕ್ಷ್ಮವಿದನಿಂದು,
ಕಳೆದು ಹೋದುವು ಎಷ್ಟು ಜನ್ಮಗಳು ಅಂತು;
ಯುಗಯುಗಗಳೊಡನೆ ನಾವು ಹುಟ್ಟಿಹೆವು ಕೇಳಾ
ತಿಳಿದಿಹೆನು ಆನ್ ಎನ್ನ ಹುಟ್ಟುಗಳನೆಲ್ಲಾ;
ತಿಳಿಯೆ ನೀನ್ ಅವುಗಳನು ಅದೆ ನಮಗೆ ಭೇದಾ
ಭೇದವದರೊಡೆಯೆದ್ದ ತರ್ಕ ಇಂತು ವಾದ!

" ೫ "

"ಜನ್ಮವಿದೇನಿಲ್ಲದೆಯೆ ಜನಿಸುತಿಹೆನಿಹದಿ,
ನಾಶವನು ಹೊಂದದೆಯೆ ಅವಿನಾಶಿ ಇಹೆನೈ;
ಭೂತಗಣ ರಕ್ಷಕನು ಆನಿಹೆನು ಕೇಳಾ
ಪ್ರಕೃತಿಯನು ಸ್ಥಿತಿಗತಿಗಾಧಾರನಿಹೆ ನಿತ್ಯ;
ಸರ್ವರತಿಯೆನಿಲಯ ಈಶ್ವರನು ನಾನೈ
ನನಗಿಷ್ಟದಾ ಕಾಲದಲಿ ಆಗಿಂದಾಗ್ಯೆ
ಅವತರಿಸುತಿಹೆ ನಾನು," ಎಂದೆನುತ ಹರಿಯು
ಹೇಳಿದನು ನಾನಾರು ಎಂಬುದನು ಅಂದು!

" ೬ "

"ಆವಾವ ಕಾಲದಲಿ ಧರ್ಮವದು ಅಳಿದು
ಪಾಪಿಗಳು ಪಿಚಾರ್ಗವವೊ ನೋಡೆನ್ನನಂದು!
ಧರ್ಮವನು ಮರ್ದಿಸುತಿಹ ಶಕ್ತಿಗಳು ಕೂಡೆ
ಅಧರ್ಮವೆ ತಲೆಯೆತ್ತುವುದು ಜಗದಲ್ಲಿ ನಿಜವೈ!
ಅಂತಿರಲು ಕಾಲದಲಿ ಕಾಲಕಾಲದಂತೆ
ನನ್ನನೆ ನಾನ್ ಸೃಷ್ಟಿಸುವೆ ಹುಟ್ಟುವೆನು ನಾನೆ!
ಅಲಿಯಿಸುವೊ ಆಕಾರ ವಿವಿಧತೆಯ ಸಾರ
ನನ್ನನೆ ನಾನ್ ತೋರುತಿಹೆ ಅದುವೆ ಅವತಾರ!

" ೭ "

"ಎಲೆ ಪಾರ್ಥ ಕೇಳೆಲೈ ಹುಟ್ಟುತಿಹೆ ನಾನು,
ಶಿಷ್ಟ ಜನ ರಕ್ಷಣೆಗೆಂದೀ ಜಗದಿ ನೋಡು,
ದುಷ್ಟರ ವಿನಾಶವದನೆಸಗಲೆಂದಂತು
ಧರ್ಮವನು ಲೋಕದಲಿ ನೆಲೆಗೊಳಿಸಲೆಂದು
ಎತ್ತುತಿಹೆನವತಾರ ನಿಜವದೈ ಮಿತ್ರ
ಯುಗಯುಗದಲಾವರಿಯೆ ಹುಟ್ಟುತಿಹೆ ಕೇಳಾ;

ಅದೆ ದೈವಮಾಯೆ ಕೇಳ್ ಅದುವೆನ್ನ ಲೀಲೆ 1274
ಲೋಕಗಳ ಕಾಯ್ವ ಬಗೆ ಕರ್ತೃವಾಗಿ ಬಲ್ಲೆ!

॥ ೮ ॥

"ಎಲೆ ಸವ್ಯಸಾಚಿ ನೀನ್ ಕೇಳೆನ್ನ ಸತ್ಯ
ಸ್ತನರಾವತಾರಗಳು ದೈವಬಲದಿಂದ
ತಿಳಿಯುವವನಾರಿಹನು ಅವನಿಯೊಳ್ ನೋಡು
ಕಾಯುವವನು ತೋರಿದನು ಸ್ವಜನ್ಮವನು ತಾನು
ಬಿಡುವುದೆಯೆ ಬಲವಂತ ಸೇರುವನು ನನ್ನ,
ವಿಶ್ವವಿದರಾ ನಿಯಮವಿದನಂತು ಅರಿತಾ
ಭಕ್ತಜನವೀ ಜಗದಿ ಬಾಳುವರು ನಿರುತ
ದೇವವಿದ ನೆಲೆಯಲ್ಲಿ – ಅದೆ ಲೋಕಸತ್ಯ!

॥ ೯ ॥

"ಭಯ ಕ್ರೋಧ ಮದವನ್ನು ತ್ಯಜಿಸಿದಾ ಜ್ಞಾನಿ,
ಕಾಮ ಮತ್ಸರ ಲೋಭಗಳ ಜಯಿಸಿ ಯೋಗಿ
ಜಿತತಪಾದಿಗಳಿಂದ ನಿತ್ಯವೂ ನನ್ನ
ಸಂಭ್ರಮದಲಿ ಪೂಜಿಸುತ ಲಕ್ಷ್ಮಿ ಅವರು ಕೇಳು
ಮನೋಬಲದಾ ಸಾಧನೆಯು ನಿತ್ಯ ಗಳಿಸಿ
ಬುದ್ಧಿ ಸಿದ್ಧಿಯ ಸಾತ್ವಿಕ ಶುದ್ಧಿಯೊಡೆ ಫಲಿಸಿ
ದೊರೆಯುವವರು ಮೋಕ್ಷವನು ದೇವವಿದ ಬಯಸಿ
ಸೇರುವರು ನನ್ನನಾ ಪರಲೋಕದಲ್ಲಿ!

॥ ೧೦ ॥

"ಯಾರು ಯಾವ ರೀತಿಯಲಿ ನನ್ನ
ಪೂಜಿಪರೊ ಧ್ಯಾನಿಪರೊ ಅದರಂತೆ ಅವರಾ
ಅನುಗ್ರಹಿಸುತಿರುವೆ ಇದ ನಿಜವರಿತು ಕೇಳು
ಭಕ್ತವರರೊ ನನ್ನ ಶತ್ರುಗಳೊ ಅವರೆಲ್ಲ
ಅನುಸರಿಸುವರು ನನ್ನ ಮಾರ್ಗವನೆ ಅವರು
ಆರಾಧಿಪರೊ ನನ್ನನೇ ನಿತ್ಯ ಅವರು,"
ಎಂದೆನುತ ಭಗವಂತ ಪಾರ್ಥನಿಗೆ ಅಲ್ಲಿ
ಹೇಳಿದ ಉತ್ಕೃಷ್ಟ ಲೋಕೋತ್ಕೃಷ್ಟಗನುವಾಗಿ!

॥ ೧೧ ॥

"ಕರ್ಮವನು ಕರ್ಮದಾ ಸಿದ್ಧಿಗನುವಾಗಿ
ಎಸಗುತಲಿ ಮಾನವರು ಪೂಜಿಪರೊ ಜಗದಿ;
ವಿವಿಧ ವಿಧಿಗನುವಾಗಿ ಆರಾಧಿಸುವರೊ
ವಿವಿಧ ದೇವತೆಗಳನು ಶ್ರೇಷ್ಠಗಳನಂತೆ;
ಕರ್ಮಗಳಿಗೀ ಮರ್ತ್ಯಲೋಕದಲಿ ಕೇಳು
ಕ್ಷಿಪ್ರದಲಿ ಸಿದ್ಧಿಯುಂಟಾಗುವುದು ತಿಳಿಯಾ,"

ಎಂದೆನುತ ಶಾಂತವಾಗಿ ಪೇಳಿದನೊ ಮುದದಿ
ಶ್ರೀಕೃಷ್ಣನಾ ಸಮರಭೂಮಿಯಲಿ ನೋಡಿತ್ತೆ!

॥ ೧೧ ॥

"ಆನ್ ಸೃಷ್ಟಿಸಿದೆನೊ ಚಾತುರ್ವರ್ಣ್ಯಗಳನ್ನೊ
ವಿವಿಧ ಗುಣಕರ್ಮವರ್ತನನನುವಾಗಿ ಆದಿಸಂದದೇ;
ಬ್ರಾಹ್ಮಣರನು ವೈದಿಕರನು ಕ್ಷತ್ರಿಯರನೊ ವೀರಾ
ಸಮರಾಭಿಮಾನಿಯರ ಭೋಜಿಗರ ಬಳಿಗೆ
ವೈಶ್ಯರೆಂದೆನಿಸಲಾ ಕಾರ್ಮಿಕರೊ ಶೂದ್ರ
ಎಂಬೀ ವಿಭಾಗದೊಳುಗಳಗಿರಿಸಿದೆನವರಾ.
ನಿರ್ಮಿಸಿದ್ದೊಡೀ ಬೇಧ ನಿರ್ಮಿತನು ಆನಲ್ಲ,
ನಾಶರಹಿತನಿಹೆ ಆನೆಂಬುದನು ತಿಳಿಯೊ!

॥ ೧೨ ॥

"ಕರ್ಮವು ಆ ಕರ್ಮಗಳು ಎನ್ನಕಂಟಿಯುವುದಿಲ್ಲ,
ಕರ್ಮದಲಿ ಜೀವವನು ಕಟ್ಟುತಿಹೆನಿಲ್ಲ,
ಕರ್ಮ ಸಾಫಲ್ಯದೊಳು ಆಶೆಯುಂಟೆನಗಿಲ್ಲ,
ಕರ್ಮವನು ನಡೆಸದಿದ್ದೊಡದೆ ಶಾಂತಿಯಿಲ್ಲ;
ತತ್ವವಿದನೀ ಜಗದಿ ತಿಳಿದಿಹಗೆ ನಿಜದಿ
ಕರ್ಮಬಂಧವು ಇಲ್ಲವೆಂಬುದನು ತಿಳಿಯೊ!
ಕರ್ಮಫಲದಾ ನಂಟುಗಂಟುಗಳು ಮರೆತು
ನಡೆದೊಡದೊ ಲೋಕವಿದು ನಾಕದಂತಹುದು.

॥ ೧೩ ॥

"ತತ್ವವಿದರನುವಾಗಿ ಪೂರ್ವದಲಿ ನೋಡ್ವೆ
ಮೋಕ್ಷಾರ್ಥಿಗಳು ನಡೆಸಿದರು ಕರ್ಮವನ್ನು,
ಅರ್ಜುನನೆ ನೀ ಕೇಳಿತ್ತೆ ಪೂರ್ವಿಕರ ತೆರನೆ
ನಿಷ್ಠೆಯಿಂದಾ ಕರ್ಮಗಳು ನಿತ್ಯ ನಡೆಸುತ್ತೆ;
ಪ್ರಾಚೀನದನುಷ್ಠಾನವೋ ಕರ್ಮಯೋಗ,
ಪಾಲಿಸೈ ಆದನೆಯೀ ಪೇಳುತಿಹೆನೀಗ!
ಯೋಗಿವರರಾ ಕಾಲದಲಿ ತೋರಿಸಿಹರೊ
ಮಾರ್ಗವಿದನನುಸರಿಸಿ ಸಾಗಿಲ್ವೆ ಇಂದು!

॥ ೧೪ ॥

"ಯೋಗಿವರರಿಗೆ ಒಪ್ಪುದಾ ಕರ್ಮಧರ್ಮ
ಆವುದೆಂದೆನುತಲಾ ಕೇಳುತಿಹರಿಹರು;
ಆಚರಿಸಬಾರದಿಹುದಾವುದೊ ಆ ಕರ್ಮ
ಎಂದನುತ ಕುಮಾರ್ಗಕರ್ಮಗಳೆಂಬುದನ್ನು,
ಜ್ಞಾನಿಗಳೆ ತಿಳಿಯದೆಯೆ ಮರುಳಾಗಿ ಇಹರೈ;
ಜನ್ಮಬಂಧನದಿಂದ ಬಿಡುಗಡೆಯು ಪಡೆಯೆ

ಕೇಳ್ ತಿಳಿಸುವೆನೊ ಕರ್ಮಾಕರ್ಮದ ರಹಸ್ಯ, 1276
ಜ್ಞಾನಿಗಳಿಗೊಪ್ಪುವಾ ಲೋಕಗತ್ಯಾ ತತ್ವ!

" ೧೭ "

"ವೇದೋಕ್ತ ಕರ್ಮಗಳುದಾವುದೆಂದೆನುತ
ತಿಳಿಯುವುದೆ ವಿದ್ಯೆಯಾ ಗಹನವೆಂದರಿಯಾ!
ಕೇಳಲಿ ನಿಷಿದ್ಧವಹ ಕರ್ಮವದು ಇಹವೆ
ಅವುದೆಂದೆನುತಲಿ ತಿಳಿಯುವುದೆ ವಿದ್ಯೆ;
ಮನದೀನದು ಮನು ನಿಸ್ವಾರ್ಥವೇನು?
ಕರ್ಮವದರಲ್ಲಿಯಿಹ ವಿಕರ್ಮವದುಯೇನು?
ಕಾಲಗತಿ ಕರ್ಮಗತಿಗಳು ವಿಚಿತ್ರವನರಿಯೆ
ಪ್ರಯಾಸವಹುದಿ ಜಗದಿ ಕೇಳಲಿತ್ಯೆ ಪಾರ್ಥಾ!

" ೧೮ "

"ಮಿತ್ರನೆ, ಅಕರ್ಮವನು ಕರ್ಮದಲಿ ನೋಳ್ಪ,
ಅಂತೆಯೇ ಕರ್ಮವ ಅಕರ್ಮದಲಿ ನಿತ್ಯ
ಕಾಣಿಸುವ ಕರ್ಮಾಕರ್ಮದ ಕುಶಲ ತಾನೆ
ನೋಳ್ಪವನು ಬಲ್ಲವನು ಜ್ಞಾನಿಯೆಂದಿಹವೆ
ಖ್ಯಾತನಾಗುವನಂತು ಪಡೆಯುವನು ಮೋಕ್ಷ,
ವಿಧಿ ನಿಯಮಕೊಪ್ಪಿಗೆ ನಡೆಸುವನು ಕರ್ಮ,"
ಎಂದೆನುತಲಾ ಕರ್ಮವಾ ಜ್ಞಾನವದರಾ
ಗಹನವಿದನರುಹಿದನು ಅರ್ಜುನಗೆ ಕೃಷ್ಣ!

" ೧೯ "

"ಫಲಾಪೇಕ್ಷೆಯಲಿ ಸ್ವಾಭಿಮಾನವನು ಇಡದೆ
ಆರಿರುವನೋ ಅವನು ಅಂತೆಯೇ ಇಹವೆ
ಕರ್ಮಫಲಕೆ ಬಿಟ್ಟಿಸದೆ ಇರುವನವನಾ
ಅವನೆಂದೂ ನಿಸ್ವಾರ್ಥಿ ನಿರಾಲಂಬನಿಹನಾ
ತನ್ನತ್ವ ಜ್ಞಾನವೆಂಬಾ ಅಗ್ನಿಯಿಂದ
ಕರ್ಮಗಳನವು ದಹಿಸಿದವನೆಯೆ ಕೇಳಾ
ಲೋಕದೆ ವಿದ್ವಾಂಸನೆಂದೇ ಖ್ಯಾತನಹನೈ
ಕರ್ಮಾಕರ್ಮವನರಿತ ಯೋಗಿವರನವನೈ!

" ೨೦ "

"ಕಾಯಕದಲಿ ಕರ್ಮದಲಿ ಫಲಾಪೇಕ್ಷಿಸದೆ
ಭೋಗ್ಯದಲು ಭಾಗ್ಯದಲು ಆಸಕ್ತಿಯಿರದೆ
ತಾನ್ ವಿರಕ್ತನೊಲು ಜೀವನವ ನಡೆಸಿದೊಡೆಯು
ಕರ್ಮದಿ ಅನಾಸಕ್ತನಾದೊಡೆಯು ಕೇಳು,
ಕರ್ಮವನೆ ಮಾಡದವನೊಲು ಇರುವನವನೊ,
ಕೇಳ್ ಅದುವೆ ಕರ್ಮಾಕರ್ಮದ ಸೂಕ್ಷ್ಮವಂತೆ!"

ಎಂದೆನುತಲಾ ಪಾರ್ಥಸಾರಥಿಯು ಅಂದು
ಪಾರ್ಥನಿಗೆ ಪೇಳಿದನೊ ಮಾತೆಸಾಯಿ ಬದನಂತು!

" ೭೦ "

"ಕಾರ್ಯ ಸಾಫಲ್ಯತೆಯಲಾಶೆಯನು ಇಡದೆ
ದೃಢಚಿತ್ತವನೆ ನಿತ್ಯ ಬೆಳೆಸುತಲಿ ಇಹದೆ,
ಇಂದ್ರಿಯಂಗಳನು ನಿಗ್ರಹಿಸುತ ಕೋಳ್ಳ ನಿರುತ
ಮೋಹವಹ ವಸ್ತುವಿಗೆ ಆಶಿಸದೆ ಇರುತ
ನಶ್ವರವೊ ದೇಹವಿದು ಪೊರೆಯಲೊಂದಷ್ಟು
ದಿನರಾತ್ರಿಯಾ ಬಾಳ್ವೆಯನು ನಡೆಸಲಷ್ಟು
ಕಾರ್ಯವದು ತಮ್ಮೊಳಗೆ ನಡೆಸುವವರೆಲ್ಲ
ಪಾಪಗಳ ಪೊಂದರವರೀ ಜಗದಿ ನೋಡಾ!

" ೭೧ "

"ದೊರೆತುದರಲಾ ತೃಪ್ತಿಯನು ತಾನು ಪೊಂದಿ
ಸುಖ ದುಃಖಗಳು ದ್ವಂದ್ವಗಳು ತಳ್ಳಿ ಹಾರಿ
ದೋಷ ದ್ವೇಷಿಗಳನ್ನು ಎಸಗದೆಯೆ ಇದ್ದು
ತಾವ್ ಮೋಹಿಸದ ಕಾಮಿತಾರ್ಥಗಳನಯತ್ತಿ
ಪಡೆದೊಡೆಯು ಪಡೆಯದೊಲು ಇದ್ದೊಡೆಯು ಕೊಳ್ಳಿ
ಸಮಭಾವ ಸಮಶೀಲವನೆ ತೋರಿಸುತಲಿ
ಕರ್ಮಗಳ ತಾನ್ ಎಸಗಿದೊಡೆ ಪಾರ್ಥ ನೋಡೈ
ತೊಳಲಲಾರನು ಕರ್ಮ ಬಂಧದಲಿ ನಿಜವೈ!

" ೭೨ "

"ತಾನು ತನ್ನದುಯೆಂಬ ಆಶೆಯನು ತೊರೆದು
ಸಂಸಾರ ಮೋಹವು ನಿಸ್ಸಾರವೆಂದರಿತು
ದಿವ್ಯಾತ್ಮ ಭಾವದಿಂ ಮನವ ನೆಲೆಗೊಳಿಸಿ
ಭಗವಂತನನು ಒಲಿಸಿ ಕರ್ಮಗಳನೆಸಗಿ
ಬಾಳುವವನೇ ಧೀರ ವರ ಕರ್ಮಯೋಗಿ
ಕರ್ಮಬಂಧವು ತಪ್ಪುದಾ ಮನೋಯೋಗಿ;
ಆತ್ಮಬಲ ಸ್ಥೈರ್ಯದಿಂದೊಡಗೊಂಡ ಅವನೊ
ಕರ್ಮಬಲದಾ ಜ್ವಲತೆಯನು ಬೆಳಗುವವನೊ —.

" ೭೩ "

"ಯಾಗ ಯಜ್ಞದ ವಸ್ತುಗಳು ಪಾತ್ರಗಳವೊ
ಹೋಮದ ದ್ರವ್ಯಗಳೆಲ್ಲ ಬ್ರಹ್ಮವು ನಿಜವೊ!
ಹೋಮಾಗ್ನಿಯಾ ಚೈತನ್ಯ ಜ್ಯೋತಿಯದು ಬ್ರಹ್ಮ,
ಹೋಮಕಾರ್ಯವನು ಅದ ನಡೆಸುವವ ಬ್ರಹ್ಮ
ಯಾಗ ಯಜ್ಞಾದಿಗಳ ಕ್ರಿಯೆ ಅವು ಬ್ರಹ್ಮ,
ಯಾಗವನು ಮಾಳ್ಪ, ಮನ ಪಡೆವ ಫಲ ಬ್ರಹ್ಮ,

ಯಾಗದ ಸಮಸ್ತ ವಿಧಿ ಸಮರ್ಪಣಗಳು ಬ್ರಹ್ಮ, 1288
ತನ್ಮಯಫಲದೊಳೆ ಹೊಂದುವಾ ಮೋಕ್ಷ ಬ್ರಹ್ಮ!

॥ ೨೫ ॥

"ಹೋಮ ಮಾಡ್ವ ಕೆಲರಿತ್ತ, ಯಜ್ಞಗಳ ಬಗೆಯು,
ಪರಸಮರ್ಪಣಯೋಗಿಗಳು ಅರ್ಚನೆಯ ಪರಿಯು;
ದೇವಾರ್ಚನಾ ರೂಪದಾ ಯಜ್ಞಕಾರ್ಯ
ಬ್ರಹ್ಮಾರ್ಪಣಾ ಸಮರ್ಪಣದಾ ಅಗ್ನಿ ಹೋಮ—
ಅಂತೆಯೇ ಮತ್ತೆ ಕೆಲವರಾ ಯಜ್ಞರೀತಿ
ಬ್ರಹ್ಮಾರ್ಪಣಾ ಅಗ್ನಿ ಹವಿಸ್ಸದಿ ಕೂಡಿ
ಬ್ರಹ್ಮಾರ್ಪಣವು ಎಂದು ಯಜ್ಞಗಳನೆಸಗಿ
ಲೋಕಗಳ ಬೆಳಗಲದೆ ಜಗದ ಹೋಮಾಗ್ನಿ—

॥ ೨೬ ॥

"ಯೋಗಿವರರೋ ಕೆಲವರಾ ಇಂದ್ರಿಯಗಳ
ಕಣ್ಣು ಕಿವಿ ಜಿಹ್ವೇಂದ್ರಿಯಾದಿಗಳನೆಲ್ಲ
ನಿಗ್ರಹಿಸುತಲಿಯೆ ನಿಗ್ರಹಾಗ್ನಿಯಿದರಲ್ಲಿ
ಹೋಮಿಸುವನು ನಡೆಸುತಿರಲು ಕೆಲವರಲ್ಲಿ
ಶಬ್ದ ಸ್ಪರ್ಶಾದಿ ವಿಷಯಗಳೆಲ್ಲವನ್ನು
ಇಂದ್ರಿಯಾಗ್ನಿಯಲಿ ಸುರಿದೆಸಗುವರೊ ಜನವು
ಹೋಮವು ಯಜ್ಞಾದಿಗಳನೆಲ್ಲವನು ಬಿಡದೆ
ದಹಿಸುವರೊ ಹವಿಗಳನಾ ಅಗ್ನಿಯಲ್ಲಿ!

॥ ೨೭ ॥

"ತಪೋನಿಷ್ಠರಾ ದೇವಋಷಿಗಳವರೆಲ್ಲ
ಪಂಚೇಂದ್ರಿಯಗಳನ್ನು ನಿಗ್ರಹಿಸಿ ಕೇಳಾ
ಇಂದ್ರಿಯಾದಿಗಳ ಪ್ರಾಣವ್ಯಾಪಾರವದನಾ
ಜ್ಞಾನ ಪ್ರಕಾಶದೊಳೆ ಬೆಳಗುತಿಹುದದನ್ನು
ಚಿತ್ತನಿಗ್ರಹ ರೂಪದಾ ಅಗ್ನಿಯಲ್ಲಿ
ಹೋಮಿಸುವನು ಮಾಡುತಲಿ ಪೊಂದುವರದಲ್ಲಿ
ಸಿದ್ಧಿಯನು ಬುದ್ಧಿಯು ಪ್ರಸಿದ್ಧಿಯದನೆಲ್ಲ
ಸಮರ್ಪಣಬಲದದ್ದಿ ದೈವವದಿ ಸಮರ್ಪಣಯೋಗಿ!

॥ ೨೮ ॥

"ಕೆಲ್ ನಿಯಮನಿಷ್ಠರಿಗೆ ಸುವ್ರತರಿಗಂತು
ದ್ರವ್ಯರೂಪದ ಜ್ಞಾನವದೆ ಯಜ್ಞವೆಂದು,
ಎನಿಸಲಾ ಕೆಲವರಿಗೆ ತಪೋವಿಧಿ ಯಜ್ಞ
ಅಂತೆಯೇ ಯೋಗ ತ್ಯಾಗಾದಿಗಳು ಯಜ್ಞ;
ಸ್ವಾಧ್ಯಾಯಾವೆಮ್ಮ ಹೋಮ ಪೂಜೆಗಳು ಯಜ್ಞ
ದೀಕ್ಷಾಧ್ಯಯನ ಕೆಲವರಿಗೆ ನಿತ್ಯ ಯಜ್ಞ;

ಆತ್ಮಜ್ಞಾನವು ಜ್ಞಾನಯೋಗಿಗಳ ಯಜ್ಞ
ಶಕ್ತಿ ಶಿವ ಶಕ್ತಿಪ್ರತಪವು ಜಗದಿ ಯಜ್ಞ!

॥ ೨೮ ॥

"ಅಹಾ ಪ್ರಾಣಾಯಾಮವು ನಿರಂತರ ಹರಿಲಾ
ತಡೆದು ಪ್ರಾಣಾಪಾನ ಗತಿಗಳೆರಡನ್ನೂ
ಕಡೆಗಂತು ಜನವು ಅಪಾನದಲಿ ತಮ್ಮ
ಪ್ರಾಣವನು ಹೋಮವು ಮಾಡುವರಂತು ಕೇಳು!
ಯೋಗಿವರರಾ ಹೀಗೆ ಇರೆ ಕೆಲವರಲಿ
ಪ್ರಾಣದಲಿ ಅಪಾನವನು ಹೋಮವು ಮಾಡಿ
ಪೂರಕವೋ ರೇಚಕವೋ ರೂಪಗಳದೆಂಬ
ಯಜ್ಞಗಳನಾಚರಿಸುವರು ಕೇಳೈ ಪಾರ್ಥ!

॥ ೨೯ ॥

"ನೋಡೆಲೈ ಯೋಗಿಜನ ಸಾಧನೆಯ ರೀತಿ!
ಮಿತಾಹಾರದಾ ವ್ರತವ ತಾವು ಅನುಸರಿಸಿ
ಪ್ರಾಣಗಳನೂ ಪ್ರಾಣಗಳಲ್ಲಿಯೆ ಕಲಿಸಿ
ಕುಂಭಕ ಸ್ವರೂಪಾಂತ ಹೋಮವನೆ ನಡೆಸಿ
ಯಜ್ಞವನು ಮಾಳ್ಪವರು ಸಾಹಸಿ ಧೀರ!
ಯಜ್ಞವಿಧಿ ಕರ್ಮವನು ತಿಳಿದಿಹರು ಎಲ್ಲ
ಯಜ್ಞದಿಂದಲಿ ಪಾಪವನು ಕಳೆಯುತಿಹರೈ;
ಅದುವೆ ಕೇಳ್ ಯಾಗಾದಿ ಯಜ್ಞಗಳು ಜಗದಿ!

॥ ೩೦ ॥

"ಭುಜಿಸುವರು ಯಜ್ಞ ಶೇಷಾಮೃತವದನು,
ಚಿರಂಜೀವಿಗಳೆನಿಸಿ ಪಡೆಯುವರು ಮುಂದೆ;
ಬ್ರಹ್ಮಪದವನು ಅವರು ಅಜಲೋಕದಲ್ಲಿ!
ಅದುವೆ ಯಜ್ಞಾಮೃತದ ಸಾಫಲ್ಯವಲ್ಲಿ!
ಪಾಂಡವನೆ ಕೇಳೆಲೈ, ಈ ಪರಿಯ ಯಜ್ಞ
ಯಾಗಾದಿ ನಿಯಮಗಳ ಆಚರಿಸದಿರುವ
ಮಾನವನಿಗಿಹಲೋಕ ಗತಿಯಂತು ಇಲ್ಲ—
ಅಂತಿಹಗೆ ಮೋಕ್ಷಗತಿ ದೊರಕುವುದು ಎಂತಾ?

॥ ೩೧ ॥

"ಹಲವಾರು ಯಾಗಗಳು ಯಜ್ಞಗಳು ವಿವರ
ಆತ್ಮ ಪ್ರಾಪ್ತಿಯು ಪ್ರತಿಪಾದಕವೆನಿಸಿ ನೋಡೈ;
ವೇದಾದಿಗಳಲುಕ್ತವಾಗಿಹವು ನಿಜವು;
ಅರಿಯೆನವುಗಳನೆಲ್ಲ ಕರ್ಮಜವೆಂತು
ಲಭಿಸಿದೊಡೆ ಅದೆ ಪ್ರಾಪ್ಯ ಜನ ದಸ್ಯರಹರೈ,
ಮುಕ್ತರಾಗುವರಿವರು ಜನ್ಮಬಂಧದಿಂದೆ;"

ಎಂದೆನುತ ಭಗವಂತ ಹೇಳಿದನಾಗ ಅಲ್ಲಿ
ಜ್ಞಾನಯೋಗದ ಸೂಕ್ತಿ ಸಾರವದನಲ್ಲಿ!

" ೨೧ "

"ಹೇಳಿದನದಾ ಜ್ಞಾನದಾ ಮೇಲ್ಮೆಯನ್ನು
ದ್ರವ್ಯರೂಪಾಂತವಹ ಯಜ್ಞವದಕಿಂತ
ಜ್ಞಾನಯಜ್ಞವೆ ಮೇಲು ಎಂದೆನುತ ಕೃಷ್ಣ
ಜ್ಞಾನಯೋಗದ ಗಹನವದನಲ್ಲಿ ಆಗ!
"ಹೇ ಧನಂಜಯ ಕೇಳು, ಲೋಕದೊಳು ಎಲ್ಲ
ಕರ್ಮಗಳು ಕಾರ್ಯಗಳು ಸರ್ವವೂ ನಿಜವು
ಜ್ಞಾನದಲಿ ಪರಿಪೂರ್ಣತೆಯನಂತು ಪಡೆದು
ಭವದರಿಯ ಕೊನೆಮುಟ್ಟುವುದು ಕೇಳ್ವೆ ಇಂದು!

" ೨೨ "

"ಜ್ಞಾನವನು ಪೂಜೆಯು ಪುರಸ್ಕಾರದಿಂದ
ಗಳಿಸುವುದು ಸಾಷ್ಟಾಂಗ ನಮಸ್ಕಾರದಿಂದ,
ಪ್ರಶ್ನೋತ್ತರದೊಡೆ ಸಂಭಾಷಣೆಗಳಿಂದ,
ಗುರುಸೇವೆ ತಪಶ್ಚರ್ಯ ವ್ರತನಿಯಮದಿಂದ
ಪಡೆಯುವುದು ಜ್ಞಾನವದನಾ ಪರಿಯೊ ಕೇಳ್ವೆ!
ಆತ್ಮವಿದ್ಯೆಯನರಿತ ತಾತ್ವಿಕರು ಎಂತೊ
ಅಂತೆಯೇ ಆಯುವವರು ಉಪದೇಶವನ್ನು
ತತ್ವಜ್ಞರತಿ ಜ್ಞಾನದಾ ಗುರುಗಳಂತೆ!

" ೨೪ "

"ಜ್ಞಾನವನು ಹೊಂದಿದೊಡೆ ಮೋಹವನು ನೀನು
ತ್ಯಜಿಸುವಿಯೊ ಹೇ ಪಾರ್ಥ ಕೇಳ್ ಅದುವೆ ನಿಜವು;
ಮೋಹವನು ತೊರೆದಾಗ ಜೀವಿಗಳನೆಲ್ಲ
ಸಮದೃಷ್ಟಿಯಲಿ ನೋಡು ಕೇಳೆಲೈ ಮಿತ್ರ,
ನೋಡುವೆ ನಿನ್ನಾತ್ಮದಲಿ ನನ್ನಲ್ಲಿ ನೀನು
ಜ್ಞಾನಾಕಾರದ ದೃಷ್ಟಿಯನು ನೀ ಪಡೆದು ಇರಲು,
ಅದೆ ಜ್ಞಾನದಾ ಸಿದ್ಧಿ ಅದೆ ಬುದ್ಧಿ ನೋಡ!
ಅದ ಪೊಂದಿಹನೆ ಜ್ಞಾನಿಯೆಂಬುವನೀಸಾಗ!

" ೨೫ "

"ಜಗದೊಳಗೆ ಪಾಪಿಜನಗಳನೆಲ್ಲ ಮೀರಿ
ಅತಿಪಾಪಿಯೇ ನೀನು ಎಂದೆನಿಸುತಲಂತು
ಇದರೊಡೆಯೆ ಕೇಳೆಲೈ ಹೇ ಸವ್ಯಸಾಚಿ
ಮಹಾಪಾಪದಾ ಕಡಲನದೊ ನೀನು ಅಲ್ಲಿ
ದಾಟುವಿಯೊ ಆ ಜ್ಞಾನದಾ ತೆಪ್ಪದಲ್ಲಿ
ಕೇಳುತ ನೀನ್ ಸಾಗುವಿಯೊ ಮೋಕ್ಷದಾ ದಡಕೆ,"

ಎಂದು ಪರ ಪತಿತಜೀವನುತ್ತನಂದು ಹೇಳ್ದ
ಜ್ಞಾನನೌಕೆಯ ರಹಸ್ಯವದನಿಲ್ಲಿ ಆಗ!

"೩೬"

"ಅಗ್ನಿಯೊಂದು ಧಗಧಗನೆ ಜ್ವಾಲೆಯಾಗಿ ಉರಿಯುತ,
ಕಟ್ಟಿಗೆಗಳನು ಭಸ್ಮವಾಗಿಸುವ ತೆರನೆ,
ಸೇರಿರ್ಪ ಪಾಪಗಳನೆ ಪರಜ್ಞಾನದಿರವು
ನಿಮ್ಮ ಭಾವ ನಿಮಿತ್ತವ್ಯಯಾ ಜ್ಞಾನಕಿಡಿಯಲಿ
ದಹಿಸುವುದು ಜ್ವಾಲದಲ್ಲಿ ಕರ್ಮಗಳನೆಲ್ಲ
ಎಸಗಿರುವ ಪಾಪಗಳ ಕಟ್ಟುಗಳನೆಲ್ಲ,"
ಎಂದೆನುತಲಾ ಜ್ಞಾನನೌಕೆಗಾ ತಿರುಳಾ
ಬಿಡಿನುಡಿಗಳಲಿ ವಿವರಿಸಿದನೊ ಶ್ರೀಕೃಷ್ಣ!

"೩೭"

"ಜ್ಞಾನ ಸದೃಶವಾದುದೀ ಲೋಕದಲಿ
ಬೇರಾವುದೂ ಇಲ್ಲವೆಂಬುದನು ತಿಳಿಯುತ್ತ,
ಪರ ಕರ್ಮಯೋಗದಾ ಸಿದ್ಧಿಯನು ಪಡೆದ
ಮಾನವನು ತನ್ನಲ್ಲಿಯೇ ತಾನು ನೋಡಾ
ಪಡೆಯುವನು ಜ್ಞಾನವನು ಕಾಲಕನುವಾಗಿ
ಅದುವೆ ಸಿರಿ ಶೋಭೆ ಕಲ್ಯಾಣವದು ಜಗಕೆ,"
ಎಂದೆನುತಲಾ ಹರಿಯು ಜ್ಞಾನದ ರಹಸ್ಯ
ಶ್ರೀಪತಿಯು ಸ್ಪಷ್ಟತೆಯನೊಪ್ಪಗೆ ಹೇಳ್ದ —

"೩೮"

"ಓದುವಿಕೆ ಕಲಿಯುವಿಕೆ ಕೇಳುವಿಕೆಯೊಡನೆ
ಪರ ಗುರುವಿನುಪದೇಶವಾದೇಶ ಶ್ರದ್ಧೆ,
ನಿಶ್ಚಲತೆಯಾ ನಿಷ್ಠೆಯಲಿ ವಿದ್ಯೆ ಜ್ಞಾನ,
ಆದರೊಡನೆಯೆ ಇಂದ್ರಿಯಂಗಳನು ಅಡಗಿಸುತ್ತ
ಸಿದ್ಧಿಯನು ಹೊಂದಿಹನೆ ಪರಜ್ಞಾನಿ ಯೋಗಿ!
ಬುದ್ಧಿಯನು ಬೆಳೆಸಿಹನೆ ನಿಷ್ಕಾಮ ಕರ್ಮಿ!
ಜ್ಞಾನದಿಂದಲೆ ಮನದ ಪ್ರಭೆಯು ಉದಿತ ಶ್ರುತಿಜೆ,
ಬೆಳಗಿಸುತ್ತ ಸುಜ್ಞಾನವದೆ ಜಗಕೆ ಬೆಳಕು!

"೩೯"

"ಶ್ರದ್ಧೆ ವಿಶ್ವಾಸವನು ಇಡದಿಹನೊ ನಿತ್ಯ
ಸಂಶಯಾತ್ಮನೆ ಆಗ ಕೆಡುತವನದೆ ಮಾತ್ರ,
ಪಾರಮಾರ್ಥಿಕ ವಿದ್ಯೆಯಲಿ ಶ್ರದ್ಧೆಯಿರದೆ
ಅವದನು ನಂಬದೆ ಸಂದೇಹಕ್ಕೆ ಜಗದಿ

ನಿತ್ಯ ಶಾಂತಿ ಸುಖ ಭಾಗ್ಯವದು ಎಂತು ಇಲ್ಲ,
ಪರಲೋಕದಾ ಮೋಕ್ಷದಾ ನೆಲೆಯೂ ಇಲ್ಲ;"
ಎಂಬುದ ಸುಸ್ಪಷ್ಟವಾಗಿ ನುಡಿದನಾ ಕೃಷ್ಣ,
ನಿತ್ಯ ಶಾಂತಿ ಜ್ಞಾನವದರ ಮೂಲವನ್ನು!

॥ ೪೦ ॥

"ಜ್ಞಾನಬಲದಾ ಯೋಗದಿಂದಲೀ ಜಗದಿ
ಸಮಸ್ತವನು ಕರ್ಮಫಲಾಪೇಕ್ಷೆಯನ್ನಿಡದೆ
ತ್ಯಜಿಸುತ ಗುರುವಿನುಪದೇಶವನು ಪಡೆದು,
ಜ್ಞಾನಾರ್ಜನೆಗೆಯೆ ವಿನಿಯೋಗಿಸುತ ಕಾಲವ;
ಸಂದೇಹವದನಿಲ್ಲ ಕತ್ತರಿಸಿದ ನಿತ್ಯ
ಮನದಿ ಷಡ್ವೈರಿಗಳು ನೆಲೆಗೆ ಎಡೆಗೊಡದ
ಆತ್ಮತತ್ತ್ವನಿಷ್ಠನನು ಕರ್ಮಗಳು ಇಹದಿ
ಕಟ್ಟಿಯಿಡಲಾರವು ನಿಶ್ಚಯವಿದೊ ನಿಜದಿ!

॥ ೪೧ ॥

"ಹೇ ಧನಂಜಯ ಕೇಳು, ಕಡೆಗಂತು ಹಿಂದು
ಮಾತೊಂದ ಪೇಳುವೆನು ಕೇಳಿನ್ನು ನಿಂದು;
ಮನದಿ ಅಜ್ಞಾನದಿಂದುದಿತ ಸಂದೇಹ
ಸಂಶಯಾದಿಗಳನ್ನು ಕತ್ತರಿಸೆಯೊ ಮಿತ್ರ,
ತುಂಡರಿಸಿ ಎಲ್ಲ ಜ್ಞಾನಖಡ್ಗದಿಂದದನಾ
ಪಿಡಿ ಎಲ್ಲ ಜ್ಞಾನಸಾಧನೆ ಮಾಡುವದನ್ನು!
ಅಂತೆಯೆ ಸತ್ಕರ್ಮಬಲದಾ ಯೋಗ ಮಿತ್ರ,
ಸಮರಾಂಗಣಕಾಗಿ ಎದ್ದೇಳೆಲೊ ವೀರ!"

॥ ೪೨ ॥

(ನಾಲ್ಕನೇ ಅಧ್ಯಾಯ ಸಂಪೂರ್ಣವು)

ಅಧ್ಯಾಯ ೫ — ಸನ್ಯಾಸ ಯೋಗ!

"ಏನಿದೇನಿದು ಕೃಷ್ಣ, ಏನನುವಿ ಇಂತು?
ಹೇಳ್ದಿ ನೀನ್ ಕರ್ಮತ್ಯಾಗದ ಯೋಗ ರೂಪು;
ಆದರೊಡನೆಯೆ ಜ್ಞಾನಯೋಗದ ವಿವರವನ್ನು
ಹೇಳುತಿರೆ ಮನವಿದು ಅನಿಶ್ಚಿತದಿ ನೋಡಾ
ಕರ್ಮಜ್ಞಾನಗಳೆಡೆಯೆ ಜೋತಾಡುತಿಹುದೈ
ಹೇಳ್ ಇವೆರಡರೊಳು ಮೇಲು ಯಾವುದೆಂದೆನುತ್ತೆ;"
ಎಂದು ಸಂದೇಹಗೊಳ್ಳುಗಾಗುತಲಿ ಪಾರ್ಥ
ಕೇಳಿದನು "ಶಾರ್ಙ್ಗಿ"ಯುದೇನೆಂದು ಎನುತಾ —

"೧"

"ಎಲೆ ಪಾರ್ಥ, ಕೇಳ್ ಕರ್ಮದಾ ತ್ಯಾಗವಿದುವು
ಕರ್ಮಗಳಾದನುಷ್ಠಾನಗಳು ಕೂಡ ಅಂತು,
ಮೋಕ್ಷವನು ಪಡೆಯುವೆಡೆಗೊಡುವುದೆಂಬುದು ಕೇಳ್ವೆ,
ಇವು ಎರಡರಲಿ ಜ್ಞಾನ ಪರಿಪಕ್ವವಿಲ್ಲದೆ
ಇದ್ದೊಡೆಯು ಕರ್ಮತ್ಯಾಗದ ಫಲವ ಬಿಡುತ್ತು
ಈಶ್ವರಾರ್ಪಣೆಯಿಂದು ಒಪ್ಪಿಸುತಲಂತು
ಕರ್ಮಾನುಷ್ಠಾನವನು ಮಾಡುವುದೆ ಮೇಲು —
ಎಂದೆನುತ ತಿಳಿಯೆಲೆ: ಧನಂಜಯನೆ ನೀನು —

"೨"

"ಗಾಂಡೀವಿ ಕೇಳಲೆತ್ತೆ ದ್ವೇಷವನು ಬಿಡದೆ
ಕಾಮಕ್ರೋಧಾದಿಗಳನೆಲ್ಲ ಕಿತ್ತೊಗೆಯೆ,
ಸುಖ ದುಃಖವೆ ದ್ವಂದ್ವಗೊಳ್ಳಾಗದಿದ್ದು
ಇರುವನದಾವನು ಕರ್ಮವನು ನಿತ್ಯ ಗೈದು
ಇದ್ದೊಡವನೇ ಕರ್ಮತ್ಯಾಗಿಯೆಂದೆನಿಸಿ
ಖ್ಯಾತನಹನಾ ಕರ್ಮದಾ ಬಂಧದಿಂದಾ,
ಮುಕ್ತನಾಗುವನಂತು ಆದೆ ಕರ್ಮಯೋಗ
ಷಡ್ವೈರಿಗಳು ಜಯಿಸುವರು ಸ್ವರ್ಗಮಾರ್ಗ!

"೩"

"ಜ್ಞಾನಯೋಗವು ಕರ್ಮಯೋಗವೆರಡನ್ನು
ವಿವಿಧಾರ್ಥದಲಿ ಬೇರೆ ಬೇರೆಯೆಂದೆನುತ
ಹೇಳುವರು ಮೂಢರೆಂದೆನಿಸಲ್ಪೆ ಪಾರ್ಥ
ಜ್ಞಾನಿಗಳು ತಿಳಿಯರದನಾ ತೆರನ ನೋಡಾ—
ಕರ್ಮಜ್ಞಾನಗಳೆರಡು ಯೋಗಗಳು ಒಂದಾ
ನಿಷ್ಠೆಯಲಿ ಎಸಗಿದೊಡೆ ಪಡೆಯುವರು ಕೇಳಾ,

ಎರಡರಲಿ ವಿಹಿತ ಫಲ ಪ್ರಾಪ್ಯವದನಂತು
ಎಣಿಸಿರೆ ನೀನ್ 'ಒಂದೆ ತಪೋನಿಧನಿಯು ಎಂದು —

॥ ೪ ॥

"ಜ್ಞಾನಯೋಗಿಯು ಪಡೆವ ಪ್ರಾಪ್ಯವದೆ ಮೋಕ್ಷ,
ಪ್ರಾಪ್ಯವದನೇ ಕರ್ಮಯೋಗಿಗಳು ನಿರಂತ
ಪಡೆಯುವರದೆಂಬುದನು ತಿಳಿಯುವವನೇ ಯೋಗಿ;
ಜ್ಞಾನವು ಕರ್ಮಾದಿಗಳ್ ಯೋಗಬಲ ಸೇರಿ
ಏಕಸಮವೆನೆ ಪ್ರವಿಕಾಸವೆ ಫಲವಿತ್ತು
ಫಲಪ್ರದವಿತ್ತನು ಎನುತ ತಿಳಿದಿಹನ ನೋಡು
ತಾತ್ವಿಕ ವಿದ್ವತ್ತುಗಳನರಿತಿಹನು ಎಂದು
ತಿಳಿಯೆಲೆ ಪಾರ್ಥ ಹೊಂದುವನೆ ಕರ್ಮಫಲ ಗುರುತ್ವ!

॥ ೫ ॥

"ಸನ್ಯಾಸವನು ಎಸಗದಿಹ ಲೋಕದೊಳು ಜನವು
ಕರ್ಮಯೋಗವನಂತು ಹಿಡಿಯದಿಹ ಅವರು
ಜ್ಞಾನದಿಂದೊದಗುವ ಕರ್ಮಸನ್ಯಾಸ—
ಪ್ರಾಂದಲು ಅಸಾಧ್ಯವೆಂದೆಂಬುದದು ನಿಜವು!
ಕರ್ಮಯೋಗವ ಹಿಡಿದ ನಿಷ್ಕಾಮಿ ಇಹದಿ
ಆತ್ಮಜ್ಞಾನಿ ಸುಯೋಗಿಯೆಂದೆನಿಸಿ ನಿಜದಿ
ಸೇರುವನು ಬ್ರಹ್ಮನನು ಅದೆ ಬ್ರಹ್ಮಲೋಕ
ತಿಳಿಯೆಲೆ ಪಾರ್ಥ ಅದೆ ತಪಸ್ಯ ತಪೋಲೋಕ!

॥ ೬ ॥

"ಕರ್ಮಯೋಗದೆ ನೆಲೆಸಿ ಶುದ್ಧಮನದಿಂದ
ದೇಹವನು ಸ್ವಾಧೀನದಲಿರಿಸುತ್ತ ನಿತ್ಯ
ಪಂಚೇಂದ್ರಿಯಂಗಳನು ಜಯಿಸುತಲಿ ನೋಡು
ಜೀವರಾಶಿಗಳಲ್ಲಿ ತನ್ನಂತೆ ಎನುತ
ಸರ್ವ ಭೂತಗಳ ಜೀವಿ ಆತ್ಮಗಳು ನಿಜದಿ
ದೇವಾಂಶವೆಂದೆನುತ ತಿಳಿಯುವವನಿಹದಿ
ಕರ್ಮವದ ನಿಷ್ಠೆಯಲಿ ಆಚರಿಸಿದೊಡೆಯು
ಕರ್ಮಬಂಧದಿ ತೊಳಲುವನೇ ಕೇಳ್ಕೆ ಪಾರ್ಥ!

॥ ೭ ॥

"ತಾತ್ವಿಕನು ಕರ್ಮಯೋಗಿಯೆಂದೆನಿಸಿಯೂ
ನೋಡುವನು ಕಣ್ಣಿಂದಲೀ ಜಗವ ನಿರತ,
ಕೇಳುವನು ಕಿವಿಯಿಂದ ಬ್ರಹ್ಮಾಂಡ ನಾದ
ಮುಟ್ಟುವನು ಸ್ಪರ್ಶದಿಂದಲೀ ವಸ್ತುಗಳನು,
ಘ್ರಾಣೇಂದ್ರಿಯದಿ ತಾನು ಆಘ್ರಾಣಿಸುತ್ತ
ಭುಜಿಸುತ್ತ ನಡೆಯುತ್ತ ನಿದ್ರಿಸುತಲಂತೆ

ಇದೊಂದಿಯು ತಾನು ಉಸಿರಾಡುತ್ತಲಿ ಇದ್ದು 1295
ತಾನೇನನು ಮಾಡದಿಹೆನೆಂದೆನ್ನುವನು —.

॥ ೮ ॥

"ಅಂತೆಯೆ ತತ್ವಜ್ಞಾನಿ ಕರ್ಮಯೋಗಿ
ಮಾತುಗಳನಾಡುವನು ಬಿಡುವನು ಹಿಡಿದು;
ಬಹಿರ್ದೇಶದಾ ವಿಸರ್ಜನೆಯನ್ನು ಅಂತೆ
ಎಸಗುತ್ತಲಿ ಕಣ್ಣುಗಳಿಂದೆಲ್ಲವನು ಗ್ರಹಿಸಿ
ಕಣ್ಣೆವೆಯ ಮುಚ್ಚುತ್ತಲಿ ತೆರೆಯುತ್ತಲಿ ನಿತ್ಯ
ಪ್ರತಿ ಇಂದ್ರಿಯಗಳ ಸ್ಪರ್ಶ ಶಬ್ದಾದಿ ವಿಷಯಗಳು
ಎಲ್ಲವನು ತಮಗೊಲಿದ ಕಾರ್ಯವದು ನಡೆಸಿ
ಜಿತೇಂದ್ರಿಯನಿಹನು ತಾನ್ ಎನಿಸಿಗದಂತೆ—.

॥ ೯ ॥

"ಪರಮಾತ್ಮನಿಗೆ ತನ್ನ ಕರ್ಮವದನೆಲ್ಲ
ಅರ್ಪಣಿಸುವನಾರವನು ಕರ್ಮಫಲವದರಾ
ಇಚ್ಛಿಸದೆಯೆ ಕೇಳು ನಿಷ್ಕಾಮಿ ತಾನಾಗಿ
ಪರಯೋಗಿ ಆವನೆಯೆ ಜ್ಞಾನಿಯು ಆಗಿ
ಬೆಳಗುತಿರೆ ತಾವರೆಯ ಎಲೆಗಳಿಗೆ ಜಲವು
ಅಂಟದೊಲು ಪಾಪವು ನಿಷ್ಕಾಮಿಗದು ಎಂದೂ
ತಟ್ಟಲಾರದು ಎಂಬುದನು ತಿಳಿಯೊ ಮಿತ್ರ
ಅದುವೆ ಫಲಾಪೇಕ್ಷೆಯಿಲ್ಲದಾ ಕರ್ಮಜೀವಾ!

॥ ೧೦ ॥

"ದಿನರಾತ್ರಿ ಕರ್ಮವನು ಪರಕರ್ಮಯೋಗಿ
ಫಲಾಪೇಕ್ಷೆಯನ್ನಿಡದೆಯೆ ನಿತ್ಯ ನಡೆಸಿ
ಜೀವಾತ್ಮದಾ ಶುದ್ಧಿಯನೆ ತಾನು ಬಯಸಿ
ಕಾಮ ಮೋಹಾದಿ ವಿಷಯಗಳನ್ನು ತ್ಯಜಿಸಿ,
ಮನೋವಾಕ್ಕಾಯದಲಿ ನಿಷ್ಕಾಮಿಯಾಗಿ
ಕರ್ಮವನು ಕರ್ಮಾಭಿಮಾನದಲಿ ನಡೆಸಿ
ಸಾಗುತಿಹ ಆತ್ಮವದೆ ದಿವ್ಯಾತ್ಮವೆಂದು
ಜಗದಿ ವಿಖ್ಯಾತವಹುದೆಲೈ ಮಿತ್ರ ಕೇಳು!

॥ ೧೧ ॥

"ಕರ್ಮಯೋಗಿಯು ತಾನು ಸಲ್ಲಿಸದ ಸೇವೆ
ನಿಷ್ಕಾಮ ಕರ್ಮವೆಂದೆನಿಸದೊಡೆ ಅದುವೆ,
ಬಿಡಗಾಹದು ಆತ್ಮಸಂತುಷ್ಟಿಯನು ಪಡೆದು
ಸಂತೃಪ್ತಿಯೊಡೆ ಮನಕೆ ಶಾಂತಿಯನು ಹಿಡಿದು;
ಅಂತಲ್ಲದೆಯೆ ಫಲಾಪೇಕ್ಷೆಯೊಡಗೂಡಿ
ಕರ್ಮವನು ಸಲ್ಲಿಸದೊಡಂತು ಕಡೆಗಿಲ್ಲ,

ತೊರೆಯ ಮೋಹದ ಪ್ರೇರಣೆಯ ಫಲದಲ್ಲಿ 1296
ಬದ್ಧರಾಗುವನೊ ಇಹದೆ ಅದೆ ನರಕವಿಲ್ಲಿ!

॥ ೧೨ ॥

"ಇಂದ್ರಿಯಗಳನು ನಿಗ್ರಹಿಸಿದಾತ ನೋಡಾ
ಮನೋಬಲದಿಂದ ತಾನ್ ನಡೆಸುತಲಿ ಇರುವ
ಕರ್ಮಗಳನೆಲ್ಲವನು ನವದ್ವಾರದಿಂದ
ಕೂಡಿರುವ ದೇಹವಿದರ ಕಾರ್ಯವೆನುತ
ತಿಳಿದು ತಾನ್ ಜಗದಲ್ಲಿ ಸಾಧಿಸದೇನಿಲವೊ,
ಇತರರಿಂದೇನನೂ ತಾನ್ ಸಾಧಿಸದಿಲವೊ —
ಎಂದೆನುತ ಸುಖವಿಧಿಯಂದೆ ಸರ್ವಯೋನಿಸಿ
ನಿಶ್ಚಿಂತನಾಗಿರುವನೋ ಕರ್ಮಯೋಗಿ!

॥ ೧೩ ॥

"ತೋರದಲೆ ಕರ್ತೃತ್ವವನು ಕರ್ಮಗಳನು
ಕರ್ಮಫಲವಿದರ ಸಂಬಂಧವಿದನ್ನಂತು
ಜೀವಾತ್ಮದು ಸ್ವಾದಾಗಿಯಿಹ ದೇವನದರ
ಕಾರಣನು ತಾನಲ್ಲವೆಂಬುದನು ತೋರೆ,
ಕರ್ಮನು ಕರ್ಮಗಳ ಫಲವೆಲ್ಲವದಕ್ಕೂ
ಪ್ರವೃತ್ತಿಗಳಿಗಳ ಕಾರಣವದೆ ಮೂಲ ಹುಟ್ಟು,
ಎಂಬುದನು ಪ್ರಕೃತಿಯ ಮಾಯೆ ಅದರಿಂದ
ಕಾಣುವುದು ಜಗದಲ್ಲಿ ನಿಜವದಕೆ ಸಾಕ್ಷಿ,

॥ ೧೪ ॥

"ಕರ್ಮಗಳನನು ಸ್ವೀಕರಿಸಿ ಜೀವಾತ್ಮನಂತು
ದೇಹದಲಿ ಆಗಿರುವ ಸಂತಾಪರವನು
ಪಾಪಗಳ ಪುಣ್ಯಗಳಿಗೊಳಗಾಗದಿಹನಿವ,
ಆತ್ಮವಿದು ದ್ವೈತಾಂಶವೆಂಬುದನು ತಿಳಿಯುತ್ತ;
ಸುಜ್ಞಾನವನು ಸರ್ವ ಅಜ್ಞಾನಗಳವೊ
ಕವಿಯಿಸಲು ಜೀವಿಗಳು ತೋರದಲೆ ಅಂತೊ
ಮೋಹ ಕಾಮಾದಿಗಳಿಗೊಳಗಾಗೆ ಎಲ್ಲ
ಕಂಗೆಡುವುದು ಬುದ್ಧಿ ಸಿದ್ಧಿಗಳು ನೋಡಾ —

॥ ೧೫ ॥

"ಯಾರಾರಿಗೆ ಜ್ಞಾನದ ಅಂಧಕಾರ
ಮನದಿ ಆವರಿಸುತ್ತದೊ ಅದನಂತು ಕೇಳು,
ಆತ್ಮತತ್ತ್ವ ಜ್ಞಾನದಾ ಸೊಂಬಳಿಗನಿಂದ
ತೊಲಗಿಸಲವರಿಗಂತು ಸುಜ್ಞಾನವದುವಾ;
ಭಾಸ್ಕರನ ಬೆಳಗದಿರಿನಂತೆ ನಿತ್ಯ ಕೇಳ್ವ
ಮನವನಿತ್ತ ಆತ್ಮತತ್ತ್ವ ಜ್ಞಾನದಿಂದ

ಪ್ರೋತ್ರಿಸಲು ಅದೆ ಸಿದ್ಧಿ ಅದೆ ವೃದ್ಧಿ ಕೇಳ್ರೋ, 1297
ಕರ್ಮಯೋಗಿಯು ಮನದಿ ಭೋಗಿಯಂಥ ಸಂತೋ.

॥ ೧೬ ॥

"ಮನವನ್ನು ಬುದ್ಧಿಯನ್ನು ಆತ್ಮನಲಿ ಇಟ್ಟು
ನಿತ್ಯಾತ್ಮ ಜ್ಞಾನದೊಳಿ ಆಸಕ್ತಿಯುಳ್ಳ
ಅದರಿಂದಲೇ ಮೋಕ್ಷ ಸುಖವೆಂದು ಎಣಿಸಿ
ತಿಳಿಯುವವರಾರಿಹರೋ ಅವರೆಲ್ಲ ಕೇಳ್ರಿ
ಸುಜ್ಞಾನ ಶುದ್ಧಿ ಜ್ಞಾನದಿಂದ ತಾವ್ ಎಲ್ಲ
ಪಾಪಗಳ ತಾವ್ ಕಳೆದು ಧೀರರವರಿನ್ನು
ಸಂಸಾರದಾ ಬಲಿಯು ನೆಲಿಯೊಳಗಿ ಅಂತೊ
ಪಡೆಯುವರು ಮೋಕ್ಷವನು ರಕ್ಷಣೆಯು ಅದುವೋ!

॥ ೧೭ ॥

"ವಿದ್ಯೆಯು ವಿನಯವು ಶೀಲ್ಯದಿಹರಲ್ಲ
ಆತ್ಮನು ತದೇಕರೂಪನು ಎಂದು ಎನುತ
ತಿಳಿದಿಹರೊ ಕೇಳ್ ಅವರೆ ಜ್ಞಾನಿಗಳು ಇಹರೆ;
ದ್ವಿಜನು ಚಾಂಡಾಲ ಸಮಪಾತ್ರದವ ಎಂದೇ
ಪಶು ಜೀವಿಗಳು ಗೋವು ಆನೆಗಳು ನಾಯಿ
ಜೀವಾತ್ಮನನು ಪ್ರೋತ್ರಿಹವು ಕಾಯದಲ್ಲಿ,
ಎಂದೆನುತ ಜೀವಿಗಳನೆಲ್ಲ ಸಮನಾಗಿ
ಸಮದೃಷ್ಟಿಯಿಂದಲಿ ನೋಳ್ಪವನೆ ಆತ್ಮಜ್ಞಾನಿ!

॥ ೧೮ ॥

"ಸಮಭಾವ ಸಮಮನ ಸಮಶೀಲರಾಗಿ
ಇರುವವರು ಕರ್ಮಾನುಷ್ಠಾನದಲಿ ಕೂಡಿ
ಜಯಿಸುವರೋ ಸಂಸಾರವದನಂತು ಇಹದಿ
ಅದೆ ಸಮತ್ವದ ಭಾವನಾ ಆತ್ಮವದುವೆ!
ಅದುವೆ ನಿರ್ದೋಷವಹ ಪರಬ್ರಹ್ಮರೂಪ
ಬ್ರಹ್ಮನಲಿ ನೆಲೆಗೊಂಡ ಸಮಪಾತ್ರರೂಪ,"
ಎಂದೆನುತ ಭಗವಂತ ಜೀವಾತ್ಮವದರಾ
ಸಮಭಾವ ಸಮದೃಷ್ಟಿಯನು ಹೇಳ್ದನಾಗ!

॥ ೧೯ ॥

"ಸ್ಥಿರಬುದ್ಧಿ ಸ್ಥಿರಜ್ಞಾನ ಸ್ಥಿರಮನೋಭಾವ
ವಿಷಯಾದಿಯಿಂ ಮೋಹವನು ತೊರೆದ ಜೀವಾ,
ತನ್ನನ್ನೆ ತನ್ನೊಳಗೆ ನೋಡುತಲಿ ನಿತ್ಯ
ತಾನ್ ಅಂತರಾತ್ಮನಾ ಚಿಂತನೆಯೊಳಿರುವಾ
ಆತನೆ ಆ ಕರ್ಮಯೋಗಿ ತಾನ್ ಕೇಳ್ರಿ
ಹಿಗ್ಗಲಾರನು ಇಷ್ಟವಸ್ತುಗಳ ಪಡೆಯೆ,

1298

ಮನರತಿಗಳಾರವ ನಿಷ್ಕ್ರಿಯಮಾಡುವದಕೆ ಇಹದಿ,
ಅದುವೆ ಸ್ಥಿತಪ್ರಜ್ಞತೆಗೆ ಮೂಲವದು ನೋಡಿತ್ತೆ!

॥ ೨೦ ॥

"ಮನವೆಂಬ ಮರ್ಕಟವ ಕಟ್ಟಿಹದೆಯೆ ನೋಡಾ
ಅನವಶ್ಯವದು ವಿಷಯದಲಿ ಮನವನಿಡದ
ಯೋಗಿ ಆವನೇ ಅಂತರಾತ್ಮನಲಿ ನಿತ್ಯ
ಸುಖಶಾಂತಿಯನು ಹೊಂದುವನು ಕೇಳು ಗೆಳೆಯಾ!
ಇಟ್ಟು ಕೇಳ್ ಮನವನ್ನು ನಿಲ್ಲಿಸಿಯೆ ನಿತ್ಯ
ಬ್ರಹ್ಮನನೆ ಧ್ಯಾನಿಸುತ ಹಗಲಿರುಳು ಎಲ್ಲಾ
ಇಹನಾವನವನೆಯೆ ಪಡೆಯುವನು ಸುಖವ
ಅಕ್ಷಯವಾಗಿಹ ಮೋಕ್ಷದಾ ರಕ್ಷೆಯನಾ!

॥ ೨೧ ॥

"ಎಲೆ ಪೃಥಾತನಯ ಕೇಳ್ ವಿಷಯೇಂದ್ರಿಯಗಳ
ಸಂಯೋಗದಲಿ ತೋರುತಿಹ ಭೋಗ ಭಾಗ್ಯ
ಸುಖವು ಸಂತೋಷವವು ಕ್ಷಣಿಕವವು ನಿಜವು
ಒದಗಿಪುವು ದುಃಖವನು ದುಗುಡವನು ಜನಕೆ!
ಸುಖದುಃಖಗಳು ಲಾಭನಷ್ಟಗಳು ನೋಡಾ
ಜೋಗುತಿಹ ಮನೋಕ್ಷೋಭಕವು ಕೇಳ್ ಮೂಲ;
ಜೀವಾತ್ಮನಾ ಕೋಮಲತೆಯನ್ನು ಅರಿತಾ
ಆತ್ಮಜ್ಞಾನಿಯು ಅರಿಯನು ತಾಳನಿಂತಾ!

॥ ೨೨ ॥

"ದೇಹವಿದು ನಿರ್ಜೀವವಾಗುವದಕೆ ಮೊದಲೆ
ಯೋಗದಭ್ಯಾಸ ಪಡೆಯಾ ವೇಳೆಯಲ್ಲಿ,
ಮನೋದ್ವೇಗ ಕೆಡೆಗೊಡುತಿಹ ಕಾಮ ಕ್ರೋಧ
ಮೋಹಾದಿಗಳ ಮನದ ಉದ್ರೇಕಗಳನಾ
ತಡೆಯುಬಲವನಾವನೋ ಆವನೆ ಜಗದಿ
ಆತ್ಮಾನುಭವವನ್ನು ಹೊಂದುವನು ನಿಜದಿ;
ಆವನೆ ಬ್ರಹ್ಮಾನುಭವದಲಿ ಮುಳುಗಿದವನು
ಆವನೆ ಅತಿ ಸಂತೃಪ್ತಿಗೊಂಡ ಸುಖಿಯಹನು

॥ ೨೩ ॥

"ಆತ್ಮಾನುಭವದಲ್ಲಿ ಆನಂದಿಸುತ್ತ
ತಾನ್ ಅಂತರಾತ್ಮದಲಿ ಸುಖಿಸುತ್ತ ನಿತ್ಯ
ನಿತ್ಯಾತ್ಮ ಜ್ಞಾನದಲಿ ನೆಲೆಗೊಳಿಸ ಮನವ
ಆತ್ಮನಿಂದಲಿ ಆತ್ಮಜ್ಞಾನವನು ಪಡೆವ
ಯೋಗಿಯವನೇ ಜ್ಞಾನಿ ಬ್ರಹ್ಮಸ್ವರೂಪಿ,
ಬ್ರಹ್ಮಾನಂದವ ಹೊಂದಿದಾನಿಂದ್ಯ ರೂಪಿ,"

ಎಂದೆನುತ ಜೀವಾತ್ಮ ಯೋಗಿಯಾ ಕಥನ
ಹೇಳಿದನು ಸುವ್ಯಕ್ತವಾಗಿ ಶ್ರೀಕೃಷ್ಣ!

॥ ೨೪ ॥

"ಜಯಿಸಿ ಸುಖ ದುಃಖಾದಿ ದ್ವಂದ್ವಗಳನೆಲ್ಲ
ಸಂದೇಹದಾ ಮನೋಭ್ರಾಂತಿಯದನೆಲ್ಲ;
ಇಂದ್ರಿಯಗಳನು ಅಡಗಿಸುತ ಶುದ್ಧಮನದಿ
ಜೀವಿಕೋಟಿಯ ಹಿತದಲ್ಲಿಯೆ ನಿರತರಾಗಿ
ಕಾವರಿಯೋ ಋಷಿವರರು ಜಗದಲ್ಲಿ ನಿಜವ್ರ
ಬ್ರಹ್ಮಾನಂದದ ಆನಂದದಿ ಜಾಗೃತರಾಗಿ,
ಕರುಣಿಜರ ಮನಸಿಜರ ಕೋಮಲತೆಯಂತೆ
ಜೀವಿಗಳ ಕಾಣುತಿಹ ಜೀವಾತ್ಮ ಯೋಗಿ!

॥ ೨೫ ॥

"ಕಾಮ ಕ್ರೋಧಾದಿಗಳನೆಲ್ಲವನು ತ್ಯಜಿಸಿ
ಯೋಗದಭ್ಯಾಸವ ನಿರಂತರ ನಿರ್ವಹಿಸಿ
ಮನವನ್ನು ಮನೋಬಲದಿಂದ ನಿಗ್ರಹಿಸಿ
ಆತ್ಮದ ಸ್ವರೂಪವದನೆಲ್ಲವನು ಗ್ರಹಿಸಿ
ಸಾಯುಜ್ಯವನು ಪಡೆಯಲೆಳಸುಹರು ಕೇಳ್ಕೆ
ಸದ್ಬ್ರಹ್ಮನಿಷ್ಠರು ವಿರಕ್ತರವರಿಹರೆ,
ಬ್ರಹ್ಮಲೋಕದ ಸನಿಹದಲಿ ಜೀವಿಸುವರು
ದೇವರ್ಷಿಗಳು ಎನುತ ಖ್ಯಾತರಹರವರು!

॥ ೨೬ ॥

"ಕೇಳ್ ಬಾಹ್ಯ ಸ್ಪರ್ಶಾದಿ ವಿಷಯಗಳನೆಲ್ಲ
ಮೋಹಿಸದೆ ಆಳಿಸದೆಯೇ ದೂರವಿರುತ
ಕಣ್ಗಳನು ಹುಬ್ಬುಗಳ ನಡುವಿರುತ್ತು ಧ್ಯಾನಾ
ಪ್ರಾಣಾಪಾನ ಆಣಗಲಿರಿಸುತ, ನೋಡಾ
ಶ್ವಾಸ ಉಚ್ಛ್ವಾಸದೊಳೆ ಸಮಗತಿಯಲಂತೆ
ಇರಿಸುತಲೆ 'ದಿನರಾತ್ರಿ' ಎಚ್ಚರತ, ಇದ್ದ
ನಿಷ್ಕಾಮಿ ಸುಜ್ಞಾನಿಗಳು ಒಂದಾದಂತೆ
ತಪೋಬಲದಾ ವೃದ್ಧಿ ಆದೆ ಸಿದ್ಧಿಯಂತೆ—

॥ ೨೭ ॥

"ಇಂದ್ರಿಯಗಳನು ಮನವನಾ ಬುದ್ಧಿಯನ್ನು
ಅಡಗಿಸುತಲದೆ ಆತ್ಮಸುಖವೆಂಬುದನ್ನು
ಅರಿತವನು ಷಡ್ವೈರಿಗಳ ದೂರವಿಟ್ಟು
ಪರಮಾರ್ಥಕೆ ಹಿಡಿದ ಚಿರಶಾಂತಿಯನ್ನು

1300

ಬಯಸುತಸುತ್ತ ತಾನ್ ಆತ್ಮಧ್ಯಾನದಲಿ ನಿತ್ಯ
ಮನವನ್ನು ನಿಲಿಗೊಳಿಸುವ ಯೋಗಿ ನೋಡಾ
ಇಹಲೋಕದಲಿ ಮುಕ್ತನಾಗುವನು ಮಿತ್ರಾ
ಅದೆ ಕರ್ಮ ಸನ್ಯಾಸದಾ ಯೋಗಸೂತ್ರ !

। ೨೮ ॥

"ಕೇಳಿತ್ತೆ ಪಾರ್ಥನೆ ಆದಾರೆನ್ನ ನಿತ್ಯ
ಯಜ್ಞ ಯಾಗಾದಿಯಿಂದಾರಾಧ್ಯನೆನುತಾ
ಈರೇಳು ಲೋಕದ ನಿಯಾಮಕನು ಎಂದು
ಜೀವಿ ಸರ್ವರಿಗೆ ನಾನೆ ಪೋಷಕನು ಎಂದು
ಲೋಕಗಳ ನಡೆಸುತಿಹನೇ ನಾನು ಎಂದು
ತಿಳಿಯುವವನದಾರಿಹನು ಅವನೆಯೋ ನಿಜಕೂ
ಚಿರಶಾಂತಿಯನು ಪೊಂದುವವನು," ಎಂದು ಕೃಷ್ಣ
ಹೇಳಿದನು ಅರ್ಜುನಗೆ ವೇದೋಕ್ತಿಯನ್ನು !

॥ ೨೯ ॥

—— × ——

(ಐದನೇ ಅಧ್ಯಾಯ ಸಂಪೂರ್ಣವು.)

ಅಧ್ಯಾಯ ೬ — ಆತ್ಮಸಂಯಮ ಯೋಗ!

"ಕರ್ಮಫಲವಾಶ್ರಯಿಸದೆಯೇ ಲೋಕದಲ್ಲಿ
ದಿವ್ಯಾಗ್ನನು ನಿರಗ್ನಿಯಲಿ ನೇಮದಲಿ ಕೇಳ್ವೆ,
ಕರ್ಮಗಳನೆಸಗುವವನೇ ಯೋಗಿಯೆಂದು,
ಸಂನ್ಯಾಸಿವನೆಂಬುದನು ತಿಳಿಯೊ ನೀನ್ ಇಂದು;
ಹೋಮಾಗ್ನಿಯನು ಹೊತ್ತಿಸದೆಯೆ ಕೇಳ್ ತನ್ನ
ಕರ್ತವ್ಯವನು ನಿತ್ಯವೆಸಗದಿಹನನ್ನು
ಯೋಗಿಯೆಂದೆನಿಸರೇ ಜಗದಲ್ಲಿ ಪಾರ್ಥ,"
ಎಂದೆನುತ ಮುಕುಂದ ಮುರವಿಂದನಾ ಕೃಷ್ಣ!

॥ ೧ ॥

"ಪಾಂಡವನೆ ಕೇಳ್, ಜ್ಞಾನಿಗಳು ಆಚರಿಸುವ
ಸನ್ಯಾಸವೂ ಲೌಕಿಕ ಕರ್ಮತ್ಯಾಗ,
ಎಲ್ಲವನು ಕರ್ಮಯೋಗವು ಎಂದು ಎನುತೆ
ಹೇಳುವರು ವೈದಿಕರು ತಿಳಿಯೆಲೈ ಸಖನೆ!
ಮನದಲ್ಲಿ ಕಾಮಲೋಭಾದಿಗಳನಿಟ್ಟು
ಸ್ವಾರ್ಥಸಾಧನೆಗೆಂದೆ ಕರ್ಮವನು ಗೈದು
ಇಷ್ಟಾರ್ಥದಿಯೆ ಯೋಗಿಯೆಂದೆನಿಸನವನಿಹದಿ,"
ಎಂದೆನುತಲಾ ಹರಿಯು ಹೇಳಿದ ಮತ್ತೊಮ್ಮೆ!

॥ ೨ ॥

"ಜ್ಞಾನಯೋಗವನೇರಲಿಚ್ಛಿಸುವ ಯೋಗಿ
ನಿಷ್ಕಾಮ ಕರ್ಮದಿಂದಲೆ ಮೀರಿ ಸಾಗಿ
ವೈರಾಗ್ಯ ಜೀವನದ ಸೌಭಾಗ್ಯಕೆಳಸಿ
ಬೆಳಗುವನು ಸಾಧಕನು ಎಂದೆನಿಸಿ ಜಗದಿ;
ಜ್ಞಾನೋದಯವ ಹೊಂದಿದಾ ಜ್ಞಾನಿ ಕಂತು
ಕರ್ಮನಿವೃತ್ತಿಯೊ ವಿರಕ್ತನೊಲು ಅವನು
ಮೋಕ್ಷವನು ಪಡೆಯುವನು ಎಂದೆನುವರಲ
ಶ್ರೀ ವಸೆಯೇ ಆದರ್ಶ ಮುನಿವರನು ನಿಜವು!

॥ ೩ ॥

"ಇಂದ್ರಿಯಗಳನು ನಿಗ್ರಹಿಸುವವರು ಹಲವು
ಶಬ್ದಾದಿ ವಿಷಯಗಳನಕೋ ದೂರವಿಟ್ಟು
ಮನೋದ್ವೇಗದಾ ಕರ್ಮದಲಿ ಮೋಹಗೊಳದೆ
ಆಶೆ ಆಕಾಂಕ್ಷೆಗಳನೆಲ್ಲವನು ಬಿಡಿಸಿ
ತ್ಯಜಿಸಿದವನೆಲೆ ಜಗದಿ ಸನ್ಯಾಸಿಯೆಂದು
ಯೋಗಬಲದಾ ಸಿದ್ಧಿಯನು ಪಡೆವನೆಂದು

ಖ್ಯಾತನಹನವನಿಯೆಂ ಪರಯೋಗಿ ಕೇಳಾ
ಆದುದವೆ ಕ್ಷೀಣ ಯೋಗಿಜನದಾ ಮನವನ್ನು ಪಾರ್ಥಾ!

॥ ೪ ॥

"ಮನಸ್ಸೇ ಬುದ್ಧಿಯಲು ಶುದ್ಧಿಯಲು ನೋಡಿಕ್ಕೆ
ಆತ್ಮವನು ತನ್ನನ್ನು ತಾನ್ ಎಂಬಲಂತೆ
ಉದ್ಧರಿಸಲದೆ ಜೀವಿಸದ ಧ್ಯೇಯವು ನ್ಯಾಯವು,
ತನ್ನ ತಾನ್ ದುರ್ಗತಿಗೆ ಒಯ್ವುದದನ್ಯಾಯವು!
ತನ್ನಾತ್ಮವೇ ತನಗೆ ಮಿತ್ರನಹನಂತೆಯು
ಅಂತೆಯೇ ತನಗೆ ತಾನ್ ಶತ್ರುವೆಂದಂತೆಯು
ತೋರುತಿರೆ ತನಗೆ ತಾನೆಯು ಬಂಧು ಆತ್ಮ
ಮತ್ತೊಮ್ಮೆ ಬೇರೊಂದು ಬಗೆ ರೂಪವೆ ಇರವೋ!

॥ ೫ ॥

"ತನ್ನ ತಾನೆಯು ತನ್ನ ಆತ್ಮದೊಳು ಹೊಕ್ಕು
ಬುದ್ಧಿ ಬಲವನು ತನ್ನ ಮನೋವೃತ್ತಿಗಳಿಂದ
ವಿನಿಯೋಗಿಸುತಲಂತೆ ತನ್ನ ಮನವನ್ನು
ಜಯಿಸಿದೊಡೆ ತನ್ನ ಮನವೇ ತನಗೆ ಬಂಧು;
ಅನಿತು ಸ್ವಾಧೀನದಲಿ ಇಲ್ಲದಿಹ ತನ್ನ
ಮನವು ಕೇಳು ತನಗೆಯೇ ಶತ್ರುವೆಂದೆನಿಸಾ!
ಮನೋಜಯವದೆ ಬಾಳ್ವೆಯಾ ಗಹನ ಗೆಲುವಾ,"
ಎಂದೆನುತ ಹೇಳಿದನು ಗೋಪಾಲಕೃಷ್ಣ!

॥ ೬ ॥

"ಕಾಮ ಕ್ರೋಧವನಟ್ಟಿ ಮನವ ತಾನ್ ಜಯಿಸಿ
ಶಾಂತಾತ್ಮನೆಂದೆನಿಸಿಹನ ಮನವು ಜಗದಿ
ಶೀತೋಷ್ಣದೊಳು ಅನಿತು ಸುಖದುಃಖ ಪಕ್ಷಾ
ಮಾನಾಪಮಾನವೆಂಬಾ ದ್ವಂದ್ವಗಳಿಗೂ
ಕದಲದೆಯೆ ಸ್ಥಿತಪ್ರಜ್ಞತೆಯನಂತು ಹೊಂದಿ
ಆತ್ಮನೆಂಬ ಸಂತೋಷವನ್ನು ಅನುಭವಿಸಿ
ಬೆಳಗುವುದು ಜಗವನ್ನು ಅದೆ ಯೋಗಿ ನೋಡಾ
ಶುದ್ಧಾತ್ಮನಾ ಸುಖವೆ ನಿತ್ಯಸುಖವದುವಾ!

॥ ೭ ॥

"ಆತ್ಮಸ್ವರೂಪದಿಹ ದಿವ್ಯಾತ್ಮ ಜ್ಞಾನ
ಪ್ರಕೃತಿಯಿಂದತಿ ಭಿನ್ನವಾಗಿಹ ವಿಜ್ಞಾನ,
ಸುವಿಚಾರವರಿತು ಅತಿ ಸಂತೃಪ್ತನಾಗಿ
ಇಂದ್ರಿಯಗಳನು ಜ್ಞಾನಬಲದಿ ನಿಗ್ರಹಿಸಿ
ಕಲ್ಲುಮಣ್ಣು ಹೊನ್ನುವವು ಎಲ್ಲ ಸಮವೆಂದು
ಸಮದೃಷ್ಟಿ ಸಮಬುದ್ಧಿಯಲಿ ನೋಡುವವನು,

ಜ್ಞಾನಿಗಳಲಗ್ರ ಮಹಾಜ್ಞಾನಿಯೆಂದುಲಿದ
ಜ್ಞಾನಯೋಗಿಯು ತಾನ್ ಎಂದೆನಿಸಿಹದ!

॥ ೮ ॥

"ಇಷ್ಟಾನಿಷ್ಟರು ಮಿತ್ರ ಶತ್ರುಗಳು ಎಲ್ಲ
ಮಧ್ಯಸ್ಥರೊಡೆಯು ನಿರ್ಲಕ್ಷಿತರನೆಲ್ಲ
ದ್ವೇಷಿಗಳು ಬಂಧುಗಳು ಬಾಂಧವರು ಎಂದು
ಸಾಧುಗಳು ಪಾಪಿಗಳು ಸರ್ವ ಜನವನ್ನು
ಸಮಭಾವ ಸಮಶೀಲನಾ ದೃಷ್ಟಿಯಿಂದಾ
ನೋಳ್ಪವನೆ ಯೋಗಿಜನದೆಡೆಯಲ್ಲಿ ಇರುವ
ದಿವ್ಯಾತ್ಮನೆಂದೆನಿಸನೋ ನಿತ್ಯ ಅವನು
ಉತ್ತಮೋತ್ತಮನೆಂದು ಬೆಳಗುವನು ನಿಜವು!

॥ ೯ ॥

"ಮಹಾಯೋಗಿಯು ಇಹದ ಸುಖತ್ಯಾಗಿಯಾಗಿ
ಮನವ ದೇಹೇಂದ್ರಿಯಗಳನ್ನು ನಿಗ್ರಹಿಸಿ,
ಕಾಮ ಮೋಹಾದಿ ಷಡ್ವೈರಿಗಳನಂತು
ಮಹತ್ತು ಸಿರಿ ಸಂಪತ್ತುವೆಲ್ಲವನು ತೊರೆದು
ಏಕಾಕಿಯಾಗಿಯೆ ರಹಸ್ಯದಲಿ ನಿತ್ಯ
ಮಾನಸಿರತ ಮನವನ್ನು ಆತ್ಮನಲಿ ಇಡುತ
ಇರ್ದೊಡವನೇ ಯೋಗಿಯೆಂದೆನಿಸಿಹದ
ಸಾಧಕನು ಚಿತ್ತವಿಡಿದ ಯೋಜಕನು ಅವನೆ!

॥ ೧೦ ॥

"ಪರಿಶುದ್ಧವಹ ಸ್ಥಳದಿ ದರ್ಭೆಯನು ಹಾಸಿ
ಕೃಷ್ಣಾಜಿನವ ಅದರ ಮೇಲೆಯೇ ಇರಿಸಿ
ಪೊಸ ವಸನವೊಂದನದರುದ್ದಕ್ಕು ಹಾಸಿ
ಅತಿ ಏರು ಬಹು ತಗ್ಗವಲ್ಲದೆಡೆಯಲ್ಲಿ
ಸಮತಟ್ಟು ನೆಲತಟ್ಟಿನಾ ಪೀಠದಲ್ಲಿ
ಸ್ಥಿರತೆಯ ಸುತ್ತೆಲ್ಲ ಹಸನಾಗಿ ತೋರಿ
ಮನತೆಯನು ನೆಲೆನಿಸಿಗೆ ಪ್ರಾಯಸಿರಲದುವೆ,
ಪರಯೋಗಿಯಾ "ತಪೋಭೂಮಿ"ಯೆಂದು ಕೇಳ್ವೆ!

॥ ೧೧ ॥

"ಯೋಗಾಸನದಿ ಇರುತ ಧ್ಯಾನಾಸನದಲಿ
ದಿಟ್ಟತನದಾ ಮನವ ನಿಟ್ಟನೆಯೆ ಇರಿಸಿ
ಚಿತ್ತೇಂದ್ರಿಯಗಳನು ಒತ್ತಟ್ಟು ತಡೆದು
ಕೇಳ್ಮೆ ಮನೋಬುದ್ಧಿಗಂತು ಎಡೆಗೊಡದೆ ತಾನು
ಚಿತ್ತಶುದ್ಧಿಗೆ ತಾನು ನಿತ್ಯಾತ್ಮನಂತೆ
ಶ್ರಮಿಸುತ್ತಲಿ ಯೋಗಾಭ್ಯಾಸದಲಿ ನೋಳ್ಪೆ,

ನಿರುತ್ತರಾಗುತ ನಿತ್ಯ ಇರುತಿರುವುದೆ ಯೋಗ
ಆತ್ಮಶುದ್ಧಿಯ ಸಿದ್ಧಿಗಿದೆ ದಾರಿ ಕೇಳು!

" ೧೧ "

"ದೇಹವನು ತಲೆಗಳನು ಕೊರಲುಗಳನ್ನು
ಕದಲಿಸದೆ ಚಿತ್ರದಂತೆ ನೇರದಿಯೆ ಇರಿಸು
ನಾಲ್ದೆಸೆಗಳನು ಮರೆತು ಕಣ್ಣಾಲಿಗಳನ್ನು
ಹುಬ್ಬುಗಳ ನಡುವಿಟ್ಟು ನಿಟ್ಟಿಸಿಯೆ ಕಾಣುತ
ಸ್ಥಿರಮನವನಾ ಸ್ವಾಮಿಯದಲಿ ಇಟ್ಟು ಧ್ಯಾನ
ಕೌಂತೇಯ ತದೇಕ ಚಿತ್ತದೆ ಆತ್ಮಜ್ಞಾನ—
ಅಂತರಾತ್ಮದೆ ತಾನು ನೋಡುತ್ತಲಿ ತನ್ನ
ಇರುತಿರುವವನೇ ಯೋಗಿ ಪರಜ್ಞಾನಿ ನೋಡಾ!

" ೧೨ "

"ಮನವನ್ನು ವಿಷಯಾದಿಗಳ ಬಾಧೆಯಿಂದ
ತಪ್ಪಿಸುತಲಿ ನಿರ್ಭಯತೆದೆ ದೃಢಚಿತ್ತದಿಂದ
ಬ್ರಹ್ಮಚರ್ಯ ವ್ರತವ ಸುವಿಚಾರ ಸಹಿತ
ಆಸನಸಿರಿಸುತಲಿ ನನ್ನಲಿಯೆ ಮನವನಿಡುತ
ದಿನರಾತ್ರಿಯಲು ನನ್ನನೇ ಧ್ಯಾನಿಸುತ್ತ
ಇದ್ದೊಡದುವೇ ತಪ್ಪೋ ವ್ರತವದುವೋ ಶಾಸ್ತ್ರ,"
ಎಂದೆನುತ ಪುಂಡರೀಕಾಕ್ಷನವ ಸಂದು
ಹೇಳಿದನು ಅರ್ಜುನನಗೆ ವಿವರವದಸಂದು!

" ೧೩ "

"ಮನವನಿಂತೆನ್ನಲ್ಲಿ ನಿಶ್ಚಲದೆ ಇರಿಸಿ
ನಿತ್ಯಾತ್ಮ ಧ್ಯಾನದಿ ನಿರಂತರವು ಕೂಡಿ
ಆತ್ಮಾನಂದದ ಸುಖದ ಆಧಿಕ್ಯವನ್ನು
ಪಡೆಯುತಲಿಂದಿಳಿಸುತಲಿ ಸ್ಮರಿಸುತಲಿ ನನ್ನ,
ಇದ್ದೊಡವನೇ ನಿಜದೆ ಮನಶ್ಶಾಂತಿಯನ್ನು
ನಿರ್ವಾಣಗತಿಯುದರ ನಿಲ್ದಾಣವನ್ನು
ತಲುಪುವನದೆಂಬುದನು ಕೇಳಿನ್ನು ಪಾರ್ಥ
ಯೋಗಿವರರಾ ಲೋಕವಂತದುವೋ ಕೇಳು!

" ೧೪ "

"ಅತಿ ಭೋಜನದಿ ಕೊಬ್ಬಿ ಉಬ್ಬಿಹನಿಗಂತು
ಕೇಳ್ ನಿರಾಹಾರಿಯೊಲು ಸೊರಗಿದವಗಂತು
ದಿನರಾತ್ರಿಯಲಿ ನಿತ್ಯ ನಿದ್ರೆಯಲಿ ಕಳೆಯುತ
ಅಂತೆಯೆ ಸದಾ ಜಾಗರಣೆಯಲಿ ಬಳಲಿ—
ಅಂತಹಗೆ ಸಿದ್ಧಿಸದು ಸಾಧಿಸದು ಕೇಳು
ಯೋಗಬಲದಾ ತಪೋಸಿದ್ಧಿಯುದು ನಿಜವು,"

ಎಂದೆನುತ ಭಗವಂತನೆ ವ್ಯಕ್ತವಾಗಿ
ಹೇಳಿದನು ಯೋಗಿವರರಾ ತೆರವನಲ್ಲಿ!

" ೧೬ "

"ಅಲಸಲಿ ಮಿತಾಹಾರಿಯೋ ತಾನು ಆಗ
ತಕ್ಕಷ್ಟು ಕರ್ಮಗಳನಿಹದಲ್ಲಿ ನಡೆಸಿ,
ಬೇಕಷ್ಟು ನಿದ್ರೆಯನು ಮಿತವಾಗಿ ಪಡೆದು
ಆದರಷ್ಟು ಮಿತವಾಗಿ ಎಚ್ಚರತು ಇದ್ದು
ಮಿತಾಮಿತಗಳನು ವಿಜ್ಞಾನಿಸುವಂಥನೆ
ಅನವರತವಾ ಯೋಗಿಗಳು ಕೇಳು ನಿಜದಿ
ಜಗದ ಪರಿತಾಪಗಳ ದುಃಖಗಳ ತೊಡೆವ
ಯೋಗಬಲ ಸಿದ್ಧಿಪುದು ಎಂದೆನುವರಿಲ್ಲ!

" ೧೭ "

"ಮನವಿದುವೊ ಆತ್ಮದಲಿ ಎಂದು ನೆಲೆಸುವುದೊ
ನಿಶ್ಚಲತೆಯನು ಮನವು ಎಂದು ಪಡೆಯುವುದೊ
ಅಂತಾದ ವೇಳೆಯಲಿ ವಿಷಯೇಂದ್ರಿಯಗಳ
ಕಾಮಾದಿ ಚಪಲತೆಯು ಅಡಗುವುದು ಕೇಳು;
ಅಂತಿಹನೆ ಯಾಗ ಯೋಗಾದಿಗಳ ಸಮದಿ,
ಸಮನಾಗಿ ಸಮವಿರುತ ಯೋಗಾರ್ಹನೆನಿಸಿ
ಬಾಳುವವನು ಪಡೆಯುವವನು ದೇವನೆಲೆಯನ್ನು,"
ಎಂದೆನುತ ಹೇಳಿದನು ವಸುದೇವಸುತನು!

" ೧೮ "

"ಚಿತ್ತವನು ಸ್ವಾಧೀನದಲಿ ಇಟ್ಟು ನಿತ್ಯ
ಜೀವಾತ್ಮನಾ ಧ್ಯಾನದಲಿ ಮನವು ಇರಲು,
ಕೇಳ್ ವಾಯುವಿಲ್ಲದಿಹ ತಾಣದಲಿ ನೋಡೆ
ಹೊತ್ತುತಿಹ ಹೊಂಬೆಳಗ ದೀಪಕಾಂತಿಯಂತೆ
ಅತ್ತಿತ್ತ ಬಾಗದೆಯೆ ಕದಲದೆಯೆ ಆದುವೊ
ನಿತ್ಯನಿರುವಂತೆ ಸರಿ ಯೋಗಿಯಾ ಮನವೊ
ಸ್ಥಿತಪ್ರಜ್ಞತೆಯನು ಹೊಂದಿ ನಿಶ್ಚಲತೆಯಿಂದ
ಶೋಭಿಸಲದೆ ಯೋಗಾಭ್ಯಾಸದಾ ಫಲವು!

" ೧೯ "

"ಯೋಗದ ಅಭ್ಯಾಸಬಲದಿಂದ ಮನವನ್ನು
ನಿಗ್ರಹಿಸಿ ಅದನೆ ಏಕಾಗ್ರತೆಯಲಂತು
ನಿಲ್ಲಿಸುತಲಾ ಸಿದ್ಧ ಶುದ್ಧಾತ್ಮ ಕೇಳು
ತನ್ನ ಒಳರೂಪವ ಸ್ವರೂಪವದನಲ್ಲಿ
ತಾನಾಗಿ ನೋಡುತಲಾನಂದಿಸುತಲವನೊ
ತನ್ನ ತಾನ್ ಅರಿತಿಹವನೇ ಜ್ಞಾನಿ ನಿಜವೊ!"

ಎಂದೆನುತಲಾ ಹರಿಯು ಪೇಳಿದನು ಕೇಳಿತ್ತು,
ಸವಿರಾಂಗನಾದ ಮನಸ್ಸೇ ನಿಂದು ತಾನ್ ಬಂದು!

|| —೨೦ ||

"ಧ್ಯಾನಯೋಗದಲಿರುತ್ತ" ಲೋಕವನು ಮರೆತು
ಇಂದ್ರಿಯಂಗಳ ಹರಿವೆಯಿಲ್ಲದೆಯೆ ಕಳಿತು
ವಿಷಯಂಗಳು ಗೋಚರವೇನಿಲ್ಲದೆಯೆ ಇದ್ದು
ಬುದ್ಧಿಬಲದಿಂದಲದು ಲೋಕಗಳನುಳಿದು
ಇಹಪರಗಳ ಸುಖವ ಮನದಿ ಅನುಭವಿಸಿ
ಪಾರಮಾರ್ಥಿಕ ಜ್ಞಾನವನು ಸರ್ವ ಹರಿ
ನಿಶ್ಚಲತ್ವದಿಂದ ಕಳಿತಿಹ ಯೋಗಿ ಜಗದಿ
ದೈವಸ್ವರೂಪ ತಾನ್ ಎಂದೆನಿಸು ನರನೆ!

|| —೨೧ ||

"ಆತ್ಮಾನುಭವವನ್ನು" ಅತಿಪ್ರಿಯವಾಗಿ
ಪಡೆದೊಡದು ಮೀರಿ ಮತ್ತಿಹುದನು ವನಲ್ಲಿ! —"
ಎಂದೆನುತ ಆತ್ಮಾನಂದವೆ ಸ್ವರ್ಗವೆಂದು
ತಿಳಿಯುತಲಿ ಕರ್ಮಯೋಗಿಯು ತಾನು ಬಂತು
ದುಃಖದಲಿ ಮುಳುಗಿದಾ ವೇಳೆಯಲಿ ನೋಡ್ವ
ಮನೋಕ್ಷೋಭೆಗೊಳಗಾಗದೇ ಇಹಜನವನೆ
ಸ್ವರ್ಗೀಯ ಆನಂದದಲಿ ಸುಖಿಸುವವನೆ
ಆತ್ಮಸುಖದಾ ಫೈಳಿಕನಲಿ ಮೆರೆಯುವವನೆ!

|| —೨೨ ||

"ಲೋಕದಿಹ" ಪಲತರದ ದುಃಖವದನೆಲ್ಲ
ದುಃಖಗಳನೊಡಗಿಹ ಸಂಬಂಧವದನೆಲ್ಲ
ಕಡಿದೊಗೆಯೆ ಕಾಣುವುದೆ ಆತ್ಮಸುಖಯೋಗ,
ಎಂಬುದನು ತಿಳಿಯುತ್ತ ಪೋ ಪಾರ್ಥ ಕೇಳು!
ಆತ್ಮ ಸಂಯಮ ಯೋಗವನು ಪೊಂದೆ ಜಗದಿ
ಶಾಂತಮನ ಗತ್ಯಾಪ್ತೊಂದುಗೂಡಲದರೊಡನೆ
ಸ್ಥಿರಗತಿಗೆ ಸಂಕಲ್ಪ ಸಾಧನೆಯು ಬೇಕಾಗ್ಯ"
ಎಂದೆನುತ ಬಣ್ಣಿಸಿದ ನಾತ್ಮದ ವಿಶೇಷ!

|| —೨೩ ||

"ಮನೋನಿಗ್ರಹ" ಸಂಕಲ್ಪದಿಗಳು ಜತೆಯೆ
ಉತ್ಪತ್ತಿಹ ಆಶೆಯನು ಬಿಟ್ಟುಬಿಡ್ಡುಯೆನುತ್ತೆ,
ಕಡೆಗಂತು ಸಂಪೂರ್ಣವಾಗಿ ಅದ ತೊರೆದು
ಕೇಳ್ ಜ್ಞಾನ ಬುದ್ಧಿಯು ವಿವೇಕದಿಂದಂತು
ಇಂದ್ರಿಯಂಗಳನು ಸರ್ವ ವಿಷಯಾದಿಯಿಂದ
ತಡೆದಿರುವುದೇ ಆತ್ಮಯೋಗದಾ ಮೂಲ,"

ಎಂದೆನುತ್ತ ಅರ್ಜುನನಿಗೆ ಹೇಳಿದನು ಕೃಷ್ಣ
ಮುಗಿದುದೆಯೆಂಬ ಮುಗಿಯದಿಹ ಗೀತೋಕ್ತಿಯನ್ನು!

॥ ೨೫ ॥

"ಬುದ್ಧಿಬಲದಿಂದ ಮನವನು ನಿಗ್ರಹಿಸುತ್ತ
ಮನಸ್ಸನ್ನು ಅಂತೆಯೇ ಪ್ರಶಮಿಸಿ ನೋಡಿ
ಕಡೆಗಂತು ವಿಷಯಾದಿಗಳನ್ನು ಬಿಟ್ಟು
ಮನಸ್ಸನ್ನು ಆತ್ಮಾನುಭವದಾಗಿ ಅಂತು
ತಿರುಗಿಸುತ್ತಲಾ ಮನಸ್ಸಿಗೆ ಬೇರಾವುದಕೆ
ಎಡೆಗೊಡದೆ ಸಾಗುವುದೆ ನಿಷ್ಠೆಯಾ ಬಾಳ್ವೆ,"
ಎಂಬುದನೆ ಮೇಲಿಂದ ಮೇಲೆಯೆ ಒಂದಂತೆ
ಹೇಳಿರುವರೋ ಆತ್ಮಯೋಗಿಗಳು ಅಂದು —

॥ ೨೬ ॥

"ಚಂಚಲತೆಗೆಡೆಗೊಂಡ ಇಂದ್ರಿಯಗಳಂತೆ
'ಮನವೆಂಬ ಮರ್ಕಟ'ದ ಕಪಟಕೇಳಿಗಾಗಿ
ತಡೆದಿರುತ್ತಲಾ ಮನವ ಸ್ವಾಮಿತ್ವದಲಿ ಇಟ್ಟು
ಸ್ಥಿತಪ್ರಜ್ಞತೆಯ ತಪೋಬಲದ ಕೂಡಿಟ್ಟು
ಆತ್ಮಾನುಭವದಲಿ ಮನವನ್ನು ನಿಲ್ಲಿಸಿ
ಯೋಗಾಭಿ ಸಾಧನೆಯಲ್ಲಿ ತನುವ ನವೆಸಿ
ಮಾನವತ್ವವನುಳಿಸುವುದೆ ಪರಮ ಧರ್ಮ
ದೇವಾದಿಗಳು ಸಾರಿದಾ ಯೋಗಮಾರ್ಗ!

॥ ೨೭ ॥

"ತಿಳಿಯೆಲೈ ಹೇ ಪಾರ್ಥ ಯೋಗಿಜನ ಗುಣವಾ,
ಸಾಯುಜ್ಯ ಸುಖ ಯೋಗವನುಭವಿಸುವವನು,
ಶಾಂತಗುಣ ಸಂಪನ್ನನೋ ನಿತ್ಯ ಅವನು
ರಾಜಸ ಗುಣವ್ಯಾಪ್ತಿಯಿಲ್ಲದ ಸಾತ್ವಿಕನೊ ಅವನು;
ಆತ್ಮಾನುಭವದಲ್ಲಿ ತೇಲಾಡುತಿಹನಾ
ಪಾಪ ತಾಪಕ್ಕೆ ಅಂತು ಒಳಗಾಗದಿಹನಾ
ತಿಳಿಯೆಲೈ ಅವನೆಯೇ ಬ್ರಹ್ಮಾನುಭವನು,
ತನ್ನನೆ ತಾನ್ ಜಯಿಸಿಹ ಕಾಮವಿರಸವನು!

॥ ೨೮ ॥

"ಇಂತು ಮನವನು ಸದಾ ಸಾಧಿಸುತ ನಿಜದಿ
ಜೀವಾತ್ಮ ಜ್ಞಾನದೆಡೆಗೊಯ್ಯುತಲಿ ಕೊಳ್ವ,
ಕರ್ಮಬಂಧಗಳನ್ನು ನೀಗಿಯಿಹ ಯೋಗಿ,
ಕರ್ಮಫಲಾಪೇಕ್ಷೆಯನು ತಾಳದಿಹ ಜ್ಞಾನಿ,
ಪಡೆಯುವನು ಪರಬ್ರಹ್ಮ ಜ್ಞಾನವನು ತಾನೆ
ಹೊಂದುವನು ಸ್ವರ್ಗೀಯ ಸುಖವನ್ನು ಮನದಿ,"

ಎಂದೆನುತಲಾ ಹರಿಯು ಪೇಳಿದನು ಮುದದಿ
ಧೀರಪಾರ್ಥಗೆ ಜ್ಞಾನದೇಳ್ಗೆಯನು ಒಲಿದು!

" ೧೮ "

"ಧ್ಯಾನಾಭ್ಯಾಸಯೋಗದಲಿ ಮನವನಿತ್ತು ಒಲಿಸಿ
ಭೂತ ಸರ್ವ ಸ್ಥಿತಿಯುತ ಆತ್ಮಯುದಯವೆನಿಸಿ,
ನೆಲ ಜಲ ಚರಾಚರಗಳನು ನಿತ್ಯ ಆತ್ಮ
ತನಗೆ ಇರುವಂತೆಯೇ ಇವೆಯೆಂದು ಎನುತಾ
ಸಮಭಾವದಲಿ ಸರ್ವವನು ಕಂಡು ನಿತ್ಯ
ವಿಷಯವು ಸಮತ್ವವನು ಸಮಬುದ್ಧಿಯಿಂದ
ನೋಳ್ಪವನೆ ಜಗದಲ್ಲಿ ಯೋಗಿವರನೆಂದು
ಖ್ಯಾತನಹನೋ ಪೃಥಾತನಯ ಕೇಳ್ ಇಂದು!

" ೧೯ "

"ಸರ್ವ ವಸ್ತುಗಳಲ್ಲಿ ನನ್ನನ್ನು ನೋಳ್ಪ
ನನ್ನಲ್ಲಿಯೇ ಸರ್ವ ವಸ್ತುಗಳನೆಲ್ಲಾ
ಧೈರ್ಯ ಬಿಡದೆ ನೋಳ್ಪವನೇ ಜಗದಲ್ಲಿ ನಿತ್ಯ
ಯೋಗಿ ವರಜ್ಞಾನಿಯೆಂದೆನಿಸುವನು ಕೇಳಾ!
ಅಂತಹಗೆ ಆನ್ ದುರ್ಲಭನು ಅಲ್ಲ ತಿಳಿಯಿತ್ತು
ಆನ್ ಅವನಿಗಹುದಲ್ಲಿ ತ್ಯಾಜ್ಯವೆನ್ ಅಲ್ಲೈ;"
ಎಂದು ಜೀವಾತ್ಮ ಪರಮಾತ್ಮರೊಳಗಿರುವ
ಬಾಂಧವ್ಯವಿದ ಬಂಧುರದೆ ಪೇಳ್ದ ಕೃಷ್ಣ!

" ೨೦ "

"ಜೀವರಾಶಿಗಳಲ್ಲಿ ಇಹ ಆತ್ಮರೂಪಾ,
ಸ್ವಾಂಶದಲಿ ಎಸೆವ ನನ್ನನ್ನು ನಿತ್ಯ,
ಭೇದಾಭೇದವನಿರದೆಯೇ ಯಾರು ಸದಾ
ನೋಡುವನೋ ಅವನೆಯೇ ವಿಶ್ವವನು ಅರಿತ
ಆತ್ಮಜ್ಞಾನಿಯು ಅಂತೆ ಯುಗಾಂತರದಲಿವನೋ
ನನ್ನಲ್ಲಿ ಚಿರಚಿಂತನೆಯು ನೆಲೆಸಿಗವನೋ!"
ಎಂದೆನುತ ಪುರಹರಿಯು ಮುರಳಿಯನು ಪಿಡಿದು
ಊದಿದೊಲು ಹಾಡಿದನು ಗೀತೆಯಿದನಂತು —

" ೨೧ "

"ಕೇಳ್ ಪಾರ್ಥ ಕೇಳಿಲ್ಲಿ, ಜೀವಿಗಳ ಸುಖವು
ದುಃಖಗಳು ತನ್ನದೆಂದೆನ್ನುತಲಿ ಅಂತು,
ಲೋಕದಿಹ ಸರ್ವ ವಸ್ತುಗಳನೆಲ್ಲ
ತನ್ನದೆಂದೆನ್ನುತಲಿ ಸಮಬುದ್ಧಿಯಿಂದಾ
ನೋಳ್ಪವನದಾರಿಹನೋ ಅವನೆಯೇ ಜಗದಿ
ಯೋಗ ಶಿರೋಧಾರವನು ಪೊಂದಿಹನೆಂದೆನ್ನೈ,"

ಎಂದು ಮಧುಸೂದನನು ತಿಳಿಸಲಂದು,
ಪ್ರಶ್ನಿಸಿದನರ್ಜುನನು ಈ ರೀತಿಯಲಂತು:—

॥ ೨೧ ॥

"ಹೇ ಮಧುಸೂದನಾ ಕೇಳಯ್ಯ ಇನ್ನು,
ಸಮಭಾವ ಸಮಬುದ್ಧಿಯಾ ಯೋಗ ಮಾರ್ಗ
ಇದ ತೋರುತಲಿ ಹೇಳಿದೆಯೊ ಕರ್ಮಯೋಗ
ಮನದಲ್ಲೊ ತಿಳಿಯೆ ಆಗ ಮನದ ವೇದಾಂತ?
ಚಂಚಲತೆಯಿಂದೊಡಗೂಡಿ ಮನದ ಎಂತು
ಯೋಗಾಭ್ಯಾಸ ನಿಯತ ನಿಲುಗಲದೊ ಹೇಳು,"
ಎಂದೆನುತ ಕೇಳುತಲಿ ಮುಂದುವರಿದಂತು
ಪಾಂಡವನು ಮತ್ತೊಮ್ಮೆ ಕೇಳಿದನು ಇಂತು—

॥ ೨೨ ॥

"ಪುಂಡರೀಕಾಕ್ಷ ಕೇಳು, ಎನ್ನನೀ ಮನವು,
ಚಂಚಲತೆಯನು ನಿರಂತರ ಸೃಷ್ಟಿಪುದನ್ನು
ದೇಹೇಂದ್ರಿಯಗಳನ್ನು ಕದಡಿಸುತಲಿಹುದಾ
ಮದವು ನಿರ್ಧಾರಗಳುಳ್ಳದು ಜಾಗರತಿಹುದಾ;
ಅಡಗಿಸುವುದೆಂತು ಕೇಳು ಜೋಲುತಿಹ ಮನವಾ
ವಾಯುವನು ಕಟ್ಟಿಡುವ ತೆರವದು ಅಸಾಧ್ಯ!
ಅರಿಯೆ ಮನದಾ ನಿಗ್ರಹದ ವಿವರವದನಾ
ಎಂತೆನುವೆ ಮನವ ಹೇಳಯ್ಯ ಕೃಷ್ಣಾ?"

॥ ೨೩ ॥

"ಸರಿಯಯ್ಯ ಹೇಳ್ದೆ ನೀನು ಕುಂತೀಕುಮಾರ,
ಮನೋಚಾಂಚಲ್ಯ ಈ ಸಂಶಯವದಿಲ್ಲಾ;
ಅದನಡಗಿಸಲು ಸುಲಭವಲ್ಲವದು ನಿಜವೈ
ಅಂತಾದೊಡೆಯು ಸಾಧ್ಯವಿಹುದದುವೊ ಕೇಳಯ್ಯ!
ಅಭ್ಯಾಸದಾ ಬಲವು ಸಾಧನೆಯ ಛಲವು,
ನಿಷ್ಕಾಮ ಕರ್ಮದೊಡೆ ವೈರಾಗ್ಯದೊಲವು;
ಕೂಡಿಲದೊ ಮನವನ್ನು ಕಟ್ಟಿಡಲುಬಹುದು,
ಎಂಬುದನು ವೈದಿಕರು ಹೇಳಿರುವರಂದು!

॥ ೨೫ ॥

"ಮನವನ್ನು ವಶಪಡಿಸಲಾರದವಗಂತು
ಧ್ಯಾನಯೋಗವ ಸಾಧಿಸನು ಅಂತು ನಿಜವು;
ಅನಿತಾದೊಡೆ ಕೇಳೊ ಪಾಂಡವನೆ ಹೇಳಿದಂತೆ
ಚತುರೋಪಾಯಗಳಿಂದ ಸಾಧಿಸುತ ತಾನೆ,
ಇಂದ್ರಿಯಗಳನು ನಿಗ್ರಹಿಸುವನಾ ಜ್ಞಾನಿ
ಮನವನ್ನು ಸ್ವಾಧೀನದಲಿರಿಸುತ್ತ ಯೋಗಿ,

1310

ನಿತ್ಯತೃ ಸುಖವನ್ನು ಹೊಂದುವನು ಎಂದು
ತಿಳಿದಿಹೆನೊ ಹೇ ಪಾರ್ಥ ಕೇಳೆಲೈ ಇಂದು!"

" ೨೬ "

"ಅಂತಾದೊಡಿದ ಕೇಳ್ವೆನೊ ಹರಿಯೆ ನಿನ್ನ,
ಶ್ರಮಸಾಧನೆಯ ದುಡಿಮೆಗಿರೆ ತುರುತುರು ನೋಡಾ,
ಧ್ಯಾನದಲಿ ಮನವು ಚಾಂಚಲ್ಯವನು ತೋರಿ
ಧ್ಯಾನಯೋಗದ ಸಿದ್ಧಿಯನು ಹೊಂದಲಾರೆ;
ಅಂತಾದೊಡೆಯು ಬೇರೆ ಗತಿಯೇನು ಹೇಳಾ,
ಚಂಚಲತೆಯೊಡೆ ಸಾಧನೆಯನೆಸಗಲೆಂತಾ
ಸಿದ್ಧಿಯನು ಹೊಂದದವರೆಂತು ಹರಿ ವಸು?"
ಎಂದನು ಸಂದೇಹವದಿಸಂದವನಳು ನರನು!

" ೨೭ "

"ಎಲೆ ಮಹಾಬಾಹೊ ಕೇಳ್, ಅಂತಾಗೆ ರೀತಿ,
ಕರ್ಮಯೋಗದ ಸಾಧನೆಯಲಂತು ತಪ್ಪಿ
ಬ್ರಹ್ಮಜ್ಞಾನದ ಮಾರ್ಗ ತಿಳಿಯದೆಯೆ ಅಂತು
ಉಭಯ ಕಡೆಯಲು ಮೋಕ್ಷಪ್ರಾಪ್ತಿಯನಂತು ಕಾಣದೆ
ತಾ ಸ್ಥಿರಾಧಾರಗಳು ಇಲ್ಲದೆಯೆ ಸೊರಗಿ
ಬಿರುಗಾಳಿ ಬಡಿತಕ್ಕೆ ಮೇಘಗಳು ಚದರಿ
ದಿಗ್ಗೆಡುವ ರೀತಿಯಲಿ ಸಾಧಕನು ಅಂತೆ
ಸೋತು ದಿಗ್ಗೆಡದಿಹನೆ ಹೇಳೆಲೈ ಕೃಷ್ಣಾ?

" ೨೮ "

"ಸಂದೇಹವಿದನಂತು ಬಲವಾಂತು ನೀನು
ಬಿಡಿಸುತ್ತ ಜೀವಾತ್ಮ ಯೋಗವಿದನಂತು
ತೋರಲೈ ಪುಂಡರೀಕಾಕ್ಷ ನೀನ್ ಇಂದೇ,
ಕೇಳ್ ಮನೋದ್ವೇಗವ ನಿವಾರಿಸಲು ನನಗೆ
ನೀನಲ್ಲದೆಯೆ ಬೇರೆ ಆರ್ ದೊರೆಯರಂತೊ,
ಮಾರ್ಗದರ್ಶನ ಕೊಡುತ ಕಾದಿಹೆನು ಕೇಳೈ"
ಎಂದೆನುತಲಿ ಕಾತರತೆಯಿಂದ ಪಾರ್ಥ
ಕೇಳಿದನು ಕೃಷ್ಣನನು ಮುಂದೇನು ಎನುತ!

" ೨೯ "

"ಕೇಳ್ ಸವ್ಯಸಾಚಿ ಶ್ವೇತವಾಹಿ ಆನ್ ಹೇಳ್ವೆ
ಯೋಗಸಾಧನೆಯಲಿ ತಪ್ಪಿದೊಡೆ ಕೇಳೈ,
ಶ್ರದ್ಧೆಯಾ ಸಾಹಸದೆ ಸೋತೊಡೆಯು ತಾನು
ಇಹಪರಗಳಲಿ ಹಾನಿ ತಪ್ಪುದುವೊ ಕೇಳು!
ಕೆಳನೆ, ಸದುದ್ಯೋಗದಲಿ ಸಾಧಿಸಿದವರೆಲ್
ಸತ್ಕರ್ಮ ಸತ್ಕಾರ್ಯಗಳು ಜಗದಿ ನೋಡಾ,

ಕೇಳು ನಿರರ್ಥಕವಾಗದವು ನಿಜವೋ ಮಿತ್ರಾ, 13॥
ದುರ್ಗತಿಯನವ ಹೊಂದಲಾರನದೋ ಸತ್ಯ!

॥ ೪೦ ॥

"ಧ್ಯಾನದಲಿ ಪೂಜೆ ಆರಾಧನೆಗಳಲ್ಲಿ
ತಪ್ಪಿದೊಡೆಯೂ ಕಾರ್ಯ ನಿರತರಿಂ ಜಗದಿ,
ಪುಣ್ಯವಂತರಿಗೊಪ್ಪಿದಾ ಪುಣ್ಯಲೋಕ—
ವಾದ ಸಿರಿ ಭೋಗೈಶ್ವರ್ಯಗಳಲ್ಲಿ ಸೊಂಪಾ
ಬಾಳುತಲಿ ಮತ್ತೊಮ್ಮೆ ಈ ಭೂಮಿಯಲ್ಲಿ
ಸಿರಿವಂತಿಕೆಯುತ ಜನ್ಮವನು 'ಪಡೆವನಿಲ್ಲಿ',
ಇದೆ ಯೋಗ ಸತ್ಕಾರ್ಯ ಸಾಧನೆಯು ಫಲವು"
ಎಂದೆನುತ ತಾ ಮುರಹರನು ಹೇಳಿದನು 'ಕಂದು'!

॥ ೪೧ ॥

"ಅನಿತಲ್ಲದೊಡೆ ಕೇಳೈ, ಅರ್ಜುನನೆ ನೀನು,
ಐಶ್ವರ್ಯದಾ ಭೋಗದಲಿ ಜನನ ಅಂತು,
ಪಡೆಯುತಿಹ ಸತ್ಕಾರ್ಯ ಸಾಧಕರು ನಿಜದಿ
ಪರಜ್ಞಾನಿ ಯೋಗಿಗಳ ವಂಶದಲಿ ಅಂತೆ
ಜನಿಸುತಲಿ ಇಹಲೋಕದಾ ಸುಖವನವರು
ಪಡೆಯುವಾ ಸದ್ಗತಿಯ ಹೊಂದುತಿರಲಂತು
ಜನ್ಮವದು ದುರ್ಲಭವು ಎಂಬುದನು ಸಖನೆ
ತಿಳಿದು ನೀನ್ ಸತ್ಕಾರ್ಯ ಸಾಧನೆಗೆ ತೊಡಗೈ!

॥ ೪೨ ॥

"ಸತ್ಕುಲದಿ ಜನ್ಮವನು ಎತ್ತಿ ತಾನಂತು
ಪೂರ್ವಜನ್ಮದ ಕರ್ಮಫಲ ಜ್ಞಾನವನು,
ಸಂಸ್ಕಾರ ಬಲದಿಂದ ಹೊಂದುತ್ತಲಿ ತಾನು
ಪಡೆಯುವನು ಸುಜ್ಞಾನದಾ ಯೋಗವಂತು!
ಕುರುವಂಶಜನೆ ಕೇಳು, ಪೂರ್ವಜರ ಸಿದ್ಧಿ
ಅದು ಎಂದು ಪಡೆದಿದ್ದ ಜನ್ಮಗಳ ಬಲದಿ,
ತಾನ್ ಮರಳಿ ಪಡೆಯುತ್ತ ಶ್ರಮಿಸುತ್ತಲಿಹನೈ ಬಲದಿ,
ಜೀವಾತ್ಮ ಜನ್ಮದ ರಹಸ್ಯವಂತದುವೆ!

॥ ೪೩ ॥

ಸಂಸ್ಕಾರ ಬಲವು ಅದುತ ಉದ್ದೀಪನಾದಾಗ
ತಾನ್ ಎಳಸುತ್ತಿರೆಯು ಕೇಳ್ ಕರ್ಮಫಲವದರ
ಪ್ರೇರೇಪಣೆಯುತ ಆತ್ಮಸಿದ್ಧಿಗೆಂದೆನುತ
ದುಡಿಸುತಿಪ್ಪುದು ಒಲಿಸುತಿಪ್ಪುದೆ ನಿಶ್ಚಯವೊ ಕೇಳಾ;
ಪೂರ್ವಾರ್ಜಿತಾ ಕರ್ಮಯೋಗದಾ ಬಲವು
ಪ್ರಕೃತಿಯ ಸಂಬಂಧವನು ಮೀರಿ ಮುಂದು

1312

ವೇದೋಕ್ತವಹ ಶಬ್ದಬ್ರಹ್ಮವಿ ಗತಿಯು
ದೊರಕಿಸುವುದು ಎಂಬುದನು ತಿಳಿಯೆಲೈ ಪಾರ್ಥ!

"೪೪"

"ಹಲವಾರು ಜನ್ಮಗಳಲಿದೊ ಗಳಿಸಿದಂಥ
ಪುಣ್ಯಫಲದಿಂದ ಪಾಪ ಪಾಪಗಳನೆಲ್ಲ
ಕಳೆಯುತಲಿ ಕೊನೆಗಂತು ಯೋಗಿಜನ ನೋಡಾ
ಪ್ರಯತ್ನ ಸಾಧ್ಯವಹ ವಿದ್ಯೆ ಯೋಗಾಭ್ಯಾಸ
ಬ್ರಹ್ಮನೆಂದದು ನಿಜಕೆ ವಿಶ್ವವಹ ಅಭ್ಯಾಸ-
ಬಲವನು ಸುಜ್ಞಾನಯೋಗದೊಳು ನಿತ್ಯ
ಬೆಳೆಸುತಲಿ ಪಡೆಯುವರು ಮೋಕ್ಷವನು ನಿಜದಿ,
ಪರಮೋತ್ತಮಾ ಗತಿಯು ಪರಮಾರ್ಥವದುವೆ!

"೪೫"

"ಎಲೆ ಧನಂಜಯ ಕೇಳು, ಯೋಗಿ ಅವನಾರು?
ಪರಯೋಗಿಯಾ ಗತ್ತೆಂದು ಕರೆಸುವುದು ಏನು?
ಬಹಳ ತಪೋನಿರತರಹರನು ಮೀರಿಯುಹನು
ಜ್ಞಾನವನು ಗಳಿಸಿಹರ ಪಂಡಿತರ ಬಲವನು,
ಕರ್ಮಾನುಷ್ಠಾನದಲಿ ತೊಡಗಿಹರನು ಅವನು
ಮೀರಿ ತಾನು ಮುಂದೆ ಲಾಭವರ್ಧನಾಗಿಹನು;
ಎದ್ದೇಳು ಅಂತೆಯೆ ನೀ ಪರಯೋಗಿಯಾಗಿ
ಬಾಳು ನರನೆ, ನರೋತ್ತಮನು ಯೆನಿಸಿ ಇಹದಿ!

"೪೬"

"ಅನಿತರ್ಲಿ ಯೋಗಿ ಅವನಾರೆನ್ನ ನಿತ್ಯ
ನಿಃಶ್ರಿತನು ಧ್ಯಾನಿಸುತಲನವರತ ನನ್ನ
ಶ್ರದ್ಧೆಯಲಿ ಭಜಿಸುತ್ತ ಪ್ರಾರ್ಥಿಸುತಲಿಹನೊ
ಹೃದಯದಲಿ ಪ್ರೀತಿಯಲಿ ಪೂಜಿಸುತಲಿಹನೊ;
ಅವನೆ ಜಗದಲಿ ಮಹಾಯೋಗಿಯೆಂದಂತು
ಎನಿಸುವನೊ ಕೇಳಲೈ, ಅರ್ಜುನನೆ ನಾನು"
ಎಂದೆನುತಲಾತ್ಮ ಸಂಯಮ ಯೋಗವದನು
ಹೇಳಿದನು ದೇವಕೀ ನಂದನನು ನಿಜವು!

"೪೭"

(ಆರನೇ ಅಧ್ಯಾಯ ಸಂಪೂರ್ಣವು)

ಏಳನೇ ಅಧ್ಯಾಯ - ವಿಜ್ಞಾನ ಯೋಗ!

"ಕೇಳಿಲ್ಲಿ ಮಿತ್ರ ನೀನ್, ಹೇಳುವೆನು ವಿವರದಿಂದಾ,
ತೋರಿಸುವೆ ಮನಶ್ಶಾಂತಿಗಿಹ ಹೇತುವನ್ನು!
ನೆನೆಯುತ ನೀನ್ ನನ್ನನೆ ನಿರಂತರವೂ ಪಾರ್ಥ,
ಯೋಗವನು ಯೋಗದ ಅಭ್ಯಾಸ ಬಲದಿಂದಾ
ಹಿಡಿಯುತ್ತ ಪಡೆಯೆ ಕೇಳ್ ಮೋಕ್ಷಗತಿಯನ್ನು
ಶರಣಾಗಿಲ್ಲಿ ನನಗೆ ಆಶ್ರಯವನು ಇಂದು,
ನನ್ನ ನೀನ್ ತಿಳಿಯುವ ಆ ಮಾರ್ಗವನು ಹೇಳ್ವೆ,
ಸಂದೇಹವನು ಬಿಡದೆ ಆಲಿಸೈ ನರನೆ!

॥ ೧ ॥

"ಅತಿಗಹನವಿಹ ವಿಷಯವನು ತಿಳಿದ ಮೇಲೆ
ಇಹದಿ ತಿಳಿಯಲುಳಿಯೆನೆ. ಇಲ್ಲವೆಂಬಂತೆ,
ತೋರುತಿಹ ಅತಿಸೂಕ್ಷ್ಮವಿಹ ಆತ್ಮಜ್ಞಾನ
ಅದರೊಡೆಯ ತಿಳಿಯುವ ಪರಮಾತ್ಮಜ್ಞಾನ,
ವಿಸ್ತಾರವಾಗಿಹ ಜೀವನದ ವಿಷಯ ಸಾರ,
ಕೇಳ್ ಪಾರ್ಥ ಮಾಡಿದರೆ ವಿಚಾರವು ಅಪಾರ—
ಎಲ್ಲವನು ಸಮಗ್ರಗೊಂಡತೆ ಹೇಳ್ವೆ ಸಖನೆ"
ಎಂದೆನುತಲಾ ಹರಿಯು ಹೇಳಿದನು ಒಲವೆ!

॥ ೨ ॥

"ಕೇಳ್ ಇಹದಿ ಇಹ ಜೀವಿ ಕೋಟ್ಯಾದಿಗಳಲಿ,
ಸಹಸ್ರಾರು ಜನರೊಳ್ಬನಂತೆಯೇ ಇಲ್ಲಿ
ಆಸ್ಥೆಯಾ ಜ್ಞಾನ ಸಿದ್ಧಿಗೆಂದೆನುತ
ಪ್ರಯತ್ನವನು ಸಾಧಿಸುವ, ಹೀಗಿರುವರೊಳು ಕೇಳಿ
ತನ್ನ ತಾನ್ ತಿಳಿದಾತ್ಮ ಜ್ಞಾನಿಗಳು ಅವರು,
ಆನಿತಿಹ ಸಹಸ್ರಾರು ಸಾಧಕರು ಪಡೆಯೆ
ಕೇಳ್ ಒಬ್ಬಿಬ್ಬರೇ ಎನ್ನ ಅರಿತವರು ನಿಜವು
ಪರಮಾತ್ಮ ಜ್ಞಾನಿಗಳವರಿಹರು ಈ ಜಗದಿ!

॥ ೩ ॥

"ಪ್ರಕೃತಿಯಿಂದಲೋ ತೋರುತಿರುವ ಭೂಮಿ ಬಂದು,
ಜಲಾವೃತವಿಹ ಭೂತಲವ ತೋಳೆವ ನೀರು,
ಸೃಷ್ಟಿಯನು ಶಕ್ತಿಯಾಗಿಹ ತೇಜ ಅಗ್ನಿ
ವಿಸ್ತಾರದಂತಿಹ ಶಕ್ತ ವ್ಯಾಪಿಸಿಹ ಗಾಳಿ,
ಬಗೆಯಲಿ ವಿಶಾಲವಹ ಅಂಬರವು ನೋಡೆ
ಪಂಚಭೂತಗಳನ್ನು ಮನ್ನಿಸಿದ ಮನವು—

ಅದರೊಡೆಯೆ ಬುದ್ಧಿಯು ಅಹಂಕಾರವದನನುತ 1314
ಆತ್ಮಸಖನದರ ಸೃಷ್ಟಿಯಿದನ್ನರಿವೆ ಮಿತ್ರಾ!

" ೫ "

"ಜಾಗೃತಿಯು ಅಲ್ಲದಿಹ ಪ್ರಕೃತಿಯ ಮೀರಿ
ಮಹೋತ್ತಮಾ ಜೀವ ಪ್ರಕೃತಿಯೊ ಇಲ್ಲಿ
ಇಹುದೆಲ್ಲಿ ಹೋ ಪಾರ್ಥ ಹೇಳುತಿಹನದನಾ,
ಹುಟ್ಟಿಹುದು ಈರೇಳು ಲೋಕಗಳನೆಲ್ಲಾ!
ಜೀವಾತ್ಮನಾ ಜೀವ ಪ್ರಕೃತಿಯಿದು ಇಹಕೆ
ಆಧಾರವಾಗಿಹುದು ಎಂಬುದಿದು ನಿಜವೈ;"
ಎಂದು ಮನದೊಳಿರುತಿಹನೊ ಹೇಳ್ದನಂದು
ಸಂದೇಹದಿ ತೊಳಲುತಿಹ ನರನಿಗಂದು!

" ೬ "

"ಚೇತನ ಅಚೇತನ ಪ್ರಕೃತಿ ದ್ವಯದಿ ಅಂತು
ಉತ್ಪತ್ತಿಯೆ ಅಸಂಖ್ಯಾದಿ ಭೂತಗಳು ನೋಡು;
ಎನ್ ಚೇತನಾ ಶಕ್ತಿ ಎನ್ನಯುಕ್ತಿ ಎನಾ
ಸೃಷ್ಟಿಯಿದರುತ್ಪತ್ತಿಗಾಸರೆಯು ಅಹುದಾ;
ವಿಶ್ವ ನಿರ್ಮಾಣವಿದರೊಡೆಯನೈ ಕೇಳ್ವ
ನಾಶವದಕೂ ಕಾರಣನು ನಾನೆ ತಿಳಿಯೆತ್ತ!
ಎನ್ ಶಕ್ತಿಯನು ಪೊತ್ತಿಹೆನೊ ನಾನು ತಿಳಿಯಾ?
ಸೃಷ್ಟಿ ಸ್ಥಿತಿ ಲಯಕಾರಣನು ಅನೆಂದರಿಯಾ!

" ೭ "

"ಕೇಳ್ ಧನಂಜಯ ವಿಜಯಗಾಂಡೀವಿ ನೀನು,
ಅನಿತಾದೊಡೆಯು ಜಗವ ನಡೆಸುತಿಹೆ ನಾನು;
ಮುತ್ತುಮುತ್ತಿಗಳನೊಂದಿ ನೂಲಿನಲಿ ಕೋದಿಹ
ಮಣಿಸರವ ಖಚಿತನದೋಲು ಪಾರ್ಥ ನೋಡು,
ಲೋಕಗಳನೆಲ್ಲವನು ಪೋಣಿಸಿಹೆ ಮಿತ್ರಾ,
ಈ ನನ್ನ ಕಾಯದಾ ಮಿಂಚುತಿಹುದೆಲ್ಲ;
ಕಾಣ್ಕೆಯಿದಲ್ವೆ ಅರ್ಜುನನೆ ನೀನವುಗಳನು
ಅನ್ ಇಲ್ಲಿ ನನ್ನಲ್ಲಿ ಎಲ್ಲ ಪೊತ್ತಿಹೆನು!

" ೮ "

"ಎಲೆ ಪೃಥಾತನಯ ಕೇಳ್ ಹೇಳುತಿಹೆ ನಿನಗೆ,
ಜಲದೊಳಿಹ ಸವಿರಸದ ತನಿರುಚಿಯು ನಾನೆ;
ಕೇಳ್ ಸೂರ್ಯ ಚಂದ್ರಾದಿಗಳ ಪ್ರಭೆಯು ನಾನೆ,
ವೇದ ವೇದಾಂತಗಳೊಳಿಹ ಪ್ರಣವ ನಾನೆ!
ಓಂಕಾರದಾ ನಿರಾಕಾರವದುವೆ ನಾನೆ;
ನಭಾಂಗಣದಿಹ ನಾದಲೋಲನಕೊ ನಾನೆ!

ಮಾನವತ್ವದ ನೀತಿರೀತಿಗಳಂ ಸಾನೆ,
ಮತಿಸೋಂಸ್ಪುಖಾವ ಗತಿಗಂ ಮಾನವನಂ ಸಾನೆ!

" ೮ "

"ಪೃಥ್ವಿಯಂ ಪವಿತ್ರವಹ ಗಂಧವಂ ಸತಗಂಧಾ,
ಹೋಮಾಗ್ನಿ ಸಿಡಿಲಾಗ್ನಿಯಂತೆ ಹೊಳೆವ ತೇಜಾ,
ವಿಶ್ವದಲಿ ಇಹ ಕೋಟಿ ಜೀವಿಗಳ ರಾಶಿ,
ಪರ ಜೀವಿ ಬದುಕಿಸಲಿ ಇಹ ಜೀವ ಶಕ್ತಿ,
ತಪೋನಿಧಿಗಳಂ ತೋರ್ಪದಲಿ ತೋರುತಿಹರಾ
ಪರ ತಪಸ್ಸುಗಳ ತಪೋವ್ರತ ವಿದಲವಂ ಸೋದಾ!
ಆನಿಹೆನು ನನ್ನಲ್ಲಿಯೇ ಸರ್ವವಿಹಂತದಂ,
ಎಂದೆನುತ ಲಂದೆನಾ ಪರಮಾತ್ಮನಂದಂ!

" ೯ "

"ಆದಿ ಮೂಲವೊ ಇಲ್ಲದ ಅನಾದಿ ಕಾರಣ,
ಆನಿರಲು ಕೇಳ್ ಲೋಕಗಳಲಿ ಇಹ ಸರ್ವ
ಜೀವಿಗಳಿಗದೊ ನಾನು ಮೂಲವಿಹೆ ತಿಳಿಯೈ
ನನ್ನಿಂದಲೇ ಸರ್ವ ಉತ್ಪತ್ತಿಯು ನಿಜವೈ!
ಅಂತೆಯೇ ಬುದ್ಧಿಯನು ಸಿದ್ಧಿಯನು ಪಡೆದ
ವಿಜ್ಞಾನಿಗಳ ಜ್ಞಾನ ಆನ್ ಇಹೆನೊ ತಿಳಿಯಾ?
ಜಗದ ಪ್ರಾಂಗಣಗಳ ತೇಜಸ್ಸನಿಂದೆಸೆವ
ತೇಜಸ್ವಿಗಳ ಶೋಭೆಯೇ ನಾನು ಪಾರ್ಥಾ!

" ೧೦ "

"ಎಲೆ ಭರತಭೂಮಿಯಂ ವಿಧಾತ ಕೇಳ್ ಸಿಂಧಾ,
ಕಾಮ ಮೋಹಾದಿಗಳ ತ್ಯಜಿಸಿಹರದಾ —
ಬಲವಂತರಾ ಬಲವಂ ಆನಿಹೆನೊ ಇಲ್ಲಿ,
ಅಂತೆಯೇ ಧರ್ಮವನು ಮೀರದಿಹ ಜೀವಿ —
ಪರ ಜೀವಿಗಳಲಿ ಇಹ ಆಶೆ ಮತದ ಮೋಹ —
ನನ್ನಲ್ಲೇ ಸರ್ವವೂ ಇಹುದೆಲ್ಲ ಮಿತ್ರಾ;
ಅಕೊ ಧರ್ಮದಲಿ ಕರ್ಮದಲಿ ಶಕ್ತಿ ಇರುವ
ಜೀವವದು ಪ್ರಾಪ್ತಿಹೆ ಆನ್ ಅದೆ ವಿಶ್ವಮೂಲಾ!

" ೧೧ "

"ಸತ್ವಗುಣ ಬದ್ಧವಿಹ ಶಮದಮಾದಿಗಳಂ
ರಾಜಸದ ಸಂಖ್ಯೆ ತೃಪ್ತಿ ಸಂತೋಷಿಗಳವು;
ತಾಮಸದ ಶೋಕ ಮೋಹಾದಿಗಳಂ ಎಲ್ಲ
ನನ್ನಿಂದಲೇ ಉತ್ಪತ್ತಿಯೊ ಕೇಳೊ ಮಿತ್ರಾ!
ಪೂರ್ತಿಹೆನೊ ಗುಣಾಗುಣಗಳನೆಲ್ಲ ಜಗದಾ
ಇಹುದೆನ್ನಾಧೀನದಲಿ ಸರ್ವ ಗುಣಮಾನಾ!

ಅನಿತಿರಲು ಆನ್ ಇಹೆನು ನಿರ್ಗುಣನಾಗಿ
ಗುಣಾಗುಣಗಳಿಗೆ ಒಳಗಾಗದೆಯೆ ಇಲ್ಲಿ!

॥ ೧೧ ॥

"ಜಗದಲಿ ಸಮಸ್ತವಹ ವಸ್ತುಗಳಲಿಹವು
ಸತ್ವ ರಜಸ್ತಮಸು ಕೇಳ್ ಗುಣಗಳಿವು ಮೂರು;
ತ್ರಿಗುಣವಿವರಿಂದ ಈ ಲೋಕಗಳು ಸಮಾನ
ಕಾಮ ಮೋಹಾದಿಗಳಲಿಕೊ ತೊಳಲುತಿಹುದಾ—
ಗುಣರಹಿತನಿಹ ತ್ರಿಗುಣಾತೀತನಹ ನಾನು,
ವಿಲಕ್ಷಣನೊ ಆನ್ ಸಾಕ್ಷಿರಹಿತನಿಹೆ ನಿಜವು;
ಅರಿವೆ. ಗುಣಭರಿತ ಜೀವಿಗಳು ಇರೆ ಜಗದೆ
ಅದೆ ವಿಶ್ವ ಗುಣಾಗುಣ ಆಳುತಿ ಸಂಕೋಲಿ!

॥ ೧೨ ॥

"ಕೇಳ್ ದಿವ್ಯ ಶಕ್ತಿಯುಂಟೆನಗೊಂದು ನನ್ನ,
ಸತ್ವ ರಜಸ್ತಮದ ಗುಣದಲಿ ಕೂಡಿದೆನ್ನ;
ಸಂಕಲ್ಪ ರೂಪದದಿ ಮಾಯೆಯೆಂದೆನಿಸುತ್ತ
ಅತಿಕ್ರಮಿಸಲಸದಳವೆಂದೆನಿಸಿತ್ತು ನೀನು;
ಯೋಗಿವರರೂ ಮಾಯೆಯನು ಅರಿಯರದನಾ
ಕೇಳ್ ನನಗೆಯೆ ಶರಣು ಹೊಂದಿಹರು ಅವ—
ರವರಿಯೆ ಗುಣರೂಪಗಳ ಮಾಯೆಯನು
ತಿಳಿಯುವರು ದಾಟುವರು ನಿಜವದಕ್ಕೆ ಹದನು!

॥ ೧೩ ॥

"ಸಹಜವದು ಪಾಪಿಗಳು ಮೂರ್ಖರದು ನಿತ್ಯ
ಕೊರಗಿಹರು ಮಾಯೆಯಲಿ ಸೊರಗಿಹರು ಎಲ್ಲ;
ದ್ವೇಷವು ಅನೃತ ಹಿಂಸೆ ಮೋಸವು ಅಸತ್ಯ,
ಹಿಂಸೆಯೆ ಮೊದಲಾದ ಕಾಹರದಲಿ ಜೀವಾ
ನಡೆಸುತಿಹರಾ ಆದವರವರರತು ಇಹದೆ
ತಿಳಿಯದರೆನ್ನನು ಕೇಳು ಕೀಳುವೆನೊ ಅದನೆ;
ನೀಚಾತ್ಮರಾ ಶೋಚನೀಯವು ಪದವು ಜೀವಾ
ಹೊಂದರೆನ್ನನು ಎಂದಿಗೂ ನಿಜವೊ ಪಾರ್ಥ!

॥ ೧೪ ॥

"ಕಷ್ಟಕೊಳಗಾಗಿ ಕೇಳ್ ಕಷ್ಟದಲಿ ಇರುವ,
ನಿತ್ಯತತ್ವ ರೂಪದ ಜ್ಞಾನವನು ಪಡೆವ,
ಧರ್ಮ ಸಾಧನವಾದ ಧನಕಾಂಕ್ಷಿಸುವ,
ಬ್ರಹ್ಮಜ್ಞಾನವ ಪಡೆಯೆ ಹಂಬಲಿಸುತಿರುವ—
ನಾಲ್ಕು ಬಗೆಯ ಪುಣ್ಯಾತ್ಮರುಗಳು ಇಹರೆ
ನನ್ನನೆ ಉಪಾಸಿಪರೊ ಶರಣಾಗಿ ನನಗೆ!"

ಎಂದೆನುತಲಾ ಕೃಷ್ಣ ಹೇಳಿದನೊ ಮುದದಿ,
ಹರುಷಾತಿರೇಕನನು ತಿಳಿವರಾರೆನುತಲಂತೆ!

॥ ೧೬ ॥

"ಈ ಹರಿಯು ನಾಲ್ವರು ಕೇಳಿತ್ತೆ ಮಿತ್ರಾ
ದೃಢಮನದಿ ಎನ್ನನೇ ಭಕ್ತಿಯುಂ ನಿತ್ಯ,
ತುತಿಸುತಿಹ ಪರಜ್ಞಾನಿ ಆರಿಹನೊ ಜಗದಿ
ಶ್ರೇಷ್ಠನೆಂದೆನಿಸುವನು ಇಹಪರದಲಂತೆ;
ಆತ ಪ್ರಿಯನೆನಿಸುವನೊ ಭಕ್ತನಹನವಗೆ
ಆತ ಪ್ರೇಮಪಾತ್ರನೆಂದೆನಿಸುವನೊ ನನಗೆ!
ಭಕ್ತನೊಲದಾ ಭಕ್ತಿ ಪ್ರೀತಿಯು ಅಪಾರ,
ಮತಿ ಬೆಳಗಿತಿಹೆ ಆತ ನಿತ್ಯ ಪಾಲಿಸುವೆನವರಾ!

॥ ೧೭ ॥

"ಹಲತರದಿ ಹೀಗಿರುತಿಹ ನಾಲ್ವಗೆಯು ಜನವು
ಉತ್ತಮರು ದೈವಗುಣಶಾಲಿಗಳೆ ಜನವು,
ಅವರಲಿ ಜ್ಞಾನಿಯು ಸುಜ್ಞಾನಿಯಹನಾರೊ
ಅವನೆನಗೆ ಆತ್ಮನೆಂದೆನಿಪೆ ನಿಜವೊ!
ಮನಸೊಳ್ ಗ್ರಹಿಸುವನು ನಂಬಿಹನು ನನ್ನ,
ದಿವ್ಯೋತ್ತಮಾ ಗತಿಯನಿಚ್ಛಿಸುವನು ನಿರುತಾ,
ಭಕ್ತರೊಳು ಭಕ್ತನವನೆ ಭಕ್ತ ಕೇಳಾ!
ನಂಬಿಹನು ತುಂಬುಗೊಡದಂಬಿವೊಲು ತುಂಬಾ!

॥ ೧೮ ॥

"ಜನ್ಮ ಜನ್ಮಾಂತರಗಳನು ಕಳೆದು ಯುಗದಿ
ಹೊಂದಿಹನಪಾರವನೊ ಜ್ಞಾನವನು ನೇಮದಿ,
ಅವನಿಂತೋ ಸಿದ್ಧಿ ಸಿಮದ ಬುದ್ಧಿಯು ಹಿಮ್ಮೃದಿ
ಹೊಂದಿ ಶ್ರೀರುಪನೆನ್ನನೇ ನಿತ್ಯ ನಂಬಿ!
ಓಂ ಪರಮಪದದೇವ ನಿರುತನೆಯು ನಿಮಿತ್ತ
ಲೋಕಗಳಿಗಾಧಾರವೆಂದೆನುತ ನಿತ್ಯ
ತುತಿಸುವ ಮಹಾತ್ಮನಿಹುದತಿ ದೊರೆಯದು ಕೇಳಾ
ದುರ್ಲಭವು," ಎಂದೆನುತ ಹೇಳಿದನು ಕೃಷ್ಣಾ!

॥ ೧೯ ॥

"ಬುದ್ಧಿ ಜ್ಞಾನವು ಇಲ್ಲದವರೇರಿ ಇಹದಿ
ಪ್ರಕೃತಿ ಹಿತ ಗುಣಾಧೀನದಿ ಕೊಳ್ಳಗಾಗಲಂತೆ,
ವಿವಿಧ ಬಗೆಯು ಸುಖವು ಬಯಲತೆಗಳನ್ನು
ವಿವಿಧ ಗುಣಕಾರಣವಾದ ಕ್ರಮಾಕ್ರಮಗಳನು
ಪಾಲಿಸುತೆ ಅನ್ಯ ವಿವಿಧ ದೇವತೆಗಳನ್ನು
ಭೂತಗಳು ಪ್ರೇತಗಳ್ ಪೂಜೆಗಳನುಂತು

ಎನಗುತ್ತಲಿ ಪ್ರವಿದ್ಯದಾ ಪುರಿರುಗಿನಲ್ಲಿ
ಓಲಾಡುತಿಹನದೋ ದೈವವೋ ಎನುತಲಿ!

" ೨೦ "

"ಹೋ ಮಾದ್ಯ ಪರಮಾದ್ಯವದಾ ಮಾದ್ಯವಾಗಿ
ಅಮಾಪ್ಯದೋ ಮೂಲತ್ವ ಶಕ್ತಿಯನು ತಂತಿನ
ಭಕ್ತಿಯಲಿ ಶ್ರದ್ಧೆಯಲಿ ನಿಷ್ಠೆಯಲಿ ಅದನೆ
ತನಗೊಪ್ಪಿದಾ ದೈವವನೆ ನಿತ್ಯ ಭಜಿಸಿ,
ಅದರೊಪ್ಪುವೋಲು ಅವನವನ ಗಾತ್ರಕೆ ತಕ್ಕ
ಭಕ್ತಿಯನು ಶ್ರದ್ಧೆಯನು ಅವನಲ್ಲಿ ನೋಡಿ
ನಲಿಗೊಳಿಸುವ ನಿಷ್ಠೆಯಲಿ ನಿಲುವಂತೆ
ಭೂತಾರಾಧನೆ ಪ್ರಕೃತಿಯ ಪೂಜೆಯಂತೆ!

" ೨೧ "

"ತಾನ್ ಕೊತ್ತ ಶ್ರದ್ಧೆಯಿಂದಲಿ ತಾನು ಬರದಿ
ತನ್ನಿಷ್ಟದೇವತೆಯು ನಾರಾಧಿಸುತ್ತ
ತಾನಿಚ್ಛಿಸುವುದನ್ನೆ ಕೋರುವನು ತಾನೆ,
ಅದರೊಡೆಯು ಹರಕೆಯನು ಸಲ್ಲುವನು ಅಂತೆ;
ಬೇಡಲದೊ ಸಲಿಸುವೆನು ಕೋರಿಕೆಯನೆಲ್ಲ,
ಸಂತೃಪ್ತನಾಗಿಸುವೆ ಬೇಡಿದನು ಕೊಡುತ್ತ,
ಅವನಿಗದನರುಹದಿಯೆ ಕಾಯುವೆನು ನಾನು
ಕೊನರಲಿಯ ಪಿಂದಲಿಗೆ ಹಿನ್ನೆಲೆಯೊಳಾನು!

" ೨೨ "

"ಕೇಳ್ ಅಲ್ಪ ಸಂತತ ಶ್ರಿಷ್ಟಿಯ ಸುಖವು ಅಲ್ಪ,
ಸಂತೋಷವದು ಅಲ್ಪ ಫಲವದು ಅಲ್ಪ!
ಕೇಳ್ ನನ್ನ ಅಂತ್ಯಭೂತರೊ ದೇವತೆಗಳು
ಯಾಗದಿಂದೊಲಿಸಿ ಅವರನು ಪೂಜಿಸುವರು;
ಭೂತಾರಾಧನೆಯಿಂದ ಭೂತವನು ಎಂತೊ
ಅಂತೆಯೇ ಸೇರುವರು ದೇವತೆಗಳನ್ನು!
ಪೂಜಿಸುವ ರಾಶಿನ್ನ ನಾ ಪರಿಯ ಜನವು
ಸೇರುವರೊ ನನ್ನನ್ನೆ ನಿಜವದು ಕೇಳೊ!

" ೨೩ "

"ಬುದ್ಧಿಹೀನರು ಜಗದಿ ತಿಳಿಯರದೊ ನನ್ನ,
ನಾ ಶರಣತನು ನಿರಾಕಾರಿಹನೆನ್ನ;
ಮಾನವ ಸ್ವರೂಪಿಹ ಮಾನವನೆ ನಾನು,
ಎಂದೆನುತಲೆನ್ನನೇ ನೋಳ್ಪರರೊ ಅವರು;
ನಿರಾಮಯನಿಹೆಯೆನ್ನನರಿಯರಾ ಜನವು
ಕಣ್ಗಳಿಂದಲಿ ರೂಪವದ ತಿಳಿಯರವರು,"

ಎಂದೆನುತ ಭಗವಂತನಾ ಶಾರ್ಙ್ಗಗಂದು
ತಾನಾರು ಎಂದೆನುತ ಹೇಳಿದನೀ ನಿಂದು!

॥ ೨೪ ॥

"ಸಂಕಲ್ಪದ ಯೋಗ ಮಾಯೆಯಲಿ ನನ್ನ
ರೂಪವನು ಮರೆಸಿರುತಲಿ ಬಾಳಿಹೆನೀ ಧಾತ್ರಿ;
ಜನರಿಗೆ ಅಗೋಚರನಿಹೆನು ಕೇಳ್ಪೆ ಮಿತ್ರ
ತಿಳಿಯಲಾರರು ನನ್ನ ಜನ್ಮವಿದನೆಲ್ಲ;
ಅಜ್ಞಾನದಲಿ ಅದ್ದಿದೀ ಲೋಕವಂತು
ಜನನ ಮರಣವು ಇಲ್ಲದಿಹ ನನ್ನನೆಂತು
ತಿಳಿಯುವರೀ ಅದನಂತು ಯೋಚಿಸೈ ದಿಟನೆ,
ಮಾನವನೊಳಿಹ ಅನುಭವದಿ ಕೇಳ್ಪೆ!

॥ ೨೫ ॥

"ವಿಶ್ವವಿದರಲಿ ನಡೆಯುತಿಹುದೆಲ್ಲವನ್ನು
ಹಿಂದೆಯೇ ನಡೆದುದೇನೆಂಬುದನು ನಾನು,
ಮುಂದಾಗುತಿಹುದೆಲ್ಲವನು ಕೇಳು ನರನೆ
ಅರಿಯುವೆನು ಅರಿತಿಹೆನು ಬುದ್ಧಿಬಲದಿಂದೆ;
ಅಂತಿದೆಲ್ಲವೀ ಮಾಯೆಯನು ತಿಳಿಯದಿಹರು
ನಾನಾರು ನಾನೆಂತು ನಾನೆಲ್ಲಿಯೆಂದು
ತಿಳಿಯದೆಯೆ ಇಹರು ಕೇಳು ಅದೆ ಬುದ್ಧಿಮಾಂದ್ಯ,
ಅರಿಯರವರೀ ಶಕ್ತಿ, ಅದೆ ಲೋಕವಂದ್ಯ!

॥ ೨೬ ॥

"ಮನದ ಉದಿಸುವ ಮೋಹ ಮದ ದ್ವೇಷಗಳವು
ಕಾರಣವು ಸುಖದುಃಖಗಳಿಗಂತು ನಿಜವು;
ಅದರ ಅಜ್ಞಾನವದರಿಂದಲೀ ಜಗದೆ
ಕೇಳು ಸರ್ವ ಜೀವಿಗಳು ಹುಟ್ಟುತಿಹುದೊಲದೆ,
ಅದೆ ಮೋಹ ಅದೆ ಕಾಮ ಅದೆ ಜೀವಿ ಹುಟ್ಟು,
ಲೋಕಗಳು ತುಂಬಿಹುವು ಮದ ಮೋಹವದುವು;
ಎಲೆ ಪಾರ್ಥ, ಮನುಜನೆ ಮನದ ಉತ್ಕ್ರಾಂತಿ!
ಸುಖ ದುಃಖ ಮದ ಮೋಹದೊಳಿ ಉದಿತ ಭ್ರಾಂತಿ!!

॥ ೨೭ ॥

"ಕೇಳು ಪುಣ್ಯಕಾರ್ಯದಲಿ ಜೀವನವ ನಡೆದು
ಪುಣ್ಯಫಲವದರಿಂದೆ ಪಾಪಗಳ ಕಳೆದು,
ಆ ಜರಾ ಮರಣವಿಕಾರಗಳನೆಲ್ಲ ನಿತ್ಯ
ನಿಯಮಮಾನಸದಾರಿದೊಳಿ ಎಸಗಲದೆ ಸತ್ಯ!
ಭಕ್ತಿಯನು ನನ್ನಲಿ ನಿಷ್ಠೆಯಿಂದಿಟ್ಟು,
ಕಾಮ ಮೋಹಾದಿ ದ್ವಂದ್ವಗಳಿಂದಲಂತು

ಮುಕ್ತ್ಯರ್ಥನಾಗುತಿ ತಾನು ದೃಢಮುದದಿ ಕೂಡಿ
ನಿರಂತರವರೊ ನನ್ನನ್ನೆ ಅದೆ ನಿತ್ಯ ಮುಕ್ತಿ!

॥ ೧೮ ॥

"ಕೇಳ್ ಜರಾಮರಣಂಗಳು ತಪ್ಪಿಸಲು ಎಂದು
ಆತ್ಮ ನಿಗ್ರಹತ್ವವನು ಹಿಡಿಯುತೆಂದು,
ಯತ್ನಿಸುವವರಾರಿಹರೊ ಅವರೆಯೆ ಇಹದಿ
ಬ್ರಹ್ಮಸ್ವರೂಪವನು ತಿಳಿಯುವರು ನಿಶ್ಚಿತ್ತೆ;
ಅಧ್ಯಾತ್ಮದಾ ಪರ ಸ್ವರೂಪವದನಂತು
ತಿಳಿಯುವುದರೊಡೆಯು ಕೇಳ್ ಕರ್ಮಗತಿಯನೆಲ್ಲ
ಅರಿತು ತಾವ್ ನಿತ್ಯತೃಪ್ತಿಯಿಂದಿರುವರಿಹದಿ"
ಎಂದೆನುತ ಹೇಳಿದನೊ ಹರಿ ಪಾಂಡವನಿಗೆ!

॥ ೧೯ ॥

"ಭೂಮಿಯಲಿ ಭೂತವು ಪ್ರಕೃತಿಗಳು ಎಡೆಯೊ
ಯಾಗ ಯಜ್ಞಾದಿಗಳ್ ಹೊಂದಿಯುತದಕ್ಕೆ,
ಅಧಿದೈವ ಅಧಿಯಜ್ಞದಲಿ ಕರ್ಮಬಂಧಾ
ಸರ್ವರು ಅವರ್ ಅಧಿಕಾರವಿಹನೆಂದು ತಿಳಿವಾ,
ಯೋಗಿಗಳ್ ಯೋಗಿ ಸಮಾಧಿಗಳನೆಲ್ಲಾ
ಎಸಗುತಲಿ ಬಾಳುತಿಹರವರ್ ಕೇಳ್ ತಮ್ಮ
ಮರಣದಾ ವೇಳೆಯಲಿ ನೆನೆಯುವರೊ ನನ್ನ
ಅದೆ ಯೋಗಬಲ ಪ್ರಾಣವಾಯು ಬಿಡುವ ಕೇಳ್!"

॥ ೨೦ ॥

(ಏಳನೇ ಅಧ್ಯಾಯ ಸಂಪೂರ್ಣವು.)

ಅಧ್ಯಾಯ ೮ — ಅಕ್ಷರಬ್ರಹ್ಮ ಯೋಗ!

"ಪುರುಷೋತ್ತಮನೆ ಕೇಳು, ಪೇಳುವೆಯ ಏನು?
ಬ್ರಹ್ಮವದು ಅವುದೆಂದು ಪೇಳ್ ಕರ್ಮವೆಂ ಏನು?
ಅಧ್ಯಾತ್ಮವದು ಏನು ಅಧಿಭೂತವೇನು?
ಕರ್ಮ ಕವಚಗಳೇನು ಪೇಳಿತ್ತು ಇನ್ನು?
ಅಧಿದೈವವೆಂಬುದೇನು ಪೇಳೆನಗೆ ದೇವಾ
ತಿಳಿಯುವುದು ಹೇಗಂತ್ಯ ಸಮಯದಂತ್ಯದನಾ,"
ಎಂದೆನುತಲಾ ಸವ್ಯಸಾಚಿ ತಾನ್ ಅಂದು
ಪ್ರಶ್ನಿಸಿದನಾ ಹರಿಯನು ಹರಿಯನಂದು —,

॥ ೧ ॥

"ಎಲೆ ಮಧುಸೂದನನೆ ನೀನ್ ಪೇಳೆನಗೆ ಇಂದು,
ಅಧಿಯಜ್ಞವೆಂಬುದರ ಸಂಜ್ಞೆಯದು ಏನು?
ದೇಹವಿದರಲ್ಲಿಯುಹ ಅಧಿಯಜ್ಞನಾರು?
ಮರಣದ ಎಂತಿಹನು ಪೇಳಿತ್ತು ಅದನು!
ಪೇಳ್ ಆತ್ಮ ಸಂಯಮಿಗಳಿಗೆ ಎಂತು ಕಡೆಗೆ
ಸಾಯುತಿಹ ವೇಳೆಯಲಿ ನಿನ್ನನ್ನು ಮನದಿ
ನೆನೆಯುವರದೆಂತು ಪೇಳ್ ಗಹನವಿದು ಎನ್ನೆ?"
ಎಂದೆನುತಲಾ ಪಾರ್ಥ ಪ್ರಶ್ನಿಸಿದನೊಲವಿ.

॥ ೨ ॥

"ಹೇ ಪೃಥಾತನಯ ಕೇಳ್, ಸೂಕ್ಷ್ಮವಿದ ಪೇಳ್ವೆ,
ಕ್ಷಯವಾಗದಿಹುದಾವುದದೆ ಬ್ರಹ್ಮ ತಿಳಿಯೆನ್ನು,
ಶುದ್ಧಾತ್ಮ ರೂಪನೆ ಉತ್ಕೃಷ್ಟ ಪರಮ —
ಸೃಷ್ಟಿಯ ನಿಯಾಮಕನೆ ಪರಬ್ರಹ್ಮ ರೂಪ!
ಪ್ರಕೃತಿ ಪ್ರಮಾಣವದೆ ಅಧ್ಯಾತ್ಮವಹುದೆ
ಹುಟ್ಟುಗಳಿಗೆ ಮಾತ್ರವದು ಒಡಗೂಡಿ ಇಹುದೈ;
ಸರ್ವ ಭೂತೋದ್ಭವಕೆ ಕಾರಣವು ಕರ್ಮ,
ಜೀವಿಗಳ ಹುಟ್ಟಿಗೆ ಬೀಜವಾದ ಕರ್ಮ!

॥ ೩ ॥

"ನಾಶಕಾರಕ ಪ್ರಕೃತಿಯ ಕವಚಗಳನು
ಅಧಿಭೂತವೆಂದೆನುತ ಪೇಳುವರು ಜನವು;
ಪ್ರಕೃತಿಯ ಪರಿಣಾಮ ರೂಪವವು ಎಲ್ಲಾ
ವಸ್ತುಗಳು ಹುಟ್ಟುವುವು ಸಾಯುವುವು ಕೇಳಾ,
ಅಧಿದೈವವೆನೆ ಪುರುಷ ಜೀವಾತ್ಮ ರೂಪಾ
ಆ ರೂಪವನು ಹೊಂದಿದಾ ದೈವಿಕಾಂಶಾ!

ದೇಹಗಳನೊಳಗೊಂಡ ಅಖಿಯತ ಜ್ಞ ಸಾನೆ,
ಸಮಾಧಾನದ ಸರ್ವ ಸಾಮ್ರಾಜ್ಯವಹೋ ಜಗದೆ!

॥ ೪ ॥

"ಪ್ರಾಣಾಂತ್ಯದಾ ವೇಳೆಯಲ್ಲಿ ಯಾರು ನನ್ನ
ನೆನೆಯುತ್ತಲೆ ಕಾಯವನು ತೊರೆಯುವನೊ ಕೇಳು,
ಪ್ರಾಪ್ತನಾಗುವನೋ ಇಹದೆ ಸೇರುವನು ನನ್ನ,
ಹೊಂದುವನು ಸಾರೂಪ್ಯವನು ಕೇಳು ಮಿತ್ರ!
ಸಂದೇಹವದು ಬೇಡ ದೇಹವಿದು ಹೋಗುತ್ತ
ಜೀವಾತ್ಮರಲ್ಲಿಹುದು ಪರಮಾತ್ಮನಂತಾ—"
ಎಂದೆನುತಲಾ ಹರಿಯು ಪರಮಾರ್ಥವದನೆ
ಪ್ರಶ್ನಿಸಿದ ಪಾರ್ಥನಿಗೆ ಹೇಳಿದನು ಒಲಿದೆ!

॥ ೫ ॥

"ಕೇಳಿತ್ತ ಕೌಂತೇಯನೆ ಮಾನವನು ನಿಜದಿ
ತಾನ್ ಇಚ್ಛಿಸಿದ ವಸ್ತು ವಿಷಯವನೆ ಮನದೆ,
ನೆನೆಯುತ್ತ ನಿರಂತರವು ಅದೆ ತನ್ನ ಧ್ಯೇಯ
ಅದೆ ತನ್ನ ಚಿಂತನೆಯು ಎಂದೆನುತ ನಿತ್ಯ
ನೆನೆಯುತ್ತಲೆ ತಾನ್ ಅಂತ್ಯಕಾಲದಲು ಅಂತೆ
ಇದ್ದೊಡದೆ ವಸ್ತುವನು ವಿಷಯವನು ಕೇಳಿ,
ಹೊಂದುವನು ಪಡೆಯುವನು ತಾನ್ ಮೆಚ್ಚಿದನ್ನೆ
ಕರ್ಮಫಲವನು ಮಾಗಿ ಅಖಿಲಾತ್ಮ ಅದನೆ!

॥ ೬ ॥

"ಅದಕೆ ಅನುವಾಗಿ ಎಚ್ಚ ಅರ್ಜುನನೆ ಕೇಳು,
ನೆನೆಯುತ್ತಿರೊ ನನ್ನನೆ ನಿರಂತರವು ನೀನು,
ಅದರಂತೆ ನಿಯತದೆ ಕಾದಾಡು ಮಲ್ಲೆ
ಯುದ್ಧವನು, ಪಡೆಯೊ ನಿರ್ಧಾರ ನೀನಿಂದೇ!
ಮನವನ್ನು ಬುದ್ಧಿಯನು ನನ್ನಲಿಯೆ ನಿನ್ನ
ನಿಲಿಸಿಕೊಳಿಸಿಚ್ಚ ಸ್ಥಿರ ಕಡೆಗಂತು ನೀನು,
ಸೇರುವೆ ನಿಸ್ಸಂದೇಹದಲಿ ನೀನು ನನ್ನ"
ಎಂದೆನುತಲಾ ಹರಿಯು ಹೇಳಿದನು ವಿವರ!

॥ ೭ ॥

"ನಿತ್ಯ ಅಭ್ಯಾಸದಾ ವ್ರತದಲ್ಲಿ ಒಮ್ಮೆ
ಧ್ಯಾನದಲಿ ಭಕ್ತಿಯಲಿ ಎಂದೆನುತಲಿಮ್ಮೆ
ಸ್ಥಿರಮನಸ್ಸಿನೊಳಗಡೆ ನಿಶ್ಚಿಂತನಾಗಿ
ಪರಮಾರ್ಥಿಕ ವಿಷಯದಲಿ ನಿತ್ಯ ಮಗ್ನನಾಗಿ,
ಪರಮೋತ್ತಮಾ ಪುರುಷನಾದೆನ್ನ ನೆನೆದು
ನಿಶ್ಚಿಂತನೆಯಲಿ ತಾನ್ ಬಾಳ್ವೆಯನು ಕಳೆವ

ಆರ್ ಅವನೊ ಹೊಂದುವನು ನನ್ನನ್ನೆ ನಿಜದಿ
ನಿಶ್ಚಯವು ಇದು ಪಾರ್ಥ ಕೇಳಿನ್ನು ನಿನ್ನ ಮನದಲಿ!

॥ ೮ ॥

"ಸರ್ವವನು ಅರಿತಿಹ ಸರ್ವಜ್ಞನಹನು
ಪುರಾತನ ಪುರುಷ ಜಗನ್ನಿಯಾಮಕನು;
ಕೇಳ್ "ಅಣೋರಣೀಯಾಂ" ಎಂಬೊಳಿಹ ಸೂಕ್ಷ್ಮ—
ಸರ್ವಾಂತರ್ಯಾಮಿ ಪರಮಾತ್ಮ ಸ್ವರೂಪಿ;
ಶಿಕ್ಷಿಸುವ ಸರ್ವಪ್ರಕಾಶನು ಯಾರು ಅಹನೊ
ತಮೋಲೋಕದಿಂದತಿ ದೂರ ಇರಿಹನೊ
ಆ ಚಿನ್ಮಯರೂಪಿಯಾದೆನ್ನನ್ನೆ ನಿತ್ಯ
ಸ್ಮರಿಸುತಲಿ ಇರುವನದಾವನೊ ಜಗದಿ ಕೇಳ್ —

॥ ೯ ॥

"ಅವನೆಯೆ ಪ್ರಾಣಾಂತ್ಯ ವೇಳೆಯಲು ಅಂತು
ನಿಶ್ಚಲತೆಯಲಿ ಮನವ ಸ್ಥಿರಗೊಳಿಸಿ ತಾನ್ ಇಟ್ಟು
ಭಕ್ತಿಯಲು ಯೋಗಬಲದಾ ಸಿದ್ಧಿಯಿಂದ
ಪ್ರಾಣವನು ಹುಬ್ಬುಗಳ ನಡುವೆಯೆ ಕೇಳ್,
ನಿಲ್ಲಿಸುತ ಧ್ಯಾನಾವಸ್ಥೆಯೊಳು ತಾನ್ ಆಗಿ,
ಪರಮೋತ್ತಮ ಪುರುಷ ಪರಮಾತ್ಮನಲ್ಲಿ
ತನು ಮನವನೊಡಗೂಡಿ ಸಮರ್ಪಿಸುತಲಂತೆ
ಸೇರುವನೊ ಹರಿಯ ಪದಕಮಲವನು ಮುದದಿ!

॥ ೧೦ ॥

"ವೈದಿಕರು ವೇದಾಂತಿಗಳು ಆವುದನ್ನು
ಶಾಶ್ವತವು ಎಂದೆನುತ ಪೇಳುವರೊ ಅವನಾ,
ನಿಸ್ಪೃಹಿಗಳು ಋಷಿಗಳುವು ಆವುದನ್ನು
ಇಚ್ಛಿಸುತಲಿ ಪಡೆಯುವರಿಗೆ ಅಂತೆಯೆ ನೋಡಾ
ತಾವ್ ಬ್ರಹ್ಮಚರ್ಯವನು ಪಾಲಿಸುತಲಿ ನಿತ್ಯ
ಪಡೆಯುವ ಅಮೂಲ್ಯವಹ ಪ್ರಾಪ್ಯವು ಆದ
ಪವಿತ್ರವದು ಪರಂಪದವನು ಸಂಕ್ಷೇಪದಲಿ
ಪೇಳುವೆನು ಆ ಜ್ಞಾನವನೆ ಆಲಿಸಿನ್ನೊಲದಿ!

॥ ೧೧ ॥

"ಸರ್ವೇಂದ್ರಿಯಗಳನ್ನು ಸ್ಥೈರ್ಯಯುಕ್ತದಿ ನಿಗ್ರಹಿಸಿ
ಮನವನ್ನು ಹೃತ್ಕಮಲದಲಿ ತಡೆದು ನಿಲಿಸಿ
ಅಂತೆಯೆ ಶಿರಸ್ಸಿನಲಿ ಪ್ರಾಣವನು ಇರಿಸಿ
ಯೋಗವೆಂಬಾ ನಿಶ್ಚಲತೆ ಧ್ಯಾನದಲ್ಲಿ
ಮನವನ್ನು ಕೂಡಿಟ್ಟು ತನ್ಮಯಶೀಲನಾಗಿ
ಇದೇಕದಿ ತಪೋಲೋಕಕದವ ಹಿಡಿದು,

ಎಂಬೊಂದು ಸತ್ತ್ವವದ ಸಾಧಿಸುವದೆ ಮುಕ್ತಿ
ತಿಳಿಯೆಂತಲ್ವೆ ಆದ ಹೇಳ್ವೆ ಕೇಳ್ ಸವ್ಯಸಾಚಿ!

॥ ೧೧ ॥

"ಏಕಾಕ್ಷರಾ ಪ್ರಣವವನು ಉಚ್ಚರಿಸುತ
ಓಂಕಾರದಾನಂದದಲಿ ಮೈಮರೆಯುತ್ತ,
ಅಕ್ಷಯವೂ ಪರಬ್ರಹ್ಮ ಬ್ರಹ್ಮಸ್ವರೂಪನುತ
ನನ್ನನ್ನೆ ದಿನನಿತ್ಯ ಸ್ಮರಿಸುತ್ತ ಕೇಳಾ
ದೇಹಾಂತ್ಯದಾ ನಿಮಿಷದಲಿ ನನ್ನ ಬಿಡದೆ
ಜಪಿಸುತ ತ್ಯಜನವನೆಯೇ ಪೊಂದುವನು ಜಗದಿ,
ಪರಮಗತಿಯಾ ಮೋಕ್ಷದಾ ಸುಗತಿಯನು
ಬ್ರಹ್ಮಪುರದ ಪಡೆಯುವಾ ಸುರಲೋಕವನ್ನು!

॥ ೧೨ ॥

"ಅನ್ಯ ವಿಷಯಗಳತ್ತ ಮನವನ್ನು ಬಿಡದೆ
ಹಿಗ್ಗುತಿರುತ್ತ ನನ್ನನ್ನೆ ಸ್ಮರಿಸುತ್ತಲಿ ನಿಜದಿ,
ಮನೋನಿಗ್ರಹದಲಿ ಬಾಳುಯುತನು ಸವಿಸಿ,
ನಿತ್ಯವೂ ಸರ್ವೋಪಾಸನೆಯನ್ನೆ ಎಸಗಿ
ಬಾಳುತಿಹ ಪರಯೋಗಿಗದೊ ನಾನು ಇಹೆನು
ಸುಲಭದಲಿ ನನ್ನನು ಸೇರುವನೊ ಆವನು,"
ಎಂದೆನುತಲಾ ಪುಂಡರೀಕಾಕ್ಷನಂದು
ವಿವರದಲಿ ಹೇಳಿದನು ವಿಷಯವಿದನಿಂತು!

॥ ೧೩ ॥

"ಯೋಗಬಲದಿಂದ ಕೇಳ್ ಸಿದ್ಧಿಯನು ಪೊಂದಿ
ಮಹೋತ್ತಮರು ಮುನಿ ಮಹಾತ್ಮರಕೆ ಅಲ್ಲಿ
ದೈವಬಲದಿ ದೇವನಿಲಯವನು ಪೊಂದಿ ಅಂತೆ
ಸೇರುವರು ನನ್ನನ್ನೆ ಕಡೆಗಂತು ಕೇಳು
ದುಃಖಮಯವೀ ಇರವು ಅಸ್ಥಿರವು ಜಗವು
ಎಂಬುದನು ತಿಳಿದ ಪರಯೋಗಿ ಜನ ನಿಜಸ್ಥಿತಿ,
ಪಡೆಯರಾ ಪುನರ್ಜನ್ಮವನು ಇಹದಲಂತು,"
ಎಂದೆನುತಲಂದನಾ ಗೋವಿಂದನಂದು!

॥ ೧೪ ॥

"ಕೇಳೆಲೈ ಆ ಅರ್ಜುನನೆ, ಯೋಗಿಜನ ಯೋಗಾ,
ಬ್ರಹ್ಮಲೋಕವ ಸೇರಿದೊಡೆಯು ತಾವ್ ಮೋಕ್ಷ
ಪಡೆಯಲಾರರು ಕೇಳ್ ಲೋಕಗಳು ಎಲ್ಲ
ಬಂಧವು ಆ ಬಂಧಗಳಿಗೊಳಗಾಗುತಿರಲಾ
ಪುನರ್ಜನ್ಮವನು ತಪ್ಪಿಸಲು ಸಾಧ್ಯವೆಂತು?
ಪಾರ್ಥನೆ, ಯಥಾರ್ಥವದ ಹೇಳುವೆನು ಕೇಳು;

ನನ್ನನು ಸೇರಿದವರಾರಿಹರೋ ಅವರ್ಗೆ
ಸತ್ತು ಮರುಹುಟ್ಟರೆಂಬುದು ನಿಜವೋ ಜಗದಿ!

"೧೬"

"ತಿಳಿಯೆಯಾ ಪಾಂಡವನೆ, ಈ ಬ್ರಹ್ಮ ಸೃಷ್ಟಿ!
ಯುಗ ನಾಲ್ಕು ಒಂದು ಸಾವಿರ ಸುತ್ತು ತಿರುಗಿ
ಮುಗಿದೊಡದೆ ಬ್ರಹ್ಮನಿಗೆ ಹಗಲೊಂದು ಕೇಳಾ,
ಅಂತೆಯೇ ನಾಲ್ಕು ಯುಗಗಳು ಒಂದು ಸಹಸ್ರ
ಸರದಿಯನು ಮುಗಿಸಿದೊಡದುವೆ ಒಂದು ರಾತ್ರಿ,
ಪಾರ್ಥ ಕಾಲಮಾನವದು ಈ ವಿಶ್ವದಲ್ಲಿ
ಅಪರಿಮಿತಮಿಹ ಹಗಲು ಇರುಳುಗಳು ಮಾಯೆ
ಬ್ರಹ್ಮಸೃಷ್ಟಿಯು ಕಾಲದರಿಯುವುದೆ ಅಲೆ!

"೧೭"

"ಪ್ರಕೃತಿಯು ರೂಪಾಂತ ಪರಬ್ರಹ್ಮನಿಂದ
ಚತುರ್ಯುಗದಾ ಹಗಲ ಪ್ರಾರಂಭದಾಗ
ಲೋಕಗಳ ಉದ್ಭವವು ಆಗಲದರೊಡನೆ
ಸೃಷ್ಟಿಯಿದು ಬೆಳಗುವುದು ಬಾಳುವುದು ನಿಜವೆ!
ಚತುರ್ಯುಗದಾ ಸಹಸ್ರ ಸರದಿಯದು ಮುಗಿದು
ಕತ್ತಲಾಗಲು ಲೋಕವಾ ತಮವೆ ತಂದು
ಲಯಹೊಂದುವುದು ಕೇಳ್ತೆ ಬ್ರಹ್ಮನಲಿ ಸರ್ವ!
ಇದೆ ಕಾಲದರಿಯ ಆ ಏರಿಳಿತದಂತಾ!

"೧೮"

"ಹೇ ಧನಂಜಯ ಕೇಳು, ಹಗಲಿರುಳು ಕತೆಯು;
ಜೀವರಾಶಿಯ ಪ್ರಾಣಿವರ್ಗವದು ಎಲ್ಲ
ಕರ್ಮಾಕರ್ಮಕನು ಸಾರವಾಗಿಹುದಲ್ಲಿ
ಹುಟ್ಟುವವು ಸತ್ತು ಮರುಹುಟ್ಟುವವು ಜಗದಿ!
ಅಂತಿರಲು ಕೇಳ್ ಬ್ರಹ್ಮಸೃಷ್ಟಿಯಲಿ ಹಗಲು
ಬಂದೊಡದು ಜನನವಪ್ಪು, ಜನ್ಮಗಳ ಜಯವು;
ರಾತ್ರಿಯೆಂದೊಡೆ ಅದುವೆ ಆಪತ್ತು ಸಾವು; —
ಎಂಬುದನು ತಿಳಿಯೆಲೆ ಫಲ್ಗುಣನೆ ನೀನು!

"೧೯"

"ಭೌತಿಕವೊ ವಸ್ತುಗಳು ಜೀವಿಗಳು ಸರ್ವ
ಪ್ರಕೃತಿಯಿಂದವು ಬೇರೆಯಿಹುದೆಂದು ತಿಳಿಯಾ!
ಹುಟ್ಟುವವು ಅಳಿಯುವವು ನಶಿಸುವವು ಎಲ್ಲ
ಅಂತದೊರ್ವೆಯು ಕೇಳು ಪ್ರಕೃತಿಯೆ ನಿತ್ಯ;
ಸತ್ಯವಾಗಿದೆ ತಿಳಿಯಲಶಕ್ಯವಿದೆ ಕೇಳ್ತೆ
ಜ್ಞಾನಿಗಳಿಗರಿಯಲಸದಳವಾಗಿ ಇಹುದೆತ್ತ!

ಶಾಶ್ವತವು ಸಾಕಾರರಹಿತವು ಎಂದೂ ಇರುವಾ
ಚಿರಂತನವಾ ವಸ್ತುವದೆ ಅರ್ಥ ಕೇಳಾ!

" ೨೦ "

"ನಿತ್ಯನು ಅವ್ಯಕ್ತನಾಗಿಹ ಆತ್ಮವದರಾ
ನಿಜರೂಪವನು ತಿಳಿಯುವವನಾರೊ ಜನಾ!
ಅವ್ಯಕ್ತರೂಪವದುವೇ ಪರಮಗತಿಯೊ
ಪರಮೋತ್ತಮವಾ ಗತಿಯನು ಪೊಂದಲದೆ ಸಿಗವೊ!
ಅದ ಪೊಂದಿದಾಗೆ ಪುನರ್ಜನ್ಮವುದಯಿಲ್ಲ,
ಲೋಕಸಂಸಾರ ಗೊಡವೆಯು ಅಂತು ಇಲ್ಲ;
ಕೇಳಲಿಕ್ಕೆ ಪಾರ್ಥ, ಪರಮೋನ್ನತಾ ಗತಿಯು
ನನ್ನ ನೆಲೆ ನನ್ನ ಬೀಡೆನುವೆನಿದ ನಿಜದೆ!

" ೨೧ "

"ಕೆಲತ್ತಿನನೆ, ಸೃಷ್ಟಿಯೊಳು ಲೋಕಗಳುವಿಶ್ವ,
ಕೇಳ್ ಸರ್ವ ಭೂತಗಳದಾವನಲಿ ಇರುವವೊ,
ಆರಿಂದಲೀ ವಿಶ್ವ ವ್ಯಾಪಕವು ಆಹುದೊ,
ಲೋಕಗಳಲಿಹ ವಸ್ತು ಆಶ್ರಯವಹುದೊ,
ಅನಿತಿಹಾ ಪರಮೋತ್ತಮನ ನಿತ್ಯ ನಿಜದೆ
ನಿರ್ಲಿಪ್ತನಾಗಿ ಪರಿಶುದ್ಧ ಮನದಿಂದೆ
ಪೊಂದಬಹುದಾ ಭಕ್ತಿ ಶ್ರದ್ಧೆಯಲಿ ನೋಡೈ,
ಹೋ ಅರ್ಜುನನೆ, ಅದುವೆ ಪರದೈವ ಲೀಲೆ!

" ೨೨ "

"ಪೇಳ್ವೆನಿದೊ ಪಾರ್ಥ ಕೇಳ್, ಪರಯೋಗಿ ಮಾರ್ಗ,
ಪರಮಾರ್ಥಕವು ಪಡೆ ಪದವಾವುದೆನುತಾ!
ಪುನರ್ಜನ್ಮವನು ಪಡೆಯದೇ ಇರುವುದೆಂತು?
ಹುಟ್ಟು ಸಾವುಗಳಿಂದ ತಪ್ಪುವುದು ಎಂತು?
ನಿತ್ಯ ಮರುಹುಟ್ಟುವುದರ ಗತಿಯುದೆಂತು?—
ಎಂಬುದಕೆ ಇಹಯೋಗಿಕ ಮಾರ್ಗವನು ನಿನಗೆ
ತಿಳಿಸುವೆನು ಕೇಳಲಿಕ್ಕೆ ಶಾಂತವನೆ ಮುದದೆ!

" ೨೩ "

"ಅಗ್ನಿ ದಿನ ಬೆಳಗುವಾ ತೇಜಸ್ಸು ಕೂಡಿ
ಬೆಳದಿಂಗಳೂ ಉತ್ತರಾಯಣದ ದಾರಿ,
ಆ ನುರಿತರಿನ ಬ್ರಹ್ಮಜ್ಞರು ನಡೆಯುವರು ಮುಂದು,
'ಅರ್ಚಿರಾದಿ'ಯು ಮಾರ್ಗವದನಿಯೇ ಪಡೆದು,
ಯೋಗಿ ಸಾಧನೆಯೊಳು ಪೊಂಬೆಳಗ ಕಂಡು
ಸೇರುತಲಿ ಬ್ರಹ್ಮನನು ಜನಿಸರವರಿನ್ನು!
ಜನ್ಮರಾಹಿತ್ಯದಾ ಮಾರ್ಗವದಿದ್ದೆ ಸಖನೆ,"
ಎಂದೆನುತ ಪೇಳಿದನು ಶ್ರೀಕೃಷ್ಣನೊಲಿದೆ!

" ೨೪ "

"ಅಂತೆಯೇ ಕಬ್ಬೊಗೆಯು ರಾತ್ರಿಯುದರಿಂದೆಯೆ
ಕೇಳ್ ಕೃಷ್ಣಪಕ್ಷ ದಕ್ಷಿಣಾಯನವದಾಗೆ,
ಹಾದಿಯನು ಹಿಡಿದು ಚಂದ್ರೋದಯಾ ಜ್ಯೋತಿ
ಹೊಂದುತಲಿಹ ಅಂಧಾಕಾರದಲಿ ತೊಳಲುತ,
ಹಾಯುವರು 'ಧೂಮ'ದಿ ಮಾರ್ಗವನು ಹಿಡಿದು
ಪಡೆಯುವರು ಪುನರ್ಜನ್ಮಗಳನಂತು ಮುಂದು,
ವರಯೋಗಿಯರಿಗೊಪ್ಪದಾ ಮಾರ್ಗ ಇದುವೆ
ಜನ್ಮಬಂಧನದಲ್ಲಿ ತೊಳಲುತಿಹ ಗತಿಯೆ!

॥ ೨೫ ॥

"ಇವು ಶುಕ್ಲ ಕೃಷ್ಣಗತಿಯೆಂದುವೆ ಪ್ರತೀತಿ,
ವೇದೋಕ್ತವಾಗಿಹವು ಈ ಎರಡು ದಾರಿ!
ಜಗದಲಿವು ಶಾಶ್ವತವು ಎಂದೆನುತ ಎಲ್ಲ
ಹೇಳುವರದಂತಾದೊಡೆಯು ಗತಿಯು ಇಲ್ಲ.
ಶುಕ್ಲಗತಿಯಲಿ ಪುನರ್ಜನ್ಮವದು ಇಲ್ಲ,
ಕೃಷ್ಣಗತಿಯಲಿ ಜನ್ಮಬಂಧನವು ಇಹುದಾ!
ಭೇದವಹುವೀ ಎರಡು ಮಾರ್ಗಗಳೊಳಿಹುದು
ತಿಳಿಯೆಲಿತ್ವ ಯೋಗಿಯರಿಗೊಪ್ಪುಯುಹ ಹದನು!

॥ ೨೬ ॥

"ಹೇ ಸವ್ಯಸಾಚಿ ಕೇಳ್, ಈ ಮಾರ್ಗದ್ವಯವ
ತಿಳಿದ ವರಯೋಗಿ ತಾನ್ ಜಗದಲಿ ಕೇಳಾ
ಭ್ರಾಂತಿಗೀಡಾಗನದರಿಂದ ನಿಜ ನೆರನಿ
ವರ 'ಅರ್ಚಿರಾದಿ' ಗತಿಯನೆ ಪಿಡಿಯೊ ಸುಖವೈ!
ಹೊಂದಲಾರೆಯೊ ನೀನು ಪುನರ್ಜನ್ಮವನು
ಬ್ರಹ್ಮಲೋಕದ ಸನಿಹ ಸೇರುವಿಯೊ ಅಂತು;
ಯೋಗಿ ಕರ್ಮಗಳನು ಬಿಡದಿರ್ಪ ಪಾರ್ಥ,
ಅದರಿಂದಲೇ ಭವಕೆ ಇಹುದು ಪುರುಷಾರ್ಥ!

॥ ೨೭ ॥

"ಯೋಗಿವರರಾರಿವುಗಳನು ತಿಳಿದು ಇಹರೊ
ಅಧ್ಯಯನವಾ ಯಜ್ಞ ದಾನಾದಿಗಳಲೊ,
ತಪೋವ್ರತಾದಿಗಳಿಂದಲು ಪಡೆವ ಫಲವು
ಕೇಳ್ ಪುಣ್ಯಾಗನ್ಯತಿಗಳೆಲ್ಲವನು ಕಂಡು,
ಅವೆಲ್ಲವನಹೊ ಮೀರಿದಾ ಪರಮಗತಿಯ
ಪರಮೋತ್ತಮಾ ಸ್ಥಾನವನು ಪಡೆವರೆಲ್ಲ,
ಅದುವೆ ಅಕ್ಷರಬ್ರಹ್ಮಯೋಗವೆಂದೆನಿಸಾ,
ಎಲೆ ಪಾರ್ಥವದಿ ಗೀತೆಯಾ ಪಾತ್ರ ತಿಳಿಯಾ!

॥ ೨೮ ॥

(ಎಂಟನೇ ಅಧ್ಯಾಯ ಸಂಪೂರ್ಣವು)

ಅಧ್ಯಾಯ ೯ — ರಾಜವಿದ್ಯಾ ಯೋಗ!

"ಪಾಂಡವನೆ, ಹೇಳುವೆನು ಜ್ಞಾನದ ರಹಸ್ಯ
ಪ್ರಾಮಾಣಿಕ ಬುದ್ಧಿ ಸಿದ್ಧಾಂತದಿಂದಿರುವಾ
ನಿನಗೀಯುವೆನು ಆ ಶ್ರೇಷ್ಠ ಜ್ಞಾನವದನೊಂದಾ
ಭಕ್ತಜನಕೊಪ್ಪುದ ವಿಶೇಷವಹ ಜ್ಞಾನ!
ಅದನರಿತು ಅರಿಗಿಸದೊಡದೊ ನೀನು ಮನದಿ
ಮುಕ್ತನಾಗುವೆ ಕರ್ಮಬಂಧನಗಳಿಂದೆ!"
ಎಂದೆನುತಲಾ ಹರಿಯು ಹೇಳಿದನು ಆಗ
ರಾಜವರನಿಗೆ ಒಪ್ಪುದಾ ವಿದ್ಯಾಯೋಗ!

" ೧ "

"ಸಹಸ್ರಾರು ವಿದ್ಯೆಗಳಲಿದೆ ರಾಜವಿದ್ಯೆ
ರಾಜವರರಿಗೆ ಒಪ್ಪುಹ ರಹಸ್ಯವಿದುವೆ;
ಪಾವನವು ಪರಮೋತ್ತಮಾ ವಿದ್ಯೆ ಕೇಳ್ವೆ
ಸ್ವಾನುಭವದಲಿ ಪಡೆವ ಸೂಕ್ತಿಯಿದು ತಿಳಿಯೆ;
ಧರ್ಮಯುಕ್ತವು ಅದುವೆ ಸದ್ಧರ್ಮ ಪ್ರಾಪ್ಯ
ಭಾಗ್ಯಸುಖ ಸಾಧ್ಯವಿದೆ ಅದೆ ರಾಜವಿದ್ಯಾ,
ಅವ್ಯಯವಾದೀ ರಾಜಯೋಗವದ ಹೇಳ್ವೆ"
ಎಂದೆನುತಲಾ ಕೃಷ್ಣ ಹೇಳಿದನು ನರಗೆ!

" ೨ "

"ಅರ್ಜುನನೆ, ಪರಧರ್ಮವಿದ್ಯೆಯಲಿ ಶ್ರದ್ಧೆ
ಇರದ ಅವಿಶ್ವಾಸಿಗಳು ಇಹರಿತ್ತ ಜಗದೆ;
ಅನಿತಿಹರು ಹೊಂದಲಾರರೀ ವಿದ್ಯಾಯೋಗ,
ಸೇರಲಾರರು ನನ್ನನಾ ಪಾವನ್ನಂದಾ;
ಹೋಗುವರು ಕೇಳ್ ಮೃತ್ಯುಲೋಕವನು ಹಾದು
ಸಂಸಾರಿ ಬಾಳುಯಲಿ ನಾವ್ ಬಿದ್ದು
ಸೊರಗುವರು ಅವಿಶ್ವಾಸಿಗಳು ಇಹದಿ ನಿಜವು"
ಎಂದೆನುತ ಹೇಳಿದನು ಮನುವಿನೊವ ಸುತನು.

" ೩ "

"ಎಲೆ ಪಾರ್ಥ, ಅವ್ಯಕ್ತ ರೂಪಾಂತ ನಾನು
ವ್ಯಾಪಿಸಿಹೆ ಶತಕೋಟಿ ಲೋಕಗಳನೆಲ್ಲಾ;
ನಿರಾಕಾರ ವ್ಯಾಪಿಯಾಗಿಹ ನನ್ನ ಸೃಷ್ಟಿಯು
ಲೋಕಗಳನೆಲ್ಲವನು ಬೆಳಗುವುದು ನಿಜವು;
ಇರುವುದು ನನ್ನಲ್ಲಿ ಅಗಣಿತ ವಸ್ತುಗಳುವು
ಆಶ್ರಯಿಸಿ ಇವೆಯೆನ್ನನಾ ಜೀವಿಗಳುವು!

ಇನಿತಿಹಾ ಸೃಷ್ಟಿಯಿದು ನನ್ನಲಿಯೆ ಇಪ್ಪುದೈ 1329
ಆನಾವುದನು ಆಶ್ರಯಿಸಿಯಿಲ್ಲ ನಿಜವೈ!

॥ ೪ ॥

"ಕೇಳ್ ಭೂತಿಗಾ ಜೀವಿಗಳು ನನ್ನಲ್ಲಿಲ್ಲಾ
ಸಂಕಲ್ಪದೊಳೆ ಧರಿಸಿಹೆನು ಅವುಗಳನ್ನ!
ಸರ್ವೇಶ್ವರನೊ ನಾನು ನೋಡೆನ್ನ ಶಕ್ತಿ
ಧರಿಸಿಹೆನು ಸರ್ವಸ್ವವಹ ಯೋಗ ಶಕ್ತಿ
ಜೀವಿಗಳು ವಸ್ತುಗಳು ನನ್ನಲ್ಲಿ ಇರಲು
ಆನ್ ಅವುಗಳಲ್ಲಿಲ್ಲ ಕೇಳ್ ಅದುವೆ ನಿಜವು!
ವಿಸ್ತರಿಹ ಜೀವಿಗಳನೆಲ್ಲಾ ಆತ್ಮಬಲದೆ
ಸೃಷ್ಟಿಸಿರಲದೆಯೆನ್ನ ಸೃಷ್ಟಿಯಿದು ನೋಡೈ!

॥ ೫ ॥

"ನಭಾಂಗಣದಲಿ ವ್ಯಾಪಿಸಿಹ ವಾಯು ನಿತ್ಯ
ನನ್ನಿಂದಲೀ ಆಧರಿಸಿ ನಿಂತು ಇರಲು
ಚಲಿಸುವುದು ಬೀಸುವುದು ಹಾಯುವುದು ಜೀವಾ
ನನ್ನ ಬಲದಲಿ ಜೀವಿಗಳು ಬದುಕಿಸಿಹುದಾ;
ಅಂತೆಯೆ ಸಮಸ್ತವಿಹ ಭೂತಗಳು ಎಲ್ಲ
ನನ್ನಿಂದ ನನ್ನೊಳಗೆ ನನ್ನಲಿಯೆ ಕೇಳಾ,
ಇದರಿಂದು ತಿಳಿಯೆಲೈ ಫಲ್ಗುಣನೆ ನೀನು,"
ಎಂದೆನುತ ಹೇಳಿದನೊ ಪುಂಡರೀಕಾಕ್ಷ!

॥ ೬ ॥

"ಹೇ ಪೃಥಾತನಯನೆ ಕೇಳ್ ಯುಗವಲವು ಕಳೆದು
ಪ್ರಳಯದ ಕಾಲದೆ ಸರ್ವ ಉತ್ಪತ್ತಿರಲಂದು,
ನನ್ನಲಿಯೆ ನನ್ನ ವಶವಿಹ ಪ್ರಕೃತಿಯಲಿ
ವಿಸ್ತರಿಹ ವಸ್ತುಗಳು ಜೀವಿಗಳು ಕೇಳೈ,
ನಶಿಸುವುವು ಅಳಿಯುವುವು ಕಾಲದೆಡೆಯಲ್ಲಿ,
ಅಂತೆಯೆ ಯುಗಾರಂಭದಾ ವೇಳೆಯಲಿ,
ನಾನೆಯೇ ಸೃಷ್ಟಿಸುವೆ ಲೋಕಗಳನಿಲ್ಲಿ
ಲೋಕದಿಹ ಜೀವಿಗಳು ವಸ್ತುಗಳನೆಲ್ಲಾ!

॥ ೭ ॥

"ಪ್ರಕೃತಿಯಿದುವೆ ನನ್ನದೆಲೈ ಪ್ರಕೃತಿಯು ಕೇಳೈ
ಸೃಷ್ಟಿಯಿದಕಾಧಾರವದುವೊ ಕೇಳ್ ನಿಜದೆ!
ಪ್ರಕೃತಿಗೆ ಪರವಶವಾಗಿಹುದೆನ್ನ ಸೃಷ್ಟಿ,
ಕೋಟ್ಯಾದಿ ಜೀವಿಗಳು ವಸ್ತುಗಳು ಇಲ್ಲಿ!
ಕಾಲದೆಡೆ ಕರೆದಂತೆ ಸೃಷ್ಟಿಸುತಲಿರುವೆ,
ಪಾಂಚಭೌತಿಕ ಶಕ್ತಿ ವಸ್ತುಗಳನಿಹುದೆ!"

1330

ಎಂದೆನುತಲಾ ಸೃಷ್ಟಿ ಸ್ಥಿತಿ ಲಯದ ಗಹನಾ
ಅಂತಿಕತ್ವಯೆಂಬಂತೆ ಹೇಳಿದನೋ ಕೃಷ್ಣ!

" ೮ "

"ಎಲೆ ಧನಂಜಯನೆ ಕೇಳು, ಕರ್ಮಗಳು ಕಟ್ಟು—
ಆದ ಬಿಕ್ತಿನಿ ಇಹದ ಸಂಬಂಧವನು ಕಡಿದು
ಅಂತು ಧ್ಯಾನಾಸಕ್ತದಲಿ ಅನು ಉಳಿದು
ಯುಗಯುಗಾಂತರಗಳನು ಕಳೆಯುತಿರೆ ನಾನು
ಕೇಳ್ ಸೃಷ್ಟಿ ಸ್ಥಿತಿ ಕಾರ್ಯವನು ಎಂದು ನನ್ನ
ಬಂದಿಹೆನು ಆದೆ ನನ್ನ ಯೋಗಬಲ ತಿಳಿಯಾ—"
ಎಂದೆನುತ ಗೋವಿಂದನು ವಿಶದವಾಗಿ
ಹೇಳಿದನು ಕಂಗೆಟ್ಟ ಫಲ್ಗುಣಂಗೆ ಒಲಿದು!

" ೯ "

"ಸೃಷ್ಟ್ಯಾದಿ ಕಾರ್ಯದ ಪ್ರವರ್ತಕನು ನಾನು,
ಸರ್ವವನು ಧರಿಸಿ ಮಾಡಿ ನೋಡುತಲಿ ಇಹೆನು;
ಮಹಾಮಾಯಾ ಪ್ರಕೃತಿಯೊಡಾವರಿಸಿ ವಿಶ್ವ
ಚರಾಚರ ಜೀವಿಗಳು ಒಡಗೊಂಡು ಇರುವ;
ಲೋಕಗಳನೆಲ್ಲವನು ಸೃಷ್ಟಿಸುತ್ತಲಿಹೆನು
ಸೃಷ್ಟಿಯೊಡೆ ಲಯಕಾರಕ ಯೋಗವಿಹುದು;
ಆದರಿಂದಲೇ ಭೂಮಿ ಮರಳಿ ತಿರುಗಿದಂತೆ
ಹುಟ್ಟುವುದು ಸಾಯುವುದು ತಿರುತಿರುಗಿ ಅಂತೆ!

" ೧೦ "

"ಹೇ ಪಾರ್ಥ, ಶತಕೋಟಿ ಲೋಕಗಳನೆಲ್ಲ
ಸೃಷ್ಟಿಸಿದ ಸರ್ವೇಶನೋ ನನ್ನ ನೋಡಾ,
ನಿರಾಕಾರದೀ ರೂಪವ ಧರಿಸಿ ಬಂದಿರುವ
ನಿತ್ಯ ಜ್ಞಾನ ಸಿದ್ಧಿ ಸಿದ್ಧಿಯೋನಿಲ್ಲದಾ
ಗಾಂಭೀರ್ಯ ಮಾನವನ ರೂಪದಿಹ ನನ್ನ
ಅನಾದರದಲಿ ನೋಳ್ಪರೋ ನರನೆ ಕೇಳು,"
ಎಂದನು ಗೋಪಾಲಕೃಷ್ಣನು ತನ್ನ ಮಹಿಮೆ—
ಮಹಿಮೆಯನು ಬಿಡಿಸಿ ಬಗಳಿ ಹೇಳ್ವನೊಲವಿ!

" ೧೧ "

"ಮೋಹಾದಿ ರಜಸ್ತಮೋ ಗುಣಕೆ ಸಿಲುಗಾಗಿ,
ಇಂದ್ರಿಯಗಳ ನಿಗ್ರಹಿಸದೆಯೇ ತೊಳಲಿ,
ರಕ್ಕಸರ ತೆರದಲಿ ಸೊಕ್ಕಿನಲಿ ಮೆರೆಯುತ
ಅಸುರರ ಸ್ವಭಾವವನು ಪೊಂದಿಂಬ ತಳೆದು
ಇಹ ಜನರು ಪರಮಾತ್ಮನನು ಅರಿಯರಂತಾ
ಅಂತಹರ ವರ್ತನೆಯು ಬುದ್ಧಿಯು ವಿವೇಕ,

ಆವರಿಸಿಗತವಾ ಪ್ರಕೃತಿ ಪ್ರಾರ್ಥನೆಗಳೆಲ್ಲ
ಲೋಕದಲಿ ನಿರರ್ಥಕವು ಕೇಳಿತ್ತಿ ಪಾರ್ಥ!
॥ ೧೨ ॥

"ಆದರಿನ್ನೆ ಸ್ವಪ್ರಕೃತಿಯಲಿ ಪ್ರತ್ಯಕ್ಷ್ಯಂಬುದಿರುವ,
ಚರಾಚರ ಜೀವಿಗಳಿಗಕ್ಕೂ ಹಿತವಾದ,
ಸರ್ವವು ಸಮಸ್ತವಹ ಸತ್ವಗುಣವುಳ್ಳ,
ಆದಿ ಭೂತರವನು ಅವ್ಯಯನು ಆದ ನನ್ನ
ಸತ್ಸಂಗತಿಗಳ ಗೆಲಿಗಳು ಸಾತ್ವಿಕರು ಜಗದಾ
ದೈವ ಸ್ವಭಾವದೊಳಿ ಎನಿಸಿಯುವ ಮಹಾತ್ಮ —
ಸರ್ವರೂ ಭೂಜಿಸಲು ಪಾರ್ಥಿವರು ನನ್ನ
ಭಜಿಸುವರು ಶ್ರದ್ಧೆಯಲಿ ನಿಷ್ಠೆಯಲ್ಲಿ ನಿರುತ!
॥ ೧೩ ॥

"ತುತಿಸುವರು ಹಾಡುವರು ಬೇಡುವರು ನನ್ನ,
ನಿಶ್ಚಲತೆಯಾ ಭಕ್ತಿ ಭಾವದಲಿ ಕೇಳು;
ಹೊಂದಲೆಂದಂತು ನನ್ನನು ನಿರಂತರವು,
ಹೋಮ ನೇಮಾದಿ ಹಲ ತರ ತಪೋವ್ರತವು!
ಅಂತೆಯೆ ಉಪಾಸನೆಗಳಿಂದಲೂ ನನ್ನ
ದೃಢವಾದ ಸಂಕಲ್ಪದಿಂದೆಯು ನಿರುತ,
ಪ್ರಾರ್ಥಿಪರು ಕೀರ್ತಿಸುತ್ತ ಸಾಧನದಿಂದು"
ಎಂದೆನುತ ಶ್ರೀಕೃಷ್ಣ ಹೇಳಿದನು ಅಂದು!
॥ ೧೪ ॥

"ಅಂತಲ್ಲದೆಯೂ ಕೆಲವು ವೀರಜನ ಜಗದಿ
ಪರ ಜ್ಞಾನ ಯಜ್ಞವನು ಸದಾಚಾರದಿಂದೆ
ಸರ್ವಾಕಾರನೆ ನನ್ನ ಸದ್ವಿಚಾರದಿಂದ
ಏಕ ಆಕಾರ ಜಗದಾಕಾರದಿಂದಾ,
ಸಾಕ್ಷಾತ್ಕರಿಸುತಲಿ ಉಪಾಸನೆಯ ಬಲದಿ
ಧ್ಯಾನಿಪರು ಅಂತೆಯೆ ಆರಾಧಿಪರು ನಿಜವು,
ಇದೇ ಲೋಕದಲಿ ರಾಜಯೋಗದಾ ಗಹನ,
ಭಕ್ತ ಜನದಾನಂದದೊಳಿ ನಿತ್ಯ ಕರುಣಾ!
॥ ೧೫ ॥

"ಹೇ ಸವ್ಯಸಾಚಿ ಕೇಳು, ಆನಾರು? ಏನು?
ಆನೆ ಕ್ರತುವು ಆನೆ ಯಜ್ಞ ಆನೆ ಶ್ರಾದ್ಧ ಬಲಿಯು!
ಆನೆ ಪಿತೃಯಾಗ ಆನೆ ತ್ಯಾಗ ಔಷಧಿಯು,
ಆನೆ ಮಂತ್ರ ಆನೆ ತಂತ್ರ ಹೋಮಾಗ್ನಿ ಹವಿಸ್ಸು!
ಆನೆ ಹೋಮವು ಆನೆ ನೇಮವು ಆನೆ ಹೋಮದ್ರವ್ಯ
ಎಲೆ ಪಾರ್ಥ, ಪರಮಾರ್ಥ ಇಷ್ಟಾರ್ಥವೆಲ್ಲ;

ಆನಿಹೆನು ಅಪ್ಪುಯೊಳಿನ್ನ ರಸವು ಅಪ್ಪು ಜಲವು
ನಿರಾಕಾರನಿಹೆಯೊಳಿನ್ನ ಆಕಾರ ಹಲವು!

॥ ೧೬ ॥

"ಲೋಕಗಳಿವೆಲ್ಲಕ್ಕೆ ಆನ್ ಬೆಳಗುವೆ ಕೇಳಾ,
ಆನ್ ಮಾತೆಯೊಳು ಸೃಷ್ಟಿಕರ್ತನು ಇಹೆನಾ!
ಜೀವಿಕೋಟಿಗೆ ಕೇಳ್ ಬೆಳಗುವನು ನಾನು,
ವೇದೋಕ್ತವಹ ಪಾವನದ ವಸ್ತು ನಾನು!
ಓಂಕಾರದಾ ಪ್ರಣವ ಮಂತ್ರಗಳು ನಾನು,
ಶಬ್ದರೂಪ ವೇದಗಳ ಕರ್ತನು ಆನಿಹೆನು!
ಯಜುರ್ವೇದವು ಆದಿವರ್ಣಾವಂತನು ನಾನು,
ಅರಿಯಲ್ಕೆ ಹರಿಮಹಿಮೆಯನು ಜ್ಞಾನ ಕೇಳು!

॥ ೧೭ ॥

"ಸರ್ವಗತಿ ಸ್ಥಿತಿಗಳಿಗೆ" ನಾನೆ ಗತಿ ಸಾಕ್ಷಿ,
ಲೋಕಗಳನೆಲ್ಲವ ಆನ್ ಸಲಹುತಿಹ ಸ್ವಾಮಿ!
ನಾನೆ ನೀತಿ ಆಚಾರ ಜೀವಿಗಳಿಗೆಲ್ಲ,
ಆನ್ ಸರ್ವ ರಕ್ಷಕನು ನಾನೆಯೋ ಮಿತ್ರ;
ಸೃಷ್ಟಿಸಿ ಜಗಂಗಳನುತ್ಪತ್ತಿ ಸಮಗತತ್ತ್ವದಿಹೆನು
ಜಗದ ಉತ್ಪತ್ತಿ ಲಯಕಾರ್ಯವು ನಾನು;
ಶಾಶ್ವತವಾ ವಸ್ತುವಿಗೆ ಕಾರಣನು ನಾನೆ,
ಅವಿನಾಶಿವಹುದಿಕ್ಕಿನ ಬೀಜವದು ನಾನೆ!

॥ ೧೮ ॥

"ತೇಜೋ ಪ್ರಕಾಶವಹ ಬಿಂಬದಲಿ ನಾನು,
ಕಾಲಾವಧಿಗೆ ಬಿಸಿಲ್ಪೊಲು ಮಳೆಯನಂತು,
ಬೀಳಿಸುತಲದನಂತೆ ನಿಲ್ಲಿಸುವೆ ನಾನು
ನವನೀತದೊಳು ಮೃತ್ಯು ತನು ಅಮೃತವು ನಾನು;
ಕೇಳ್ ಹುಟ್ಟು ಸಾವುಗಳು ಲೋಕದಲಿ ಎಲ್ಲ,
ಈ ದೃಶ್ಯಾದೃಶ್ಯವಹ ವಸ್ತುಗಳು ಇಹವು
ನನ್ನಲಿಯೇ ಸರ್ವ ಕೂಡಿಹವು ನರನೆ"
ಎಂದೆನುತಲಾ ಹರಿಯು ಪೇಳಿದನು ಒಲಿದು!

॥ ೧೯ ॥

"ಋಕ್ಸಾಮವು ಯಜುರ್ವೇದಗಳನಂತು ಎಲ್ಲ
ಬಲ್ಲವರು ಪ್ರಬಲರಹ ವೈದಿಕರು ನನ್ನ
ಯಾಗ ಯಜ್ಞಾದಿಗಳನಾಚರಿಸಿ ಕೇಳ್ದೆ
ಆರಾಧಿಸಿರೆ ನನ್ನ ಶ್ರದ್ಧೆಯಲಿ ಕಡೆಗೆ,
ಸೋಮಪಾನವ ಮಾಡುತಲಿ ಮತ್ತೆ ಅವರು
ಮೋಕ್ಷಗತಿಯನು ಕೋರುವರೆಸೆ ನರನೆ ಕೇಳು!

ಪರ ಯೋಗಿಜನ ತಾವು ಅನುಭವಿಸಲಿಲ್ಲ
ನಿರಂತರದಾ ದಿವ್ಯ ಭೋಗವದು ನಿಲ್ಲ!

"೨೦"

"ನಿರಂತರ" ನಿಜ ಭೋಗವನುಭವಿಸಿ ನೋಡಿ,
ತಾವ್ ಪಡೆದ ಪುಣ್ಯಫಲದಾ ಹಲವು ಮುಗಿಯಲು
ಮಗದೊಮ್ಮೆ ಭೂತಲದಿ ಪುಟ್ಟುವರು ಅವರು
ಅನಿತನರಿತಿರುವರು ವೇದಕರ್ಮಗಳನವರು;
ನಿಜಭೋಗ ಕಾಣದೆ ನಿರತರಲಾ ಯೋಗಿಜನವು
ಹುಟ್ಟು ಸಾವುಗಳಿಂದೆಯೆ ಜೋತಾಡುತಿಹರು;
ಇದೆ ಜನನ ಜೀವನ ಮರಣದ ರಹಸ್ಯವಿಹುದೆ
ಹೇ ಪಾರ್ಥ, ಇದೆ ಆದರ್ಶವಿದು ವ್ಯಕ್ತ ಗೀತೆ!

"೨೧"

"ದಿನರಾತ್ರಿ ನನ್ನನ್ನೆ ಚಿಂತಿಸುತ ಇರುವ,
ಬೇರಾವುದನು ಮನದಿ ಯೋಚಿಸದೆ ಇರುವ,
ನನ್ನನೆ ನಿರಂತರವು ಪೂಜಿಸುತಲಿರುವ
ಬಾಂಧವ್ಯವೆನ್ನಲ್ಲಿ ಕಟ್ಟಲು ಆಶಿಸುವ—
ಆರಿಹರೊ ಆ ಯೋಗಿ ತ್ಯಾಗಿಗಳನೆಲ್ಲಾ
ಅವರ ನಿಜ ದುಃಖಗಳನೆಲ್ಲ ಆನ್ ಕೇಳಾ,
ಆ ನನ್ನ ಭಕ್ತವರರಾ ಕ್ಷೇಮದ ಭಾರ
ಎಲ್ಲವನು ಆನ್ ಹೊರುತಲಿಹೆನೊ ಕೇಳ್ ಪಾರ್ಥ!

"೨೨"

"ಶಾಂತಿಯುತ ಕೇಳ್ ವಿವಿಧ ದೇವತೆಗಳನ್ನು
ಭಕ್ತಿಯಿಂದ ಶ್ರದ್ಧೆಯಿಂದ ಪೂಜಿಸುವ ಜನವು
ಅಂತರ್ಯದಲಿ ನನ್ನನ್ನೇ ಅವರು ನಿತ್ಯ
ಪೂಜಿಸುತಲಿಹರು ಕೇಳ್ ಆದಿವ್ಯ ಸತ್ಯ
ಅನಿತಾದೊಡೆಯು ಕೇಳ್ ಇಷ್ಟಗಳ ಮನದಿ
ಹಲತರದಲಾರಾಧನೆಯ ಮಾಡಿ ಅದು
ಎನಗಾಗಿಹ ಪೂಜೆಯದು ವಿಧಿಯುಕ್ತವಲ್ಲ,
ಶ್ರದ್ಧೆಯಿಂದಲಿ ಶುದ್ಧವಾಗಿರದು ಕೇಳಾ!

"೨೩"

"ಹಲತರದ ಯಜ್ಞಗಳು ಯಾಗಗಳು ಎನಗೆ
ಆರಾಧನಾ ದೈವವಿದು ನಾನೆ ನಿಜವು
ಯಜ್ಞಗಳ ನಿತ್ಯಫಲವನೀಯುವವ ನಾನು
ಭಕ್ತರನು ರಕ್ಷಿಸುವ ಪೋಷಿಸುವ ನಾನು;
ಗೂಢವಿದನರಿಯದಿಹ ಜನಗಳವು ನೋಡಿ
ಸತ್ವಗುಣಾವನು ಬಿಟ್ಟು ತಪ್ಪುತಿರಲಂತೆ

ಈಡಾಗುವರೊ ಅಂತು ಹಿತನ ಜನ್ಮಕೆಂದು,
ಶ್ರಮವು ತಪ್ಪಲದು ಅಕ್ರಮದ ಜನನ ಫಲವು!

॥ ೨೪ ॥

"ದೇವತೆಗಳನ್ನು ಆರಾಧಿಸುತ ನೋಡೈ
ಸೇರುವರು ದೇವತೆಗಳ ಲೋಕವನ್ನೆ;
ಪಿತೃಗಳನಾರಾಧಿಸುತ ಅಂತು ಕಡೆಗೆ
ಸೇರುವರು ಕುಲದೈವತಾ ಪಿತೃಗಳನೆ,
ಯಕ್ಷ ರಾಕ್ಷಸ ಭೂತ ಪ್ರೇತಾದಿಗಳನು
ಪೂಜಿಸುವರಕೊ ಸೇರುವರು ಅವರನಂತು,
ಹಿಂತವನೆ, ನನ್ನನ್ನು ಪೂಜಿಸುವರಾರ—
ಸೇರುವರೊ ನನ್ನನ್ನೆ ಅದೆ ಮೋಕ್ಷದ್ವಾರ!

॥ ೨೫ ॥

"ಆರೆನಗೆ ಒಂದೆಸಳು ಹೂವನ್ನು ಮುದದೆ
ಕೊನರೆಲೆಯ ಕುಡಿಯನ್ನು ಭಕ್ತಿಯಿಂ ನನಗೆ,
ಅಲ್ಲದೊಡೆ ಮಿಡಿ ಹಣ್ಣು ಕಾಯಿಯನು ಒಲಿದೆ
ಒಂದಿನಿತು ತಿಳಿನೀರ ತೀರ್ಥವನು ಕೊನೆಗೆ
ಈಯುತಿರುವವನಾರು ಆ ಶುದ್ಧಾತ್ಮನಿಹನೆ
ಆದರದಿ ಅರ್ಪಿಸಿರೆ ನಲವಿಂದ ನನಗೆ,
ಸ್ವೀಕರಿಸುವೆನು ಭುಜಿಸುವೆನೊ ಮುದದೆ ಅದನು,
ಕೇಳ್ ಪ್ರೀತಿ ಭಕ್ತಿಗದಿಯಾದುದೇನಿಹುದು?

॥ ೨೬ ॥

"ಹೇ ಕುಂತೀಪುತ್ರ, ನೀನ್ ಎಸಗುತಿಹುದೆಲ್ಲ,
ಗೈಯ್ಯುತಿಹ ಕಾರ್ಯವದು ಭುಜಿಸುತಿಹ ಭೋಜ್ಯ
ಮಾಡುತಿಹ ಹೋಮವದು ಕೊಡುತಲಿಹ ದಾನ,
ಆಚರಿಸುವಾ ತಪವು ಅರ್ಪಿಸುವ ಬಲವ—
ಎಲ್ಲವನು ನನಗೆಯೇ ಎಂದೆನುತ ನಿತ್ಯ
ಸಲ್ಲಿಸೈ ಹೇ ಪಾರ್ಥ ಅದುವೆ ಕೇಳ್ ಸತ್ಯ,"
ಎಂದೆನುತ ಹರಿಭಕ್ತಿಯಾ ಮಹಿಮೆಯನ್ನು
ಶ್ರೀಕೃಷ್ಣನೊಲವಾಂತು ಹೇಳಿದನೊ ಅಂದು.

॥ ೨೭ ॥

"ಇದುವೆ ಸರಿ ಶಿಷ್ಯ ಸನ್ಯಾಸ ವರಯೋಗ,
ಮನೋನಿಶ್ಚಯದ ತಳೆದು ಎಸಗೆಲೆ ಕಾರ್ಯ;
ಶುಭಾಶುಭಗಳಿಗಂತು ಹೇತುವೆಂದೆನಿತ
ಕರ್ಮಬಂಧನದಿಂದ ತಪ್ಪುವೆಯೊ ಆಗ;
ಅನಿತಾದೊಡೆಯು ಕರ್ಮ ಮುಕ್ತನೆಂದೆನಿಸ
ಸೇರುವೆಯೊ ನನ್ನನ್ನೆ ಪರಲೋಕವಲ್ಲಿ!

ಸಮರ್ಥ ಸನ್ಯಾಸ ಯೋಗದ ಗಹನವಿದಿತವೊ,
ಎಲೆ ನರನೆ, ಇದನರಿತವನೆ ಧನ್ಯ ನಿಜವೊ!

॥ ೧೮ ॥

"ಕೇಳಿಲ್ಲಿ ಭೂತರಾಶಿಗಳಲ್ಲಿ ನಾನು
ಸರ್ವ ಚರಾಚರ ಜೀವಿಗಳಲ್ಲಿಯೂ ನಾನು,
ಸಮದೃಷ್ಟಿಯಿಂದಿಹೆನು ಭೇದವನಿತಿಲ್ಲ,
ದ್ವೇಷಿ ಬೇರಿಲ್ಲ ಪ್ರಿಯ ಸೋದರರು ಇಲ್ಲ;
ಸಮದರ್ಶಿ ಆನಿರಲು ನಿಮ ಭಕ್ತಿಯಿಂದೆ
ಆರೆನ್ನ ಭಜಿಸುವರೊ ಅವರೆಯೆ ನಿಜದಿ
ಸೇರುವರು ನನ್ನನ್ನು ನಿಜವಿದ್ಯೆ ಮಾರ್ಗ,
ಆನಿರುವೆನವರಲ್ಲಿ ಅವರೊಡೆಯೆ ನಿರುತಾ!

॥ ೧೯ ॥

"ದುರಾಚಾರಿಯು ದುರಾಡಂಬರನು ಜಗದಿ
ಬೇರಾವ ದೈವವನು ಭಜಿಸದೆಯೆ ಇಹದಿ,
ಬೇರಾವ ಬಗೆಯ ಲಾಭವನಿಚ್ಛಿಸದೆಯೆ,
ನನ್ನನೆ ನಿರಂತರವು ಭಜಿಸುತಲಿ ಇರುವ
ಭಕ್ತ ಜನರವರೆಯೆ ಶ್ರೇಷ್ಠರವರೆನ್ನಗ,
ಅವರೆಯೆ ಸಾಧುಗಳು ಯೋಗಿ ಜನ ನಿತ್ಯ,
ಮನೋವಿರಕ್ತಿಗಾದರ್ಶವದೆ ನೋಡೆ,"
ಎಂದೆನುತಲೆಂದನಾ ಗೋವಿಂದನೊಲವೆ,

॥ ೨೦ ॥

"ಎಲೆ ಸವ್ಯಸಾಚಿ ಕೇಳೌ, ಅಂತಿಹರು ಜಗದಿ
ಶೀಘ್ರ ವರ್ತನನೆ ಸದಾಚಾರಿಗಳು ಎಂದೇ
ನೆಲೆಗೊಂಡು ಮನಶ್ಶಾಂತಿಯನು ಪೊಂದುತಿಹರೊ
ನನ್ನಲಿಯೆ ಭಕ್ತಿಯನು ಇಡುವರವರಂತೊ;
ಕೆಡಲಾರರೆಂದು ಪೊಡವಿಯಲಿ ಅವರು ಸಖನೆ,
ಅನುಸರಿಸಲೈ ಅವರ ಮಾರ್ಗವನು ಒಲವೆ,
ಅಂತೆ ದೃಢಸಂಕಲ್ಪವನು ತಾಳು ಮಿಳು,
ಸಮರಾಭಿಮುಖನಾಗಿ ಎದ್ದೇಳು ನಿಲ್ಲು!

॥ ೨೧ ॥

"ನನ್ನನ್ನೆ ನಂಬಿಹರು ಆರ್ ಇರಲು ಕೇಳು,
ಸ್ತ್ರೀ ವೈಶ್ಯ ಶೂದ್ರರೆಂಬೀ ಭೇದವಿಲ್ಲ,
ಪಾಪಿಗಳು ಕುಲಹೀನರೆಂದೆಂತು ಇಲ್ಲ
ಕೇಳೆನ್ನ ಭಕ್ತಜನಗಳು ನನಗೆ ಸಮವಾ!
ಪಡೆಯುವರು ಪರಮಗತಿಯನು ಅವರು ನಿಜದಿ,
ನಿಶ್ಚಲತೆಯಾ ಭಕ್ತಿ ಅದೆ ಶಕ್ತಿ ಜಗದಿ!"

ಎಂದೆನುತ ಪರಮೋನ್ನತಾ ಭಕ್ತಿಮಾರ್ಗ–
ಅದನೆ ಬಿಡಿಸುತಿಗಳಲಿ ಬಣ್ಣಿಸಿದ ಕೃಷ್ಣ!
॥ ೨೧ ॥

"ಶೀಲಬಲರು ಎಂದೆನುತ ಬ್ರಹ್ಮಜ್ಞರು ಜಗದಿ
ಅಂತೆಯೇ ಶುಭ ಪುಣ್ಯಶಾಲಿಗಳು ಎಲ್ಲ
ರಾಜರ್ಷಿಗಳು ಭಕ್ತಿಯಲಿ ಇರ್ದೊಡೆಯು
ಹೇಳಲೇನಿಹುದೊ ಪಡೆವರು ಮೋಕ್ಷವಂತು!
ಅಂತೆಯೇ ಅರ್ಜುನ, ಅನಿತ್ಯವೆಂದೆನುತ
ಸುಖಹೀನವೆಂದೆನಿತ ಧರಣಿಯಲಿ ಕೇಳು,
ಅವರಂತೆಯೇ ನೀನು ನನ್ನನ್ನೆ ಭಜಿಸಿ
ಸುಖಿಯಾಗಿಲ್ವೆ ಮಿತ್ರ ಹೇಳುವೆನು ನಿಜದಿ!
॥ ೨೨ ॥

"ನೆಲೆಗೊಳಿಸಲ್ವೆ ಮನವ ನನ್ನಲ್ಲಿ ನೀನು,
ಭಕ್ತನೆಂದೆನಿಸೆಯೊ ನೀನ್ ಭುವಿಯಲಿ ನೀನು,
ಪೂಜಿಸಿಲ್ವೆ ಹರಿ ನನ್ನನೇ ನಿತ್ಯ ಪಾರ್ಥ
ವಂದಿಸುತಲಾದರಿಸು ನನ್ನನ್ನೆ ನಿರುತ!
ಆನ್ ಪರಮಗತಿಯೆಂದು ಭಾವಿಸ್ವೆ ಮನದಿ
ನೆನೆಯೊ ನಿರಂತರವೆನ್ನ ಅದೆ ಶಾಂತಿ ಮನಕ್ಕೆ,
ಅಂತಾದೊಡೆಯೆ ಸೇರುವೆಯೊ ಎನ್ನ ಪಾರ್ಥ,
ಎಂದೆನುತ ಹರಿ ಹೇಳಿದನೊ ನಿಶ್ಚಯಾರ್ಥ!
॥ ೨೩ ॥

(ಒಂಭತ್ತನೇ ಅಧ್ಯಾಯ ಸಂಪೂರ್ಣವು.)

ಅಧ್ಯಾಯ ೧೦ — ವಿಭೂತಿ ಯೋಗ!

"ನಲ್ಮೆಯಿಯ ನೊಲವಿಂದ ಆಲಿಸುತಿಹ ನರನೆ,
ಕೇಳ್ ನಿನ್ನ ಹಿತವನ್ನೆ ಬಯಸುತ್ತಲಿ ಮುದದೆ
ಹೇಳುವೆನೊ ಮತ್ತೊಂದು ವಿಷಯವನು ಇಂದು,
ಪರಮೋತ್ತಮಾ ಸೂಕ್ತಿ ಅದ ಹೇಳ್ವೆ ನಾನು!
ಕುಂತಿ ಸುತ ತುಂಬಿರಿಸಿ ಗಾಂಡೀವಿ ಕೇಳ್
ನಿಸ್ಸಿದ್ಯೋಯುದತವೆ ಸದ್ವರ್ತನದೊ ಮೂಲ,"
ಎಂದೆನುತ ಮುಂದುವರೆಯುತ್ತಲಂದ ಕೃಷ್ಣ,
ತಾನಾರು ತಾನೇನು ಎಂಬುದನು ಎಲ್ಲ!

॥ ೧ ॥

"ಆಲಿಸೈ ಅರ್ಜುನನೆ, ತಿಳಿಯರಾರೊ ನನ್ನ
ಮಹಿಮೆಯನು ದೇವಜರು ಋಷ್ಯಜರು ಇನ್ನು!
ಸುರಲೋಕ ತಪೋಲೋಕದಾ ವೀರಗಣ್ಣರೆ
ಸುರರ್ವಲರೆ ಮುನಿಜನರೆ ಆನ್ ಮೂಲ ಇಹೆನೈ
ಆನ್ ಹುಟ್ಟುಯಿಲ್ಲದಿಹೆನಿದೊ ಹುಟ್ಟಿಸಿಹೆನೈ
ಸೃಷ್ಟಿಯಿದು ತುಷ್ಟಿಯದು ಎಲ್ಲದಕು ನಾನೆ
ಕಾರಣನು ಪೂರಕನು ಆನಿಹೆನು ನೆಲನೆ"
ಎಂದೆನುತ ಪೇಳ್ದನಾ ಗೋವಿಂದನೊಲವೆ!

॥ ೨ ॥

"ಹೇ ಧನಂಜಯ ಕೇಳು, ಇಹದಲಿ ಅಪಾರ
ಆನ್ ಜನ್ಮರಹಿತನು ಅನಾದಿಯುಹೆನೆಂದು
ಸರ್ವ ಲೋಕೇಶ್ವರನು ಆನ್ ಎಂದು ಎನುತ
ಅರಿತವನೆ ಸುಜ್ಞಾನಿ ವಿರಯೋಗಿ ಜಗದೆ!
ಇಹದಲಿಹ ಪಾಪದಿಂದವನು ನಿಜಕು
ಮುಕ್ತನಾಗುವನೆಲೈ ಅರ್ಜುನನೆ ಕೇಳು,"
ಎಂದೆನುತಲಾ ಹರಿಯು ಪೇಳಿದನು ತಾನು
ಮಾಯಾ ವಿಲಾಸಿಪನು ಶಾಂತವಗೆ ಅಂದು.

॥ ೩ ॥

"ಲೋಕದಲಿ ಮಾನವಗೆ ಜೀವಿಗಳಿಗೆಲ್ಲ
ಬುದ್ಧಿಯು ವಿಚಾರ ಜ್ಞಾನವು ಸಹನೆ ಸತ್ಯ
ದೃಢಚಿತ್ತ ಸ್ಥೈರ್ಯ ಸುಖದುಃಖಗಳು ಶಮವು
ಬಹಿರಿಂದ್ರಿಯಾಂತರಿಂದ್ರಿಯಗಳಾ ತಡೆಯು
ಏಳುಗಳು ಬೀಳುಗಳು ಭಯಾಭಯಗಳುವು
ಬಾಳ್ ಬದುಕುಗಳೆಂತೆಲ್ಲ ನನ್ನಿಂದಯೆಂದು

ತಿಳಿಯಲಿಲ್ಲ ಕಾಲಜ್ಞಾನಿ ಅದಿ ನಿಶ್ಚಯವಾದ್ದಾ
ತೋರುಗಳ ನಡೆಸುತ್ತಿರುವುದರದೆ ಕಾರಣವಾದ್ದು!

॥ ೪ ॥

"ಜೀವನದಿ ಇಹ ಅಹಂಕಾರ ನೀತಿ ಪ್ರೀತಿ
ಅಂತೆಯೇ ಸಮಬುದ್ಧಿ ಸಮತತ್ತ್ವ ವೃತ್ತಿ;
ತತ್ವಾನ್ವಿತವು ಯುಕ್ತಿಗ ಅವಿಯುಕ್ತ ನಿಗಳವು
ವಿವಿಧ ಸ್ಥಿತಿ ವಿವಿಧ ಗತಿ ಮತಿಗಳವು ಅಂತೆ,
ನನ್ನಿಂದಲೇ ಇರುವುದು ಜೀವಿಗಳಿಗೆಂದು
ತಿಳಿಯಲಿಲ್ಲ ಕಾಲಜ್ಞಾನಿ, ಆನ್ ತೋರಬಂದುದು!"
ಎಂದು ಮಹಿರಕ್ಷರಿಯು ಮಹುದದಿಂದ ತಾನ್ ಅಂದು
ಹೇಳಿದನು ತನ್ನ ನೀತಿ ಬೀತಿ ಆದೇನಿಂದು!

॥ ೫ ॥

"ಮನ್ ಸಪ್ತರ್ಷಿಗಳು ಜೀವಿಗಳ ಹುಟ್ಟು ಜಗದಿ,
ಪೂರ್ವದಲಿ ಹಿರಿಯರು ಆದಿ ಮನಸ್ಸಿನಿಂದಿ,
ಪುತ್ರರಿದರು ಸಪ್ತರ್ಷಿಯಲ್ಲಿಗೆ ಮಾಯಲಿ,
ಅದರೊಡನೆಯೆ ನಾಲ್ವರಾ ಮನುಗಳಿವು ಜನಿಸಿ,
ಸೃಷ್ಟಿಸಿದರವರು ನನ್ನಾದೇಶದಂತೆ
ತೋರುವುದು ಜನಗಳನು ಜೀವಿಗಳನೊಲವಿ;
ಮಹರ್ಷಿ ಮುನಿ ನಾಲ್ವರು ಮನುಗಳ ಮಂತ್ರ ಮೃತ್ಯು
ಬೆಳೆಸಿಹೆನು ಆನ್ ಇದನು ಇದೆ ವಿಶ್ವ ಮಂತ್ರ!

॥ ೬ ॥

"ಎಲೆ ಪಾರ್ಥ, ನನ್ನ ಸಿರಿ ವೈಭವವನಿಲ್ಲಿ
ಜಗದಖಿಲ ಕಲ್ಯಾಣ ಸತ್ಕಾರ್ಯವನ್ನು,
ಆರ್ ಆತ್ಮಜ್ಞಾನದಿಂದರಿಯುವನೋ ಅವನು
ನಿಶ್ಚಯದಿ ದೃಢಚಿತ್ತ ಮನಬುದ್ಧನಹನು;
ಸೇರುವನು ಮಹಾಜ್ಞಾನಯೋಗ ತಾನಿನ್ನು
ನಿಸ್ಸಂಶಯದಿ ಪಡೆಯುವನೋ ದೇವಯೋಗ"
ಎಂದು ದೇವಕೀಸುತನು ಹೇಳಿದನೋ ನರಗೆ
ದೇವ-ಮಾನವನಿಗಿಹ ಬಾಂಧವ್ಯವದನೇ!

॥ ೭ ॥

"ವಿಶ್ವವಿದರುತ್ಪತ್ತಿ ಮೂಲವದು ನಿಜವು
ನನ್ನಿಂದಲೇ ಎಂದು ಜ್ಞಾನಿಗಳು ನಿತ್ಯ,
ಜಗವಿದರ ಸ್ಥಿತಿಗತಿಗಳೆಲ್ಲಕ್ಕೆ ನಾನೆ,
ಕಾರಣನು ಎಂದೆನುತ ಯೋಗಿಗಳು ನಿಜದಿ
ತಿಳಿಯುವರು ಭಜಿಸುವರು ಹೇಳುವರೋ ಎಲ್ಲಾ
ತೋರುವನೆ ನಡೆಸುತಿಹ ಕಾರಣಿಯು ಎನುತ"

 1339

ಎಂದು ರಣರಂಗದಲಿ ಹೇಳಿದನು ನರಗೆ
ಕಲಿ ಪಾರ್ಥನ ಸಾರಥಿ ರಹಸ್ಯವನು ತಾನೆ!

"೮"

"ಯೋಗಿಜನ ಭಕ್ತಜನರಾರಿಹರೋ ಅವರು
ನನ್ನನೆ ನಿರಂತರವು ಧ್ಯಾನಿಸುತಲಿಹರು,
ದೃಢಚಿತ್ತದಲಿ ತಮ್ಮ ಹೃದಯವನೆ ಬಿಡದೆ
ನನ್ನಲಿಯೆ ನಿಲಿಸಿಕೊಳ್ಳುತ ಹಾಡುವರು ಮುದದಿ;
ಅನನ್ಯದಲಿಯೆನ್ನ ಮಹಿಮೆಯನು ಬಗೆದೆ
ಬೋಧಿಸುತ ವಾಚಿಸುತ ಸಂತೃಪ್ತರಾಗೆ—
ಅದೆ ಭಕ್ತಜನ ಗೀತೆ ಅದೆ ಪ್ರೇಮಗಾನ—"
ಎಂದೆನುತ ಅರ್ಜುನಗೆ ಹೇಳಿದನು ಕೃಷ್ಣ!

"೯"

"ಇನಿತು ಈ ಜಗದಲ್ಲಿ ಭಕ್ತಿಯಲಿ ನಿತ್ಯ
ಭಕ್ತಿಯೋಗದ ಶ್ರೇಷ್ಠತೆಯನು ಪಡೆದು ನನ್ನ
ಭಜಿಸುತಿಹ ಭಕ್ತಜನಗಳಿಗಂತು ಮೋಕ್ಷ
ಪಡೆಯಲು ಸದಾ ಪ್ರಿಯದಿದೆಯೋ ಹೇಳುವೆನು,
ಪರಜ್ಞಾನ ಯೋಗವನು ಬುದ್ಧಿಯನು ನಾನೆ
ಬೋಧಿಸುತಲಿಹೆನು ಪ್ರಜ್ಞಾ ತೋರಿಸುತಲಿರುವೆ,"
ಎಂದೆನುತ ಅನುರಾಗ ಪ್ರೇಮದಲಿ ಮತ್ತೂ
ಹೇಳಿದನು ಶ್ರೀದೇವ ಮಾಯೆಯದುನಂದ!

"೧೦"

"ಮೆಚ್ಚಿಹೆನು ಭಕ್ತಜನ ವೃಂದವನು ನಾನು,
ನೆಲೆನಿಂತೆನು ಅವರ ಹೃದಯದಲ್ಲಿ ನಾನು;
ಹೊತ್ತಿಸುವೆ ಪರಜ್ಞಾನ ಜ್ಯೋತಿಯವರಲ್ಲಿ,
ತೊಲಗಿಸುವೆನಜ್ಞಾನದಾ ತಮವನಲ್ಲಿ;
ಕುನೀತಿ ಕುಬುದ್ಧಿಗಳು ಗಾಢವಾಗುವಂತೆ,
ಅದ ಹೋಗಲಾಡಿಪ್ಪುದು ನಿಜಜ್ಞಾನವದುವೆ,"
ಎಂದೆನುತ ಹೇಳುತಿರೆ ಗೋಪಾಲನಂತಾ
ಅರ್ಜುನನು ಎದೆಹಾದು ಇಂತೆಂದನಾಗ!

"೧೧"

"ಎಲೆ ಹರಿಯೆ, ಕೇಳ್ ನಿನ್ನನಾ ಋಷಿಗಳೆಲ್ಲ
ನೀನೆಯೇ ಪರಬ್ರಹ್ಮ ಪರಂಜ್ಯೋತಿ ಯೆನುತ,
ಪಾವನನು ಹರಿನಾಥನು ಶಾಶ್ವತನು ಎಂದು
ಆನಂದ ರೂಪನು ಅಪ್ರಾಕೃತನು ನೀನು
ಕೇಳ್ ಆದಿಕಾರಣನು ಭೂವ್ಯಾಪಕನು ಎಲಾ
ವ್ಯಾಪ್ತನು ಪುರುಷೋತ್ತಮಾ ಪುರಾತನನು

ಹೇಳುತ ಬರುತ ಹಾಡುತ ಬರುತ ಪ್ರೇಮದಿಂ ನಿನ್ನ,"
ಎಂದೆನುತ ಹೇಳಿದನು ಪ್ರಸನ್ನದಲಿ ಪಾರ್ಥ!

" ೧೩ "

"ಎಲೆ ಹರಿಯೆ, ಮಹಿಮೆಯನು ಲೀಲೆಯನು ನಿನ್ನ,
ಋಷಿವರ್ಯರು ದೇವಋಷಿ ನಾರದನು ಎಲ್ಲ
ಮತ್ತೆ ಅಸಿತ ದೇವಲನು ವ್ಯಾಸ ಮಹಾಮುನಿವರ್ಯರ್
ದೇವಾದಿಗಳು ಹೊಗಳುತಿಹರಲ್ಲ ಅಂದಿಹರು ನಿನ್ನ
ಹಾಡಿಹರು ಪೂಜಿಸಿಹರು ದೇವನೆಂದು ನೀನು
ಇಂದೆನಗೆ ಹೇಳುತಿಹೆ ನನಗದನೆ ನೀನು,"
ಎಂದೆನುತಲಾ ಸವ್ಯಸಾಚಿ ತಾನು ಹೇಳಿ
ಮುಂದುವರಿದಿಂತೆಂದನಂತು ಕೇಳು ಅಲ್ಲಿ! —

" ೧೪ "

"ಕೇಶವನೆ, ನೀನು ಹೇಳಿರುವುದು ಎಲ್ಲ ಸತ್ಯ,
ಎಂಬುದನು ನಿಶ್ಚಯಂ ಒಪ್ಪುತಿಹೆ ನಾನೀಗ,
ಅಂತಾದೊಡೆಯು ಕೇಳು ರೂಪವದು ನಿನ್ನ
ನೀನ್ ಎಂತು ಎಂಬುದನು ಕಂಡರಿಯರು ನಿನ್ನ!
ಸುರಾಸುರರರಿಯರಾ ಲೀಲೆಯನು,
ಸುರಲೋಕದಲ್ಲಿಹರು ಅರಿಯರಂತು!
ನೀನ್ ವಿಶ್ವರೂಪವನು ಹೊತ್ತಿಹೆಯೊ ದೇವಾ,
ಅದನರಿಯುವುದೆ ಜಗದ ಲೀಲೆಯೆಂಬಂತಾ—!

" ೧೫ "

"ಪುರುಷೋತ್ತಮನೆ ಸೃಷ್ಟಿಕಾರಣನು ನೀನೆ
ಸರ್ವ ಭೂತೇಶ್ವರನೆ — ಇದೆ ನೀನು ನಿಜವು!
ದೇವಾದಿ ದೇವ ಜಗದೀಶ್ವರನೆ ನಿನ್ನ
ರೂಪಗಳ ನಿಲುವನು ನೀನೆಯೇ ನಿನ್ನ
ಜ್ಞಾನ ಬಲ ಶಕ್ತಿಯಿಂದರಿಯುವಿಯೊ ನೀನು,
ಲೋಕಗಳ ಕಂಡರಿಯುವ ರೂಪವದನು,"
ಎಂದೆನುತಲಾ ಪಾಂಡವನು ಬಾಗುತಗೊಂಡು
ಮತ್ತೆ ಬಾಗಿ ಹೇಳಿದನು ಶ್ರೀಹರಿಗೆ ಇಂತು —.

" ೧೬ "

"ಕೇಳಲಿಚ್ಛೆ ಕಾಳಿಯಮರ್ದನನೆ ನೀನು
ಹೇಳಿದೆಯೊ ಹರಿಮಾಯೆ ಮಹಿಮೆಯನು ಇಂದು,
ವ್ಯಾಪಿಸಿಹೆ ಲೋಕಗಳನೆಲ್ಲವನು ನೀನು
ಕೇಳು ದಿವ್ಯಶಕ್ತಿವಿಭವ ಮಹಿಮೆಯದನಂತು
ವಿವರಿಸಲು ನೀನಲ್ಲದೆ ಮತ್ತಾರೊ ಕೃಷ್ಣಾ
ಸಮರ್ಥರಿಹರಾರಿಲ್ಲಿ ಹೇಳಲಿವೊ ಎಲ್ಲಾ,"

ಎಂದು ಧನಂಜಯನು ಧನುವನು ಕೆಳಗೆ ಇಟ್ಟು
ಪ್ರಾರ್ಥಿಸಿದನಾ ಹರಿಯನು ನಲವಾಂತು ಅಂದು!

" ೧೬ "

"ಭಗವಂತ ಜೀವಿತಂತ ಶ್ರೀಕಾಂತ ನೀನು,
ಯೋಗಿನನಗೆ ಪರಬ್ರಹ್ಮಯೋಗವೆಂತೆಂದು;
ನಿನ್ನನೆ ನಿರಂತರವು ನೆನೆಯುವುದು ಹೇಗೆ?
ದೈವಬಲ ಮಾರ್ಗವಿದನೆನಗರುಹುವುದೆಂತೆ?
ಧ್ಯಾನಿಸಲಿ ಆನಾವ ದೈವಗತ್ಯಾವನ್ನು?
ಯಾವುದಕೆ ಇಚ್ಛಿಸಲಿ ಪ್ರಾರ್ಥಿಸಲಿ ಹೇಳು?
ತಿಳಿಯಲಿದನಾತುರದಿ ಹೇ ಹರಿಯೆ ನಾನು,"
ಎಂದೆನುತ ಅರ್ಜುನನು ಬೇಡಿದನು ನಿಂದು!

" ೧೭ "

"ಎಲೆ ಜನಾರ್ದನ ಹೇಳು, ಕೇಳುತಿಹೆನಿನ್ನು,
ಸೃಷ್ಟಿಯನು ಸೃಷ್ಟಿಸಲು ಕಾರಣನು ನೀನು.
ತಿಳಿಸಿಲ್ಲಿ ಜಗದಾದಿ ಮೂಲವನು ನನಗೆ
ವಿವರದಲಿ ಹೇಳೆ ನಿನ್ನ ಮಾಯೆಯನು ಇಂದೆ,
ಅದೆ ಸವಿದಾಮೃತವು ಸವಿದ ಪಾತ್ರೆಯದು ನನಗೆ,
ತಿಳಿದುದನೆ ತಿಳಿಯಲೆಂದೆಳಸುತಿಹೆ ಹೇಳೆ!
ಮತ್ತೆನೋ ಸಂತೃಪ್ತಿಯನು ತಾಳಲೆಂದೆಂತು
ಕೋರುತಿಹೆನೋ ಕೃಷ್ಣಾ ಹೇಳೆಲೆ ಇನ್ನು!!!

" ೧೮ "

ಆ ಅರ್ಜುನನ ಕೋರಿಕೆಯನಾಲವಾಂತು ಅರಿತು
ಮುಗುಳ್ನಗುತಲಾ ಹರಿಯು ಇಂತೆಂದನಂತು —
"ಎಲೆ ಪಾರ್ಥ ಸಮರ್ಥನಾ ಮಾಯೆ ನನ್ನ
ಹೇಳಲಸದಳವಾದ ಮೂಲವದನೆಲ್ಲ!
ಅನಿತಾದೊಡೆಯು ಕೇಳು ಮುಖ್ಯಾಂಶವನ್ನು
ಸಾರಾಂಶಕನುವಾಗಿ ಹೇಳುವೆನು ಕೇಳು,"
ಎಂದನು ಮಧುಸೂದನನು ಸುಮಧುರತೆಯಿಂದ
ಹೇಳಲನುವಾದನು ವಿಭೂತಿ ವರಯೋಗ!

" ೧೯ "

"ಹೇ ಮಿತ್ರ, ನೀನ್ ಗುಡಾಕೇಶ ಕೇಳು ಎನ್ನ,
ಚರಾಚರ ಜೀವಿಗಳ ಹೃದಯಗಳಲಿರುವ,
ಜೀವಾತ್ಮ ಆನಾಗಿಹೆನು ತಿಳಿಯೆಲೆ ಪಾರ್ಥ
ಪರಮಾತ್ಮನಾ ಅಂಶವದೆಯೆಂದು ಎನುತ,
ಲೋಕದ ಸಮಸ್ತಮಾ ಭೂತಾದಿಗಳಿಗೆ
ಆದಿ ಮಧ್ಯಾಂತ್ಯವೂ ಆನ್ ಎಂದು ತಿಳಿಯೆ,"

ಎಂದಿತು ಹರಿ ಅವತಾರ ಅಸುರಾರಿ ಕಂಡಿತು
ಕೇಳುತಿರೆ ತೋರಿಸಿದನು ಹರಿಮಾಯೆಯನ್ನು—

"೨೦"

"ದ್ವಾದಶಾದಿತ್ಯರಲಿ ಬೆಳಗುತಿಹ ಜ್ಯೋತಿ,
ಹನ್ನೆರಡನೆಯವನು ಆನ್ ಅದಿತಿಯ ಕಾಂತಿ!
ದ್ವಾದಶ ಸೂರ್ಯರಲಿ ನಾನೆ ಹರಿವಿಷ್ಣು,
ವ್ಯೋಮಾಂಗಣದಿ ಬೆಳಗುವ ರವಿಯು ನಾನು;
ನಲ್ವತ್ತೊಂಬತ್ತು ವಾಯು ದೇವತೆಗಳಲ್ಲಿ
ಅತಿವೇಗದಾ ಮರೀಚಿಯೆ ನಾನು ಇರುವೆ;
ನಭೋಮಂಡಲದಲ್ಲಿ ಮಿನುಗುತಿಹ ತಾರಾ
ಗಣದಲ್ಲಿ ಚಂದ್ರಮನು ನಾನಿರ್ಪೆ ಪಾರ್ಥ!

"೨೧"

"ಆ ಜನಾರ್ದನನ ಕೇಳಿನ್ನು ಯೋಗವಿದನಿತ್ತು—
ಚತುರ್ವೇದದಲಿ ಸಾಮವೇದ ಆನ್ ಇಹೆನು;
ಸುರಲೋಕದಿಹ ದೇವತೆಗಳಲಿ ಕೇಳಾ
ದೇವೇಂದ್ರ ಆನ್ ಇಹೆನು ನಿಜವಿದ್ಯ ಮಿತ್ರ;
ಜೀವಿಗಳ ದೇಹೇಂದ್ರಿಯಗಳಲಿ ನಾನು
ಪ್ರಮುಖ್ಯವಹ ಮನಸ್ ಆನಿಹೆನು ಕೇಳು;
ಎಲೆ ಧನಂಜಯ, ಲೋಕಗಳಲಂತು ಇರುವ
ಭೂತಾದಿಗಳಿಗಿರ್ಪುದಾ ಬುದ್ಧಿ ನಾನೈ!

"೨೨"

"ಹನ್ನೊಂದು ರುದ್ರರಲಿ ರುದ್ರಾಕ್ಷಿಯಂತೆ
ಇಹ ಶಂಕರನೆ ನಾನು ಕೇಳಿತ್ತ ಸಖನೆ!
ನಭೋಲೋಕದಾ ಯಕ್ಷ ರಾಕ್ಷಸರ ಮಧ್ಯೆ
ವೈಭವದ ಸಿರಿಪತಿ ಕುಬೇರ ಆನ್ ತಿಳಿಯೆನ್ನು!
ಅಷ್ಟವಸುಗಳಲಂತು ಪೊತ್ತುತಿಹ ನಿತ್ಯ
ಬೆಳಗುತಿಹ ಪಾವಕನು ಆನಿಲ್ಲಿ ಪಾರ್ಥ,
ಜಗದಲತ್ಯುನ್ನತವಾ ಪರ್ವತಗಳಲ್ಲಿ
ಮಹಾಮೇರುವು ನಾನು ಎಂದೆನುವೆನಿಲ್ಲಿ!

"೨೩"

"ಪುರೋಹಿತ ಪರಿವಾರದಲಿ ಕಂಡು ಇರುವ
ಪ್ರಧಾನನಹನಾ ಬೃಹಸ್ಪತಿ ನಾನೆ ಕೇಳಾ,
ರಣವೀರ ಸೇನಾಧಿಪತಿಗಳಲಿ ನೋಡೆನ್ನು,
ಸತಿಗೌರಿ ಸುತ ಷಣ್ಮುಖನು ನಾನು ತಿಳಿಯೆನ್ನು,
ನದಿ ನದ ಸರೋವರಗಳವು ಜಲಧಿ ರಾಶಿ,
ಆನ್ ಇಹೆನು ಸಾಗರವು ಜಗದುದ್ದವಿಲ್ಲಿ—

ಎಂದೆನುತ ವಿಶ್ವದ ವಿವಿಧ ಶಕ್ತಿಯೊಳ
ತಾನಿಹೆನೆಂ ಎಂದೆನುತ ಬಣ್ಣಿಸಿದ ಕೃಷ್ಣಾ!

॥ ೨೫ ॥

"ತಪೋನಿರತರಾ ಋಷಿಗಳೊಳಗೆ ನೋಡು ಇಹದೆ
ವರಮುನಿ ಭೃಗುವೊ ಆನೆಂತೆಂದೆನಿಸಿ ಇಹೆನೈ;
ಪ್ರಣವದಲಿ ಏಕಾಕ್ಷರಾ ಮಂತ್ರ ನಾನು
ಓಂಕಾರದಾ ಧ್ವನಿಯು ಲಿಂಗವು ನಾನು;
ಯಾಗಯಜ್ಞಗಳಾದಿ ಯೋಗದಲಿ ಇಹದೆ
ಜಪಯಜ್ಞವೇ ನಾನು ಎಂದೆನುತ ತಿಳಿಯೈ;
ಜಗದ ಸ್ಥಾವರಗಳಲಿ ಪರ್ವತದ ರಾಜಾ
ವರ ಹಿಮಾಲಯವೊ ಆನ್ ನಿಜವದೈ ಪಾರ್ಥಾ!

॥ ೨೬ ॥

"ತರುಲತೆಗಳಲಿ ಅತಿ ಪವಿತ್ರವದು ವೃಕ್ಷ
ಮೇದೋರ್ತ್ತ ಅಶ್ವತ್ಥವು ಅದೆ ನಾನು ಕೇಳೈ;
ದೇವಋಷಿಗಳು ನಿಕರದಲಿ ಕೇಳು ಇಹದೆ
ಲೋಕಗಳ ಸುತ್ತುತಿಹ ನಾರದನು ನಾನೈ;
ಕಿನ್ನರರು ಗಂಧರ್ವ ಖೇಚರರು ಪೈಕಿ
ಚಿತ್ರರಥನಹೆ ನಾನು ವಿಶ್ವವಿದರಲ್ಲಿ;
ಸಾಧಕರು ಸಿದ್ಧರಲಿ ಜಗವುದ್ಧ ಇರುವ
ದೇವಮುನಿ ಕಪಿಲನಹೆ ಆನಿದೈ ಪಾರ್ಥಾ!

॥ ೨೭ ॥

"ಸಕಲ ಜೀವಿಯು ಅಶ್ವಗಳು ಎಡೆಯು ಇಹುದಾ
ಕ್ಷೀರಸಾಗರ ಮಥನದಿಂದಲುದ್ಭವಿತಾ
ವರ ಉಚ್ಚೈಶ್ರವಸುವದು ನಾನೆಯೇ ಜಗದಿ,
ಗಂಭೀರವಹ ವೀರ ಗಜರಾಜರಲ್ಲಿ
ಸುರಲೋಕದೈರಾವತವು ನಿಜದಿ ನಾನೈ;
ಮನುಜಕುಲವನು ಜಗದಿ ಸಂಘಟಿಸಿ ನೋಡೈ
ಆಳುತಿಹ ರಾಜವರನಹೊ ನಾನು ಇಹೆನಾ,"
ಎಂದೆನುತಲಂದನಾ ಅರ್ಜುನನಿಗೆ ಕೃಷ್ಣಾ!

॥ ೨೮ ॥

"ಕಾಳಗಗಳವು ಎತ್ತು ಹೋರಾಟಯುದ್ಧ
ಆಯುಧಗಳಲಿ ಕೇಳು ವಜ್ರಾಯುಧವು ನಾನೊ;
ತಾಯ ಸ್ವರೂಪವು ಗೋಮಾತೆಯವರಲಂತು ಕೇಳಾ
ವರ ಕಾಮಧೇನು ಅಮೃತೇ ನಾನು ನಿಜವಾ!
ಸಂತೋಷವೃತ್ತಿಗೆ ಮೂಲವಾ ಕಾಮ ಮೋಹ
ಮಾರ ರತಿಯರ ಮೋಹ ಮನ್ಮಥನು ಆನೈ!

1344

ಸರ್ಪಾದಿ ಜಾತಿಗಳಲಿಹ ಇಹದಿ ಇಹೆನೈ
ವಿಷಧರನಾ ವಾಸುಕಿಯೆ ನಾನು ಕೇಳೈ!

" ೧೮ "

"ಎಲೆ ಧನಂಜಯ ಕೇಳು ಸಹಸ್ರಾಕ್ಷನಂತೆ
ಸಹಸ್ರ ಶಿರಗಳ ಆದಿಶೇಷನೂ ನಾನೆ!
ಸಾಗರಗಳ ಜಲಚರ ಕೋಟಿಗಳನು
ಸಲಹುತಿಹ ವರ ವರುಣದೇವನೈ ನಾನು!
ಹಿರಿಯ ಜನ ಪಿತೃಜನದಾ ವೀರರಲ್ಲಿ
ಆರ್ಯಮನು ನಾನೆಯೋ ಈ ರೂಪಿನಲಿ!
ವಿಧಿನಿಯಮದ ನಡೆಸುತಿಹ ತಪ್ಪಿದರನೆಲ್ಲ
ಶಿಕ್ಷಿಸುವ ಯಮದೇವ ನಾನೆ ಕೇಳ್ ಪಾರ್ಥ!

" ೧೯ "

"ಹೇ ಮಿತ್ರ, ಕೇಳಲೈ ಅಸುರರಲಿ ಅಂತು
ಭಕ್ತವರನೂ ವೀರ ಪ್ರಹ್ಲಾದ ನಾನು;
ಲೋಕಗಳನು ಕ್ರಮಿಸಿ ಆಕ್ರಮಿಸುತಿರುವ
ಲಯಕಾರಕಾ ಮೃತ್ಯುತತ್ವ ನಾನೆಯೋ ಕೇಳಾ;
ಮೃಗರಾಶಿಯೊಳು ವನ್ಯ ಜೀವಿಗಳ ಪೈಕಿ
ಮೃಗರಾಜ ಸಿಂಹವಿಹೆ ನಾನು ಈ ಜಗದಿ;
ಅಂತೆಯೇ ನಭಾಂಗಣದಿ ಸುತ್ತುತಿರುವ
ಖಗಗಳಲಿ ವರಗರುಡ ಆಗಿಹೆನೊ ನಿಜವಾ!

" ೨೦ "

"ಚಲಿಸುತಿಹ ಭೌತಿಕಾ ವಸ್ತುಗಳಲಂತು
ವಾಯುದೇವನೊ ನಾನು, ಎಲೆ ಪಾರ್ಥ ಕೇಳು;
ಕಲಿವೀರರಾ ಶಸ್ತ್ರಧಾರಿಗಳ ಎಡೆಯ
ರವಿಕುಲದ ಶ್ರೀರಾಮನಿಹೆ ನಾನು ತಿಳಿಯೈ,
ಜಲಧಿಯಲಿ ಮಿಂದು ಮುದದೋಳಾಡುತಿರುವ
ಜಲಚರಗಳಲಿ ನೋಡು ಆ ಮಹಾಮಕರ;
ಲೋಕವಿಹ ಶತಕೋಟಿ ನದಿತೀರ್ಥಗಳಲಿ
ವರಗಂಗೆಯೋ ಇಹೆನೊ ಅರ್ಜುನನೆ ಕೇಳೈ!

" ೨೧ "

"ಈ ದೃಶ್ಯ ಸೃಷ್ಟಿಯಲಿ ದಿನ ನಿತ್ಯ ಇರುವ
ಚರಾಚರ ವಸ್ತುಗಳಿಗಾ ಮೊದಲು ಹಂತಾ —
ಆದಿ ಮಧ್ಯಾಂತ್ಯಗಳು ನಾನಲ್ಲೈ ನರನೆ,
ಕ್ಷೇತ್ರ ಕ್ಷೇತ್ರ ವಿಸ್ತಾರವನು ನಡೆಸುತಿಹೆ ನಿಜವೈ,
ವಿದ್ಯೆಗಳು ಅಧ್ಯಾತ್ಮ ಜ್ಞಾನ ಮೀಮಾಂಸೆ
ಅವುಗಳಲಿ ಪರಬ್ರಹ್ಮ ವಿದ್ಯೆಯೋ ನಾನೊ!

ಮಾತಿನ ಪ್ರತಿಮಾತುಗಳ ವಾದವು ವಿವಾದ, 129
ವಾದಕೊಯ್ಯುವ ವಾದಕ್ಕೆ ಆನ್ ಕೇಳು! 1345

" ೩೩ "

"ಆಕಾರದಿಂದ ಹಲವಾರು ನುಡಿಗಳಲಿ ಇರುವ
ಅಕ್ಷರಗಳಲಿ ಅ-ಕಾರವು ನಾನೆ ಪಾರ್ಥ;
ಸಿದ ದ್ವಯುಗಳಲಿ ಪ್ರಧಾನವು ಅವುದೆನಲು?
ಸದ ಸಮಾಸವು ಅದರಲಿ ದ್ವಂದ್ವ ನಾನೇ!
ಯುಗಗಳಲವು ಕಳೆದೊಡೆಯಲು ಸರಿಯುತಲಿ ಇರುವ
ಅಕ್ಷಯವಾದಾ ಕಾಲವದು ನಾನೆ ಮಿತ್ರ!
ಸೃಷ್ಟಿಯನು ಕೊಡುವ ನಾ ಎಲ್ಲೆಡೆಗು ನೋಡ್ಲು
ಹುತ್ತವಿರ್ಬಹುದು ಬ್ರಹ್ಮ ಆನ್ ಕೇಳಿಲ್ಲಿ ಮಿತ್ರ.

" ೩೪ "

"ಎಲ್ಲವನು ಸರ್ವಸ್ವವನು ಕೊನೆಗೊಳಿಸಲೆಂದು
ಕೊಂಡೊಯ್ಯುವ ಆ ಮೃತ್ಯು ಸಂಹಾರಿ ನಾನು!
ಭವಿಷ್ಯ ಕಾಲದಲಿ ಹುಟ್ಟಲಿರುವವರಿಗಾದ
ಜನನ ಕಾರಣವಾದ ಶಕ್ತಿ ಸಾರವದು ನಾನೆ!
ಸ್ತ್ರೀವಾಚಿಗಳಲಿ ನಾನೆ ಸಿರಿಲಕ್ಷ್ಮೀ ದೇವಿ,
ಕೀರುತಿಲ ಕೊಡುವುದ ವರಕೀರ್ತಿ ಲಕ್ಷ್ಮಿ;
ಬುದ್ಧಿಗಳ ಕೊಡುವುದ ವಾಗ್ದೇವಿ ನಾನೆ,
ಧೈರ್ಯ ಸಾಹಸಿಗಳಿಗೆಲ್ಲ ಆ ತಾಯಿ ನಾನೆ!

" ೩೫ "

"ವೇದ ಸಾಮಗಳಲಿ ಹಾಡುವ ನುಡಿಗಳಲಿ
ಬೃಹತ್ ಸಾಮವು ನಾನೆ ನಿಜವಿದು ಜಗದಿ,
ವೇದೋಕ್ತ ಛಂದಗಳ ಮಂತ್ರಗಳಲಿ
ಗಾಯತ್ರಿಯು ನಾನು ತಿಳಿಯಲಿ ಪಾರ್ಥ;
ಕಾಲದಿರಿಯಲು ಹನ್ನೆರಡು ತಿಂಗಳ ಮಾಸ,
ಅವುಗಳಲಿ ಮಾರ್ಗಶಿರವು ನಾನು ಕೇಳು;
ಅಂತೆ ಋತುಗಳಲಿ ಹೂವಿನ ಮಿಲನದಲಿ ಇರುವ
ಋತುಗಳಲಿ ಸುಂದರ ವಸಂತ ನಾನು ಮಿತ್ರ!

" ೩೬ "

"ವಂಚಿಸುವ ಜೂಜಾಟವದು ನೀನು ಇಂದು
ಮೋಸದಲಿ ದ್ಯೂತವದು ಆನ್ ಎಂಬುದನು,
ತೇಜಸ್ವಿಗಳಲಿ ಆನ್ ತೇಜಸ್ವಿಯಾಗಿಹೆನು
ಕಾರ್ಯದಲಿ ನಿಶ್ಚಯದಲಿ ಜಯವು ಆನ್ ನಿಜವು!
ಸಾಹಸದಿ ಹೋರಾಟದ ಪರಿಣಾಮದಲಿ ನಾನು,
ಸಾಹಸದ ಸ್ವಭಾವದ ಸಾಹಸಿ ನಾನು!

ಅಂತೆಯೇ ಸಾತ್ವಿಕರ ತತ್ವಬೋಧನೆ ನಾನು
ಸತ್ವಗುಣವೆಂದೆನಿಸಿ ಬೆಳಗುತ್ತಿಹೆನಂತೆ!

॥ ೩೬ ॥

"ಎಲೆ ಸವ್ಯಸಾಚಿ ಕೇಳು, ಹೇಳುವೆನು ಇನ್ನು,
ಯಾದವ ಕುಲದಿ ಆ ವಾಸುದೇವನೇ ಇಹೆನು;
ಕೇಳಿಲ್ಲಿ ಪಾಂಡುಕುಲದಾ ವೀರರಲ್ಲಿ
ಪಾಂಡವ ಧನಂಜಯನು ಆಗಿಹೆನೋ ನಿಜದಿ!
ಮುನಿಯೋಗಿ ಮಹಾತ್ಮಗಳಲಂತು ನೋಡು
ಮಹಾ ವೇದವ್ಯಾಸ ನಾನ್ ಆಗಿಹೆನೋ ಅಂತು;
ಕವಿಕುಲಕೆ ಭೂಷಣನು ಎಂದೆನಿಸಿ ಇರುವಾ
ಶುಕ್ರಾಚಾರ್ಯನು ನಾನೆ ಆಗಿಹೆನೋ ಪಾರ್ಥ!

॥ ೩೭ ॥

"ದಂಡನೆಯು ವಿಧಿಸುವವರಿಗೆ ನಾನೆ ದಂಡ,
ಜಯಾಪೇಕ್ಷೆಯುಳ್ಳವರಿಗೆ ಜಗದ
ಜಯ ಸಾಧಕ ರಾಜನೀತಿಯದು ನಾನೆ,
ರಹಸ್ಯವೆನಿಪ ವಿಷಯಗಳಿಗಂತೆಯೆ ನೋಡಿತ್ತ
ಆ ಮೌನವೃತ್ತಿಯು ಆಗಿಹೆನೋ ಪಾರ್ಥ,
ಜ್ಞಾನಿಗಳಿಗದು ನಾನೆ ಜ್ಞಾನವದು ಕೇಳು,"
ಎಂದು ಮುರಹರ ತನ್ನ ಮಹಿಮೆಯನು ಸ್ವಾರ್ಥ
ಹೇಳಿದನೋ ಪಾಂಡವಗೆ ವಿವರದಲಿ ನಿಜವಾ!

॥ ೩೮ ॥

"ಇಲ್ಲಿ ನಾನೆ ಹೇಳುತ್ತಿರುವುದೋ ಈಗ,
ಸರ್ವ ಭೌತಿಕ ವಸ್ತುಗಳಿಗೆಲ್ಲ ಮೂಲ—
ಆ ಆದಿಬೀಜವೆಂದೆನಿಸಿಹೆನೋ ಜಗದಿ
ಚರಾಚರ ವಸ್ತುಗಳಲಿಹ ನಾನು ಸೊಗದಿ—
ಆನಿಲ್ಲದಿಹ ವಸ್ತು ಬೇರೊಂದು ಇಲ್ಲ,
ಆನಿಲ್ಲದೆಯೆ ಏನು ಬದುಕುವುದು ಇಲ್ಲ;
ಎಂದೆನುತ ದೈವಿಕ ಶಕ್ತಿಯನು ಕೃಷ್ಣ
ಬಿಡಿಸುತದೆಗಳ ಹೇಳಿದನೋ ಮುದದಿ ನೋಡಾ!

॥ ೩೯ ॥

"ಕೇಳಿಲ್ಲಿ ಹೇ ಮಿತ್ರಾ, ಭರತಕುಲ ಪುತ್ರಾ,
ಹೇಳಿದೆನೋ ಅಪರಿಮಿತ ಮಹಾ ಈ ಚರಿತ್ರಾ;
ಮತ್ತೆ ಹೇಳುವುದಕಿನ್ನ ಕೇಳು, ಮಿತಿಯಿಲ್ಲ ನಿಜವಿದ್ದು
ಇದು ಸಂಕ್ಷಿಪ್ತ ರೀತಿ ದೇವಜನ ಮಹಿಮೆ!
ಸಂಗ್ರಹದಿಂದ ನಾನು ಹೇಳಿದೆನೋ ಸಖನೆ,
ಇದ ಕೇಳು, ಎದ್ದೇಳು, ನೀನ್ ಬಾಳು ಮುಕ್ತ,"

ಎಂದೆನುತ ಗೋಪಾಲನು ವಿನಯದಲ್ಲಿ,
ಪರ ವಿಭೂತಿ ಯೋಗವನು ಹೇಳ್ದನಲ್ಲಿ!

॥ ೪೦ ॥

"ತೋರುವುದು ಆವಾವ ವಸ್ತುಗಳು ಎಂತೊ
ಏನೇನು ಮಾಯಾ ವಿಲಾಸವದು ಇದೆಯೊ,
ಆವಾವ ಸಾಮರ್ಥ್ಯವನು ಹೊಂದಿ ಇರುವುದೊ
ಎಂತು ಶ್ರೀಭಾಗ್ಯದವಾಗಿ ಬೆಳಗುತಿರುವುದಂತೊ,
ಅವು ಎಲ್ಲವೂ ನನ್ನ ತೇಜಸ್ಸ ಅಂಶ
ಮಹಿಮಾತಿಶಯ ಶಕ್ತಿ ಅದೆ ವಿಶಿಷ್ಟಾಂಶ,"
ಎಂದೆನುತ ಹೇಳಿದನು ಗೋವಿಂದನಂದು
ಮನದಲಿ ಆಲಿಸುತಲಿದ್ದ ನರನಿಗಂದು!

॥ ೪೧ ॥

"ಅನಿತೆಲ್ಲ ಪಿಂದಾದೊಡೆಯೂ ಕೇಳು ಮಿತ್ರ,
ಬಹು ಪರಿಯ ಮಾಯೆಗಳ ಜ್ಞಾನವದು ಇರುವಾ,
ಏನ್ ಪ್ರಯೋಜನವೇನು? ಅವುಗಳಿಂದೇನು?
ವಿವರಿಸಿದೆನದ ನಿನಗೆ ಹಿತವೇನು ಹೇಳು!
ಲೋಕಗಳ ಸರ್ವವನು ಪೊತ್ತಿಹೆನು ಎನ್ನ
ಮಹಿಮೆಯದರೊಂದಂಶದಿಂದಲೇ ಪಾರ್ಥ;
ಪೊತ್ತಿಹೆನು ನಡೆಸುತಿಹೆನೆಲ್ಲವನು ನಾನು,
ಕೌಂತೇಯ ನೀನ್ ಚಿಂತಿಸದಿರ್ದು ಬಾಳು!"

॥ ೪೨ ॥

(ಹತ್ತನೇ ಅಧ್ಯಾಯ ಸಂಪೂರ್ಣವು.)

ಅಧ್ಯಾಯ ೧೧ — ವಿಶ್ವರೂಪ ಯೋಗ!

"ಎಲೆ ದೇವ ಗೋಪಾಲ ಅತಿಸವಿ ನಿನ್ನ,
ಅತಿರಹಸ್ಯವೊ ಅಧ್ಯಾತ್ಮ ಸಾರೂಪ್ಯ ಜ್ಞಾನ!
ಪರಮಾತ್ಮ ಸಾನ್ನಿಧ್ಯ ಕಾದಿರುವ
ಉಪದೇಶದಿಂದೆನ್ನ ಅನುಗ್ರಹಿಸಿರುವೆ
ಪೇಳಿದೆಯೊ ಹೇ ಜನಾರ್ದನ ನೀನು ನನಗೆ;
ತೊಲಗಿಸಿದೆ ಅಜ್ಞಾನವದನಂತು ಇಂದೇ"
ಎಂದೆನುತಲರ್ಜುನನು ಪೇಳಿದುವಾಯ್ತು ಹರಿಗೆ
ಪೇಳಿದನು ತಾನ್ ಹೊಂದಿದಾನಂದವದನೆ!

"೧"

"ಹೇ ಪುಂಡರೀಕಾಕ್ಷ ಕೇಳ್ ತಿಳಿದೆನಿಂದು,
ವಿಸ್ತಾರದ ಸಮಸ್ತ ಭೂತಗಳೆಲ್ಲವು
ಇಹ ಸೃಷ್ಟಿ ಸ್ಥಿತಿ ಲಯಗಳ್ ಮಾಯೆಯನ್ನು
ಕಾಲದಿರಿಯು [illegible] ತಿಳಿಯುತಿಹ ರೀತಿಯನ್ನು
ಕ್ಷಯವಾಗದಿಹ ನಿನ್ನ ಯೋಗದಿರಿಯನ್ನು
ವಿಳಕಮಿಳನೆ ಹೇಳಿನುತ ವಿವರಿಸಿದೆಯಿಂದು,
ಮಹಿಮೆಯದನೆಲ್ಲವನು ಪೇಳಿದೆಯೊ ಹರಿಯೆ
ಸಂತೃಪ್ತನಾದೆ ನಾನ್ ಆದಿ ಪಾರ್ಥ ಗೀತೆ!

"೨"

"ಪೇಳಿದೆಯೊ ತತ್ವವನು ಸೂಕ್ಷ್ಮವನು ಎಲ್ಲ
ಪರಮಾತ್ಮನೇ ನಿನ್ನ ಗಹನವದನೆಲ್ಲಾ,
ಎಲ್ಲ ಪರಮೇಶ್ವರನೆ ನಿಶ್ಚಯವೊ ನಿನ್ನ
ಯೋಗ ವಿಧಿಯಾ ದೈವ ಮಾಯೆಯದು ಎಲ್ಲಾ,
ಅಂತಾದೊಡೆಯು ಕೇಳ್ ನಿಜರೂಪ ನಿನ್ನ
ಋಷಿಸಿದ್ಧರಾ ಮಾಯೆ ದೈವವಿದ್ಯಾವಿದನಾ
ನೋಡಲೆಂದಾಶಿಸುವೆ ಹೇ ಹರಿಯೆ ನಾನು,
ಪುರುಷೋತ್ತಮಾ ತೋರಿಲೈ ವಿಶ್ವರೂಪ!

"೩"

"ಸರ್ವಗತ್ರಾ ಪುಂಡನ್ನ ಕಲ್ಯಾಣ ಕಾರಣಾ
ಸರ್ವೇಶ್ವರಾ ಜ್ಞಾನನಿಧಿ ಯೋಗ ಶರಣಾ,
ಆ ನರನು ಕೇಳ್ ನನ್ನ ಈ ನೇತ್ರ ದೃಷ್ಟಿಯದೆ
ವಿಶ್ವವನೆ ಹೊತ್ತಿಹ ನಿನ್ನ ರೂಪವನ್ನೆ
ನೋಡಲಕೊ ಸಾಧ್ಯವೆಂದಾದೊಡದೊ ಇಂದು
ತೋರಿಸೆನಗಾ ನಿನ್ನ ನಿಜರೂಪವದನ್ನು"

ಎಂದೆನುತಲಿ ಅರ್ಜುನನು ಬೇಡುತಿರಲಂದು
ಮುಗುಳ್ನಗುತ ಹೇಳಿದನು ಶ್ರೀಹರಿಯು ಇಂತು:

॥ ೪ ॥

“ನೋ ಪಾರ್ಥ ಶತಮಾರ್ಗವನು ಹೊತ್ತ ನನ್ನ
ಕೃತ ಸಹಸ್ರರು ವಿಧ ವಿವಿಧವಹ ನನ್ನ,
ಹಲವಾರು ವರ್ಣಾಕೃತಿಯು ರೂಪ ವಿವಿಧಾ
ಕೃತಿಯು ಅಪ್ರಾಕೃತ ಮೊದಲಾದ ಅಲೌಕಿಯದನಾ;
ಈಗ ತೋರಿಸುವೆ ಧನಂಜಯನೆ ನೋಡು ಇಂದು
ನಿಜರೂಪವನು ನಿಜದಿ ನೋಡುತಿಹ ನೀನು,”
ಎಂದೆನುತಲಾ ಹರಿಯು ಅರ್ಜುನನಿಗನುತಾ
ಬೃಹದ್ವಿಶ್ವ ರೂಪವನೊಡನೆ ನಿಂದ ತಾನು ಆಗ!

॥ ೫ ॥

“ಆಹಾ ನೋಡುತಿರು ಕಾಲಜ್ಞಾನಿ ಇಂದು,
ದ್ವಾದಶಾದಿತ್ಯರು ಪ್ರತ್ಯಕ್ಷದೊಳಿಹರು;
ಇತ್ತಲಕೊ ಅಷ್ಟವಸುಗಳು ನಿಕರವಿಹುದು
ಮರುದ್ಗಣ ರುದ್ರರೊಡನೆ ಅಲ್ಲಿ ಇಹರು,
ಅಶ್ವಿನೀ ದೇವತೆಗಳೊಡಗೂಡಿ ಇಲ್ಲಿ,
ಇದಕೆ ಮುನ್ನ ಕಾಣದವೆಲ್ಲ ಕಾಣಿಸುತಿವೆ ಭರದಿ
ನೋಡುತಿರು ಆಶ್ಚರ್ಯಗಳನಿದನಂತ ಮುದದಿ!”
ಎಂದೆನುತಲಾ ಹರಿಯು ತೋರಿಸಿದ ನರಗೆ.

॥ ೬ ॥

“ಎಲೆ ಗುಡಾಕೇಶ ನೀನು ನೋಡಿನ್ನು ಇಲ್ಲಿ,
ದೇಹವಿದು ಒಂದರೊಳಗಡಗಿಹುದು ಇಲ್ಲಿ;
ಚರಾಚರಗಳೊಂದೊಡಗೂಡಿ ಹಲವಾರು
ಕೋಟ್ಯಾದಿ ಲೋಕಗಳನೆಲ್ಲವನು ನೋಡು;
ಮನೀನು ಕಾಣಲಿಚ್ಛಿಸುತಲಿಹೆಯೊ ನೀನು
ನೋಡಿನ್ನು ವಿಶ್ವವೆಂಬೀ ದೇಹದೊಳಗೆ,”
ಎಂದೆನುತ ಗೋವಿಂದ ತೋರಿಸಿದನಂದು
ವಿಸ್ಮಯದಿ ಬೆರಗಾಂತು ನಿಂದಿಹನಿಗಂದು!

॥ ೭ ॥

“ಪಾಂಡವನೆ ನೋಡಿನ್ನು ರೂಪವಿದನೆಲ್ಲ,
ನೋಡಲಿಕೆ ಕಣ್ಗಳಿವು ಸಾಲದುವೊ ಮಿತ್ರ,
ಈಯುವೆನು ನೇತ್ರ ದಿವ್ಯಕೃತವು ಇಹುದಾ,
ಕೇಳ್ ದಿವ್ಯ ಚಕ್ಷುಸ್ಸನಿದೊ ಇತ್ತೆ ನೋಡ,
ನೋಡುತಿರು ಪರಜ್ಞಾನದಾ ವಿಶ್ವರೂಪ
ಲೋಕಗಳ ಹೊತ್ತ ಜಗದೀಶ್ವರಾ ರೂಪ,”

ಎಂದು ಪುರುಷೋತ್ತಮನು ಆನಂದದ ನರಗೆ 1350
ತೋರಿಸಿದನು ತನ್ನ ಜಗಶೋಭಿ ಲೀಲೆ!

॥ ೮ ॥

ಇತ್ತಲಕೊ ದೃಶ್ಯವದ ನೋಡುತ್ತಲಿ ನಿಂತು
ಸಂಜಯನು ಕುರುಪತಿಗೆ ಇಂತೆಂದನಾಗ:
"ಹೇ ರಾಜ, ಧೃತರಾಷ್ಟ್ರನೇ ಕೇಳು ಇಲ್ಲಿ,
ಯೋಗೇಶ್ವರ ಕೃಷ್ಣ ಯೋಗಗಳನಿತ್ತು
ಹೇಳುತ್ತಲಿ ಪರಮೋತ್ತಮ ಯೋಗ ತನ್ನ
ಐಶ್ವರ್ಯದ ರೂಪವನು ನರನಿಗೆ ನೋಡಾ—
ತೋರಿಸುತ್ತಲಿಹನು ಅದೋ ಅದ್ಭುತವು ರಾಜಾ,
ಕುರುಕುಲೋತ್ತಮ ಎಂದು ಹೇಳುತಲಿಹನು ಅವನು!

॥ ೯ ॥

"ಅನೇಕ ರೂಪಗಳಿಂದ ನಿಂತಿತ್ತಲ್ಲ ರಾಜಾ,
ಸಹಸ್ರಾರು ನೇತ್ರಗಳು ವಿಸ್ಮಯದ ನೋಟ,
ಅನೇಕ ಶಿರಗಳು ಹಸ್ತಗಳು ಅನೇಕವು ಲೋಕ
ದಿವ್ಯಾಲಂಕಾರದಿಂದ ಶೋಭಿಸುತ್ತಲಿಹುದಾ!
ವಜ್ರವೈಡೂರ್ಯಾದಿ ಆಭರಣ ತೊಟ್ಟ
ಹೊಳೆಹೊಳೆಯುತಿಹ ದಿವ್ಯಾಯುಧ ರಾಶಿಮಾಲೆ,
ಮೇಲೆತ್ತಿ ಝಳಪಿಸುತ್ತಲಿಹ ಕರದಲ್ಲಿ ನೋಡೈ,"
ಎಂದೆನುತ ಸಂಜಯನು ಹೇಳಿದನು ನೃಪನಿಗೆ.

॥ ೧೦ ॥

"ಕುರುಪತಿಯೆ, ಕಣ್ತುಂಬುದು ಆಗಿಹುದು ದೃಶ್ಯ,
ಸುರಲೋಕದ ದಿವ್ಯನವ ಪುಷ್ಪಹಾರ
ಧರಿಸಿಹನು ವಸ್ತ್ರಗಳು ಮತ್ತದರಿ ಹೊಳೆವ
ಅದೋ ದಿವ್ಯ ಗಂಧಾನುಲೇಪನವೋ ನೋಡು,
ಅನೇಕ ಆಶ್ಚರ್ಯಯುತ ಭವ್ಯ ತೇಜಸ್ವಿ ಅದುವೊ
ನೋಡು, ಹಲವಾಕೃತಿಯ ಮುಖಗಳಿವು ಹಲವೋ,
ಕೊನೆಮೊದಲು ಇಲ್ಲದಿಹ ರೂಪವಿದು ಕಂಡಿತ್ತು
ಸಂಜಯನು ಹೇಳಿದನು ಕಂಡು ಬೆರಗಾಂತು!

॥ ೧೧ ॥

"ನೃಪವರ ಧೃತರಾಷ್ಟ್ರ ಕೇಳು ಹೇಳ್ವೆನದನು,
ಶ್ರೀಕೃಷ್ಣನು ಪಾರ್ಥನಿಗೆ ತೋರುತಿಹನು;
ನಭೋಮಂಡಲದಲ್ಲಿ ಸಹಸ್ರಾರು ನೋಡೈ,
ಒಮ್ಮೆಗೇ ಸೂರ್ಯರವು ಉದಯಿಸುತ್ತಲಂತೆ
ಬೆಳಗುತಿರೆ ಸುಡುವ ಬೆಂಕಿಯಾ ಪ್ರಭೆಯು ಜ್ಯೋತಿ,
ಹೊಳೆಯುತಿದೆ ಮತ್ತದರಿ ಹೋಲಿಕೆಯಾಗಿ ಮೀರಿ"—

ಎಂದೆನುತ ಸಂಜಯನು ಭಯಗೊಂಡು ತಾನು 1351
ಹರಿಮಾಯೆ ದೃಶ್ಯವದ ಬಣ್ಣಿಸಿದನಂದು!

"೧೩"

"ನೋಡಿದನು ಫಲ್ಗುಣನು ಬೃಹದ್ವಿಶ್ವರೂಪ
ಮಹಿಮಾತೀತನ ಮಹಿಮೆ ಬಿಡಗೊಡದನ್ನು,
ಸಹಸ್ರಾರು ತೋರಗಳು ಬೆಡಗಿಯುಹ ದೇಹ,
ತನಿವೊಂದು ಮನಕೋಟಿಯೆಂಬಂತೆ ಇಹುದು;
ಬ್ರಹ್ಮಾಂಡವನೆ ಪೊತ್ತ ಭಗವಂತನಿಹನೊ—
ಎಂದೆನುತ ದಿಗ್ಭ್ರಾಂತಿ ನಾದನಹೊ ಪಾರ್ಥ"
ಎಂದು ಸಹ ಸಂಜಯನು ಕಣ್ಣಾರ ದರ್ಶನವಗೆ,
ಧೃತರಾಷ್ಟ್ರನಿಗೆ ಹೇಳ್ದ ತಾನ್ ಕಂಡುದನ್ನೆ!

"೧೪"

"ಹೇ ರಾಜ, ಪೆಚ್ಚಿದಾಶೆ ಪುಲಕಿತನು ಆಗಿ,
ರೋಮಾಂಚನದೆ ಕತ್ತಿಗೆ ಬೆರಗಾಂತು ಸೊರಗಿ
ಫಲ್ಗುಣನು ಅಚ್ಚರಿಯಲಾ ನೋಡ ನೋಡಿ
ತಾನ್ ನೋಳ್ಪ ದೇವನೆಂದು ಮನದಾಗೆ ಹೊಡೆದು,
ಕೈ ಜೋಡಿಸುತಲಂದು ತಲೆಬಾಗಿ ಮಣಿದು,
ತಾನ್ ಬದ್ಧಾಂಜಲಿಯಾಗಿ ನಿಂದನಾ ನರನು,"
ಎನುತ ಬೃಹದಾಶ್ಚರ್ಯದ ದರ್ಶನನು ಅಂದು
ಕಂಡುದನು ಸಂಜಯನು ಹೇಳಿದನೊ ಆಗ.

"೧೫"

ಅನಿತರೊಳು ಕೇಳ್ದ ಧನಂಜಯನು ಪರಹರಿಗೆ
ಕೈಮುಗಿದು ದೈನ್ಯದಲಿ ಹೇಳಿದನು ಹೀಗೆ—
"ಎನಿದೇನಿದು ದೇವ, ನೋಡುತಿಹೆ ಎನಾ?
ತೋರಗಳ ದೇವತೆಗಳಿಲ್ಲರನು ಎಂತಾ
ಪೊತ್ತಿಹೆ ಭೂತಗಣ ಋಷಿಜನಗಳನ್ನು,
ಚತುರ್ಮುಖ ಬ್ರಹ್ಮನನು ಈಶ್ವರಾಂಶನನಾ—
ಪಾನತಳೆಯ ಮೊದಲಾದ ಪರನಾಗಗಳನಾ
ನೋಡುತಿಹೆನೋ ಹರಿಯೆ ಬೆರಗಾಂತು ಈಗ!

"೧೬"

"ಎನ್ ಬೃಹದಾಶ್ಚರ್ಯವಿದು ಎನ್ ವಿಶ್ವರೂಪಾ,
ಓ ವಿಶ್ವೇಶ್ವರ ಹೇಳು ಎನಿದೀ ಅಲಾ!
ಆಗಣಿತವೊ ಬಾಹುಗಳು ಉದರಗಳು ಎಲ್ಲ
ಕಣ್ಣುಗಳು ಬಾಯಿಗಳು ಎಷ್ಟಿವೆಯೊ ಎನ್!
ಅರಿಯೆನ್ನೆ ರೂಪವಿದರಾಕಾರ ವಿವರ
ಆದಿ ಮಧ್ಯಾಂತ್ಯಗಳು ಎಲ್ಲಿವೆಯೊ ಹೇಳಾ?"

ಎಂದೆನುತ ಭ್ರಮೆಯಾಂತು ನಿಂದನಾ ಪಾರ್ಥ
ತಾನ್ ನೋಡುತ್ತಿರುವುದೇನೆಂದೆನುತ್ತಲೆ ನಿಂತಾ!

" ೧೬ "

"ಹರಿ ಕಿರೀಟದೊಡನೆ ಎಸೆಯುತಿಹೆ ನೀನು,
ಗದೆಯನು ಚಕ್ರಾಯುಧಗಳೆಲ್ಲವನು ಹೊತ್ತು,
ಸರ್ವ ದಿಶೆಯನು ಬೆಳಗುತಿಹೆ ಎತ್ತ ದೇವಾ,
ಸೂರ್ಯಾಗ್ನಿ ಸಮ ಜ್ಯೋತಿಯನು ಹೊಮ್ಮಿಸುತಿಹ
ರಶ್ಮಿಗಳಿಂದೀಕ್ಷಿಸಲು ಸಾಧ್ಯವಲದಾ
ಪ್ರಭಾಪೂರ್ಣವಿದೊ ಇಲ್ಲಿ ಜ್ವಲಿಸುತಲಿ ಇರುವುದಾ,"
ಎಂದೆನುತ ದಿಗ್ಗೆಡುತಲಾ ಪಾರ್ಥನಂದು
ಹರಿಮೂರ್ತಿಮಯ ಮಾಯೆಯನು ಕಂಡನಂದು.

" ೧೭ "

"ತಿಳಿಯಲರ್ಹದೇನಿದೆಯೊ ಅದು ನೀನೆ ದೇವಾ,
ಪರಮೋತ್ತಮವಾ ಅಕ್ಷರವು ನೀನೆ ಪರಬ್ರಹ್ಮ
ಆಧಾರವೂ ನೀನು ಲೋಕಗಳಿಗೆಲ್ಲ
ಅವಿನಾಶಿಯೂ ನೀನು ಶಾಶ್ವತನು ನಿತ್ಯ!
ಧರ್ಮವನು ರಕ್ಷಿಸುವ ಪುರುಷ ಹರಿಯು ನೀನೆ,
ಸಾರಾತ್ಸಾರ ಕಾರಣಾ ಪುರುಷ ನೀನೆ,"
ಎಂದು ಪ್ರಾರ್ಥನೆಯ ತಾನ್ ಪಾಡಿದನು ಹರಿಗೆ
ಕೇಳಿದನೊ ಮಹಿಮೆ ಅದುಯೆಂತೆನುತ ತಾನೆ!

" ೧೮ "

"ಆದಿ ಮಧ್ಯಾಂತ್ಯಗಳು ಇಲ್ಲದಿಹ ಸ್ವಾಮಿ
ಅದ್ವಿತೀಯನೊ ವೀರ ಅನುಪಮನು ಯೋಗಿ;
ಅಗಣಿತವೊ ಬಾಹುಗಳು ಎತ್ತಿಹಲಿ ನೀನು
ಚಂದ್ರ ಸೂರ್ಯರೆ ಕಣ್ಣು ಸಹಿತ ಬೆಂಕಿ ಮೊಗವು;
ಉಜ್ವಲತೆಯ ಪ್ರಖರದೊಡನೆ ವಿಶ್ವವನ್ನು
ಸುಡುವ ನಿನ್ನನು ನಾನು ನೋಡುತಲಿ ಇಹೆನೈ,"
ಎಂದನು ಧನಂಜಯನು ಧ್ಯಾನವನಿತ್ತು ತಾನ್ ಇಟ್ಟು
ಭಯದಿಂದ ತತ್ತರಿಸುತಲಿ ಕೇಳ್ದನಂದು.

" ೧೯ "

"ಭೂಮಿ ಆಕಾಶದೆಡೆಯಂತರವು ನೀನೆ,
ದಶದಿಕ್ಕುಗಳು ವ್ಯಾಪ್ತ ವ್ಯೋಮವವದು ನೀನೆ,
ವ್ಯಾಪಿಸಿಹೆ ಲೋಕಗಳೆಲ್ಲವನು ದೇವಾ
ಅದ್ಭುತವೊ ಈ ರೂಪ ವಿಶ್ವದ ಸ್ವರೂಪ!
ಭಯಂಕರವೋ ದೇಹವೇನಿದು ಅಪಾರ
ಲೋಕಗಳೆ ಹೆದರುತಿವೆ ಎನ್ ಬೃಹದ್ರೂಪ!"

1353

ಎಂದೆನುತ ಅರ್ಜುನನು ಅತಿ ಚಕಿತನಾಗಿ
ಕೇಳಿದನು ತಾನ್ ಕಂಡ ರೂಪವದನಲ್ಲಿ!

॥ ೨೧ ॥

"ಎಲೆ ದೇವ, ಮಹಾರಥರನೆ, ವನಸಿಜೋ ಈಶ,
ಸುರರಾಶಿಗಳೆಲ್ಲ ನುಗ್ಗುತಿವೆ ನಿನ್ನ
ದೇಹದೊಳಗವು ಕೈಕಟ್ಟಿ ತುತಿಸುತಿವೆ ನೋಡಾ
ಲೋಕ ಕಲ್ಯಾಣವನು ಬಯಸುತಿಹರಿಲ್ಲ,
ದೇವಋಷಿಗಳು ಸಿದ್ಧರೂ ಯೋಗಿಗಳುವೊ
ಕೈಮುಗಿದು ಪ್ರಾರ್ಥಿಪರು ನಿನ್ನನ್ನು ನೋಡೊ;
ಹಾಡುವರು ಪಾಡುವರು ಸುತ್ತೆಲ್ಲ ನಿಂತು
ನಿನ್ನೊಳಗೋಡಾಡುವರು ಭಕ್ತಿಯಿಂದಿ ಮುಳಿತು—.

॥ ೨೨ ॥

"ಕೇಳೆಲೈ ಶ್ರೀಕೃಷ್ಣ, ಒಳ್ಹೊರಗು ಇಹರು
ಬೆರಗಾಂತು ನೋಡುತ್ತಿಹರಿದೊ ನಿನ್ನನವರು;
ರುದ್ರಾದಿತ್ಯ ವಸುಗಳು ಸಾಧ್ಯರವರೊ
ವಿಶ್ವದೇವತೆ ಅಶ್ವಿನೀ ದೇವತೆಗಳೊ,
ಮರುತ್ಗಣದೊಡೆ ಪಿತೃಗಳು ಸಿದ್ಧರಿಲ್ಲ
ಯಕ್ಷ ಗಂಧರ್ವಾದಿ ಅಸುರರೂ ನೋಡು,
ಅಚ್ಚರಿಗಿಹರು ನಿನ್ನೊಳಗೆ ನಿನ್ನಲೆ ಎಲ್ಲ,
ಹೇ ಸ್ವಾಮಿ, ಮನೋನು ಪ್ರೀತಿ ಹೆಯೊ ಕೇಳಾ!

॥ ೨೩ ॥

"ಎಲೆ ಮಹಾಬಾಹೋ ಕೇಳೋ, ಅನೇಕತ್ವ ಎಂತೊ,
ಕಣ್ಮೊಗಗಳವು ಎಷ್ಟು ಕೈದೊಡೆಗಳೆಷ್ಟು,
ಕಾಲ್ ಹೊಟ್ಟೆಗಳು ಎಷ್ಟು ಅಂಗಾಂಗವೆಷ್ಟು,
ಎನ್ ಭಯಾನಕ ಹಲ್ಗಳೊಡೆ ಕೋರೆಗಳುವೊ,
ಎನ್ ಅದ್ಭುತಾ ರೂಪವದ ನೋಡು, ಇದೆಯೊ
ನನ್ನಂತೆಯೇ ಲೋಕಗಳೆ ಹೆದರುತಿವೆಯೊ,"
ಎಂದನು ಗೋವಿಂದನಾ ಮಹಿಮೆಯದನಲ್ಲಿ
ಹಾಡಿದನು ಪಾರ್ಥನು ಚಕಿತ ತಾನಾಗಿ!

॥ ೨೪ ॥

"ನಭೋಮಂಡಲವನ್ನು ವ್ಯಾಪಿಸಿಹ ದೇವಾ
ಜ್ವಲಿಸುತ್ತಿಹೆ ಕಾಲಾಗ್ನಿಯಾ ಜ್ವಾಲೆಯನ್ನು
ಮೀರಿಸುತ್ತ ಹಲವಾರು ವರ್ಣದಲಿ ಮಿಂಚಿ
ರಂಗೋಲಿಯೊಲು ಸುಂದರಾ ರೂಪನಲಿ
ಬಾಯ್ತೆರೆದು ಬಾಯ್ದಾಡಿ ಲೋಕಗಳ ನುಂಗಿ
ಕೆಂಗಿಡಿ ಹೊಮ್ಮುತಿಹ ನೇತ್ರಗಳ ಕಾಂತಿ,

ನಡುಗಿಸುತ್ತಿಹುದು ತನುಮನವನಂತು ನನ್ನ,
ಮನಶ್ಶಾಂತಿಯೂ ಧೈರ್ಯವಿಲ್ಲದೆಯೆ ಇಹೆನಾ!

" ೨೪ "

"ಶಿರಬಾಗಿ ಜಗನ್ನಿಯಾಮಕ ನಿನ್ನ ಕೇಳು,
ಏನ್ ಉಗ್ರರೂಪವಿದು ತೋರ್ತಿಹೆಯೋ ನೀನು;
ಭಯಾನಕವಾ ಕೋರೆದಾಡೆಗಳ ರೂಪ
ಪ್ರಳಯದ ಕಾಲಾಗ್ನಿ ಸಮ ಮುಖಗಳನ್ನೊ ಹಲವಾ,
ನೋಡುತ್ತಲಿ ದಿಗ್ಭ್ರಮೆಯೊಳು ತೊಳಲುತಿಹೆನಾ
ಕಾಣೆನು ಸುಖ ಮನಕಾಗಿ ತತ್ತರಿಸುತ್ತಿಹೆನಾ;
ಹೇ ಸ್ವಾಮಿ, ನೀನ್ ತೋರು ನಿನ್ನ ಕರುಣೆಯಾ,
ಪ್ರಸನ್ನನಾಗೆಲೋ ಎನ್ನ ಮನ್ನಿಸುತಲೀಗ!

" ೨೫ "

"ಆಹಾ ಎಂಥ ದೇವ ನೋಡುತಿಹೆ ಏನು?
ಎತ್ತಲಕೋ ಹೋಗುತಿಹರು ಬಾಯಾಗೆ ಜನವು!
ರಾಜವರರೊಡೆಯು ಧೃತರಾಷ್ಟ್ರ ಸುತರೆಲ್ಲ
ಭೀಷ್ಮ ದ್ರೋಣರು ಕರ್ಣನೂ ಯೋಧರೆಲ್ಲ,
ಇಕ್ಕೆಡೆಯ ಸೇನಾ ಸಮೂಹವದು ಎಲ್ಲ
ಹೋಗುತಿಹರು ನಿನ್ನೊಳಗೆ ನೋಡುತಿಹೆನಿದನಾ,"
ಎಂದನು ಅತಿ ಚಕಿತನಾಗುತ ಪಾರ್ಥನಂದು
ಹೇಳಿದನು ಭಗವಂತನ ರೂಪ ಕಂಡು!

" ೨೬ "

"ಏನಿದೇನಿದು ಜನ ಬಲು ಧಾವಿಸುತ್ತಲಿಹರು,
ಕೋರೆದಾಡೆಗಳುಗ್ರ ಮೊಗದೊಳಗೆ ಹೊಕ್ಕು,
ಹಾಯುತಿರೆ ಬಾಯೊಳಗೆ ಯೋಧವರರೆಲ್ಲ,
ಕಂಠದ್ವಾರದಿ ತಡೆಯುತ ತಲೆ ಒಡೆಯೆ ಪುಡಿಯಾ,
ಹಲ್ ಸಂದುಗಳಲಂತು ಸಿಲುಕಿಹರು ಹಲರು
ನುಜ್ಜುಗುಜ್ಜಾದವೊಲು ಅಂತಿಹರು ಅವರು;
ನೋಡುತ್ತಿಹೆ ಏನ್ ಭಯಂಕರ ದೃಶ್ಯವಿದನಾ
ಈ ವಿಶ್ವರೂಪವಿದರ ಮಾಯೆಯದೆನ್ನು!

" ೨೭ "

"ಹೇಳುತಿಹೆ ಭಗವಂತ ಈ ನೋಟವೆಂತಾ,
ಸಹಸ್ರಾರು ನದಿನದಗಳವು ಉಕ್ಕಿ ನಿತ್ಯ
ಕಡಲಿಗಂತು ಸಾಗರವ ಸೇರುವೊಲು ಇಲ್ಲಿ
ಕೂಡಿಯಿಹ ರಾಜವರರಾ ನಿಚಯವದು,
ಜ್ವಲಿಸುತ್ತಿಹ ನಿನ್ನ ಮುಖದಾಗೆ ಕೇಳೋ ಹಾದು,
ಬಾಯ್ದಾರಿ ಹೊಗುತಿಹರೊ ನಿನ್ನೊಳಗೆ ಅಂತು,"

ಎಂದೆನುತಲರ್ಜುನನು ತಾನ್ ಶಂಕಿತನನುತ್ತ
ಬಿಡಿನುಡಿಗಳಲಿ ಕೇಳಿದನು ಹರಿಗೆ ಇಂದು. —

"೨೮"

"ಏನ್ ಮಹಿಮೆಯೋ ದೇವ, ನೋಡುತ್ತಿಹೆನೀಗ,
ನಾಶವಿದನರಿಯದಿಹ ಕಾಂತಿಗಳು ಎಲ್ಲ
ಮಿಡುಕಿ ನೋಟಗಳು ಇಂತೆ ಸಿಡಿಸಿರುವ ಕಾದು
ಉರಿಯುತಿಹ ಶೃಂಗಿಡಿಯು ಜ್ವಾಲೆಯಲಿ ಬಿದ್ದು,
ನಶಿಸುವೊಲು ನೋಡಲಿಕ್ಕೆ ಲೋಕಗಳು ಎಲ್ಲ
ಬಿದಿಗಳಿಹ ನಾಶವಿದನರಿಯದಿಹ ನೋಡಾ
ಪ್ರಜ್ವಲಿಪ ನಿನ್ನ ಮುಖವನು ಹೊಕ್ಕು ತಾವೆ
ಕೆಡಲು ಎಂಬಂತೆ ಹೋಗುತಿಹರು ನಿನ್ನೊಳಗೆ.

"೨೯"

"ಹೋ ಪ್ರಭುವೆ, ನೋಡುತಿಹೆ ಮುಖಗಳವು ಕಲವು
ಬಿತ್ತರದಿ ನಾಲಗೆಯು ಚಾಚುತಿಹ ಅಗ್ನಿ ಪ್ರಭೆಯಲಿ,
ಪರಂಜ್ಯೋತಿಯೊಡೆ ಲೋಕಗಳ ನುಂಗಲೆಂದು
ಚಪ್ಪರಿಸುತಿಹೆ ನಾಲಗೆಗಳನ್ನು ನೀನು!
ಏನ್ ಭಯಂಕರ ಜ್ವಲನ ಕಿರಣಗಳು ತೀಕ್ಷ್ಣ,
ಸುತ್ತಲಿಹ ಲೋಕಗಳ ವ್ಯಾಪಿಸಿಹ ಹರಹು!
ಓಹೋ ದೇವ, ಏನ್ ತೇಜ ಏನ್ ಪ್ರಭಾವವಿದೊ
ಏನ್ ದೈವತ್ವ, ಏನ್ ವಿಶ್ವ, ಏನ್ ಈಶ್ವರತೆಯೊ!

"೩೦"

"ಪರಮೋತ್ತಮ ದೇವ, ಕೇಳಲಿಕ್ಕೆ ಇಂದು
ಈ ಉಗ್ರರೂಪಿನೊಡೆ ಬಂದಿರುವೆ ತಿಳಿಸು,
ತೋರಿತೆ ಪ್ರಚಂಡವಹ ವಿಶ್ವದರಿಯಲ್ಲಿ
ನೀನೀಸುತಿಹೆ ಎಲ್ಲಿ? ಅವತರಿಸಿ ಇಲ್ಲಿ!
ಎಲೆ ದೇವ, ಪ್ರಸನ್ನನಾಗೆಲೆ ನೀನ್ ಇಂದು
ವಂದಿಸುವೆನೋ ಆದಿ ಪುರುಷ ನೀನ್ ತೋರು—
ತಿಳಿಯಲಾನ್ ಇಚ್ಛಿಸುವೆ ಗೂಢವಿದು ಏನಾ—
ಹೋ ಕೃಷ್ಣ ಹೇಳೆನಗೆ ನೀನ್ ನಡೆಸುತಿಹ ಕಾರ್ಯ!"

"೩೧"

ಎಂದೆನುತಲರ್ಜುನನು ಬೇಡುತಿರಲಾಗ
ಪರಹರಿಯು ಕೇಳ್ದು ತಾನ್ ಕರುಣದಿ ಎನುತ—
"ಕೇಳ್ ಪಾಂಡವನೆ ರಾಜ್ಯಲೋಕಗಳನೆಲ್ಲ
ನಶಿಸಲಿಕೆ ಬೆಳೆಯುತಿಹ ಕಾಲ ನಾನ್ ತಿಳಿಯಾ!
ಸಂಹಾರ ಲೋಕಗಳ ಸಂಹರಿಸಲೆಂದು
ಯುಗಯುಗಕ್ಕೆ ಪ್ರವರ್ತಿಸುವ ಶಕ್ತಿ ನಾನ್ ನೋಡು,

ನೀನ್ ಪ್ರಹರಿಸದಿದ್ದರೂ ಸಹಿಯಲು ಅರಿಸೇನೆ ಅಂತವು,
ಕದನ ಕದಲದ ಯೋಧರಾರ್ ಜೀವಿಸರು ನಿಜವು —

" ೩೩ "

"ಎಲೆ ಸವ್ಯಸಾಚಿ ಕೇಳ್, ಎದ್ದೇಳು ಬಾಳು,
ಸಮರದಲಿ ಹೋರಾಡು ಶತ್ರುಗಳ ಜಯಿಸು;
ವೈಭವದ ಸಾಮ್ರಾಜ್ಯವನು ಗೆದ್ದು
ಯಶಗಳಿಸುವ ಸಾಗಲಿ ಪಾರ್ಥ ನೀನ್ ಬಾಳು!
ಯೋಧರೆಲ್ಲರೆನ್ನಿಂದಲೇ ಅಂದು ಎಲ್ಲ
ಹತರಾಗಿ ಇಹರೆಂದು ತಿಳಿಯಲಿ ಮಿತ್ರ;
ನಿಮಿತ್ತಮಾತ್ರನಾದರೂ ನಿಂತು ನೋಡುತ್ತ ನೀನು
ನಿರ್ಮೂಲವಾಗಲಿಹರು ವೀರರೆಲ್ಲ!

" ೩೪ "

"ನಿಜವಿದ್ದಿ ಪಾರ್ಥ ಕೇಳ್, ಕುರುಯೋಧನಿಯಲಿಹ
ದ್ರೋಣ ಭೀಷ್ಮರು ಜಯದ್ರಥಾದಿಗಳು ಕರ್ಣ
ಹತರಾಗಿ ಉಳಿಹರು ನನ್ನಿಂದಲೇ ಈಗ —
ಯೋಚಿಸಲು ಏನಿಲ್ಲ ಫಲ್ಗುಣನೆ ಕೇಳು!
ಜಯಿಸುವೆ ನೀನ್ ನಿಶ್ಚಯವು ಸಮರವನು ಹೂಡು
ಕೇಳ್ ದುಷ್ಟ ಶತ್ರುಗಳ ಕೊಲೆಯೆ ಇದೆ ಹೇತು,
ಸಂಹಾರ ಲೀಲೆಯನು ಹಾಡಿಸುವ ಹರಿಯು,"
ಎಂದೆನುತ ಹೇಳಿದನು ಅರ್ಜುನನಿಗೆ ಹರಿಯು.

" ೩೫ "

ಸಂವಾದವಿದನಾಲಿಸುತಲಿ ಸಂಜಯನು
ಧೃತರಾಷ್ಟ್ರಗಿಂತೆಂದ ತಾನ್ ಕಂಡುದನ್ನು —
"ಹೇ ರಾಜ, ಬೃಹದ್ವಿಶ್ವ ರೂಪವದ ನೋಡಿ
ಅರ್ಜುನನು ಭಯದಿಂದ ಕೈಮುಗಿದು ಅಲ್ಲಿ
ಹಲವಾರು ಬಾರಿ ತಾನ್ ವಂದಿಸುತ ಹರಿಗೆ
ತಾನೇನು ನೋಡುತ್ತಿಹೆನೋ ಎಂದು ತಾನೆ
ಬೆರಗಾಗುತ ತಲೆಬಾಗಿ ವಿನಯದಿ ಪಾರ್ಥ
ತಾನ್ ಗದ್ಗದ ಕಂಠ ಧ್ವನಿಯಲಿನಿತೆಂದಾ!"

" ೩೬ "

"ಹೇ ಹೃಷೀಕೇಶ ಕೇಳ್, ನೀನ್ ಪಡೆದ ಖ್ಯಾತಿ
ಲೋಕಗಳನೊಲಿಸುವುದು ನಲಿಸುವುದು ನಿಜವು,
ದುರ್ಜನರು ರಕ್ಕಸರು ದಿಗಿಲಿನಿಂ ಭಯದಿ
ಓಡುವರೊ ನಿನ್ನಿಂದ ಇಹಲೋಕದಿಂದೆ!
ಕೇಳ್ ಸಿದ್ಧರಾದಿಯರು ಕೂಡಿಯು ಎಲ್ಲ
ಪೂಜಿಸುವರು ವಿನಯದಿ ಹೋ ನಮಿಸಿ ನಿನ್ನ,"

ಎಂದೆನುತಲಿ ವಿನಯದಲಿ ಪ್ರಣಾಮವನು
ಸಲಿಸಿದ ನಿರಾಮಯನಿಗೆ ಶ್ರೀ ಹರಿಗೆ ಅಗ!

" ೩೬ "

"ಕೇಳು ಮಹಾತ್ಮನೆ, ಬ್ರಹ್ಮನಿಗೂ ಆದಿಕರ್ತಾರ
ದೇವೇಶ ನೀನನಂತನು ಸೃಷ್ಟಿಕರ್ತಾರ
ನಮಿಸದಿಹರಾರ್ ನಿನ್ನ ಜಗದಾಧಾರಾ ?
ಅಕ್ಷಯನು ಪರಮಾತ್ಮಾ ಆದಿ ತತ್ವ!
ಕಾರ್ಯ ಕಾರಣ ರೂಪ ಪ್ರಕೃತಿಯು ನೀನೆ,
ಪ್ರಕೃತಿಗೂ ದೂರವಿಹ ಪರಮಾತ್ಮ ನೀನೆ,
ಸತ್-ಅಸತ್ತುಗಳಿಂದ ಮೇಲಿರುವ ಸತ್ಯರೂಪ,"
ಎಂದೆನುತ ಫಲ್ಗುಣನು ಸ್ತುತಿಸಿದನು ಭರದಿ.

" ೩೭ "

"ಆದಿ ದೇವನು ನೀನೆಯೆ ಅನಾದಿ ಪುರುಷ
ಆಧಾರ ಪ್ರಾಯನಿಹೆ ಲೋಕಗಳಿಗೆಲ್ಲ;
ಅನಂತ ಪರ ರೂಪಿಯೆ, ಸರ್ವವನು ತಿಳಿದ
ತಿಳಿಯಲಿಹುದಿಲ್ಲವು ನೀನೆಯೇ ದೇವ!
ಪ್ರಾಪ್ಯ ವಸ್ತುವು ನೀನೆ ಪ್ರಾಪ್ತವೂ ನೀನೆ,
ವಿಶ್ವ ವ್ಯಾಪಕ ಶಕ್ತಿ ಜ್ಯೋತಿಯೂ ನೀನೆ,"
ಎಂದೆನುತ ವಿಶ್ವವಿದರ ಮಾಯೆಯನ್ನು
ಪೊತ್ತ ಹರಿಯನು ಭರದಿ ಸ್ತುತಿಸಿದನು ಪಾರ್ಥ!

" ೩೮ "

"ಶ್ರೀ ಹರಿಯೆ, ನೀನೆಯೇ ವಾಯು ಯಮದೇವ,
ನೀನೆಯೇ ವರ ಅಗ್ನಿ ವರುಣನೂ ಚಂದ್ರ,
ಸೃಷ್ಟಿಕರ್ತನು ಪ್ರಜಾಪತಿ ಬ್ರಹ್ಮ ನೀನೆ,
ಅವನ ಪಿತ ಪರ ಪ್ರಪಿತಾಮಹನಂತ ನೀನೇ
ಮಣಿಸಲು ಶ್ರೀ ದೇವ ಅದ್ಭುತವು ಮಹಿಮೆ,
ವಂದಿಸುವೆ ಸಹಸ್ರಾರು ಸಾರಿ ಕೇಳು ನಿನಗೆ,
ಪುನರಪಿಯು ವಂದಿಸುವೆ ಎಲೆ ಹರಿಯೆ ನಿನಗೆ,
ಭಕ್ತನಿಹೆ ಕೇಳಿನ್ನು ಮೊರೆಯಿಡುವೆ ಇಂದೇ.

" ೩೯ "

"ಸರ್ವಾತ್ಮನೇ ಹರಿಯೆ ನಮಿಸುವೆನು ದೇವಾ,
ಹಿಂದು ಮುಂದುಗಳಿಂದಲಿಯೆ ಎಲ್ಲೆಡೆಯು ಈಗ
ನಮಿಸುವೆನು ಸಾಷ್ಟಾಂಗವೆರಗುತ್ತಲಿ ನಿನಗೆ,
ಅಂತ್ಯವಿಲ್ಲದ ಶಕ್ತಿಯನು ಪೊತ್ತಿಹ ಹೆತ್ತೆ
ಅಪರಿಮಿತವದು ನಿನ್ನ ವೀರತನ ಕೇಳು
ಸರ್ವಾಂತರ್ಯಾಮಿ ನೀನು ವ್ಯಾಪಿಸಿಹೆ ವಿಶ್ವ,

1358

ನಿನ್ನಂಶವೇ ಲೋಕಗಳು ಸರ್ವ ಕೇಳೈ
ಲೋಕಗಳು ಸರ್ವವೂ ನೀನೆಯೇ ನಿಜವೂ!

॥ ೪೦ ॥

"ಹರಿಯೆ ನಿನ್ನನು ಗೆಳೆಯನೆಂದೆನುತ ನಾನು
ಅಜ್ಞಾನ ಅವಿವೇಕದಲಿ ನಿತ್ಯ ನಾನು,
ಬಹುಕಾಲದಾ ಪರಿಚಯದ ಸಲುಗೆಯಿಂದ
ನಿನ್ನ ಲೀಲೆಯ ಚೆಲುವನು ತಿಳಿಯದೆಲೆ ನಾ,
ಕಂಡಿಹೆನೊ ಕರೆದಿಹೆನೊ ಸರಸದಲಿ ನಿನ್ನ,
ಎಲೆ ಕೃಷ್ಣ ಹೇ ಯಾದವನೆ ಎಂದು ಎನುತಾ
ಗೆಳೆತನದ ಎಳೆಯೊಂದು ನಮ್ಮನ್ನು ಕಟ್ಟಿ
ಇರೆ ಕರೆದೆ ಆ ಸಲುಗೆಯಲಿ ಇಂದು ಅಂತೆ!

॥ ೪೧ ॥

"ಓ ಹರಿಯೆ ಅವಿನಾಶಿ ಅಚ್ಯುತನೆ ಕೇಳೈ,
ಕೂಡಿದೆವು ಆಟದಲಿ ಕೂಟದಲಿ ನಾವು;
ಶಯನದಾ ಆಸನದಲಿ ಭೋಜ್ಯದಾ ವೇಳೆ
ಹಿಡಿನಾಡಿ ಅಂತೊಮ್ಮೆ ವಿಹಾರದೊಮ್ಮೆ
ಜನ ನಿಬಿಡ ಪಡೆಯೊಮ್ಮೆ ಎಂದೆನುತಲಂತೆ
ಸರಸದಲಿ ಒಮ್ಮೆ ಪರಿಹಾಸ್ಯದಲ್ಲಿ ಒಮ್ಮೆ
ಅಡಿತವಹ ನಡೆಯನು ಅಗೌರವದಿ ನಾನು
ಉಸುರಿದ್ದರದೆಲ್ಲೊ ದೇವ ಮನ್ನಿಸೈ ಇಂದು!

॥ ೪೨ ॥

"ಏನ್ ಹೇಳಲೆನೊ ದೇವ ಮಹಿಮೆಯನು ನಿನ್ನ
ಚರಾಚರದಿಹ ಲೋಕಗಳಿಗಂತು ಕೇಳೈ!
ನೀನೆ ಪಿತ ನೀನೆ ಗುರು ನೀನೆಯೆ ಪೂಜ್ಯ
ಲೋಕತ್ರಯದೆ ನಿನಗೆ ಸಮನಿಹರು ಯಾರಾ?
ಎಲ್ಲಿಹನು ಯಾರಿಹನು ವಿಶ್ವವಿದರಲ್ಲಿ
ಮೀರಿಹರು ಯಾರಿರುವರೋ ನಿನ್ನನಿಲ್ಲಿ?"
ಎಂದೆನುತ ಅರ್ಜುನನು ಕೈಮುಗಿದು ಮತ್ತೆ
ಶ್ರೀಹರಿಯ ಸ್ತುತಿಸಿದನು ಬೆರಗಾಂತು ನಿಂದು!

॥ ೪೩ ॥

"ಕೇಳಲೈ ಸ್ವಾಮಿ ನೀನ್ ಮೈಬಾಗಿ ನಿನ್ನ
ತುತಿಸುತಿಹೆ ಸರ್ವೇಶ್ವರನೆ ವಿಶ್ವವಂದ್ಯ,
ಪಿತ ಪುತ್ರರವರಂತೆ ಗೆಳೆಯರು ಅಯೆ
ಒಪ್ಪಿನ ಒಪ್ಪುತದಲ್ಲಿ ಇರುವಂತೆ ಜಗದೆ,
ಎಲೆ ದೇವ, ಪ್ರೀತ್ಯಾದರಗಳಿಂದ ತಾಗಿ
ಎನ್ನ ಅಪರಾಧಗಳು ಇದೆನೋಡದು ಕೇಳೈ,

ಮನ್ನಿಸೆಂದಿದೋ ಕೋರುತ್ತಿಹೆನಿಂದು ದೇವಾ,"
ಎಂದೆನುತ ಅರ್ಜುನನು ಬೇಡಿದನು ಹರಿಯ!

" ೪೪ "

"ಅದೃಷ್ಟಪೂರ್ವ ರೂಪವಿದನಿಂದು ನಾನ್ ನೋಡಿ
ಸಂತೃಪ್ತಿಯನು ಹೊಂದಿದೆನು ದೇವನೊಲವಿ,
ಅಂತೆ ದೊಡ್ಡೆಯದು ಮನವು ಭಯವಾಂತು ಕುಗ್ಗಿ
ತಳಮಳಿಸುತಿದೆ ದೃಶ್ಯವದ ಕಂಡು ಹೆದರಿ;
ಹೋ ಹರಿಯೆ, ನಿನ್ನ ಮಾನವ ರೂಪ ಅದನೆ
ಮರಳ ತಂದು ಕಾಣಿಸೈ ಬೇಡುತ್ತಿಹೆನಿಂದೇ;
ಪುಂಡರೀಕಾಕ್ಷ, ನಿನ್ನಯ ಮೋಹರೂಪ
ತೋರುತಲಿ ಅನುಗ್ರಹಿಸು ಮಗುದೊಮ್ಮೆ ಇಂದು!

" ೪೫ "

"ಸಹಸ್ರಾರು ಬಾಹುಗಳಿಂದೊಡಗೊಂಡ ದೇವಾ
ಕಾಣಿಸೈ ನಿನ್ನ ಸುಮನೋಹರ ಸೌಮ್ಯರೂಪ;
ಕಿರೀಟವಿತ್ತಿಹ ಆ ಹೊನ್ ಮಕುಟ ಧರಿಸಿ
ಗದೆ ಚಕ್ರಗಳೊಡೆ ಚತುರ್ಭುಜದಿಂದ ಕೂಡಿ,
ಪರ ವಿಶ್ವವಿನ ಸುಂದರ ರೂಪವನಲ್ಲಿ
ನೋಡಲೆಂದಿಚ್ಛಿಸುವೆ ಹೋ ಹರಿಯೆ ಇಲ್ಲಿ,"
ಎಂದೆನುತ ಫಲ್ಗುಣನು ಅತಿಭಕ್ತಿಯಿಂದ
ಬೇಡಿದನು ಕೃಷ್ಣನನು ಈ ತೆರದಲಾಗ!

" ೪೬ "

"ಹೋ ಪಾರ್ಥ, ನೀನ್ ಮಿತ್ರ ಕೇಳು ನಿನಗೆ ಮಾತ್ರ
ಪ್ರಹರ್ಷಸ್ವರೂಪವಿದ ತೋರಿಸಿದೆನೀಗ;
ತೇಜೋಮಯವಾ ರೂಪ ಅದ್ಭುತ ಅನಾದಿ
ಲೋಕಗಳೆಲ್ಲವದುವೆ ಅತಿ ಉತ್ಕೃಷ್ಟವಾದಿ!
ಅನುಗ್ರಹದ ಅನುಚಿತದಿ ತೋರಿಸಿದೆ ನಿನಗೆ
ರೂಪವಿದನಿದೋ ನನ್ನ ಸಂಕಲ್ಪ ಬಲದಿ
ತೋರಿಸಿದೆ," ಎಂದೆನುತಲಾ ಹರಿಯು ಬಲದಿ
ಅರ್ಜುನನಿಗಿಂತೆಂದು ಹೇಳಿದನು ಕೇಳ್ವೆ!

" ೪೭ "

"ಚಂದ್ರಕುಲದಾ ವೀರ ಪಾಂಡವನೆ ಕೇಳು,
ಬೇರಾರು ಕಾಣದಿಹ ಈ ರೂಪವನ್ನು
ವೇದಾಧ್ಯಯನದಿಂದ ಕಾಣಿಸದು ಅದುವೊ
ಯಾಗ ಯಜ್ಞಾದಿಗಳಿಗದು ಎಟುಕದಿಹುದೊ,
ನೋಡಲು ಅಸಾಧ್ಯವದು ಉಗ್ರ ತಪೋಮಯದಿ;
ಎಲೆ ಪಾರ್ಥ ನೀನಲದೆ ಮಾನವನಿಗಿಹದ

ವಿಶ್ವೇಶ್ವರಾ ರೂಪವಿದನಂತು ನೋಡಿ
ಅನಿದಿಳುವದಿಂ ಬೆದರಿದನು ಫಲ್ಗುಣನೆ ತಿಳಿಯೆನ್ನು!

॥ ೪೮ ॥

"ಭಯಾನಕವಾದೆನ್ನ ರೂಪವಿದ ಕಂಡು
ಭಯತ ಭ್ರಾಂತಿಯಿಂ ಕೊರಗದಿರೆ ಮಿತ್ರ ನೀನು;
ನಿರ್ಭಯತೆದಿ ಸಂಕಲ್ಪ ಬಲದಿ ಮತ್ತೊಮ್ಮೆ
ಸಂತೋಷ ಸಂತೃಪ್ತಿಯಿಂದ ನನ್ನ ನೋಡೆನ್ನೆ,
ಬೃಹದಾಕಾರದ ವಿಶ್ವರೂಪವಿದನೊಮ್ಮೆ
ನೋಡುತ್ತಲಿ ಸಂತೃಪ್ತನಾಗೆಲೆ ಪಾರ್ಥ,"
ಎಂದೆನುತಲಾ ಹರಿಯು ಅರ್ಜುನಗೆ ಅಲ್ಲಿ
ಬೃಹದ್ವಿಶ್ವ ರೂಪವದ ತೋರಿಸಿದನೊಲವಿ.

॥ ೪೯ ॥

ಅಹಹಾ ದೃಶ್ಯವದನರಿಕೆ ದೂರದಿಂದ
ಸಂಜಯತಾನು ನೋಡಿ ನೃಪಗಿಂತೆಂದನಾಗ —
"ವಾಸುದೇವತೆಯೆ ಬೃಹದ್ವಿಶ್ವ ರೂಪವನು ಹರಿಯು
ತೋರಿಸಿ ಕಿರೀಟಿಯತನು ಬೆರಗಾಗಿಸಿದನು;
ಸಂತೃಪ್ತನಾದ ಗೋಪಾಲನರಿಕೆ ಅಲ್ಲಿ
ಆ ತನ್ನ ನಿಜಸೌಮ್ಯ ರೂಪವನೆ ತಾಳಿ
ಭಯವಾಂತ ನರನ ಮನ್ನದಡವುತಲಿ ಮತ್ತೆ
ಶಾಂತಭಾವದಿಂದ ಉಪಚರಿಸಿದನೊ ಒಲವಿ."

॥ ೫೦ ॥

ಇತ್ತ ಕೌಂತೇಯತಾನು ಉಲ್ಲಸಿತನಾಗಿ
ಪೇಳಿದನು ಮುರಹರಿಗೆ ಇಂತೆಂದು ಅಲ್ಲಿ —
"ಹೇ ಜನಾರ್ದನ ನೀನು ಪುಂಡರೀಕಾಕ್ಷ,
ಮಾನವನ ರೂಪನು ಎನಿಯುತಲಿ ನನ್ನ
ದುಗುಡವನು ತಣಿಸಿದೆಯೊ ಹೇ ಹರಿಯೆ ಇಂದು,
ಕೇಳ್ ನಿನ್ನ ಸೌಮ್ಯ ಸುಂದರ ರೂಪವ ಒಲವು
ತುಂಬಿರಿಸುತೆನ್ನನೀ ಸಹಜ ಸ್ಥಿತಿಗಿಂತು,"
ಎಂದೆನುತ ಪೇಳಿದನು ಅರ್ಜುನನು ಅಂದು.

॥ ೫೧ ॥

"ಎಲೆ ಸವ್ಯಸಾಚಿ ಕೇಳ್ ಅಪೂರ್ವದಲದಾರೂ
ಈ ವರೆಗೂ ಕಾಣದಿಹ ಈ ನನ್ನ ರೂಪ
ನೋಡಿದೆಯೊ ನೀನೆ ವಿಶ್ವರೂಪವಿದನಂತು,
ಸುರಲೋಕದಿಹ ದೇವಜರು ಎಲ್ಲ ಬಯಸಿ
ನೋಡಲೆಂದರಿಕೆ ತವಕಿಸುತಲಿಹರು ಕೇಳ್,"
ಎಂದೆನುತ ಸರ್ವೇಶ್ವರಾ ರೂಪ ಕೃಷ್ಣ —

ಶಾಂತವಾಗಿ ಪೇಳಿದ ಮಹಾತ್ಮ್ಯವನು ಕೇಳದೆ,
ಕಂಡೇರಿಯುದಾ ತನ್ನ ಲೀಲೆಯನು ತೋರಿ—
॥ ೫೧ ॥

"ಮನೆಯನು ನೋಡಿದೆಯೊ ಕಾಯವದು ನನ್ನ
ಮನ್ ಬಿಚ್ಚಿದೆಯೊ ರೂಪವದು ಕಂಡು ನನ್ನ
ಕಾಣಲಾರರು ಇದನು ವೈದಿಕರು ಜಗದಿ
ನೋಡಲಾರರು ವಿಶ್ವಯೋಗಿಗಳು ಇಹದಿ,
ಎಲೆ ಪಾರ್ಥನೇ ನನ್ನ ರೂಪವಿದನಿಲ್ಲ
ದಾನ ತಪರ್ಯಾದಿಗಳಿಂದೀಕ್ಷಿಸರು ಕೇಳಾ,
ಯಾಗ ಯಜ್ಞಾದಿಗಳಿಂದಲು ಸಾಧ್ಯವಿಲ್ಲವೊ—
ಇದೆ ನಿರಾಮಯ ವಿಶ್ವೇಶ್ವರ ಕಾಯ ಕೇಳೊ!
॥ ೫೨ ॥

"ಅನ್ ದಲಲಕ್ಷಣನು ಅದೊಡೆಯುಂ ಕೇಳು ನಿಜದಿ
ಮಹಾಪ್ರಾಪ್ತಿಯು ಭಕ್ತಿ ಅವಿಶ್ರಾಂತ ಶ್ರದ್ಧೆ
ನಿಷ್ಠೆಯಿಂದಲಿ ಧ್ಯಾನ ಪೂಜಾದಿಯಿಂದ
ಪರಯೋಗಿಗಳು ತಿಳಿಯು ಬಹುದೆನ್ನ ಕೇಳಾ,
ಅನುಭವಿಸಲಾಕು ನೋಡಲಾಕು ಎಂದು ನನ್ನ
ಸಾಧಕರ ಸಾಹಸಕೆ ಅನ್ ಪಾತಲಭನಿಹೆನಾ—"
ಎಂದೆನುತಲಾ ಹರಿಯು ವಿವರಿಸಿದನಂತೊ
ತನ್ನ ಲೀಲಾ ಯೋಗ ವೈಶಿಷ್ಟ್ಯವದನೊ!
॥ ೫೨ ॥

"ಹೇ ಧನಂಜಯ ನಿನ್ನನೇ ನಿತ್ಯ ಭಜಿಸಿ
ಕರ್ಮಕಾರ್ಯವನಿಯು ನನ್ನ ನಿಷ್ಠೆಯಲಿ ಸಾಲಿಸಿ
ಪರಮ ಪ್ರಾಪ್ಯನು ನಾನೆಯೇ ಎಂದು ತಿಳಿದು
ನನ್ನಲ್ಲಿಯೇ ನಿಷ್ಠೆಯಾ ಭಕ್ತಿಯಿಟ್ಟು
ಲೋಭಮೋಹಾದಿಗಳ ತಾನ್ ಮನದಲಿಡದೆ
ಚರಾಚರ ಜೀವಿಗಳೊಲು ದ್ವೇಷವಿಡದೆ
ಇದ್ದಾತನೇ ನನ್ನ ಸೇರುವನು ನಿಜದಿ,"
ಎಂದನು ಮುರಹರನಂದನಾ ನರನಿಗೊಲಿದೆ!
॥ ೫೪ ॥

—— × ——

(ಹನ್ನೊಂದನೇ ಅಧ್ಯಾಯ ಸಂಪೂರ್ಣವು)

—— × ——

ಅಧ್ಯಾಯ ೧೨ — ಭಕ್ತಿಯೋಗ!

"ಕೇಳುತಿಹೆ ಹೇ ಹರಿಯೆ ನಿಷ್ಠೆಯಿಂ ನಿನ್ನ
ಭಜಿಸುತಿಹ ಭಕ್ತವರರವರೊ ಮೇಲ್?
ಇಂದ್ರಿಯಂಗಳಿಗೆ ಎಟುಕದಿಹ ಅಕ್ಷರಬ್ರಹ್ಮನ-
ಅನವರತ ಬಿಡದೆಯುಪಾಸಿಸುವವರೊ ಪೇಳ್!
ಯೋಗವನು ಬಲ್ಲವರು ಇವರಲ್ಲಿ ಆರ್ಕೈ?
ಭಕ್ತರಲಿ ಜ್ಞಾನಿಗಳಲಾರುಂಟು ಮೇಲ್ತ್ವೆ?"
ಎಂದೆನುತ ಅರ್ಜುನನು ಭಗವಂತನನು
ಕೈಮುಗಿದು ಪ್ರಶ್ನಿಸಿದನೀ ಬಗೆಯೊಳಂದು —!

"೧"

"ಎಲೆ ಕಿರೀಟಿಯೆ ಕೇಳು ನನ್ನಲ್ಲಿ ನಿತ್ಯ
ಬಾಂಧವ್ಯವನು ಬಯಸಿ ನನ್ನಲ್ಲೇ ಮನವ
ನೆಲೆಗೊಳಿಸುತಲಿ ಶ್ರದ್ಧೆಯಿಂ ನಿಜದಿ ನನ್ನ
ಸಗುಣರೂಪ ಆರಾಧಿಸುವವರೊ ನೋಡಾ
ಅವರೆಯೇ ಪರಯೋಗಿಗಳು ಎಂದು ನಾನು
ತಿಳಿಯುವೆನೊ ಅರ್ಜುನನೆ ಕೇಳೆನ್ನನಿಂದು,"
ಎಂದೆನುತ ವಸುದೇವಸುತ ನಂದನಂದನು
ಸಂದೇಹದಿ ನೊಂದ ಪಾಂಡವಗೆ ಅಂದು.

"೨"

"ಬಿಡಿಸಲಾಗದಗಳಲಿ ವಿವರಿಸಲು ಸಾಧ್ಯವಿಲ್ಲದ
ನೆಲೆ ಬೆಲೆಗಳನು ಅರಿಯಲಸದಳವು ಆದ
ಇಂದ್ರಿಯಂಗಳಿಗೆ ಅಗೋಚರವಾಗಿ ಇರುವ
ಜೀವರಾಶಿಗೆ ಜೀವಾಧಾರವಾಗಿರುವಾ
ಸರ್ವದೇಹಿ ಸಮಾನ ಜೀವನಾಧಾರಾ
ಅಚಿಂತ್ಯ ನಿರಾಕಾರವೂ ಅಚಲವಾದ
ಚಿರಂಜೀವವೂ ಸೂಕ್ಷ್ಮವದ ಪೇಳೆಂತಾ —
ಅದೆ ಅಕ್ಷರ ನಿತ್ಯಾಕ್ಷರವೋ ಕೇಳು ಪಾರ್ಥ!

"೩"

"ಇಂದ್ರಿಯಂಗಳನು ಸಂಯಮಿಸಿಯುಂತು ಇಹದಿ
ಸರ್ವಭೂತ ಸಮಾನ ಸಮಶೀಲನಾಗಿ
ಚರಾಚರ ಜೀವಿಗಳ ಹಿತವನ್ನೆ ಬಯಸಿ
ನಿತ್ಯಾಕ್ಷರ ರೂಪನನೆ ನಿತ್ಯವೂ ನಮಿಸಿ
ನಿಷ್ಠೆಯಿಂದಲಿ ನಿಯಮದಲಿ ಪರಮಾಕ್ಷರನನ್ನ
ಆರಾಧಿಸುವವನಾರೊ ಅವನೆನ್ನ ಪಾರ್ಥ

ನೀರುವನು" ಎಂದೆನುತ ಶ್ರೀಹರಿಯು ಹಿಂದೆ
ಹೇಳಿದನು ಫಲ್ಗುಣಗೆ ವಿವರವಾದರದಲಿ!

"೪"

"ಪೃಥಾತನಯನೆ ಕೇಳು, ಅತ್ಯದ್ಭುತನಾದ
ಅದೃಶ್ಯ ಅವ್ಯಕ್ತ ಅಗೋಚರವಿರಲಾ
ಇಂದ್ರಿಯಗಳಿಗೆ ಎಟುಕದಿಹ ಶಕ್ತಿ ಅದನಾ
ಮನದಿ ನೆಲೆಗೊಳಿಸಿ ಧ್ರುವ ಹಿಡಿವ್ರ ಕೇಳ್ ಮಿತ್ರಾ!
ಪರಿಪೂರ್ಣವಹ ದೇಹಗಳಿಗಂತು ನೋಡಾ
ಇಂದ್ರಿಯಕೆ ಗೋಚರವಲ್ಲದ ವಸ್ತುವನ್ನು
ಪಾರಮಾರ್ಥಿಕ ವಿಷಯಗಳ ಮೂಲವನ್ನು
ತಿಳಿಯಲು ಪ್ರಯಾಸವು ಸಾಮಾನ್ಯರಿಗೆ ಕೇಳಾ!

"೫"

"ಯೋಗದಿ ಸಮತ್ವವಹ ಕರ್ಮಗಳನಂತು
ಕರ್ಮಫಲದಾಸೆ ಮನವು ಇಡದೆಯೇ ಸ್ವಾರ್ಥ
ಸರ್ವವನು ನನಗೆಯೇ ಅರ್ಪಿಸುತ ಕೇಳಾ
ನಾನೆಯೇ ಎಲ್ಲದಕು ಮುಖ್ಯನೆಂದೆನುತ
ನನ್ನನ್ನೆ ಅನವರತ ಭಾವಿಸುತಲಿರುವ
ಮನವನ್ನು ಧೀರನಾಗಿ ಹಿಡಿಯದೆಯೆ ನೋಡಾ
ಅಹಿತವಾದುದದನಾಳಿಸದೆ ಇರುತ ನಿತ್ಯ
ಯೋಗಬಲದಿಂದ ನನ್ನನ್ನೆ ಧ್ಯಾನಿಸುತಾ —

"೬"

"ನನ್ನಲಿಯೆ ಮನವಿಟ್ಟು ಭಕ್ತಿಯನು ಇಟ್ಟು,
ಶಕ್ತಿಯೊಡೆ ಮುಕ್ತಿಯನು ಹಿಡಿವ ಗತಿಯಿಟ್ಟು,
ಜೀವನವ ಸಾಗಿಸುವ ಯೋಗಿವರರನಾ
ಕೇಳ್ ಜನನ ಮರಣ ಕೊಳ್ಳಗಾದ ಈ ಭವದ
ಸಾಗರದಿಂದೊಮ್ಮೆಗೆಯೆ ಎತ್ತುವೆನು ಮೇಲೆ,
ನಿಸ್ಸಾರ ಸಂಸಾರದಿಂದ ಆಚೆ ತೋರುವೆ"
ಎಂದೆನುತ ಭಗವಂತ ಯೋಗದಾತ ಮೂರ್ತಿ
ಹೇಳಿದನು ಫಲ್ಗುಣಗೆ ಅದೆ ಯೋಗ ಭಕ್ತಿ!

"೭"

"ಕೇಳೆಲೊ ಕಿರೀಟಿ ನೀನ್ ಬಾಳ್ ಇದರ ಗೋಳು,
ತಪ್ಪಿದಲು ಅದರಿಂದ ಸ್ಥಿರದಿ ಮನವನು
ಬುದ್ಧಿಯನು ನಿಧಿಯನು ನನ್ನಲಿಯೆ ಇರಿಸು
ಧ್ಯಾನಿಸುವ ನನ್ನಲಿಯೆ ನಿತ್ಯ ನೆಲೆಗೊಳಿಸು—
ಅಂತಾದೊಡೆಯು ನೀನು ಸಂದೇಹವಿಲ್ಲದೆ
ನೀನು ಇರುವಿಯೊ ನನ್ನನ್ನು ನಿಶ್ಚಯದಿ ಹೇಳುವ,"

ಎಂದು ಪರಮಾತ್ಮ/ತತ್ತ್ವ ಸಾಕ್ಷಿಯನು ಅರಿಯಲು
ಹೇಳಿದನು ಪಾಂಡವನಿಗೊಲವಾಂತು ಅಂದು!

॥ ೮ ॥

“ಮನದ ಚಂಚಲತೆ ಚಪಲತೆಗಳನ್ನು ಸೇರಿ
ದಿಗ್ಭ್ರಾಂತಿಗೊಳಗಾಗಿಸದ ಮನವನ್ನು
ನನ್ನಲಿಯೆ ಸ್ಥಿರವಾಗಿ ನೆಲೆಗೊಳ್ಳು ಮತ್ತೆ
ಯುಕ್ತಿಹಿಡಿದು ‘ಅಂತಾಗದೊಡೆ ಕೇಳ್ತೆ ಮತ್ತೆ
ಹಗಲಿರುಳು ಜಪತಪಗಳಭ್ಯಾಸದಿಂದ
ಮನವನ್ನು ನನ್ನೆಡೆಗೆ ತಿರುಗಿಸಲು ಎನುತಾ—
ಕಡೆಗಂತು ನನ್ನನ್ನೆ ಸೇರಲಿಂದಂತು
ಯುಕ್ತಿಗೆ ಶಾಂತಿಯು ಅದೆ ಗಾಂಡೆ ಗಟ್ಟು!

॥ ೯ ॥

“ಈ ಬಗೆಯು ಯೋಗದ ಅಭ್ಯಾಸವನು ನೀನು
ಸಾಧಿಸೆ ಅಸಾಧ್ಯವೆಂದಾದೊಡೆಯು ಕೇಳು,
ನನ್ನನೆ ಉದ್ದೇಶಿಸುತ್ತ ನಡೆಸುತ್ತಿರು ಕರ್ಮಗ-
ಳೆಲ್ಲವನು ನನಗೆಂದೆ ಅರ್ಪಿಸುತ್ತ ಮಿತ್ರ—
ಹೀಗೆ ಸಾಗೆ ಕರ್ಮಾನುಚರ್ಯೆಯಲಿ ಬುದ್ಧಿ,
ನಿಷ್ಠೆವೆತ್ತಾ ಕರ್ಮದಲಿ ಮನಸ್ಸೊಂತಿದ್ದು
ಎಂದೆನಿಸ ನಡೆಸೆ ನಿಷ್ಠೆಯು ತಪ್ಪೋಗದೆ,
ಹೊಂದುವೆಯೊ ನಿಜದಿ ಪರಲೋಕ ಸಮೃದ್ಧಿ!

॥ ೧೦ ॥

“ಕರ್ಮವನು ಕರ್ಮಾನುಚರ್ಯೆಗನುವಾಗಿ
ನಡೆಸಲಾಸಕ್ತಿಯೇನಿಲ್ಲದೊಡೆ ಇರಲಿ,
ಪರಮೋನ್ನತಾ ಭಕ್ತಿಯೋಗವನೆ ಹಿಡಿದು
ನನ್ನನ್ನೆ ಆಶ್ರಯಿಸು, ಮಳಿತಿತ್ತೆ ಸಾಳು;
ಹೀಗೆ ಸಾಂತವನೆ ಕೇಳು, ಮನವ ನಿಗ್ರಹಿಸಿ
ನನ್ನಲಿಯೆ ಭಕ್ತಿಯನು ಶ್ರದ್ಧೆಯನು ಇರಿಸಿ
ಸಾಯುಜ್ಯದಾ ರಾಜ್ಯವನ್ನೆ ಪಡೆಯೊ ಇಲ್ಲಿ
ಕರ್ಮಫಲದಾಸೆಯನು ತ್ಯಜಿಸುವಲಿ ಪಾರ್ಥ!

॥ ೧೧ ॥

“ಹೇ ಸವ್ಯಸಾಚಿ ನೀನ್ ಸಾಧಿಸುವಭ್ಯಾಸ,
ಅದಮೀರಿ ಇರುವುದೆಲ್ಲೆ ಜಗದಿ ವಿಜ್ಞಾನಾ—
ಜ್ಞಾನವದ ಮೀರಿಹುದು ಧ್ಯಾನವೈ ಮಿತ್ರ
ಧ್ಯಾನವದರಿಂ ಮೇಲು ನಿಷ್ಕಾಮ ಕರ್ಮ!
ಕರ್ಮಫಲದಾ ತ್ಯಾಗವದೆ ಮೇಲಕೆ ತ್ಯಾಗ
ಅದರಿಂದೆ ಶಾಶ್ವತವಹುದು ವಿಷಯದ ವಿರಕ್ತಿ,

ನಿಜವನು ವಿರಕ್ತಿ ರೂಪಾಂತ ಮನಸ್ಥಿತಿ
ಸಿಡಿಗುಡಿ ಸಿಡಿಗಿಲದೆ ಪರಮಾರ್ಥ ಶಕ್ತಿ!

"೧೩"

"ವಿಶ್ವದ ಸಮಸ್ತವಾದ ಜೀವಿಗಳಲ್ಲಿ
ದ್ವೇಷವನು ದ್ರೋಹವನು ಅರಿಯದೆ ಇರುವ,
ಸ್ನೇಹವನು ಪ್ರೇಮವನು ಮನಸಾರೆ ತೋರಿ
ಅಹಂಕಾರ ಮಮಕಾರಗಳ ಪೂರ್ತಿ ತ್ಯಜಿಸಿ,
ಸುಖದು:ಖಗಳನು ಸಮವೆಂದೆನಿಸಿ ನಿತ್ಯ
ಸಹನೆಯಲಿ ಸಹಜದಲಿ ಸಹ-ದಿವ್ಯತ್ವವನ್ನು
ಅನುಸರಿಸಿ ಬಾಳುತಿಹ ಭಕ್ತವರನಾರಾ —
ಅವನೆಯೇ ನನಗೆ ಪ್ರಿಯ ಸಹೃದಯ ಗೆಳೆಯ!

"೧೪"

"ತನಗೆ ಒದಗಿದುದರಲಿ ತಾನು ಸಂತೃಪ್ತನಾಗಿ
ಆತ್ಮಸ್ವರೂಪವನು ಅನುಸಂಧಿಸುತಲಿ,
ಮನೋನಿಗ್ರಹವನ್ನು ಮನಸಾರೆ ತಾಳಿ
ನಿಶ್ಚಯದ ಮನವನೆನ್ನಲ್ಲಿ ನೆಲೆಗೊಳಿಸಿ
ಶಾಸ್ತ್ರಾದಿಗಳಲಂತು ಶ್ರದ್ಧೆಯನು ಇಟ್ಟು
ನನ್ನಲಿಯೇ ಮನಸ್ಸನ್ನು ಬುದ್ಧಿಯನು ಇಟ್ಟು
ದೈವಾಭಿಮಾನಿಯಹ ಭಕ್ತನವನಾರಾ —
ಅವನೆಯೇ ನನಗೆ ಪ್ರಿಯ ಸಹೃದಯ ಗೆಳೆಯ!

"೧೫"

"ತನ್ನಿಂದ ಜನರು ಭಯಪಡದೆಯೇ ಇರುವ
ತಾನ್ ಇತರರಿಗೆ ಹೆದರದೆಯೆ ನಿರುತ ಇರುವ
ಜೀವನವೆ ಸಾತ್ವಿಕವು ಧಾರ್ಮಿಕವಿರುವ
ಸುಖವು ಸಂತೋಷ ಭಯ ಕ್ರೋಧಾದಿಗಳಿಗೆ —
ಷಡ್ವೈರಿಗಳಿಗಂತು ಬಲಿಯಾಗದಿರುವ
ಮನಸ್ಸನ್ನು ಕದಡಿಸದೆ ಕ್ಷಮಿತದಲಿ ಇಡುವ
ನಿರ್ಮಲ ಮನೋಭಾವದಾ ಭಕ್ತನಾರಾ —
ಅವನೆಯೇ ನನಗೆ ಪ್ರಿಯ ಸಹೃದಯ ಗೆಳೆಯ!

"೧೬"

"ಆತ್ಮದಾ ಶುದ್ಧಿಯನೆ ಸಾಧಿಸುತ ನಿತ್ಯ
ವಿಷಯದ ವಸ್ತುಗಳಲಾಸೆಯನು ಇಡದಾ
ಶತ್ರುಗಳು ಮಿತ್ರರವರೆಲ್ಲರನು ಸಮದಿ
ಕಾಣುತಿಹ ಸಾಮರಸ್ಯದಾ ವೀರತನದಿ
ಸುಖದು:ಖಗಳ ಜಯಿಸಿ ಶಾಸ್ತ್ರಾದಿಗಳನು
ವಿಧಿ ನಿಯಮಕನುವಾಗಿ ನಡೆಸುತಲಿ ಅನು

ನಿಷ್ಪಕ್ಷಪಾತದ ಮತಿಶುದ್ಧ ಭಕ್ತನಾರೋ—
ಅವನೆಯೇ ನನಗೆ ಪ್ರಿಯು ಸಹೃದಯು ಗೆಳೆಯು!
॥ ೧೬ ॥
"ಹೇ ಧನಂಜಯ ಕೇಳು, ಇಹದಲಿ ಉದಾರ
ಶುಭವು ಸಂತೋಷಗಳನ್ನೆಂತೆಯೇ ತಾನು,
ದುಃಖ ದ್ವೇಷಾದಿಗಳ ತಾಳದೆಯೇ ಇದ್ದು,
ಶುಭಾಶುಭಗಳೆಲ್ಲವನು ಸಮದಿ ಕಂಡು
ಆಸೆಯನು ಮೋಹವನು ತಾನ್ ತೊರೆದು ಕೇಳ್
ನಿರ್ಲಿಪ್ತ ಜೀವನವ ನಿವರ್ಣವತ್ತೆಯಿಂದ
ಸಾಗಿಸುತಲಿರುವನೇ ಇಹ ಭಕ್ತನಾರೋ—
ಅವನೆಯೇ ನನಗೆ ಪ್ರಿಯು ಸಹೃದಯು ಗೆಳೆಯು!
॥ ೧೭ ॥
"ಕೇಳ್ ಧನಂಜಯನೆ ಇನ್ನೇನ್ ಹೇಳಲೇನು?
ಹಗೆ - ಗೆಳೆಯರನು ಸಮದಿ ಕಾಣುತಲಿ ನಿತ್ಯ
ಮಾನ ಅಪಮಾನವನು ಶೀತೋಷ್ಣಗಳನು
ದುಃಖ ಸುಖಾ ದ್ವಂದ್ವಗಳ ಸಮನೆ ಕಂಡು,
ಸಮಭಾವ ಸಮದೃಷ್ಟಿಯಲಿ ಬಾಳ್ವೆ ನಡೆಸಿ
ಮನಮೋಹಕ ವಸ್ತುಗಳ ಆಸೆಯಲ್ಲಿ
ನಿರತನಾಗದ ನನ್ನ ಭಕ್ತವರನಾರೋ—
ಅವನೆಯೇ ನನಗೆ ಪ್ರಿಯು ಸಹೃದಯು ಗೆಳೆಯು!
॥ ೧೮ ॥
"ಎಲೆ ಕೌಂತೇಯನೆ, ಜಗವಿಖ್ಯಾತಿಯಿಂದಿರಲು
ನಿಂದನೆಯು ಹೊಗಳಿಕೆಗಳನು ಸಮದಿ ಕಂಡು
ಇದ್ದುದರಲೇ ತಾನು ಸಂತೃಪ್ತನಾಗಿ
ಲೋಕವನು ಮೌನದಲಿ ಎದುರಿಸುತ ಮುದದಿ
ಶುದ್ಧಾತ್ಮದವನಲ್ಲದೆಯು ಬೇರೆ ಮನೆ
ಇಚ್ಛಿಸದೆ ಸ್ಥಿರಬುದ್ಧಿಯಲಿ ನಿತ್ಯ ತಾನು
ನನ್ನಲ್ಲಿ ಮನವಿಟ್ಟ ಮಹಭಕ್ತನಾರೋ
ಅವನೆಯೇ ನನಗೆ ಪ್ರಿಯು ಸಹೃದಯು ಗೆಳೆಯು!
॥ ೧೯ ॥
"ಫಲಗಳನೆ ಕೇಳಲಿಲ್ಲ, ಧರ್ಮವನೆ ನೆಚ್ಚಿ,
ಅಮೃತ ಸಮಾನವಹ ಶ್ರದ್ಧೆಯದ ಭಕ್ತಿ—
ಅತಿ ಪ್ರಿಯವಾ ಭಕ್ತಿಯೋಗವ ಜನರಲ್ಲಿ
ಆನ್ ಹೇಳಿದೊಲು ನಿಷ್ಠೆಯಲಿ ನಿತ್ಯ ನಡೆಸಿ,

ನನ್ನನ್ನೆ ದಿನರಾತ್ರಿ ಗತಿಯೆಂದು ನಂಬಿ,
ನನ್ನಲ್ಲಿ ಶ್ರದ್ಧೆಯನು ಅನವರತ ವಿರಿಸಿ
ಪೂಜಿಸುವ ಪೂಜ್ಯನವನಾ ಭಕ್ತನಾರ —
ಅವನೆಯೇ ನನಗೆ ಪ್ರಿಯ ಸತ್ಪುರುಷ ಗೆಳೆಯಾ!"

॥ ೨೦ ॥

(ಹನ್ನೆರಡನೇ ಅಧ್ಯಾಯ ಸಂಪೂರ್ಣವು.)

ಅಧ್ಯಾಯ ೧೩ — ಪ್ರಕೃತಿ ಪುರುಷ ಯೋಗ!

"ಹೇ ಕೇಶವಾ, ಪ್ರಕೃತಿ ಪುರುಷರಾರು?
ಕ್ಷೇತ್ರ - ಕ್ಷೇತ್ರಜ್ಞ ಜ್ಞಾನವು ಜ್ಞೇಯವೇನು?"
ಕೇಳಲಿಂತು ಅರ್ಜುನನು ಹೇಳಿದನು ಕೃಷ್ಣ:
"ಕೌಂತೇಯ, ದೇಹವಿದಾತ್ಮದ ಭೋಗಸ್ಥಾನ,
ಅಂತಿರಲು ಅದೆ ಕ್ಷೇತ್ರ, ಕೇಳಿಲ್ಲಿ ಮಿತ್ರ;
ದೇಹಾತ್ಮಗಳ ರೂಪ ಅರಿತವನು ಆರ —
ಕ್ಷೇತ್ರವಿದರ ಸೂತ್ರ ತಿಳಿಯುವವನಾರ —
ಅವನೆ ಕ್ಷೇತ್ರಜ್ಞನೆಂದೆನ್ನುವುದು ಲೋಕ! *

॥ ೧ ॥

"ಎಲೆ ಕಿರೀಟಿಯೆ ಕೇಳು, ಹೇಳುತಿಹುದನ್ನು —
ಕ್ಷೇತ್ರಗಳಲಿಹ ಸರ್ವ ಕ್ಷೇತ್ರಜ್ಞರಲ್ಲಿ
ನಾನ್ ಇಹೆನು ಅಂತರಾತ್ಮನ ರೂಪಿಯಾಗಿ,
ಗಹನವಿದನೆಲ್ಲ ಸಖನೆ ತಿಳಿಯಲಿಹೆ ಇಲ್ಲಿ;
ದೇಹ ದೇಹಾತ್ಮಗಳೆ ಕ್ಷೇತ್ರ ಕ್ಷೇತ್ರಜ್ಞರೆನ್ನೆ
ಇದನರಿಯುವುದೆ ಜ್ಞಾನವೆಂದೆನ್ನಿಸೆ ನಿಜವೆನ್ನೆ"
ಎಂದನು ಗೋವಿಂದ ಪ್ರಕೃತಿ - ಪುರುಷ ಯೋಗ —
ಇದನೆ ಅತಿ ಸೂಕ್ಷ್ಮದಲಿ ವಿವರಿಸಿದನಾಗ —!

॥ ೨ ॥

* ಈ ಪದ್ಯಭಾಗದ ಮೊದಲ ಎರಡು ಪಂಕ್ತಿಗಳ ಭಾವವು
ಮೂಲದಲ್ಲಿ ಬಂದು ಪ್ರತ್ಯೇಕ ಶ್ಲೋಕವಾಗಿ ಕೆಲವೆಡೆ ಸೇರಿಸ
[illegible]

"ಕ್ಷೇತ್ರವದು ಆವುದದು? ಅಂತೆಂದೆನಿಸಿದು?
ಎಂತಹುದದು ಕ್ಷೇತ್ರವದು ಪರಿಣಾಮಿಸದೆಂತು?
ಕ್ಷೇತ್ರವದರ ಉತ್ಪತ್ತಿ ಮೂಲವದು ಏನು?
ರೂಪವದು ಎಂತಹಾ ಕ್ಷೇತ್ರಜ್ಞನಾರು?
ಕ್ಷೇತ್ರಜ್ಞನಾ ಶಕ್ತಿ ಹಿರಿಮೆಯುವು ಏನು?—
ಎಂಬಿವೆಲ್ಲವನು ಸಂಗ್ರಹಿಸಿ ನಾನು
ಹೇಳುವೆನು ನಿನಗಿಂದು ಮುಂದುವರಿಯುತ್ತ"
ಎಂದೆನುತ ಹೇಳಿದನು ಶ್ರೀಕೃಷ್ಣನಂದು.

|| ೨ ||

"ಋಷಿವರ್ಯರು ವಿಷಯವಿದು ಎಲ್ಲವನು ಹಲವು
ರೀತಿಯವರರು ಛಂದೋವೇದಗಳಲ್ಲಿ ಅಂದೇ
ವಿವಿಧರೀತಿ ಶಾಸ್ತ್ರೀಯ ಸಿದ್ಧಾಂತಗಳಲ್ಲಿ
ಹೇಳಿಹರು ವಿವರಿಸಿಹರಿದನೆಲ್ಲ ನೋಡಾ.
ಹೇ ಮಿತ್ರ ಕೇಳು, ನಿರ್ಣಯವಾಗಿ ಅಂದು
ಸಿದ್ಧಾಂತವಾಗಿರುವ ವೇದಾಂತಗಳುವು
ಬ್ರಹ್ಮಸೂತ್ರಗಳು ಸಲಕ್ಷಣಗಳಲ್ಲಿ
ದೇಹಾತ್ಮರ ವಿಷಯ ಪ್ರತಿಪಾದಿಸಿಹುದಾ—

|| ೪ ||

"ಮನದೇನವು ಶಕ್ತಿ! ನೆಲ ಜಲವು ಅಗ್ನಿ
ನಭ ವಾಯುಗಳು ಪಂಚಭೂತಗಳು ಸೃಷ್ಟಿ!
ಅಹಂಕಾರ ಬುದ್ಧಿಯು ಅವ್ಯಕ್ತ ಪ್ರಕೃತಿಯು,
ಪಂಚೇಂದ್ರಿಯಗಳೊಡೆಯ ಜ್ಞಾನೇಂದ್ರಿಯಗಳು,
ಶಬ್ದ ರಸ ರೂಪ ಗಂಧಾದಿ ವಿಷಯಗಳು,
ಚರಾಚರ ವಸ್ತುಗಳು ಭೂತಗಣಗಳುವು
ಬೃಹತ್ ಪ್ರಕೃತಿಯು ಅಂಶವವು ಎಲ್ಲ ನಿಜವೋ,
ಲೋಕಗಳು ಬಂಧಿಸಿಹ ಶಕ್ತಿಗಳು ಹಲವೋ—

|| ೫ ||

"ಎಲೆ ಪಾರ್ಥ ಕೇಳ್, ತತ್ವದಾ ಅರ್ಥವನ್ನು
ಕ್ಷೇತ್ರವೆಂಬಿಹ ದೇಹದಾ ಮಾಟವದನಾ—
ಕೇಳ್ ಇಚ್ಛೆಯೂ ಆಗೆ ಮದ ದ್ವೇಷಗಳುವೋ
ಕಾಮ ಕ್ರೋಧಾದಿಗಳ ಪರಿಮಾಣವೆಂತೋ,
ಸುಖ ದುಃಖವವು ಹಲ ವಿಕಾರಗಳು ಮನಸು,
ಜೀವಕೆ ಆಧಾರವಾಗಿಹ ಧೃತಿ ಕಾಂತಿ!
ಇವೆಲ್ಲದರ ಕಲಸು ಮೇಲೋಗರವದುವೆ
ಕ್ಷೇತ್ರವೆಂದೆಂಬಯಾ ದೇಹವಿದು ತಿಳಿಯೆಂದು!

|| ೬ ||

"ಮದ ಅಹಂಕಾರಗಳಂ ಹಿಂಗಿಸಿ ಕೃತ್ಯ
ಷಡ್ವೈರಿ ಪ್ರೇರಿತಾ ಕೀನಕಾರ್ಯ,
ದುರ್ಜನಸ್ನೇಹವನು ತ್ಯಜಿಸಿ ಸತ್ಸಂಗಗಳ ಸೇರಿಸಿ
ತಾಳ್ಮೆಯೊಡೆ ತ್ರಿಕರಣಗಳ ಶುದ್ಧಿ ಬೆಳೆಸಿ,
ಗುರುವು ಆಚಾರ್ಯರನು ಭಕ್ತಿಯಿಂ ಕಂಡು
ಮನೋವಾಕ್ಕಾಯ ಶುಚಿ ಸ್ಥೈರ್ಯವನು ತಂದು
ಮನೋನಿಗ್ರಹದ ಬಗೆ ಮನನವಾದಂತೆ ದುಡಿಯೆ
ದೇಹವನು ಕ್ಷೇತ್ರದಂತಾಗಿಪುದೆ ಬಾಳ್ವೆ !

॥ ೭ ॥

"ಆತ್ಮಬಲ ಸಮೃದ್ಧಿಗೊಪ್ಪುವ ನೀತಿ,
ಉಚಿತವಾದುದರಲನಾಸಕ್ತಿಯುಳ್ಳ ವಿರಕ್ತಿ,
ಅಹಂಕಾರ ಮಮಕಾರಗಳನೆಲ್ಲ ತೊರೆದು
ಈ ಜನನ ಮರಣಗಳ ಗಹನವೆನಿಸುತ
ವ್ಯಾಧಿಗಳಂ ಬಾಧೆಗಳಂ ಮುಪ್ಪು ಮೊದಲಾಗಿ
ಹಲತೆರದ ಮನೋರೋಗಗಳಂ ಆದಿಯಾಗಿ
ದುಃಖವನು ಕೊರೆಯುವುದು ಕಡಿಸುವುದು ನಿಜವು
ದೇಹವೆಂಬೀ ಕ್ಷೇತ್ರವನೆ ಕೊರಗಿಸುವುದು।

॥ ೮ ॥

"ಲೌಕಿಕ ವಿಷಯಗಳಲಾಸೆಯನು ಬಿಟ್ಟು
ಸತಿಸುತರುಮೆಂಬ ಮೋಹವನು ತೊರೆದು
ಮನೆಮಠಗಳೂ ಆಸ್ತಿಪಾಸ್ತಿಗಳಂ ಎಂದು
ಸಿರಿ ಸಂಪತ್ತಿಯ ಮದಲೋಭವನು ಬಿಟ್ಟು
ಇಷ್ಟಾನಿಷ್ಟಗಳಲ್ಲಿ ಸುಖದುಃಖದಲ್ಲಿ
ಸಮದೃಷ್ಟಿ ಸಮಬುದ್ಧಿಯನು ಹೊಂದುತಲಿ
ಯೋಗಿ ಸಮ ತ್ಯಾಗಿ ಕೇಳ್ ದೇಹಾತ್ಮಭೋಗಿ —
ಎಂಬಂತೆ ಪಾರಮಾರ್ಥಿಕ ಶೀಲನಾಗಿ —

॥ ೯ ॥

"ಕೇಳ್ ಎಲೆ ಶಿಷ್ಯನೆ, ನಿಶ್ಚಲತೆಯಿಂ ಭಕ್ತಿ
ದೃಢಮನದಿ ಸಾಧಿಸುತಲಿ ತಪೋಶಕ್ತಿ,
ದಿನರಾತ್ರಿ ಜನಸಂಪರ್ಕವನಂತು ಬಿಡುತ
ಏಕಾಂತವಾಸದಲಿ ಸುಮಾರ್ಗಿಯೋಗಿ —
ಬೇರಾವುದನು ಮನಕ್ಕೆ ತಾರದೆಯೆ ಅಂತು
ಲೌಕಿಕ ವಿಷಯಗಳಲಾಸೆಯನು ತೊರೆದು
ನಿಶ್ಚಲಿಯೆ ಮನವ ನೆಲೆಗೊಳಿಸಿ ತಾನಂತು
ಬಾಳುವುದೆ ಬದುಕಿಗಿಹ ಆನಂದವದುವೊ !

॥ ೧೦ ॥

"ತನ್ನ ತಾನ್ ತಿಳಿಯುವುದೆ ಜೀವಾತ್ಮ ಜ್ಞಾನಾ,
ಸ್ಥಿರ ಬುದ್ಧಿಯಿಂದ ಪಡೆಯುವ ಅದೆ ಆತ್ಮಜ್ಞಾನ,
ಶಾಸ್ತ್ರ ಗ್ರಂಥಗಳ ಪಠಣ ಮನನತತ್ತ್ವದಿ ಪಡೆದ
ಆತ್ಮ ತತ್ತ್ವದ ಅರಿವೆ ಅದಿಜ್ಞಾನ ತಿಳಿಯಾ —
ಅದ್ವೈತ ಪರಮಾತ್ಮ ಜೀವಾತ್ಮವೆರಡರಾ
ಗಹನವನು ತಿಳಿಯುವುದೆ ಪರವಿದ್ಯಾ ಜ್ಞಾನ —
ಇದನರಿದು ಇದಕೆ ಪ್ರತಿಯಾಗಿಹುದು ನೋಡಾ
ಅಜ್ಞಾನವೆಂದೆನಿಪ ಕಾರಣವಹುದು ಜಗವಾ!

॥ ೧೧ ॥

"ತಿಳಿಯುವುದು ವಿದ್ಯೆ ಪದಾವುದು ಜಗದಿ ಸತ್ಯವೆ,
ಅದನರಿತು ಚಿರ ಸುಖದ ನಿಜವ ಮೋಕ್ಷವನ್ನು
ಪಡೆಯಲು ಕಾರ್ಯವಾದ ಆತ್ಮ ಸ್ವರೂಪ
ತಿಳಿಸುವ ವಿವರವನು ನಿನಗೆ ಶಿಷ್ಯನೆ ಕೇಳಾ;
ದಿವ್ಯಾತ್ಮ ರೂಪ ಕಾಣದಿಯದು ಅಂತ್ಯವಿಲ್ಲ,
ಕೇಂದ್ರವದ ಕಾಣಿಸುವ ಅದೆ ಜ್ಞೇಯವು ಕೇಳಾ;
ಕಾರ್ಯ ಕಾರಣವೆನಿಪ ಸತ್- ಅಸತ್ತಿದಲ್ಲ
ಪರಬ್ರಹ್ಮನೇ ಜ್ಞೇಯವೆಂದೆನಿಸಿರುವುದಂತಾ!

॥ ೧೨ ॥

"ಸಿದ್ಧಾತ್ಮ ರೂಪವಹ ಜ್ಞೇಯವದು ಕಾಣುವುದು
ಎಲ್ಲೆಡೆಯು ಕೈಕಾಲು ಮುಖವು ತಲೆ ಕಣ್ಣು,
ಕಿವಿಯಾದಿ ಅಂಗಗಳು ವಿಷಯೇಂದ್ರಿಯಗಳೊ
ಕಾರ್ಯ ಕರ್ಮಗಳಾದಿ ನಡೆಸುತಿಹುದವೊ,
ಅಂಗಾಂಗಗಳು ಸರ್ವ ಲೋಕವ್ಯಾಪಕವೊ
ಸೃಷ್ಟಿಯನು ಸಂತುಷ್ಟಿಗೊಳಿಸುತಿಹುದವೊ —"
ಎಂದೆನುತಲೆ ವ್ಯಾಪಕವು ಆಗಿ ಇರುವ
ಸಿದ್ಧಾತ್ಮ ರೂಪವನು ವಿವರಿಸಿದ ಕೃಷ್ಣಾ!

॥ ೧೩ ॥

"ಜ್ಞೇಯವು ಸರ್ವೇಂದ್ರಿಯಗಳ ಗುಣಗಳನ್ನು
ಗ್ರಹಿಸುವುದು ಇಂದ್ರಿಯಗಳಿಲ್ಲದೆಯು ಕೇಳು;
ದೈಹಿಕ ಸಂಬಂಧವಿಲ್ಲದೆಯು ಅದುವೊ
ಸರ್ವ ದೇಹಗಳನ್ನು ಧರಿಸುವುದು ನಿಜವೊ;
ಸತ್ವ ರಾಜಸ ತಮೋಗುಣಗಳೇನಿಲದೆ
ಸರ್ವ ಗುಣಗಳನು ಅದು ಅನುಭವಿಸುತಿಹುದು,
ಸರ್ವವನು ಪೊರೆವ ಸರ್ವೇಶ್ವರನೆ ಜ್ಞೇಯವು —
ಎಂಬುದನು ತೋರಿಸುತಲಿಹುದೀ ಪ್ರಮೇಯವು!

॥ ೧೪ ॥

"ವಿಶ್ವದಿಹ ಸರ್ವಸ್ವವಾ ವಸ್ತುಗಳಲಿ
ಒಳ ಹೊರಗು ಮೇಲ್ ಕೆಳಗು ಇರುವನವನಲ್ಲಿ;
ಚರಾಚರದೆಡೆಗೆ ಜೀವವೆ ಆತ್ಮವಾಗಿ
ಅತಿ ಸೂಕ್ಷ್ಮದಲಿ ಅರಿಗರಿಯದೊಲು ಅಡಗಿ,
ಅಪ್ರತ್ಯಕ್ಷನಾಗಿಹನೊ ತಿಳಿಯಲದು ಅಸಾಧ್ಯ
ಅಜ್ಞಾನಿಗಳಿಂದವನು ದೂರದಲಿ ಇಹನಾ;
ಜ್ಞಾನಿಯು ಸಮೀಪದಲಿ ಜ್ಞೇಯ ಮನದಿಹನು,
ಪರಮಾತ್ಮನಾ ಮಹಿಮೆಯಾ ರೂಪ ಅವನು!

" ೧೫ "

"ಜೀವಿಗಳು ವಿವಿಧಾಕಾರದಿ ಇರ್ದೊಡಂತು
ಅವುಗಳೊಳಗಿಹ ಆತ್ಮದಾಕಾರ ಒಂದು;
ಪಂಚಭೂತಿಕ ದೇಹಗಳು ಹೊತ್ತು ಆತ್ಮ
ಜೀವಿಗಳು ನಲಿವುದು ಕಾಣುವುದು ಕೇಳು!
ಜ್ಞೇಯವೆಂಬಾ ಸರ್ವೇಶ್ವರ ಮಾಯೆ ಅದುವೊ
ಹೀಗೆ ಸಾಧ್ಯ ಚಿತ್ ಶಕ್ತಿಯಾ ಯುಕ್ತಿ ಅದುವೊ;
ಸೃಷ್ಟಿ ಸ್ಥಿತಿ ಲಯಕಾರಕವೊ ಆತ್ಮ ತಿಳಿಯಾ
ಅದೆ ಜ್ಞಾನ ವಿಷಯಾಂತ ವಸ್ತುವೆಂದೆನಿಸಾ!

" ೧೬ "

"ಆತ್ಮವದು ತೇಜೋಸ್ವರೂಪಿಯವನಿಹದಿ
ಜ್ಯೋತಿ ಮಂಡಲ ರಾಶಿ ಜ್ಯೋತಿಯದನು ಮೀರಿ;
ತಮಸಿನ ವಸ್ತು ಭೇದಿಸುವ ಪ್ರಕಾಶಿಸುತಿಹನಾತ್ಮ
ಜ್ಞಾನದ ಪ್ರತೀಕವಾಗಿ ಸೆಳೆಯುತಿಹನಂತಾ!
ಚರಾಚರ ಜೀವಿಗಳ ಹೃನ್ಮಂಡಲದಲಿ
ನೆಲೆಸಿಹುದು ಆ ಜ್ಯೋತಿ ಅದೆ ಪರಂಜ್ಯೋತಿ!
ಅದೆ ಆತ್ಮನಾ ಪ್ರತಿಬಿಂಬ ಅದುವೆ ಕೇಳು ಜೀವಾ
ನೆಲೆಗೊಂಡ ಪರಮಾತ್ಮನಾಸ್ಥಾನ ಮಂದಿರವಾ!

" ೧೭ "

"ಆತ್ಮವದು ನೆಲೆಗೊಳ್ಳುವ ಸ್ಥಾನವದು ಕ್ಷೇತ್ರ
ಕ್ಷೇತ್ರವದನಾಳುತಿಹ ಶಕ್ತಿಯದೆ ಜ್ಞೇಯ—
ಸೂಕ್ಷ್ಮವಿದನರಿಯುವುದೆ ಜೀವಾತ್ಮ ಜ್ಞಾನ
ಸಂಗ್ರಹದಿಂದ ಹೇಳಿದೆನು ನಿನಗೆ ಪಾರ್ಥ!
ನನ್ನನ್ನೆ ನಂಬುತಲಿ ತತ್ವವಿದನರಿತು
ಅರಿಹನೊ ನೀರವನವನೆ ಸೇರುವನೆ ನನ್ನ;
ನನ್ನಂತೆಯೇ ಭಾವ ಸ್ವಭಾವವನು ನಿಜದಿ
ಹೊಂದಲದನರ್ಹತೆಯು ಪಡೆಯುವನು ಕಡೆಗೆ!

" ೧೮ "

"ಅರ್ಜುನನೆ, ವಿಶ್ವದ ಅನಾದಿಯಾದ ಶಕ್ತಿ
ಆದ ಪ್ರಕೃತಿಯು ರೂಪವಾ ಕ್ಷೇತ್ರದಲ್ಲಿ,
ಅಂತೆಯೆ ಪುರುಷ ರೂಪವನು ಪೊತ್ತ ಆತ್ಮ
ಆದರಿಂದೆಯೆ ಚರಾಚರ ದೇಹಗಳಲಿರುವ
ಪ್ರಜ್ವರಿ ಪ್ರೇರಿತ ಮನೋವಿಕಾರಗಳು
ಮೋಕ್ಷ ಸದಾ ಹಿತವಹ ಫಲ ಸಿದ್ಧಾಂಗಳು
ಪ್ರಕೃತಿಯಿಂದಲೆ ಉತ್ಪನ್ನವಾದುವೆಂದು ತಿಳಿಯೊ,"
ಎಂದೆನುತ ಹೇಳಿದನು ಪಾಂಡವಗೆ ಹರಿಯೊ!

"೧೯"

"ಸೃಷ್ಟಿಯಲಿ ಆಗುವುದು ಹೋಗುವುದರಲ್ಲಿ,
ಕಾರ್ಯಕಾರಣ ಕರ್ತೃತ್ವಾದಿಗಳಿಗೆಲ್ಲ
ಪುರುಷನಿಂದಾಶ್ರಿತವಾದ ಪ್ರಕೃತಿಯೆ
ಕಾರಣವು ಎಂದೆನುತ ಹೇಳುವರೊ ನರನೆ;
ಅಂತೆಯೆ ಪ್ರಕೃತಿಯೊಳಗೆ ಅಡಗಿರುವ ಪುರುಷ
ಇಹದ ಸುಖ ದುಃಖಾದಿಗಳಿಗೆಲ್ಲ ಮೂಲ,
ಎಂದೆನುತ ಕೇಳ್ ವಿಧಿತವಾಗಿಹುದು ಶಾಸ್ತ್ರ,"
ಎಂದು ನರಹರಿಯು ವಿವರಿಸಿದನದನೆಲ್ಲ!

"೨೦"

"ಆತ್ಮದಿಂದೊಡಗೊಂಡ ಪುರುಷ ತಾನ್ ಇಹದಿ
ಪ್ರಕೃತಿಯ ಕಾರ್ಯದ ಸುಖದುಃಖಗಳನೆ
ಬಹುವರಿಯಲನುಭವಿಸುತಿರಲಂತು ಕೇಳು
ಪ್ರಕೃತಿಯಿಂದಲೆ ಉತ್ಪತ್ತಿದಾ ವಿವಿಧ ಗುಣವು
ಸತ್ವ ರಾಜಸ ತಮೋಗುಣಗಳವು ಎಲ್ಲ
ಪುರುಷರಲಿ ಸಂಪರ್ಕ ಕಾರಣವಾಗಿ ಅವರ,
ಹುಟ್ಟಿಸುವುದುತ್ತಮಾಧಮ ಯೋನಿಯಲ್ಲಿ
ಪ್ರಕೃತಿ ಪುರುಷ ಮಿಲನವದೆ ಯೋಗ ಕೇಳಿದೆ!

"೨೧"

"ದೇಹದಿಂದದೊ ಆತ್ಮ ಬೇರೆಯೆ ಇದ್ದು
ಆತ್ಮದೊಡಗೊಂಡ ಪುರುಷನ ಕಾಯವನು,
ದೇಹೇಂದ್ರಿಯಾದಿಗಳು ನಡೆಸುತಲಿ ಇಹುವು;
ದುಃಖ ಸುಖಗಳನಂತು ಅನುಭವಿಸುತಿಹವು.
ನಡೆಯುತಿಹ ನಡೆಸುತಿಹದೆಲ್ಲದಕು ಆತ್ಮ
ಸಾಕ್ಷಿಯಾಗಿದು ವ್ಯವಹಾರಗಳನೆಲ್ಲ
ನಡೆಸುವ ನಿರಾಕಾರಿಯಾ ಮೂರ್ತರೂಪನಾ
ದೇವ ಅದ್ವಿತೀಯವೆಂದಾರಾಧಿಸುವರು!

"೨೨"

“ಆಗ ಇಂತುಯಿರುವ ದ್ವೈತತ್ವ ಪರತತ್ವವನ್ನು
ಸರ್ವಗತತ್ವವನು ಕೂಡಿರುವ ಪ್ರಕೃತಿಯನು
ತಿಳಿಯಲು ಸಮರ್ಥನವ ನಾರವನೊ ಜಗದಿ
ಜ್ಞಾನಿಯೆಂದೆನಿಸುವನು ಇಹದಿ ನಿಜವು;
ಸ್ಥಿತಿಗತಿಯನರಿಯದೊಡೆಯನು ಅವನು ಸತ್ಯ
ತತ್ವಜನ್ಯವನು ಹೊಂದಲಾರನವ ಸಂತತ;”
ಎಂದನು ಹರಿ ಗೋವಿಂದನರ್ಜುನನಿಗಂದು
ಅತಿ ಶ್ರೇಷ್ಠದಾ ಪರತತ್ವಯೋಗವನು ಕೇಳು —

॥ ೧೩ ॥

“ಯೋಗಸಿದ್ಧಿಯನು ಹೊಂದಿಹರು ಜ್ಞಾನಬಲದಿ
ಮನಸಿನಲಿ ಆತ್ಮವನು ನೋಳ್ಪುದಕ್ಕೆ ನಿಜದಿ;
ಅದೆ ತೆರದಿ ಹಲವಾರು ಜ್ಞಾನಿಗಳು ಇಹದಿ
ಜ್ಞಾನಯೋಗದ ಬಲದಿ ಆತ್ಮವನು ತಿಳಿಯೆ,
ನಾಸ್ತಿಕರೊ ಹಲರು ಕೇಳ್ ಜೀವಾತ್ಮನನ್ನು
ತಾವ್ ಪಡೆದ ಕರ್ಮಯೋಗದ ಸಿದ್ಧಿಯಿಂದಾ
ಮನೋಹರ ಪ್ರಕೃತಿಯೊಳೊಂದೆ ತಿಳಿಯುತಿಹರು,
ಎಂಬುದದು ಸಹಜವು ಪಾರ್ಥ ಕೇಳ್ ಇಂದು!

॥ ೧೪ ॥

“ಕರ್ಮಯೋಗವ ಸಾಧಿಸಲಾರದವರು
ಬಲ್ಲವರನೊಡಗೂಡಿ ಕಲಿಯುವರೊ ನಿಜವು;
ಜ್ಞಾನಿಗಳ ಬೋಧೆಯಿಂದೆಲ್ಲವನು ತಿಳಿದು
ಆತ್ಮವಿದನುಪಾಸಿಸುವರೊ ಜಗದಿ ಹಲರು;
ಇನಿತಾತ್ಮ ಜ್ಞಾನವನು ಪಡೆಯಲೆಳಸುವರು
ಸಂಸಾರ ರೂಪದಿಹ ಜನ್ಮವನ್ನು
ಮೃತ್ಯುವನು ಮೀರಿರನು ಗೆಲ್ಲುವರೊ ನೋಡು;
ತಿಳಿಯೆಲೆತ್ತು ಪಾಂಡವನೆ ಪೇಳುತಿಹೆ ಹದನು!

॥ ೧೫ ॥

“ಹೇ ಭರತಕುಲ ಪುತ್ರಾ, ಜಗದೊಳಿಹ ಸರ್ವ
ಸ್ಥಾವರ ಜಂಗಮದ ರೂಪದಾ ಜೀವಿಯೊಳು,
ಶರೀರ ಕ್ಷೇತ್ರಗಳು ಕ್ಷೇತ್ರಗಳು ಸರ್ವ
ಹುಟ್ಟಿದುವವು ಹುಟ್ಟುತಿವೆ ಹುಟ್ಟಲಿವೆ ನಿತ್ಯ!
ಕಂತೆಯ ಕೇಳ್ ಪೇಳುತಿಹೆನಿತ್ತ ಜಗದಿ
ಪ್ರಕೃತಿಯು ಪರತತ್ವದೊಡಗೂಡಿ ಬೆರೆಯೆ,
ಉದ್ಭವಿಸಿದುವೊ ಸೃಷ್ಟಿ ಆದರೊಳಗೆಯೆ ವೃಷ್ಟಿ,
ಪ್ರಕೃತಿಯ ಜೀವಿಗಳು ಪಡೆದುವದೊ ಪುಷ್ಟಿ!

॥ ೧೬ ॥

" ಜೀವಿ ಜಂತುಗಳಲ್ಲಿ ಸಮತೆ ಸಮದಿ ನೆಲೆಸಿ
ದೇಹೇಂದ್ರಿಯಾದಿಗಳು ತಾನಲ್ಲವೆನುತ ತಿಳಿದು,
ಸಮದೃಷ್ಟಿಯುತನ ಇಹ ನಿಯಾಮಕನು ಆಗಿ
ಇರೆ ಆತ್ಮವದು ತನಗೆ ಆಶ್ರಯವ ನೀಡದೆ
ಇತ್ತಿಹ ಶರೀರವದನು ನಶಿಸಬಿಡುತಿಯಂತ
ತಾನ್ ನಶಿಸನೆಂದೆನುತ ತಿಳಿಯುವವನಾರೊ —
ಅವನೆಯೋ ಜ್ಞಾನಿಯೋಂದಿಹದಲ್ಲಿ ನಿತ್ಯ
ಬೆಳಗುವವನೊ ಕೇಳಿತ್ತು ಅರ್ಜುನನೆ ಇದನು!

॥ ೧೭ ॥

"ಎನಿಸುತೊ ಮಾತಂತಿದು ಮಗದೊಮ್ಮೆ ಎನುತ
ಸರ್ವ ದೇಹಗಳಲ್ಲಿ ಬೆಳಗುತಿಹ ಆತ್ಮ
ಅದನು ವರ್ಣನಮನಾಗಿ ನೆಲೆಸಿರಲು ನೋಡಿತ್ತೆ
ಅದನರಿತ ಜ್ಞಾನಿಗಳು ಆತ್ಮವನು ಬಿಲದೆ,
ಕಾಡಿನ ದಾರಿಯ ರಕ್ಷಕರು ಪೂಜಕರು ನೋಡಾ,
ಸಹಿಯುವರು ಭಗವಂತಗತಿಯನ್ನು ಅದರಿಂದಾ!"
ಎಂದೆನುತಲಾ ಹರಿಯು ಜೀವಾತ್ಮವದರ
ಗಹನದ ರಹಸ್ಯದಿ ಅರುಹಿದನೊ ಆಗ!

॥ ೧೮ ॥

"ವಿಶ್ವದ ಸಮಸ್ತವಹ ವ್ಯವಹಾರಗಳವು
ಪ್ರಕೃತಿಯೊಡೆಯೆ ಸರ್ವ ಸಾಗುವುದು ಎಂದು,
ತಾನಾವುದರ ಕರ್ತನಲ್ಲವೆಂದೆನುತ,
ತಾನಾವ ನಿರ್ವಾಹಕನು ಅಲ್ಲವೆನುತ,
ಸರ್ವವೂ ಸರ್ವೇಶ್ವರನ ಲೀಲೆಯೆನುತ,
ತಿಳಿಯುವವನಾರವನೊ ಜಗದಲ್ಲಿ ಪಾರ್ಥ
ಅವನೆಯೋ ಜೀವಾತ್ಮರೂಪವನು ತಿಳಿದ
ಜ್ಞಾನಿಯೋಂದೆನಿಸುವನ್ನು, ನಿಜವದುವೊ ಪಾರ್ಥ!

॥ ೧೯ ॥

"ಕೇಳ್ ಭಿನ್ನಭಿನ್ನವಿಹ ವಸ್ತುಗಳು ಎಲ್ಲ
ಸೃಷ್ಟಿಯಿದು ಒಂದೆ ಆದರೊಳಗಿಯೋ ಎಲ್ಲ,
ಅಡಗಿಹುದು ಎಂದೆನುತ ತಿಳಿದವನದಾರಾ —
ಪ್ರಕೃತಿಯಿಂದಲೆ ಜಗದ ವ್ಯಾಪಕವು ಎನುತ
ತಿಳಿದಿಹನು ಅರಿಹನೊ ಅವನೆಯೋ ಜಗದೆ
ಶುದ್ಧ ಸ್ವರೂಪದಿಹ ಆತ್ಮನನು ನಿಜದೆ
ಹೊಂದುವರು ಎಂಬುದನು ತಿಳಿಯುತ್ತೆ ಪಾರ್ಥ,"
ಎಂದೆನುತ ಹೇಳಿದನೊ ಗೋಪಾಲಕೃಷ್ಣ!

॥ 20 ॥

ಎಲೆ ಪ್ರಬೋಧನಯ ಕೇಳು ಆತ್ಮನು ಅನಾದಿ!
ಅಂತೆಯೇ ಜೀವಾತ್ಮ ನಿತ್ಯ ಅವಿನಾಶಿ!
ಸತ್ವ ರಜಸ್ತಮೋ ಗುಣತ್ರಯವದೇನಿಲದ
ದೇಹದೊಳಗಿರ್ದೊಡೆಯು ಎಸಗದೆಯು ಕರ್ಮವ,
ಚಿತ್ ಶಕ್ತಿ ಪ್ರತ್ಯಗಂತಿ ಸ್ಫೂರ್ತಿ ರೂಪಿ ಆತ್ಮ,
ಕರ್ಮಫಲವದಕಂಟದು ತಪ್ಪುದುವು ಕೇಳು,
ಗುಣಾಗುಣಂಗಳು ಬಾಧಿಸವು ಆತ್ಮಕಿಲ್ಲ"
ಎಂದೆನುತ ಹೇಳಿದನು ಅರ್ಜುನನಿಗೆ ಕೃಷ್ಣ!

" ೨೧ "

"ಸರ್ವವ್ಯಾಪಕ ಗಗನವಾದೊಡೆಯು ಅದುವು
ವಿಶ್ವಮಂಡಲದಲ್ಲಿ ಸೂಕ್ಷ್ಮದಿಹುದದುವು;
ಸೂಕ್ಷ್ಮವಿಹುದರಿಂ ಇತರ ವಸ್ತುಗಳಂತಿರುವ
ಗುಣ ಮನ ಸ್ವಭಾವಗಳು ಅಂಟದಿಹ ತೆರವಾ;
ಸರ್ವ ದೇಹಗಳಲ್ಲಿ ಜೀವಾತ್ಮನಿದ್ದೂ
ದೇಹ ಸ್ವಭಾವವದಕಂಟದುವು ನಿಜವು;
ಕ್ಷೇತ್ರ ಕ್ಷೇತ್ರಜ್ಞರೆಂಬ ದೇಹ-ದೇಹಾತ್ಮ—
ಎಂಬುದನು ನೆನೆಯುತ್ತಿ ಫಲ್ಗುಣನೆ ಕೇಳು!

" ೨೨ "

"ಎಲೆ ಭರತಕುಲ ತಿಲಕನಾಗಿರ್ಪ್ಪ ಎನ್ನ,
ನಭೋಮಂಡಲದಲ್ಲಿ ಬೆಳಗಿ ಸೂರ್ಯನ
ಲೋಕಗಳನೆಲ್ಲ ಕೇಳು ಹೇಗವನು ನಿತ್ಯ
ಬೆಳಗುತಿಹನಂತೆಯೇ ನಿತ್ಯಾತ್ಮನೆಮ್ಮ
ದೇಹವದಕದು ಜೀವದಿರಯುತ್ತ ಮೋಹ್ವ
ಪೋಷಿಸನು ಪಾಲಿಸನು ಬೆಳಗುತಿಹನಂತೆ,"
ಎಂದನು ಜೀವಾತ್ಮನನು ವಿಶ್ವಾತ್ಮರವಿಗೆ
ಹೋಲಿಸುತ ತಾಂ ತಂದನಾ ಹರಿಯು ಕೇಳಿತ್ತೆ—.

" ೨೩ "

"ದೇಹಾತ್ಮಗಳಿಗೆ ಇಹ ಭೇದವದನೆಲ್ಲ
ಅದರೊಡೆಯ ಭೂತಗಳ ಉತ್ಪತ್ತಿಗೆಂತಾ
ಹೇತುವಾದಾ ಪ್ರಕೃತಿಯನು ವಿಷಯವನ್ನು
ಅದರಿಂದ ಮುಕ್ತನಾಗುವ ಬಗೆ ಅದನ್ನು
ಕೇಳು ಜ್ಞಾನದೃಷ್ಟಿಯಿಂದಾರರಿವನವನೇ
ಆತ್ಮನನು ಹೊಂದುವನು ಎಂದೆನುತ ತಿಳಿಯೆನ್ನ,—
ಇದೆ ಕ್ಷೇತ್ರ-ಕ್ಷೇತ್ರಜ್ಞರನು ಅರಿಯೆ ಮಾರ್ಗ
ಇದೆ ಪ್ರಕೃತಿ ಪುರುಷರ ವಿವೇಕ ಯೋಗ!"

" ೨೪ "

(ಹದಿಮೂರನೇ ಅಧ್ಯಾಯ ಸಂಪೂರ್ಣವು.)

ಅಧ್ಯಾಯ ೧೪ — ಗುಣತ್ರಯ ಯೋಗ!

"ಕೇಳಿಲ್ಲಿ ಫಲ್ಗುಣನೆ, ಹೇಳುವೆನು ಇನ್ನು
ಪರಮೋತ್ತಮ ಜ್ಞಾನವಾ ಮತ್ತೊಮ್ಮೆಯನ್ನು—
ಮುನಿವರ್ಯರೆಲ್ಲ ನಿರುತ ವ್ರತಪಾಲಿಸುತ ಶ್ರಮಿಸಿ
ತಾವು ಸಂಸಾರ ಸಂಕೋಲೆಗಳ ಕಳಚಿ
ಪಡೆಯುತಿಹ ಪರಮಾತ್ಮ ಜ್ಞಾನವದನರುತ
ತಿಳಿಸುವೆನು ಕೌಂತೇಯ ಕೇಳಿಲ್ಲಿ ಇಂದು,"
ಎಂದು ಹರಿ ಮುಕುಂದನುವರಿದಿಂತೆಂದನಂದು,
ವೇದಾಂತದಿನ್ನೊಂದನು ಎಳೆಯನ್ನು ತಂದು.

॥ ೧ ॥

"ದಿವ್ಯಜ್ಞಾನವ ಪಡೆಯುತ್ತಲಿ ಇದರ ಬಲದಿ,
ಅಂತೆಯೇ ಭಕ್ತಿಯುಂಡೆನ್ನೊಡನೆ ನಿಜದಿ,
ಸಮಭಾವ ಸಮದಿಮರ್ಮವನು ಸಮದಿ ಪೊಂದಿ,
ಸ್ವರ್ಗೀಯ ಸುಖಭೋಗವನು ಕಡೆಗೆ ಪಡೆಯೆ,
ಭಕ್ತರವರೆನ್ನೊಮ್ಮೆ ಜನಿಸರವರಿಲ್ಲಿ—
ಈ ಮೃತ್ಯುಲೋಕದಲಿ ಪುನರ್ಜನ್ಮವೆತ್ತಿ!
ಪ್ರಳಯಾಂತ್ಯ ಕಾಲದಲು ಸಾಯರವರಂತು
ಸಾಯದ ಜೀವನವ ಪೊಂದಿದರು ಪೂಜ್ಯರವರು.

॥ ೨ ॥

"ಮಹತ್ಬ್ರಹ್ಮವೆನಿಸಿಹ ಸಿರಿ ಕೃಷ್ಣ ಕಥಾನ
'ಮಹತ್ತ' ಮೂಲ ಪ್ರಕೃತಿಯು ಇದೆ ನನ್ನ ದೇಹ,
ಪ್ರಕೃತಿಯೆಂಬೀ ನನ್ನ ದೇಹವನು ನಾನೆ
ಸಚೇತನಗೊಳಿಸುತಿಹ ಗರ್ಭವದು ನಾನೆ!
ವಿಶ್ವದ ಸಮಸ್ತ ಭೂತಗಳ ಉತ್ಪತ್ತಿ
ನನ್ನಿಂದಲೇ ಎನುತ ಹೇಳುತಿಹೆನಿಂದು;"
ಎಂದೆನುತ ಸೃಷ್ಟಿಯುದಯತತ್ವತ್ರಿಗಂತು
ತಾನ್ ಮೂಲವೆಂಬುದನು ಹೇಳಿದನು ಹರಿಯು.

॥ ೩ ॥

"ಕೌಂತೇಯ, ನೀನ್ ಚಿಂತಿಸದೆ ಇದ ಕೇಳು
ದೇವ ಮಾನವರಾದಿ ವರ್ಗದಲಿ ನಿತ್ಯ,
ಜನಿಸುತಿಹ ದೇಹವದಕೆಲ್ಲಕ್ಕು ನಿಜದಿ
ಬೀಜಪ್ರದನು ನಾನು ಪಿತ ನಾನು ಕೇಳು;
ಪ್ರಕೃತಿಯೆ ತಾಯ್ ಜಗಕೆ ಪರಮಾತ್ಮ ಪಿತನು,
ಜಗದಖಿಲ ಪಾತ್ರಗಳು ನಾನೆಯೇ ನೋಡು,"

ಎಂದೆನುತ ಹರಿ ಪುಂಡರೀಕಾಕ್ಷ ನರಗೆ
ಹೇಳಿದನು ಸೃಷ್ಟಿಯುದಯತತ್ವತೆ ಅದನೆ!

॥ ೫ ॥

"ಪ್ರಕೃತಿಯಿಂದುದಿತ ಗುಣತ್ರಯಗಳವು ಜಗದಿ
ಸತ್ವ ರಾಜಸ ತಮೋವುಯವವದುವು ನೋಡೈ;
ಅವಿನಾಶಿ ಅವಿಕಾರವಹ ಆತ್ಮವದನಾ
ಕೇಳ್ ವಿವಿಧ ದೇಹಗಳಲದ ಕಟ್ಟಿಯಿಡುತ,
ಲೋಕಗಳ ಜೀವಿಗಳನೆಲ್ಲವನು ಅಂತೆ
ಗುಣತ್ರಯವದಾವರಿಸಿ ಭಿನ್ನತೆಯ ಮೊಳೆಸಿ,
ಅದು "ಲೋಕೋ ಭಿನ್ನರುಚಿ"ಯೆಂದೆನುವ ತೆರನೆ,
ಇದೆ ಜಗದ ಲೀಲೆಯುದರಂತ್ರವೆಂದರಿಯೈ!

॥ ೬ ॥

"ತ್ರಿಗುಣಗಳಲಾ ಸಾತ್ವಿಕಾ ಗುಣವೆ ಮೇಲು,
ನಿರ್ಮಲತ್ವವು ಅದು ನಿರ್ಬಾಧಕವು ಇಹುದು,
ಸತ್ವಗುಣ ಬೆಳಗಿಸುವುದು ಜ್ಞಾನವನು ನಿಜದಿ
ಹೆಚ್ಚಿಸುವುದದು ಮನೋಪ್ರಭೆಯನು ನೋಡೈ.
ಸುಖವು ಸಂತೋಷ ಜ್ಞಾನಾಸಕ್ತಿಯನು
ಸತ್ವಗುಣವಿನು ಈಯಲದೆ ಸಾತ್ವಿಕವದು,
ಜೀವನವ ಜೀವಸಂಚಾರವಿನು ಸಮದೆ
ನಡೆಸುತಿಕೆ ಸತ್ವಗುಣವೇ ಸತತ ಕೇಳೈ!

॥ ೭ ॥

"ರಜೋಗುಣ ಮದ ಮೋಹ ಕಾಶ್ರಯವನಿತ್ತು
ಪಲತರದ ಆಸೆ ಆಕಾಂಕ್ಷೆಗಳಗುಂತು
ಪಿನವ ಪ್ರೀತಿಯನಿತ್ತು ಸಂಸಾರಿಕಾದಿ
ವ್ಯಸನಗಳಲದುವುದು ಜೀವಿಗಳನೆಲ್ಲಿ —
ಅಂತಿರಲು ರಾಜಸವು ಆತ್ಮನನು ನಿರುತ
ಕರ್ಮಕೊಳ್ಳಗಾಗಿಸುತ ಬಂಧಿಸುತಲಿಹುದು,"
ಎಂದೆನುತ ರಜೋಗುಣವದು ಅದೇನೆಂದು
ಹೇಳಿದನು ಮಧುಸೂದನನು ನರನಿಗಂದು —

॥ ೮ ॥

"ತಮಸ್ ಎಂದರೇನೆಂದರದೆ ತಮೋಗುಣವು,
ಈ ಚರಾಚರ ಜೀವಿಗಳನೆಲ್ಲ ತಮವು
ಅಜ್ಞಾನದಾ ಕೂಪದಲಿ ಉದ್ಧತಿತುದಿತ
ಭ್ರಮೆ ಮೋಹಾದಿಗೆ ಹೇತುವದೆ ಮೂಲ ನಿಜವು;
ಕಾಠಿಣ್ಯದೊಡೆಯ ಪ್ರಮಾದವಿತ್ತಿ ನಿದ್ರೆ
ಆಲಸ್ಯವೂ ದೂಡುವ ಅವಗುಣವು ಸೇರಿ,

ಜೀವಾತ್ಮನನು ತಾಮಸವು ಬಂಧಿಸುವುದೋ,
ಜಗವನ್ನು ಶೋಕದಲಿ ಮುಳುಗಿಸುವುದು ಅದುವೊ!

"೮"

"ಹೇ ಭರತಕುಲ ತಿಲಕ ಕೇಳು ಸತ್ವಗುಣವು
ಸುರಸದನದ ಸುಖ ಭಾಗ್ಯಕೊಯ್ಯುವುದು ನಿಜವು,
ರಾಜಸಗುಣವು ಅಂತೆ ಜೀವಿಗಳನೆಲ್ಲ
ಕರ್ಮದಲಿ ಕಟ್ಟಿಹಾಕುತಲಿರಲಂತು ಕೇಳು,
ತಮೋಗುಣ ಜನವನು ಅಜ್ಞಾನದಲಿ ಅದ್ದಿ
ವಿಷಯಾದಿ ಪ್ರಮಾದ ವ್ಯವಹಾರಗಳಲಿ
ಮುಳುಗಿಸುತಲಿ ಸರಿಯಲಿರೆ ತ್ರಿಗುಣಗಳವು
ಜೀವನನು ವೈವಿಧ್ಯದಲಿ ಆಡಿಸುವವು!

"೯"

"ಕೌಂತೇಯನೆ ಕೇಳು ಗುಣಗಳಲಿ ಸಾತ್ವಿಕವಿದು
ರಜಸ್ತಮಗಳೆರಡನ್ನು ಹಿಂದಿಡುತಲಂತು
ಬೆಳಗುವುದು ಸದ್ಗುಣಗಳ ಪ್ರಭೆಯ ಹೊರತು—
ಅದರಂತೆ ರಾಜಸವು ಸತ್ವತಮ ಗುಣವ
ಹಿಂದಿರಿಸಿ ಪ್ರಾಮುಖ್ಯತೆಯ ತೋರುತಿರಲು
ತಾಮಸವು ಸತ್ವರಜೋಗುಣಗಳೆರಡನ್ನು
ಅತಿಕ್ರಮಿಸಿ ಮೆರೆಯುತಿರೆ ವೈಚಿತ್ರ್ಯವದುವೊ—
ಇಹ ತ್ರಿಗುಣಗಳ ಗಮನದಾ ಮನನ ತರವೊ!

"೧೦"

"ಕೇಳು ಸರ್ವ ದೇಹೇಂದ್ರಿಯಗಳಿಂದ ನಿತ್ಯ
ಹಲತರದ ಜ್ಞಾನವನಾಸ್ವಾದಿಸಲು ಕೇಳು
ಸುಜ್ಞಾನವಿದೆ ಬುದ್ಧಿ ಅದೆ ಸಿದ್ಧಿ ತಿಳಿಯಾ—
ಜ್ಞಾನದಾ ನಿಶ್ಚಯದೊಳೆ ಮನೋಬಲ ಸ್ಥೈರ್ಯ
ಹೊಂದಿದಾಗಲದೆ ಸಾತ್ವಿಕಾಗುಣವೊ ಜಗದಾ—
ಸತ್ವಗುಣ ಪ್ರಬಲವಿಹನೇ ವೀರ ತಿಳಿಯಾ,"
ಎಂದೆನುತ ಭಗವಂತನಾ ಸತ್ವಗುಣದ
ಸಿದ್ಧಿಯತನಿಯ ಸದಭಿಮಾನದಲಿ ಪೇಳ್ದ!

"೧೧"

"ಎಲೆ ಸವ್ಯಸಾಚಿ ಕೇಳು ರಜೋಗುಣವಿದುವೆ
ರಾಜಸವು — ಅದು ಹೆಚ್ಚಿದಾ ವೇಳೆಯಾಗೆ
ಪ್ರಾರಂಭಿಸುವ ಆಗ್ರಹದ ಮೋಹವು ಕರ್ಮಾಸಕ್ತಿ
ಲೋಭವು ಕರ್ಮಾರಂಭವೆಲ್ಲವದು ಕೂಡಿ,
ರಾಜಸದ ಗುಣ ಕಾರ್ಯ ವೀರ್ಯವನು ಎಲ್ಲ
ಮೇಲಿಡುತ್ತ ಕಾಣಿಸುವುದು ಕೇಳಲೈ ಪಾರ್ಥ,"

ಎಂದು ಗುಣತ್ರಯಗಳನು ಒಂದೊಂದೆಂಬಂತೆ
ವಿವರಿಸಿದನಾ ಕೃಷ್ಣ ಪಾಂಡವಗೆ ಒಲಿದು.

" ೧೧ "

"ತಮೋಗುಣದಾ ಪ್ರಾಬಲ್ಯದ ವೇಳೆಯಲ್ಲಿ
ತಾಮಸಿಕವು ಮನವನ್ನು ತಮಸಿನೊಳಗದ್ದಿ
ಬುದ್ಧಿಮಾಂದ್ಯತೆ ಜಡತೆ ಬೇಸರವು ಮೋಹ,
ದಿನದಿನ ಪ್ರಮಾದವು ಪ್ರಚೋದನೆ ವ್ಯಾಮೋಹ,
ಸರ್ವವೂ ಜಡಬೆರೆದು ಕಡೆಗೊಳ್ಳಿಸಿ ಜೀವ
ತಾಮಸದ ತಾಪತ್ರಯದಾ ತಾಪವದುವಾ —"
ಎಂದೆನುತ ಹೇಳಿದನು ಮುರಹರಿಯು ಅಂದು,
ಶ್ರದ್ಧೆಯಿಂದಾಲಿಸುತಲಿದ್ದ ನರನಿಗಂದು!

" ೧೨ "

"ಸತ್ವಗುಣ ಸತ್ವಪ್ರದವಾಗಿ ಜ್ವಲಿಸುತ್ತ
ಜೀವಾಂತ್ಯಕೂ ಸಾತ್ವಿಕವು ವೃದ್ಧಿಸುತ್ತ
ಇಹ ವೇಳೆಯಲಿ ಸಾಯುವಾ ಯೋಗಿ ತಾನು
ಪರಮೋತ್ತಮಾ ಜ್ಞಾನಿಗಳ ಕುಲದೆ ಅಂತು
ಪುನರ್ಜನ್ಮವನು ತಾಳುವನು ಜಗದೆ ಕೇಳು —
ಅನಿತಲ್ಲದೊಡೆ ದೇವಲೋಕದಲಿ ನಿರುತ
ಬಾಳುವನು ಎಲೆ ಸವ್ಯಸಾಚಿಯಿದು ಸಹಜ,
ಇದೆ ಸತ್ವಗುಣ ಸತ್ಯವೀ ಜಗದೆ ನಿತ್ಯ!

" ೧೩ "

"ರಾಜಸದ ಗುಣದಿಂದ ಕೂಡಿಹನು ಇಹದಿ
ರಜೋಗುಣದೌನ್ನತ್ಯದಾ ವೇಳೆಯಲ್ಲಿ
ಮೃತನಾದೊಡೆಯು ತಾನು ಪುಟ್ಟುವನೊ ಅಂತು
ಕರ್ಮಾಭಿಮಾನಿಗಳ ಪೀಳಿಗೆಯಲವನು;
ಅಂತಿರಲು ತಾಮಸದ ಗುಣದಿಹನು ಕೇಳ್ತೆ
ಸಾಯುವನು ಅದೊ ಹೀನ ಜನ್ಮವನು ಪಡೆಯೆ,
ಕುಲಹೀನ ಮೃಗ ಕ್ರಿಮಿಗಳ ಯೋನಿಯಲ್ಲಿ
ಪುಟ್ಟುವನು ಅವನೆ ತಮೋಗುಣಯುತನೊ ಇಹದಿ!

" ೧೪ "

"ಫಲಾಪೇಕ್ಷೆಯನು ಇಡದೆ ಗೈದ ಸತ್ಕರ್ಮ
ಭಗವಂತನಿಗೆ ಅರ್ಪಿಸಲಾಗೆ ನಿತ್ಯ
ಲಭಿಸುವುದು ಶುಭ ಸಾತ್ವಿಕ ಫಲವು ಕೇಳ್ತೆ,
ರಜೋಗುಣದೊಡೆ ಎಸಗಿದಾ ಕರ್ಮವದಕೆ
ದುಃಖಾಂತ ದುರ್ದಶೆಯೆ ಫಲವು ಈ ಜಗದಿ,
ಅಂತೆ ತಾಮಸ ಗುಣದೆ ಹೆಣಗಿದೊಡೆ ಅವಗೆ

ಅಜ್ಞಾನದಾ ಅಂಧಾಕಾರವದೆ ಫಲವೆನ್ನೆ,"
ಎಂದೆನುತ ಹೇಳಿದನೊ ಮುರವೈರಿ ನರಗೆ!
॥ ೧೬ ॥

"ಸತ್ವಗುಣದಿಂದ ಸುಜ್ಞಾನದಾ ಜ್ಯೋತಿ,
ರಜೋಗುಣವದು ಲೋಭದೆಡೆಗೊಯ್ಯ ನೀತಿ,
ತಮೋಗುಣದಿಂದ ಅಜ್ಞಾನ ಅಲಸ್ಯ,
ಗುಣ ವೈಪರೀತ್ಯ ಪ್ರಮಾದವು ಸಮಸ್ಯ, —
ಉಂಟಾಗುವುವು ಧನಂಜಯನೆ ಇದು ಮೂರು
ಗುಣತ್ರಯವು ಮನೋಮಂಡಲವನಾಳ್ವ
ಹಿತಾಹಿತ ಬೋಧೆಯು ತಂತ್ರವು ಸ್ವತಂತ್ರಗಳು
ಕೀಲುಗಳು ಕಿಲುಬುಗಳು ಒಡಗೂಡಿ ಇರುವವು!
॥ ೧೭ ॥

"ಸತ್ವಗುಣದಿಂದೆಸೆವ ಸಾತ್ವಿಕರು ನಿಜದಿ
ಪರಮೋನ್ನತಾ ಮೋಕ್ಷಗತಿಯತ್ತ ನಡೆಯುವ,
ರಜೋಗುಣಿಗಳು ದೇವಮಾನವರ ಎಡೆಯು
ಮಧ್ಯಸ್ಥಿತಿಯಾ ಗತಿಯುಂಡಿತ್ತು ಎನುತ
ಅರಿಯುತಿರೆ ತಮೋಗುಣಕೊಳಗಾದ ಜನವು
ಅಧೋಗತಿಯನು ಹೊಂದುತ್ತಲಿ ಅಂತು ಅವರು
ತಾಮಸದ ವೃತ್ತಿಗಿಟ್ಟ ಜನ್ಮವನು ಪಡೆಯೆ —
ಅಂತಿಹುದು ಗುಣತ್ರಯಗಳಾ ಫಲವು ಸಖನೆ!
॥ ೧೮ ॥

"ಸತ್ವಾದಿ ಗುಣಗಳವು ಕರ್ಮಗಳನೆಲ್ಲ
ಮಾಡಿಸುವುವೆಂದೆನುತ ತಿಳಿಯುವವನಾರು;
ಗುಣತ್ರಯದಿಂದ ಅತಿ ದೂರದಲಿ ಇರುವ
ಜೀವಾತ್ಮನಿಹುದು ಗುಣಕರ್ಮಗಳಿಗೆಲ್ಲ
ಕರ್ತೃ ತಾನಲ್ಲವೆಂದರಿಯುವವನಾರು,
ಅವನೆಯೇ ಆತ್ಮನನು ನನ್ನಲ್ಲಿ ನಿತ್ಯ
ಕಾಣುತಿಹ, ನನ್ನನ್ನೆ ಸೇರುತಿಹ ಜ್ಞಾನಿ,
ಎಂದೆನುತ ತಿಳಿಯೊಲ್ವೆ ಫಲ್ಗುಣನೆ ಕೇಳಿನ್ನು!"
॥ ೧೯ ॥

"ದೇಹದಿಹ ಜೀವಾತ್ಮನಾ ದೇಹದೊಳಗೆ
ಉದಿಸುತಿಹ ಸತ್ವಾದಿ ಗುಣತ್ರಯಗಳನ್ನು
ಅತಿಕ್ರಮಿಸಿ ಮುಂದುವರಿಯುತಲಾತ್ಮ ಜೀವ
ಹುಟ್ಟು ಸಾವುವೊ ಬಾಲ್ಯ ಮುಪ್ಪುಗಳನೆಲ್ಲ
ಸುಖ ದು:ಖವೇ ದ್ವಂದ್ವಗಳನೆಲ್ಲ ತಪ್ಪಿ
ಇಹ ಜ್ಞಾನದಿಂದ ಕೇಳ್ ಮುಕ್ತನಹ ಜ್ಞಾನಿ

ಪೊಂದುವನು ಸ್ಥಿತಧ್ಯಾತ್ಮ ದೆಸೆಯನ್ನು ತಾನು,
ಸೇರುವನು ನನ್ನನ್ನೆ ಪರಯೋಗಿ ಅವನು —

॥ ೨೦ ॥

“ಕೇಳುತಿರಲಂತು ಹರಿ ತ್ರಿಗುಣಗಳ ವಿವರ
ಫಲಗಳನು ಪ್ರಶ್ನಿಸಿದನೀ ತೆರನಿ ಕೇಳಾ!
“ಹೇ ಪ್ರಭುವೆ, ಅತಿಕ್ರಮಿಸಿ ಗುಣತ್ರಯಂಗಳನ್ನು
ನಡೆದಿಹನ ಲಕ್ಷಣವು ಆವುದೆನ್ನ ಹೇಳು,
ನಡೆನುಡಿಗಳಾಚಾರಗಳು ಎಂತು ವನಾ,
ಮೀರುತಿಹನಾ ತ್ರಿಗುಣಗಳ ಜಯಿಸಿ ಕೇಳಾ
ಅನುಸರಿಸಿದಾ ಮಾರ್ಗವದು ಆವುದೆಂ”ದು,
ಪ್ರಶ್ನಿಸಿದನಾ ಕೃಷ್ಣನನು ಪಾರ್ಥನಂದು.

॥ ೨೧ ॥

“ಕೇಳೆಲೆ ಅರ್ಜುನನೆ, ಹರಿಯು ಪೇಳುತಾ
ಹುಟ್ಟುದಿಹ ಇಲ್ಲದಿಹ ವಸ್ತುಗಳಲೆಲ್ಲ,
ಸತ್ವ ರಾಜಸ ತಾಮಸದ ಗುಣ ಪ್ರಭಾವ
ತೋರೆ ಮತ್ಸರ ಕ್ರೋಧ ಮದವು ವ್ಯಾಮೋಹ
ಕಾಮಾದಿ ವಿಷಯಕ್ಕೆ ಜಗ್ಗದೆಯೆ ಇದ್ದು
ತಾನ್ ಇಚ್ಛಿಸದು ದೊರಕದಿದೊಡೆಯು ಅಂತು
ಕೇಳ್ ವಿರಕ್ತನೊಲು ತಾನು ಸತ್ವಗುಣದಿಂದ
ಸ್ಥಿತಪ್ರಜ್ಞನೊಲು ನಿತ್ಯ ಪ್ರಜ್ಞೆಯಿಂದಿರುವ —

॥ ೨೨ ॥

“ತಾನ್ ಉದಾಸೀನತೆಯೊಳೊಪ್ಪಾಗಿ ಇರುತ್ತೆ
ತ್ರಿಗುಣಗಳು ಮನವನ್ನು ತಿರುಗಿಸಲು ಬಿಡದೆ,
ಸತ್ವ ರಾಜಸ ತಮೋಗುಣಗಳವು ಹುಟ್ಟು
ತಮಗೊಲಿದ ಕಾರ್ಯದಲಿ ಇಹರೆಂದು ಬಗೆದು
ಗುಣಮನಗಳಾ ಮಾಯೆಗೊಳಗಾಗದಿರುತ್ತೆ
ಮೌನದಲಿ ನಿಶ್ಚಲದ ಯೋಗಿಗಳ ತೆರನಿ
ಸ್ಥಿತ ಮನದಿ ವ್ರತ ನಿಯಮದಿಂದ ತಾವ್ ನಿರುತ
ತಮ್ಮೊಳಗೆ ದೇವನಿಹನೆಂಬುದನು ತಿಳಿವಾ —

॥ ೨೩ ॥

“ಆತ್ಮದಲಿ ಜೀವ ಗುಣಗಳನು ನಿಲಿಸಿಗೊಳಿಸಿ
ಸುಖ ದುಃಖವೀ ದ್ವಂದ್ವಗಳ ಸಮನೆ ಇರಿಸಿ
ಕಲ್ ಮಣ್ಣು ಬಂಗಾರಗಳು ಸಮ ಸಮವು
ಪ್ರಿಯವು ಅಪ್ರಿಯವಾದುವುಗಳೆಲ್ಲ ಅಂತು
ಸಮವೆಂದು ಸಮನಾಗಿ ಕಾಣುತಿಹನಲದೆ
ನಿಂದನೆಯು ಹೊಗಳಿಕೆಯು ಸಮವೆಂದು ಎನುತ್ತೆ,

ತೋರುವ ವೈವಿಧ್ಯವನು ಒಂದಾಗಿ ನೋಳ್ಪ
ಸ್ಥಿರಬುದ್ಧಿಯಿಂದಿಹನು ಆರವನೊ ಕೇಳ್—

॥ ೨೪ ॥

"ಮಾನ ಅಪಮಾನದಲಿ ಸಮದರ್ಶಿಯಾಗಿ,
ಹಗೆಗಳನು ಗೆಳೆಯರನು ಎಣಿಸುವನಾಗಿ,
ಶಾಂತತೆಲಿ ಸಮಬುದ್ಧಿಯಿಂದಲಿ ಸರ್ವವನ್ನು
ನಿಷ್ಕಾಮ ಪ್ರವೃತ್ತಿಯಂತೆ ಕರ್ಮಗಳ ತಾನು,
ಸಾಧಿಸುವವನಾರವನೊ ಅವನೆಯೇ ಜಗದಿ,
ಸತ್ವ ರಾಜಸ ತಾಮಸಾ ಗುಣಂಗಳಿಂದೆ,
ಪಾರಾಗುತಲಿ ತಾನು ಸ್ಥಿತಪ್ರಜ್ಞನಾಗಿ
ಬಾಳುವವನಿಲ್ಲಿ ಪಾರ್ಥ 'ಯೋಗಿವರನೆನಿಸ!

॥ ೨೫ ॥

"ಕೇಳು ದೃಢಚಿತ್ತದಲಿ ಆರ್ ಎನ್ನ ನಿತ್ಯ
ಭಕ್ತಿಯಿಂದಲಿ 'ನಿಷ್ಠೆಯಿಂದಲಿ ಭಜಿಸುತಿಹನಾರೊ,
ಅವನೆಯೇ ಈ ವರೆಗೆ ವಿವರಿಸಿದ ಮನದ
ಗುಣತ್ರಯಂಗಳನು ಅತಿಕ್ರಮಿಸುತಲೀ ಕೇಳು
ಪಡೆಯುತ ತಾನ್ ಅರ್ಹನೆನಿಪನೊ ಬ್ರಹ್ಮಲೋಕಾ
ಜ್ಞಾನಿಗಳಿಗೊಪ್ಪುಯಿಹ ಸುರ-ಅಮರ ಲೋಕಾ!"
ಎಂದು ಗುಣತ್ರಯವ ವ್ಯಕ್ತಪಡಿಸುತಲಿ ಪಡೆವ
ಪರಮಾನಂದವಿದನು ವಸುದೇವಸುತನಂದಾ!

॥ ೨೬ ॥

"ಕೇಳೆಲೆ ಕಿರೀಟಿ, ಈ ವಿಶ್ವದಲಿ ಇರುವ
ಪರಿಶುದ್ಧವೂ ನಾಶರಹಿತವೂ ಆದ
ಜೀವಾತ್ಮಕೂ ಶಾಶ್ವತಾ ಧರ್ಮವಿದಕೂ
ಕಷ್ಟಗಳ ಪರಿವೆ ಇಲದಾ ನಿತ್ಯ ಸುಖಕೂ
ಪರಬ್ರಹ್ಮ ಪ್ರವೃತ್ತಿಯಿದಕೂ ಕೇಳು ಪಾರ್ಥ
ಪರಿಶ್ರಮದ ಫಲವಾಗಿ ಪಡೆವ ಸುಖ ಮೋಕ್ಷ-
ಎಲ್ಲದಕೂ ನಾನೆಯೇ ಮೂಲವಿಹ ನರನೆ"
ಎಂದೆನುತ ಭಗವಂತನಂದನದೊ ಒಲವೆ!

॥ ೨೭ ॥

(ಹದಿನಾಲ್ಕನೇ ಅಧ್ಯಾಯ ಸಂಪೂರ್ಣವು.)

ಅಧ್ಯಾಯ ೧೫ - ಪುರುಷೋತ್ತಮ ಯೋಗ!

"ಎಲೆ ಸವ್ಯಸಾಚಿ ಕೇಳು, ಬೇರುಗಳು ಮೇಲೆ,
ಶಾಖೆ ಉಪಶಾಖೆಗಳು ನೂರಾರು ಕೆಳಗೆ
ಹಬ್ಬಿ ಕೊನೆಗಾಣದಿಹ ಆಲದ ಹೆಮ್ಮರವು
ಜಗದ ಸಂಸಾರದೊಲು ವ್ಯಾಪಿಸಿರಲಂತು,
ಅಶ್ವತ್ಥವದರೆಲೆಗಳವು ವೇದಮಂತ್ರ
ಅದ ತಿಳಿದವನಾತನೆ ವೇದಜ್ಞನಿಹನು,"
ಎಂದು ಶ್ರೀ ಕೃಷ್ಣ ಪುರುಷೋತ್ತಮಾ ಪ್ರಾಪ್ತಿ-
ಯೋಗವದ ಹೇಳಲಿಕೆ ತೊಡಗಿದನು ಅಲ್ಲಿ.

"೧"

"ಸಂಸಾರ ವೃಕ್ಷವದರಾ ಶಾಖೆಗಳವು
ಸತ್ವಾದಿ ಗುಣತ್ರಯದೊಡನೆ ಬೆಳೆದಿರೆ ಬೆಳೆದು
ಶಬ್ದಾದಿ ವಿಷಯ ಗಳ ಕೊನಗೊಂಬು ಹೊಂದಿ
ಮೇಲೆ ಕೆಳಗೆ ದೇವ ಮಾನವ ನೆಲೆಯ ತೆರದಿ
ಹರಡಿಯಿಹ ಹೆಮ್ಮರದ ಕೆಳಗೊಂಬೆಗಳವು
ಮುಕ್ತಿ ನೆಲವನ್ನು ಪುಟ್ಟಿದ ಕರ್ತೃ ಬೇರು
ಹಲವಾರು ಸುತ್ತೆಲ್ಲ ಹಬ್ಬಿಪ್ಪೊಲು ಜಗವ
ಕವಲಿಸಿದ ಕಟ್ಟಿತಿಹ ತೆರವನ್ನು ನೋಡಾ!

"೨"

"ಅಶ್ವತ್ಥ ವರ ವೃಕ್ಷದಾ ರೂಪವು ಬಿಡುವು
ತುದಿ ಕೊನೆಯು ನೆಲೆಬೆಲೆಯನರಿಯದೆಲೆ ಇಹವು;
ಹೆಮ್ಮರದೊಲಕೊ ಬೆಳೆದ ಸಂಸಾರ ವೃಕ್ಷ
ಅದೆ ಆಲದವು ಕೇಳು ವಿಷಯಾದಿಗಳನಾ
ಜಯಿಸುತಲಿ ವಿರಯೋಗಿಗಳು ಜಗದೆ ಅದನಾ
ವಿಷಯ ವೈರಾಗ್ಯವೆಂಬಾ ಶಸ್ತ್ರದಿಂದ
ಕಡಿದುರುಳಿಸುವ ಬೇಕಿತ್ತು ಹೋರಾಡ್ಲ ಕೇಳು,"
ಎಂದೆನುತಲೆಂದನಾ ಮುರಹರಿಯು ರಂದು.

"೩"

"ಕೇಳೊ ಎಲೆ ಧನಂಜಯನೆ, ವೈರಾಗ್ಯವನ್ನು
ಹೊಂದಿಹನು ಕಡೆಗಂತು ಸೇರುವನೊ ನನ್ನ,
ಪುಟ್ಟ ಪಾಪಗಳಿಲ್ಲದಾ ಲೋಕವನ್ನು
ಹೊರಾಣಿಕಾ ತತ್ವ ಗುಣಗಳನು ಸುವಾಸ
ಅನಂತರೊಡನೆ ಸತ್ಯದಿ ಪ್ರವೃತ್ತಿಗಳನಾರು
ಮೊಳಗಿಸಿದನೊ ಆ ಆದಿಪುರುಷನನೆ ನಿಜದಿ

ಶರಣು ಪೊಕ್ಕು ಮರೆಹುಗುತ ತೆರಳಬೇಕೈ ಮಿತ್ರ,"
ಎಂದೆನುತ ತಿಳಿಸಿದನಾ ಪಾಂಡವಗೆ ಕೃಷ್ಣ!

॥ ೫ ॥

"ದೇಹಾಭಿಮಾನ ಮತ್ತು ಮೋಹಗಳ ತೊರೆದು
ಸತ್ಸಂಗದಿ ಗುಣತ್ರಯಾಮಯದ ಭೋಗ ಬಿಟ್ಟು,
ವಿಷಯಾದಿಗಳ ಜಯಿಸಿ ಸ್ಥಿರ ಆತ್ಮನಾಗಿ
ಸುಖ ದುಃಖಗಳ ದ್ವಂದ್ವಗಳ ತೊರೆದು ಸಾರಿ
ಬೇರಾವುದನು ಬಯಸದೆಯೆ ಲೋಕದಲ್ಲಿ
ಇಹ ಆತ್ಮಜ್ಞಾನಿಯು ವಿವೇಕಿ ದೃಢಮನದಿ
ಆತ್ಮ ಸ್ವರೂಪವನು ಹೊಂದುವನೋ ನರನು,
ಸೇರುವನು ಪುನರ್ಜನ್ಮವಿಲ್ಲದಿಹ ನೆಲೆಗೆ —

॥ ೬ ॥

"ಬೆಂಗದಿರ ಬೆಳಗದಿಹ ಲೋಕದೊಳು ನನ್ನ,
ಬೆಳದಿಂಗಳುದಿಸದಿಹ ತಾಣದೊಳು ನನ್ನ,
ಅಗ್ನಿ ಪರಿಸರಿಯದಿಹ ನೆಲೆಯಲ್ಲಿ ನನ್ನ,
ಸ್ಥಾನವಿಹುದದೋ ಅಲ್ಲಿಯೇ ನಿತ್ಯ ಕೇಳಾ,
ಆತ್ಮಸ್ವರೂಪವನು ಪೊಂದಿಹನು ಕಡೆಗೆ
ಪುನರ್ಜನ್ಮವಿಲ್ಲದಿಹ ಪರಲೋಕದಾಗಿ
ಸೇರುವನೋ ಆ ನನ್ನ ನೆಲೆಯನು ಅವನು
ಅದೆ ಸನಾತನವದೆ ದೇವಲೋಕವದೆ ನಿಜವು!

॥ ೭ ॥

"ನಿತ್ಯವು ಚಿರಂಜೀವಿಯಾಗಿಹ ನನ್ನ
ಅಂಶವಿದುವೇ ಜೀವರೂಪದಲಿ ಕೇಳಾ;
ನರಲೋಕವೀ ಜೀವಲೋಕದೊಳಗದುವು
ಪ್ರಕೃತಿಯ ರೂಪಾಂತ ದೇಹದಲಿ ಇದ್ದು
ಮನವನೊಡಗೊಂಡಾರು ಇಂದ್ರಿಯಗಳನ್ನು
ತನ್ನೆಡೆಗೆ ಎಳೆಯುತಿಹುದದೆ ನನ್ನ ಅಂಶ,"
ಎಂದು ಮುರಹರನು ನರನಿಗೆ ವಿವರಿಸಿದನಾ
ಪೇಳಿದನು ಆದಿ ಪುರುಷೋತ್ತಮ ಪ್ರಾಪ್ತಿಯೋಗ.

॥ ೮ ॥

"ಆತ್ಮವದು ಯಾವಾಗ ದೇಹವನು ಬಿಟ್ಟು
ಬೇರಾವ ದೇಹವನು ಹುಗುವುದದೋ ನೋಡು —
ಆವಾಗಲಾ ವಾಯು ವಸ್ತುಗಳಲ್ಲಿರುವ
ಗಂಧವನು ಪೂಗಳ ಪರಾಗವನು ಎಲ
ತನ್ನೊಡನೆ ಒಯ್ಯುವೊಲು ಜೀವಾತ್ಮನಂತು
ಇಂದ್ರಿಯಗಳೆಲ್ಲವರ ಅಂಶವನು ತಾನು

ಸೂಕ್ಷ್ಮದಲಿ ಕೊಂಡೊಯ್ಯುವನು ಕೇಳು ಮಗನೆ,
ಜೀವಾತ್ಮ ಲೀಲೆಯದು ಪರಮಾತ್ಮ ಮಾಯೆ!

"೮"

"ಜೀವಾತ್ಮನೀ ದೇಹದಿ ಇಂದ್ರಿಯಗಳ
ಕಣ್ಣುಗಳು ಕಿವಿ ಸ್ಪರ್ಶ ಜಿಹ್ವೆಯೊಡೆ ಮನದ
ಸಂಗವದು ಶ್ರೋತ್ರ ರವಿ ಆಧಾರವಾಗಿ
ಶಬ್ದಾದಿ ವಿಷಯಗಳನಂತೆ ಅನುಭವಿಸಿ,
ದೇಹದಿಂದಿನ್ನೊಂದು ದೇಹಕಂಬಂತೆ
ಚಿರಂಜೀವವಿಹವಾತ್ಮ ಜೀವಾತ್ಮನವನು,"
ಎಂದೆನುತ ಭಗವಂತ ಹೇಳಿದನು ಒಲದಿ
ದೇಹಾತ್ಮನಾ ದ್ವೈತಮಾಯೆಯನು ಸೊಗದಿ!

"೯"

"ಪ್ರಕೃತಿಗೆ ಒಳಗಾದ ಗುಣತ್ರಯಗಳಿಂದನಾ
ಕಾಮ ಮದ ಮತ್ಸರ ಕ್ರೋಧವು ಮೋಹವಿಲ್ಲ,
ವಿಷಯದಿಂದೊಡಗೊಂಡು ಇಹ ದೇಹದೊಳಗಾ
ದೇಹಾತ್ಮನಿರುವುದನು ಅನುಭವಿಸುವುದನ್ನು
ಜೀವಾತ್ಮವದು ಅಂತೆ ಅಗಲುತಿಹುದನ್ನು
ಕೇಳ್ ಆತ್ಮತತ್ತ್ವದದಿ ಜ್ಞಾನವನು ಅರಿತ
ಯೋಗಿಗಳು ತಿಳಿಯುವವರು ಜ್ಞಾನಬಲದಿಂದ,
ಗಹನವದನರಿಯರು ಅಜ್ಞಾನಿಗಳು ಇಹದ!

"೧೦"

"ಆತ್ಮವದರಾ" ರೂಪ" ಮಾಯೆಯನು ಅರಿಯೆ
ಯುಗದಲವು ಶ್ರಮಿಸಿಹ ಸಾಧಕರ ಎದೆಯೆ
ಬರಿ ಕಲುವರಾ ಅಂತರಾತ್ಮನನು ನಿಜದಿ
ಕಾಣುವರು ತಿಳಿಯುವವರು ಪೂಜಿಪರು ನೋಡೈ!
ಮನೋವಿಕೃತಿಯು ಶುದ್ಧತೆಯು ಇಲದಾ
ನಿರಭಿಮಾನಿಯು ತಾನೆ ಯತ್ನಿಸಿದೊಡಂತಾ
ತನ್ನೊಳಗೆಯೇ ಇರುವ ಆತ್ಮನನು ನಿಜದಿ
ಕಂಡರಿಯಲಾರನೈ, ಎಲೆ ಪಾರ್ಥ ಕೇಳೈ!

"೧೧"

"ನಭೋಮಂಡಲಗಳನು ಬೆಳಗುತಿಹ ಜ್ಯೋತಿ,
ಸಹಸ್ರಾರು ಸೂರ್ಯರ ಉಜ್ವಲತೆಯ ಕಾಂತಿ,
ತಿಂಗಳುಗಳ ಹೊಂಬೆಳಗು ಬೆಳ್ದಿಂಗಳದುವಾ
ವ್ಯೋಮಮಾರ್ಗನಾದಿ ಚೆಲ್ಲುತಿಹ ದುಂಡು ಚಂದಾ)
ಅಗ್ನಿ ಪ್ರಳಯಾಗ್ನಿಗಳಲಿಹ ಪ್ರಬಲ ಜ್ವಾಲೆ-
ಆ ಸರ್ವ ತೇಜೋ ಪ್ರಕಾಶವದು ನಾನೇ!

ಆನ್ ಸಸ್ಯರಾಶಿಯನು ಪುಷ್ಟಿಯಾಗಿ ಬೆಳೆಸಿ
ಚೆಲುವ ಹಸುರಿನ ಭೂಮಿಯನು ಹಸನಾಗಿ ಇರಿಸಿ—

"೧೩"

"ಆನ್ ಅಗ್ನಿರೂಪದಲಿ" ಇಹೆ ಕೇಳೊ ಮಿತ್ರ
ಜೀವಿರಾಶಿಯ ದೇಹದಲಿ ಇಹೆನೊ ನಿತ್ಯ,
ಜೀವಕಾಧಾರ ಪ್ರಾಣಾಪಾನಗಳಿಗೆ
ಆನ್ ಜೀವರೂಪದಲಿ ಇರುತಿಹೆನೊ ಕೇಳ್ತೆ
ಭೋಜ್ಯ ಚೋಷ್ಯವೊ ಲೇಹ್ಯ ಪಾನೀಯಗಳವು—
ನಾಲ್ ಬಗೆಯ ತಿನಿಸುಗಳನೆಲ್ಲ ನಾನೆ ಇರುತು
ಪಚನಗೊಳಿಸುವ ಶಕ್ತಿ ಆನಿಹೆನು," ಎಂದು
ಶ್ರೀಹರಿಯು ಹೇಳಿದ ರಹಸ್ಯವದೆಸಂದು;

"೧೪"

"ಆನ್ ಸರ್ವ ಹೃತ್ಕಮಲದಲಿ ಇರುತ ಇಹೆನೊ
ಜೀವಿಗಳ ಸ್ಮೃತಿ ಜ್ಞಾನ ನೆನಪು ಆನ್ ಆಹೆನೊ,
ಶಾಸ್ತ್ರಗಳು ವೇದೋಕ್ತ ಕರ್ಮಗಳನೆಲ್ಲ
ವಿಧಿಸುವವನೂ ನಡೆಸುವವ ನಾನೆ ಕೇಳಾ!
ವೇದಗಳನರಿವೊ ಅರಿತ ವೈದಿಕನು ನಾನೆ
ವೇದಾಂತ ಬೋಧಾಂತಗಳ್ಗೆ ಮೂಲ ನಾನೆ,"
ಎಂದು ಮಧುಸೂದನನು ಹೇಳಿದನು ಮುದದಿ
ಸರ್ವಾಂತರ್ಯಾಮಿ ತಾನ್ ಎಂತಿಹನದನ್ನೆ!

"೧೫"

"ಲೋಕದಲಿ ಕ್ಷರಾಕ್ಷರ ಜೀವಿಗಳು ಇಹವು,
ಪುರುಷರಲಿ ಕ್ಷರನು ಕೇಳ್ ನಶಿಸುತಿಹನವನು;
ಅಕ್ಷರನು ಅವಿನಾಶಿ ಅಮರತೆಯ ಹೊಂದಿ
ಇಹ ಕೇಳ್ ಜೀವಜಾಲವದು ಕ್ಷರವೊ ಇಲ್ಲಿ;
ಪ್ರಕೃತಿಯ ಪರಿಭ್ರಮಣೆಯಿಲ್ಲದಿಹ ಜೀವಾ
ಮುಕ್ತಾತ್ಮ ರೂಪವದು ಅಕ್ಷರವೊ ಕೇಳಾ,"
ಎಂದೆನುತ ಕ್ಷರಾಕ್ಷರ ಮಾತಿಯನು ಸವಿದಿ
ಬಣ್ಣಿಸಿದ ಶ್ರೀಕೃಷ್ಣನರ್ಜುನನಿಗೊಲವಿ!

"೧೬"

"ಕ್ಷರಾಕ್ಷರವೆಂಬೆರಡು ವರ್ಗವಿದು ಮೀರಿ
ಇಹನಾವ ಪುರುಷನವನೆಂದೆ ವಿಶ್ವದಲಿ,
ಪುರುಷೋತ್ತಮನು ಲೋಕತ್ರಯದಲ್ಲಿ ಅವನು
ಸರ್ವಾಂತರ್ಯಾಮಿ ಪರಮಾತ್ಮನೇ ಅವನು;
ಪ್ರಕೃತಿಯ ಸಂಬಂಧದಾ ದೋಷವಿಲ್ಲದಾ
ನಿರಾಲಂಬನೋ ಅವನು ನಿಜವಿದ್ದೆ ಮಿತ್ರ"

ಎಂದು ಭಗವಂತ ತಾನ್ ಹೇಳಿದನೊ ತನ್ನ
ಆಂತರಿಯತನು ನರನಾಗಿ ನರಲೋಕದಲ್ಲಿ!

॥ ೧೭ ॥

"ಏಕೆ ಕ್ಷರಾಕ್ಷರ ಜೀವಿಗಳನೆಲ್ಲ ಮೀರಿ
ಆನ್ ಬೇರೆ ಇರೆ ನೋಡೈ ಅದನಂತು ಗಣಿಸಿ,
ಪೌರಾಣಿಕ ಶ್ರುತಿಯು ಸ್ಮೃತಿಗಳವು ಎಲ್ಲ
ಸ್ತುತಿಸಿಹವೊ ಆನ್ ಜಗಕೆ ಕಾರಣನು ಎನುತ,
ಪುರುಷೋತ್ತಮನೆ ಆನ್ ವಿಶ್ವಗುರುಯೆನುತ
ಖ್ಯಾತನಾಗಿಹೆ ಪಾರ್ಥ ಅದುವೆ ಪುರುಷಾರ್ಥ,"
ಎಂದು ಜೀವಾತ್ಮನಿಗೆ ಹೇಳಿದನು ಕೃಷ್ಣ,
ತಾನ್ ಸನಾತನ ಧರ್ಮದಾ ತತ್ವವದನಾ!

॥ ೧೮ ॥

"ಹೇ ಭರತಕುಲ ತಿಲಕ, ಕೇಳೆಲೈ ಇಂದು,
ಯಾರು ಪುರುಷೋತ್ತಮನ ಅದಿಸ್ಸನಂತು,
ಮೋಹವಶವಾಗದಿಹ ಸ್ಥಿರಮತನಸ್ಸಿಂದ
ತಿಳಿಯುವವನದಾರವನೊ ಅವನೆಯೇ ಜಗದಿ
ಸರ್ವವನು ಬಲ್ಲವನು ಸರ್ವಜ್ಞನವನಿಹ
ಅನವರತವಾರಾಧಿಸನು ಎನ್ನನವನೈ!"
ಎಂದು ದೇವಕೀನಂದನನು ಅಂದವಾಗಿ
ಹೇಳಿದನೊ ಜಗವೆಲ್ಲ ಹರಿಸುತಿಹ ಮಾರ್ಗ!

॥ ೧೯ ॥

"ಮಿತ್ರನೆ ರಹಸ್ಯವಹ ಶಾಸ್ತ್ರವಿಧನೆಲ್ಲ
ತಿಳಿಸಿಹೆನೊ ನಿನಗಿಂದು ಅತಿಸತ್ಯ ಈಗ;
ಆರ್ ಇದನು ಭಕ್ತಿಯಲಿ ಶ್ರದ್ಧೆಯಲಿ ನಿತ್ಯ
ತಿಳಿಯುವವನವನೆಯೇ ಜಗದಲ್ಲಿ ನೋಡಾ;
ಬುದ್ಧಿಯಲಿ ಸಿದ್ಧಿಯಲಿ ಸಮೃದ್ಧನಾಗಿ
ಕರ್ಮಗತಿಯೊ ಕೇಳ್ ಕೃತಕೃತ್ಯನೂ ಆಗಿ,
ರಾರಾಜಿಪನೊ ಜಗದಿ ಅರ್ಜುನನೆ ಕೇಳಾ,
ಇದುವೆ ಪುರುಷೋತ್ತಮಾ ಪ್ರಾಪ್ತಿಯಾ ಯೋಗಾ!

॥ ೨೦ ॥

—x—

(ಹದಿನೈದನೇ ಅಧ್ಯಾಯ ಸಂಪೂರ್ಣವು.)

—x—

1389

ಅಧ್ಯಾಯ ೧೬ – ದೈವಾಸುರ ಯೋಗ!

ಮುಂದುವರಿದಾ ಹರಿಯು ಇಂತೆಂದನಂದು:
"ಅರ್ಜುನನೆ, ದುಃಖ ಭೀತಿಗಳನಂತು
ತೊಲಗಿಸುತ ಸತ್ವಗುಣ ಶುದ್ಧಿಯನು ತಾನು
ಸಾಧಿಸುತ ಶುದ್ಧಾತ್ಮ ರೂಪವನು ತಿಳಿದು,
ಜ್ಞಾನದಿ ಇಂದ್ರಿಯ ಸಂಯಮವನಂತು ಕ್ರಮಿಸಿ,
ದಾನವ ವೇದಾಧ್ಯಯನಗಳನು ಒಡಗೂಡಿ
ಯಜ್ಞವ ತಪೋವ್ರತಗಳನು ಸಾಧಿಸುತ್ತ,
ಋಜುತ್ವಾದಿ ನಿಯಮಗಳನನುಸರಿಸಿ ನಿತ್ಯ —

" ೧ "

"ಸತ್ಯವ ಅಹಿಂಸೆಯನು ಪಾಲಿಸುತ ಕೇಳು,
ಕ್ರೋಧವದ ತೊರೆಯುತಲಿ ಸಾಧಿಸುತ ಸಹನೆ,
ಆತ್ಮವಿದಕೊಪ್ಪದಿಹ ಅಹಿತವನು ತ್ಯಜಿಸಿ,
ಕೇಡಿಗರ ಚಾಡಿಗರನಕೊ ದೂರವಿರಿಸಿ
ಮನಶ್ಶಾಂತಿಯೂ ಭೂತದಯೆಯನ್ನು ತೋರಿ
ವಿಷಯಾಭಿಲಾಷೆಯನು ತೊರೆದಿಹ ಮನದಿ,
ಸರಳತೆಯು ಸಭ್ಯತೆ ಅಚಂಚಲತೆಯಿಂದ
ದುಷ್ಕೃತ್ಯಕಂಜುತಲಿ ನಾಚುತಲಿ ಅದರ —

" ೨ "

"ಜೀವಾತ್ಮದಾ ಶೋಭೆ ತೇಜಸ್ಸು ಕೂಡಿ,
ನಿಶ್ಚಲತೆಯಾ ತಾಳ್ಮೆ ಧೈರ್ಯವನು ಹೊಂದಿ,
ಮನೋವಾಕ್ಕಾಯದಲಿ ಶುಚಿಯಿಂದ ಬದುಕಿ,
ದ್ರೋಹವನು ದರ್ಪವನು ತೊಲಗಿಸಿ ಇಹದಿ,
ಮಹೋತ್ತಮವೊ ಗುಣ ಶುಭಗುಣಗಳು ಕೂಡಿ,
ದೇವಗತಿಗೊಪ್ಪುವ ಜನ್ಮಗಳನೆತ್ತಿ
ಇಹರು ಕೇಳ್ ಸರ್ವೋತ್ತಮ ಗುಣಗಳಿಂದ
ಶೋಭಿಸುವರವರಿಯೋ ಸಜ್ಜನರು ಜಗದಾ —

" ೩ "

"ಅಹಂಕಾರ ಮಮಕಾರಗಳು ಮದದ ಸ್ವಾರ್ಥ,
ಕೋಪ ಕಾಠಿಣ್ಯ ಕಠೋರತೆಯು ದರ್ಪ,
ಅಜ್ಞಾನದಿಂದುದಿಪ ತಾಮಸದ ಕರ್ಮ,
ಆ ಕ್ರಮದ ಅಕೃತ್ಯಗಳನೆಸಗುವಾ ಮೋಹ,
ಸರ್ವವೂ ಅಸುರ ಸ್ವಭಾವವನು ಹಿಡಿದು,
ಹುಟ್ಟಿಹರು ತೋರ್ಪಡಿಸುವರು ಜಗದಿ ಕೇಳು,"

ಎಂದು ಮುರಹರಿಯು ಫಲಿತಕ್ಕಾಗಿ ತಾನಂದು,
ಹೇಳಿದನು ಗುಣಾಮನದ ವೈವಿಧ್ಯವನ್ನು!

॥ ೪ ॥

"ಹೇ ಮಿತ್ರಾ, ಕೌಂತೇಯಪುತ್ರಾ, ಲೋಕದಲಿ ಜನವು,
ದೈವ ಸ್ವಭಾವದಲಿ ಜನಿಸಿಯಿರುವವರು,
ಮರುಳುವರು ಪರಲೋಕದಾ ಮೋಕ್ಷಗತಿಗೆ;
ಅಸುರ ಸ್ವಭಾವದಲಿ ಜನಿಸಿಹರು ನೋಡೈ
ಸಂಸಾರಿಕಾ ನಶ್ವರತೆ ಯೋಗದಲ್ಲಿ
ಉತ್ಕೃಷ್ಟತೆಲಿ ಸೇರುವರು ನರಕವದನಲ್ಲಿ!
ದೈವ ಸಂಪತ್ತಿನೊಡೆ ಸತ್ಕುಲದಲಂತೆ
ಹುಟ್ಟಿಹೆಲೈ ಪಾರ್ಥ ನೀನ್ ದುಃಖಿಪುದು ಬೇಡೈ!

॥ ೫ ॥

"ಲೋಕವಿದರಲಿ ಜನನ ಮರಣಗಳು ಇಹವು
ದೈವ ಅಸುರರ ಸ್ವಭಾವವನಂತು ನೋಡೋ;
ಜನ್ಮಗಳು ಇಂತಿರಲು ಹೇಳಿಹೆನು ನಿನಗೆ
ಈ ಮರ್ಮವು ಜ್ಞಾನವು ಭಕ್ತಿಯೋಗಗಳು ನಡೆಸಿ,
ಬೇಕೆಂದು ದೈವಾಭಿಯೋಗವದು ಕೇಳಾ,
ಹೇಳಿದೆನು ಸುರ ಜನ್ಮವದೇನೆಂದೆನುತಾ!
ಆಲಿಸೈ ದುರ್ದೈವ ಜನ್ಮವದೇನೆಂದು—
ಜೀವಿಗಳು ಪಡೆಯುತಿಹ ಅಸುರಗುಣೋತ್ಪತ್ತಿ!

॥ ೬ ॥

"ಅಸುರಗುಣವನು ಹೊಂದಿಹರು ಜಗದಿ ನೋಡಾ
ಇಹದ ಸುಖ ಭಾಗ್ಯವದಕಾಧಾರವಿಹುದಾ—
ಅರಿಯದಿಹರೇಕೋ ಪ್ರವೃತ್ತಿಯ ಧರ್ಮವಿದನಾ;
ಪರಲೋಕ ಸುಖ ಮೋಕ್ಷಕಾಧಾರವಾದ
ನಿವೃತ್ತಿ ಧರ್ಮವಿದನೂ ಅರಿಯದಿಹರು,
ನೀತಿಯಿಲ್ಲದಾ ಅಸುರಗುಣಗಳವರಂತು;
ಮನೋಮಾಲಿನ್ಯದಲಿ ಶುದ್ಧತೆಯು ಇಲ್ಲ,
ಸದಾಚಾರವಿಹ ಸತ್ಯವದು ಇಲ್ಲ!

॥ ೭ ॥

"ಅಸುರಗುಣದಿಹರಿಲ್ಲ ಲೋಕವಿದು ಅಸತ್ಯ
ವಿಶ್ವವು ನಿರೀಶ್ವರ ನಿರಾಧಾರವೆನುತಾ,
ಧರ್ಮವು ಅಧರ್ಮವದಕೇನ್ ಭೇದವಿಲ್ಲ,
ಎಂದೆನುತ ಹೇಳುವರು ಕಳೆಯುವರು ಇಹವಾ!
ಲೋಕಗತಿ ಬಿನ್ನತೆಯು ಲೇ ಇರವು ಎಂದು
ಸ್ತ್ರೀಪುರುಷ ಸಂಯೋಗದಲಿ ಸೃಷ್ಟಿಯೆಂದು

ಚರಾಚರ ಜೀವಿಗಳಿಗಿವು ಕಾಮ ಮೂಲ—
ಎಂದೆನುತಲನ್ನುವರೊ ನಾಸ್ತಿಕರ ನಿಕರ!

॥ ೮ ॥

"ಈ ಪರಿ ಅಜ್ಞಾನದಲಿ ಮುಳುಗಿರಲು ಲೋಕಾ,
ಅವಿವೇಕದಲಿ ಸೊರಗುತಿಹ ಬುದ್ಧಿಹೀನಾ—
ಅಂತೆ ಜೀವಾತ್ಮ ಜ್ಞಾನವಹೀನರಯಿಲದಾ
ಮತಿಹೀನನನೊ ಕ್ರೂರ ನೀತಿಗಳಲಿಲ್ಲ
ಆಸಕ್ತಿಯುತನ್ನಾತನು ಕೆಡಿಸುವನೊ ಜಗವ;
ಲೋಕದ ಅಹಿತಂಗಳಿಗೆ ಕಾರಣನೊ ನೋಡಾ!
ಹುಟ್ಟುವರು ಜಗದಲಿ ವಿನಾಶ ಕಾರ್ಯರು—"
ಎಂದೆನುತ ಹೇಳಿದನೊ ಪಾಂಡವಗೆ ಹರಿಯು.

॥ ೯ ॥

"ಏನೇನೊ ಎಷ್ಟೆಷ್ಟೊ ಅನುಭವಿಸೆ ಅಂತು.
ಅಸುರೀ ಗತ್ಯಾವು ಕಾಮ ಮೋಹದಲಿಯಿಂದು,
ಅಜ್ಞಾನದಲಿ ಅಸತ್ಯನಿಸಿದುದ ನೆಚ್ಚಿ,
ಅಹಂಕಾರ ಮಮಕಾರ ಮದ ಮತ್ಸರಾದಿ
ದುರ್ಗುಣಗಳಿಗೆ ವಶವಾಗಿ ಅವರಂತು ಕಡೆಗೆ
ಸ್ಮೃತಿ ಶಾಸ್ತ್ರಗಳು ಒಪ್ಪದಾ ವ್ರತಗಳನ್ನು
ಅನುಸರಿಸೆ ಆಸುರೀ ಸ್ವಭಾವದಿಹ ಜನವು
ಕಲಕುವರು ಲೋಕವ ವಿನಾಶದೆಡೆಕೊಯ್ದು—

॥ ೧೦ ॥

"ಹಲವು ಬಗೆ ಚಿಂತೆಗಳು ಕೊನೆಯಿಲದ ವ್ಯಥೆಯು
ಪ್ರಳಯಾಂತ ಕಾಲದಾವರೆಗು ಇದೆ ಕಥೆಯು;
ವಿಷಯೇಂದ್ರಿಯಾ ಭೋಗ ದುರ್ಗುಣಗಳನ್ನು
ಅಪ್ಪುತಲಿ ತಾವ್ ಕಾಮ ಮೋಹಾದಿಗಳವು
ಪರಮಾರ್ಥವೆಂದೆನುತ ಬಗೆಯುತಲಿ ಅವರು
ಲೋಕದಲಿ ಅಸುರೀ ಸ್ವಭಾವವನು ಬಿತ್ತಿ
ಬೇರೇನು ಇಲ್ಲವೆಂದೆನ್ನುತಲಿ ನಿತ್ಯ,
ದೌರ್ಜನ್ಯದಾ ವೃತ್ತಿಯಲಿ ನಿರತರಿಹರಾ!

॥ ೧೧ ॥

"ಹಲವು ಬಗೆಯು ಆಶಾ ಪಾಶಗಳ ಕಟ್ಟು—
ಅವುಗಳಿಂದತ್ತಿತ್ತ ಜನ ಎಳೆಯಲ್ಪಟ್ಟು
ಕಾಮ ಕ್ರೋಧಾದಿಗಳಲಿಯೆ ನಿರತರಾಗಿ
ಕಾಮ ಸುಖವನೆ ತೃಪ್ತಿಗೊಳಿಸುವುದಕಾಗಿ
ಅನ್ಯಾಯ ಕಾರ್ಯಗಳನು ಹಿಡಿದಿಟ್ಟು
ಅಕ್ರಮ ಕೃತ್ಯಗಳಿಂದಲಿ ಧನವ ತಾವು,

ಕೂಡಿಸುತ ಅದೆ ಬಾಳು ಅದೆ ದೈವವೆಂದು
ಬಗೆಯುತಿಹರದೆ ಭೋಗ್ಯವೋ ಅರ್ಥ ಕೇಳು!

" ೧೩ "

"ಆರ್ಜಿಸಿದೆಯೆನ್ ಅಕ್ರಮದೆ ತಾನು ಪಡೆದ
ಧನವ ತಾನ್ ಗಳಿಸಿದೆನು ಎಂದೆನುತ ನಿತ್ಯ
ಬಗೆಯುತ್ತಲಿ ದಿನದಿನವು ಕೂಡಿಡುತ ಹಣವ
ಭ್ರಮಿಸುತ್ತಲಿ ತಾನಿಷ್ಟು ಆರ್ಜಿಸಿದೆಯೆನುತ,
ಮುಂದು ತಾನ್ ಮತ್ತಷ್ಟು ಸಂಗ್ರಹಿಪೆ ಹಣವ –
ಎಂದೆನುತೆ ಲೋಭದಲಿ ಜೀವಿಪರೊ ಕೆಲರು –"
ಎಂದು ವಸುದೇವಸುತನಂದನಾ ನರಗೆ
ಲೋಭವದಕೆ ಮಿತಿಯೇನಿಲ್ಲವೆಂದೆನುತೆ!

" ೧೪ "

"ಕೊಂದೆನ್ನ ಶತ್ರುವನು ಮೀರನಿಹೆ ತಾನು,
ವೈರಿಗಳನೆಲ್ಲರನು ತಾನ್ ವಧಿಪೆನೆಂದು,
ತಾನ್ ಸ್ವತಂತ್ರನು ಜಗದೆ ತಾನೆಯೆ ಪ್ರಭುವು
ತಾನ್ ಭೋಗಿಯಿಹೆ ಕೇಳ್ ಸಂಪೂರ್ಣನಿಹೆ ತಾನು,
ಬಲಶಾಲಿ ತಾನಿಹೆನು ತಾನೆಯೇ ಸುಖಿಯು
ತಾನೆ ಸಾಮರ್ಥ್ಯವನು ಪಡೆದಿಹೆನು ಎಂದು,
ಭ್ರಮಿಸಿ ತಾವ್ ಅಂತೆಯೇ ವರ್ತಿಪರೊ ಕೆಲರು —"
ಎಂಬುದನು ಮುರಹರಿಯು ವಿವರಿಸಿದನಂದು,

" ೧೫ "

"ತಾನೆಯೇ ಸಿರಿವಂತನಿಹೆ ಲೋಕದಲ್ಲಿ,
ತಾನ್ ಬಲ್ಲಿದನು ತನಗೆ ಸಮನಾರು ಇಲ್ಲಿ;
ಬೇರೆ ಆರಿಲ್ಲ ಕೇಳ್ ತಾನೆಯೇ ಭೋಗಿ,
ಯಾಗ ಯಜ್ಞಾದಿಗಳನಾಚರಿಪ ಯೋಗಿ;
ತಾನ್ ದಾನ ಧರ್ಮವನು ಮಾಡುತಿಹ ತ್ಯಾಗಿ
ತಾನ್ ನಿತ್ಯಾನಂದದಲಿ ಸುಖಿಸುತಿಹೆನಿಲ್ಲಿ,"
ಎಂದೆನುತಲಜ್ಞಾನ ಕಾಮ ಮದ ಮೋಹ
ಭ್ರಾಂತಿಯಿಂದಲಿ ತೊಳಲುತಿಹುದಲ್ಲ ಲೋಕ!

" ೧೬ "

"ಮದದ ಮೋಹಮಗ್ನರಾಗಿ ಸರ್ವಾಂತರ್ಯಾಮಿ —
ಸರ್ವೇಶ್ವರನು ಪರಮನೇ ಎಂಬ ಸೂಕ್ತಿ
ತಿಳಿಯದೆಯೆ ಅನಿಶ್ಚಿತವಹ ಬಾಳಿದನು
ಭ್ರಾಂತಿಯು ವಿಕಲ್ಪತೆಯು ಬುದ್ಧಿಯೊಡೆ ಅಂತು
ವಿವಿಧ ತೆರನಾ ಮೋಹಪಾಶದಲಿ ತಾವೆ
ಸಿಕ್ಕಿ ಹೊರಳಾಡುವವರು ವಿಷಯಾದಿಗಳಲಿ

ತಾವ್ ಮುಕ್ತಿಗೆ ಹೋಗದಂತೆ ಸಿಕ್ಕಿ ಕಡೆಗಂತೂ
ಬೀಳುವರು ಅಸಹ್ಯವಹ ನರಕದತಿ ಅವರೂ!

॥ ೧೬ ॥

"ತಮ್ಮನ್ನೆ ತಾವ್ ನೋಡುತ್ತಲಿ ಗೌರವಿಸುತ್ತ,
ತಾವೆ ಕೃತಕೃತ್ಯರೆಂದೆನಿಸುತ್ತಲಿ ಜಗದಿ
ಧನ ದೊರೆಹ ಮದ ಮೋಹ ಲೋಭಾದಿಯಿಂದ
ಕೂಡಿ ಶಾಸ್ತ್ರೋಕ್ತವಲ್ಲದ ಯಜ್ಞಗಳನಾ
ಬರಿ ತೋರಿಕೆಗೆ ಎಂಬಂತೆ ತಾವ್ ನಡೆಸಿ
ಆಡಂಬರವ ಮೆರೆಸುವರೂ ವಿಲಕ್ಷ ಜಗದಿ –,"
ಎಂದೆನುತಲರ್ಜುನಗೆ ಹೇಳಿದನೂ ಹರಿಯು,
ಕಪಟತನದೀ ಲೋಕದಾ ಹರಿಯಾನಂತ!

॥ ೧೭ ॥

"ಕೇಳಿತಿ ಧನಂಜಯನೆ, ಲೋಕದಿಹ ಕ್ರೂರಾ,
ಅಹಂಕಾರದೊಡೆ ದರ್ಪ ಮಮಕಾರ ದಾಹ,
ವಿಷಯಗಳಲಾಸಕ್ತಿ ತನುಮನದ ಶಕ್ತಿ,
ಕಾಮಕ್ರೋಧಾದಿಗಳಿಂದಲಿ ತಾವು ಉಬ್ಬಿ,
ಜೀವಿರಾಶಿಗೆ ಜೀವಾಧಾರವಹ ನನ್ನ
ಸರ್ವಾಂತರ್ಯಾಮಿಯಾಗಿಹ ನನ್ನನೆಲ್ಲ
ಜರೆಯುತಿಹರೆನ್ನರಿಯದಿಹ ಎಲ್ಲ ಕೇಳಾ, –
ಇದುವೆ ಲೋಕದಿ ಇರುವ ಮನಸಿನಾಟೊ ಮಿತ್ರ!

॥ ೧೮ ॥

"ಅಂತಹರು ದ್ವೇಷಿಗಳು ಕ್ರೂರಿಗಳು ಅವರು,
ಅಸುರೀ ಸ್ವಭಾವದಿಹ ಪಾಪಿಗಳೂ ಅವರು,
ನರಾಧಮರವರನ್ನ ಕೇಳೆಲೆ ಮಿತ್ರ,
ಸಂಸಾರಿಕಾ ಜನ್ಮದಿ ತಳ್ಳುತಿರುವೆನಾ!
ಹುಟ್ಟಿಸುವೆನೂ ಅಸುರಯೋನಿಯಲಿ ಕೇಳ್ತಿ
ತಳ್ಳುವೆನು ಅದಿದ್ದುವೆನವರನಧೋಗತಿಗೆ –"
ಎಂದನು ನರಹರಿಯು ನರನಿಗೆ ಹೇಳ್ದನಲ್ಲ,
ದುಷ್ಟಜನದಾ ಭ್ರಷ್ಟಾಚಾರವದನಲ್ಲ!

॥ ೧೯ ॥

"ಎಲೆ ಕುಂತೀತನಯ ಕೇಳ್, ದ್ವೇಷಿಗಳು ಜಗದಿ
ಅಸುರ ಜನ್ಮವ ಪೊಂದಿ ದಿಙ್ಮೂಢರಾಗಿ
ಸತತ ಮರಳು ಹುಟ್ಟಿ ಸಾಯುವ ಗತಿಯನಂತೆ
ಹಿಡಿಯುವವರು ಕೇಳ್ ನಿರಂತರವದುವೆ ಗತಿಯೊ!
ಅರಿಯಲಾರರು ಎನ್ನ ಸೇರರವರೆನ್ನ
ದುರ್ಗತಿಯು ಕಡೆಗಂತೂ ಕಾದಿಹುದು ಅವರ,"

ಎಂದು ಮುರಾರಿ ಧನಂಜಯನಿಗಂದಂತು
ಹೇಳಿದನೆ ಲೋಕೋಕ್ತಿಯಾ ಸೂಕ್ತಿಯನ್ನು!

" ೨೦ "

"ಜೀವಾತ್ಮದಾ ನಾಶಕದೊ ಹೀನತಮವಾದ,
ನರಕವದರ ದಾರಿಯೆಂದೆನಿಸಿ ಇರುವ,
ಕಾಮ ಕ್ರೋಧವು ಲೋಭಗಳನಂತು ನಿಜದಿ
ಶತ್ರುತ್ರಿಗಾತ್ರಯವು ತ್ಯಜಿಸಿಯೆ ಮನದಿ,
ನಿಲಿಸುತ್ತ ನಿಶ್ಚಯದ ಕರ್ಮವೆಂದೆನಿಸಿ
ಬಾಳ್ವೊ ಹಾದಿ ಬಿಡುವುದು ಹೇ ಕೌಂತೇಯ ಕೇಳ್ ನೀ,"
ಎಂದೆನುತ ಕಾಳಿಯ ಮರ್ದನನು ನಗೆ
ಹೇಳಿದನು ಸಿದ್ಧಾತ್ಮದಾ ಇರವನಂತೆ!

" ೨೧ "

"ಅಜ್ಞಾನ ಅಕೃತ್ಯಗಳಿಗಂತು ಮೂಲ
ಕಾಮವು ಕ್ರೋಧಾದಿ ಶತ್ರುವೈರಿಗಳು ನಿಜವಾ
ತಮೋಗತ್ರಾ ಪದಿನೆಲ್ಲ ತೊರೆದೊಡೆಯೆ ಕೇಳಾ,
ಜೀವಾತ್ಮಕದು ನಿತ್ಯ ಶ್ರೇಯವನು, ಸತ್ಕಾರ್ಯ,
ಕಡೆಗಂತು ಹೊಂದುವನು ಪರಮಗತಿಯನ್ನು
ಸೇರುವನು ನನ್ನನ್ನೆ ತಿಳಿದ್ದಾಣಿ ಕೇಳು,"
ಎಂದು ಶ್ರೀಕೃಷ್ಣ ತಾನ್ ದೈವಿಗಳ್ಗಾ ಗಾನ
ಹಾಡಿದನೊ ಇನ್ನೊಮ್ಮೆ ಮತ್ತೊಮ್ಮೆಯೆನುತ!

" ೨೨ "

"ಕೇಳ್ ಸವ್ಯಸಾಚಿ ನೀನ್ ನರಲೋಕದಲ್ಲಿ
ಅಜ್ಞಾನ ಹೀನತಮವಾದುದ ನಿತ್ಯ ನಡೆಸಿ
ತಾನ್ ಇಚ್ಛಿಸಿದ ಹಾದಿಯಲಿ ತಾನು ನಡೆದು
ಹೋಗುತಿಹ ನರವನೊ ನಿರಯೋಗವನ್ನು
ಪಡೆಯೆ ಕಾರ್ಯವಾದ ಸಿದ್ಧಿಯನು ಸುಖವ
ಪರಮಗತಿಯನು ಹೊಂದಲಾರ ಕೇಳ್ ಮಿತ್ರ,
ಕಾಮಾನುಚಾರಣೆಯನು ಶಾಸ್ತ್ರವಿಧಿಯಂತೆ
ನಡೆಸಿದೊಡೆ ಮೋಕ್ಷಕದೆ ಹಾದಿಯೆಂದರಿಯೊ!

" ೨೩ "

"ಬದ್ಧಂತು ಅಬದ್ಧವಹುದನ್ನು ಪರಿಗಣಿಸಿ
ಅಜ್ಞಾನ ಪ್ರೇರಿತ ಶಾಸ್ತ್ರವನ್ನು ಅತಿಕ್ರಮಿಸಿ
ಕಾರ್ಯವು ಅಕಾರ್ಯವನು ಶಾಸ್ತ್ರಾನುಸಾರ
ನಿರ್ಣಯಿಸುವಾ ವಿಧಿಗೆ ಶಾಸ್ತ್ರವೆ ಪ್ರಮಾಣ,
ಎಂದೆನುತ ವಿಧಿಯುಕ್ತ ಕರ್ಮಗಳನೆಲ್ಲ
ದೈವಾಭಿಮಾನದಲಿ ನಡೆಸೆಲೆಲೈ ಪಾರ್ಥ"

ಎಂದು ಹರಿ ಹೇಳಿದನು ಮುಂದಿನಾಂತು ನರಗೆ,
ಪರ ದೈವಾಸುರ ಯೋಗದಾ ಗಹನವಿದನೆ!

" ೨೪ "

(ಹದಿನಾರನೇ ಅಧ್ಯಾಯ ಸಂಪೂರ್ಣವು.)

ಅಧ್ಯಾಯ ೧೭ – ಶ್ರದ್ಧಾತ್ರಯ ಯೋಗ!

"ಹೇ ಪುಂಡರೀಕಾಕ್ಷ ಕೇಳೋ, ಶಾಸ್ತ್ರ ವಿಧಿಯ
ಅನುಸರಿಸದಿದ್ದೊಡೆಯು ಶ್ರದ್ಧೆಯಿಂದಿಲ್ಲ,
ಯಾಗ ಯಜ್ಞಾದಿಗಳು ಕರ್ಮಗಳನಂತು
ನಡೆಸುತಿಹರಿಗೆ ತಕ್ಕ ಶ್ರೇಯವು ಏನು?
ಗುಣತ್ರಯಗಳು ಅವುದೇನರಿತು ಹೇಳು,
ಸಾತ್ವಿಕವೋ ರಾಜಸವೋ ತಾಮಸವೋ ಏನಾ?"
ಎಂದೆನುತಲಾ ಕಿರೀಟಿಯು ಕೃಷ್ಣನನ್ನು
ಕೇಳಿದನು ಮತ್ತೊಂದು ಸಂದೇಹವಿದನು!

" ೧ "

"ಎಲೆ ಪಾಂಡುಪುತ್ರ ಕೇಳೋ, ಜೀವಿಗಳಿಗೆಲ್ಲ,
ಹುಟ್ಟಿಗುಣ ಭಾವ ಸ್ವಭಾವಗಳು ಇಹವಾ;
ಕೇಳೋ ಪೂರ್ವ ಜನ್ಮಾಂತ ಸ್ಮೃತಿಯದು ಕೂಡಿ
ಶ್ರದ್ಧೆಯನು ಬುದ್ಧಿಯನು ಬೆಳೆಸುವುದು ಬಲದಿ;
ಸತ್ವ ರಾಜಸ ತಮೋಗುಣಗಳವು ನಿಜದಿ
ಶ್ರದ್ಧೆಯನು ರೂಪಿಸುತಲಿಹುದಂತು ಕೇಳೈ!"
ಎಂದೆನುತ ಭಗವಂತನಿದ ಹೇಳ್ದನಲ್ಲಿ
ಶ್ರದ್ಧಾತ್ರಯಾ ಯೋಗ ಗಹನವಿದನಲ್ಲಿ!

" ೨ "

"ಮನೋಪರಿಪಕ್ವತೆಗೆ ಅನುಸಾರವಾಗಿ,
ಶ್ರದ್ಧೆಯು ಹವ್ಯಾಸವವು ಹುಟ್ಟುವವೋ ನಿಜದಿ;
ಶ್ರದ್ಧೆಯಾ ಫಲವದುವೆ ಪುರುಷತ್ವ ಜಗದಿ,
ಶ್ರದ್ಧೆಯನು ಆಧರಿಸಿಯೇ ಕರ್ಮ ಕೇಳೈ,
ಯಾವಾವ ಕಾರ್ಯದಲಿ ಅಭಿರುಚಿ ಅದಿದೆಯೋ,
ಅದರೊಪ್ಪುವೊಲು ಶ್ರದ್ಧೆ ಅದು ಪೋಷಿಸುವುದೋ;

ಶ್ರದ್ಧಾ ಬಿಡುವೋಗ ಪರಿಣಾಮವಿದೆ ಗತಿಯಾವೊ
ಗತಿ ಸ್ವಭಾವಾಶ್ರಯಿಸಿ ಕೇಳ್ ಮನವಿಹುದು ನಿಜವೊ!

" ೩ "

"ಕೌಂತೇಯನೆ, ನೀನ್ ಚಿಂತಿಪುದದಕ್ಕೆ ನಿಜದಿ,
ಸತ್ವಗುಣದಾ ಶ್ರದ್ಧೆಯಿಂದಿಹನು ಜಗದಿ
ದೇವತೆಗಳನು ಆರಾಧಿಪನು ಕೇಳ್ ನಿತ್ಯ;
ರಾಜಸದ ಶ್ರದ್ಧೆಯನು ತಾಳಿಹರು ನೋಡಾ
ಯಕ್ಷ ರಾಕ್ಷಸರನ್ನು ಪೂಜಿಪರು ಒಲಿದು;
ತಾಮಸದ ಶ್ರದ್ಧೆಯದು ಅದಕೊಪ್ಪುವಂತೆ
ಆರಾಧಿಪುದು ಭೂತ ಪ್ರೇತಗಳನೆಲ್ಲ,
ಇದೆ ಶ್ರದ್ಧಾಗುಣ ಫಲವು ಇಹದಲ್ಲಿ ಕೇಳ್!

" ೪ "

"ಎಲೆ ಧನಂಜಯನೆ ಕೇಳ್, ಕೇಳುವೆನು ಇಲ್ಲಿ,
ಮದವು ಮಮಕಾರ ಅಹಂಕಾರಗಳು ಕೂಡಿ
ಸುಖ ಭೋಗ ವಿಷಯದಲಿ ಆಸಕ್ತರಾಗಿ
ಭೋಗ್ಯ ವಸ್ತುಗಳಲ್ಲಿ ಲೋಭವನು ತೋರಿ,
ಕಾಮ ಮೋಹಾದಿಗಳ್ ನೆಚ್ಚುತಲಿ ಬಾಳಿ
ಸ್ಮೃತಿ ಶಾಸ್ತ್ರವೊಪ್ಪದಿಹ ವಿಧಿಯನನುಸರಿಸಿ
ಅಕ್ರಮದಿ ಆರಾಧಿಸಿಯು ಗೈವರಾರಾ
ಘೋರತಪದಲಿ ನಿರತರಾಗಿಹರು ಯಾರಾ—

" ೫ "

"ಅಂತಹರು ಅನುಸರಿಸಿದಾ ಕರ್ಶಣ ಕರ್ಮವನ್,
ದೇಹದೊಳಗಿನ ಪಂಚ ಭೂತಗಳನೆಲ್ಲ
ಸರ್ವಾಂತರ್ಯಾಮಿಯಾಗಿಹ ನಾನು ಇಲ್ಲಿ
ಜೀವಾತ್ಮನೊಳು ಇರಲು ಎಲ್ಲವನು ನಿಜದಿ,
ಅನಗತ್ಯವಾಗಿ ಕೇಳ್ ಪೀಡಿಸುವರವರಕ್ಕೆ
ಅಸುರ ಸ್ವಭಾವದವರೆಂದೆನುತ ತಿಳಿಯಿನ್ನು",
ಎಂದೆನುತ ಗೋವಿಂದನಂದನದೆ ಅಂದು
ತಾಮಸಿಕ ಶ್ರದ್ಧೆಯ ನಿರರ್ಥಕತೆಯನ್ನು!

" ೬ "

"ಎಲೆ ಮಿತ್ರ, ತತ್ವದರ್ಶವಿದ ಕೇಳು ಪಾರ್ಥ,
ಆವಾವ ಜೀವಿಗಳು ತಮಗೊಪ್ಪುವಂಥಾ
ತಮ್ಮ ಗುಣನೀತಿಯನು ಮೀರದಾಗಿಹಂಥಾ
ಆಹಾರಗಳ ಸೇವಿಸುವುದಂತು ನೋಡೊ—
ಅದರಂತೆ ಯಜ್ಞ ದಾನಾದಿಗಳ ರೀತಿ
ತಪೋವ್ರತದಾ ಕ್ರಮದ ಆ ಕ್ರಮದ ನೀತಿ,

ಸತ್ವ ರಾಜಸ ತಮೋಗುಣಗಳವು ಮೂರು
ಭೇದಕೊಳಗಾಗಿರುವರು ತರವ ನೋಡು!

॥ ೭ ॥

"ಸತ್ವ ಗುಣಾನ್ವಿತಗಳೆ ಸಾತ್ವಿಕರು ಜಗದಿ,
ತಮಗೊಪ್ಪುವ ತಿನಿಸು ಭೋಜ್ಯಗಳು ಅಲದಿ
ಜ್ಞಾನವು ಮನೋಬಲವ ಹೆಚ್ಚಿಯುತಲಿ ನಿತ್ಯ
ಆಯುರಾರೋಗ್ಯ ಸುಖ ಸಂತೋಷಗಳನು
ಪ್ರೀತಿ ಅಭಿಮಾನಗಳ ನಿಲ್ಲವನು ನಮಗಿದಿ
ಹೆಚ್ಚಿಸುತ ಸತ್ವಗುಣವನ್ನು ನಮರಸದಿ
ಪೋಷಿಸುವ ದಿವ್ಯಗುಣಾನ್ವಿತಗಳು ಅವರು
ಜೀವನವ ತಾವ್ ಧನ್ಯವಾಗಿದ್ದಾರೆ ಅವರು —

॥ ೮ ॥

"ಸಾತ್ವಿಕರು ಅಂತಿರಲಿ ರಜೋಗುಣಿಗಳಂತು
ತಿನಿಸನೆಲ್ಲಾ ಅತಿ ಖಾರ ಹುಳಿ ಉಪ್ಪು ಎಂದು,
ಅತಿ ಉಷ್ಣ ಬಹು ತೀಕ್ಷ್ಣವಾದುದನೆ ತಿನಲು
ಜ್ಞಾನೇಂದ್ರಿಯಗಳನ್ನೆ ಕ್ಷೀಣಿಸುವುದು ಸುಲಭ;
ಮನೋವ್ಯಾಧಿಗೆ ಹೇತುವಾಗಿಹ ನಿಸ್ಸತ್ವ
ದೇಹಗುಣಕೊಲ್ಲದಿಹ ಭೋಜ್ಯವದು ನೋಡಾ,
ಕಷ್ಟ ಅನುತಾಪವು ಅನಾರೋಗ್ಯವದರಾ
ಕೀಡಾಗಿಸುವುದಿ ರಜೋಗುಣರಾ ಸ್ವಭಾವ!

॥ ೯ ॥

"ಕೇಳ್ ರಾಜಸಾ ಗುಣಿಗಳಂತಿರಲಿ ನರನೆ,
ತಾಮಸರಿಗೆ ಒಳಗಾದ ಜನವಂತು ಜಗದಿ,
ಭೋಜ್ಯ ಪಾನೀಯಗಳ ಸೇವಿಸುವ ಬಗೆದಿ,
ತಣಿದು ಹಳಸಾದುದಾಂಜಲಿನಿದುದು ಅಂತೆ
ನೀರಸದಿ ಸತ್ವ ರುಚಿಯಲಿ ಇಲ್ಲದುದು ಎಲ್ಲ,
ಹಳಸಿದುದು ಕೊಳೆತು ದುರ್ಗಂಧಕೊಳಗಾದ
ತಿನಿಸು ಗುಣಮನದ ಪ್ರತಿಬಿಂಬದಂತಿಹುದು,
ತಾಮಸರಿಗದು ಪ್ರಿಯವೆಪೊ ಕೇಳಿತ್ತು ಮಿತ್ರ.

॥ ೧೦ ॥

"ಅಂತಿರಲಿ ಎಲೆ ಧನಂಜಯನೆ ಈ ಜಗದಿ
ಫಲಾಪೇಕ್ಷೆಯಾ ಕಾಂಕ್ಷೆಯನು ಮನದಲಿರದೆ,
ನಿಷ್ಕಾಮ ಕರ್ಮವನು ನಿಸ್ವಾರ್ಥ ಗಿತ್ನಾದಿ
ನಡೆಸುತಲಿ ದೃಢಚಿತ್ತದಲಿ ನಿತ್ಯ ಕೇಳ್ತಿ,
ದಿವ್ಯ ಮಾರ್ಗವು ಸನ್ಮಾರ್ಗವೆಂದೆನುತ ಎಲ್ಲಾ
ವಿಧಿಯುಕ್ತ ಕಾರ್ಯಗಳು ಯಜ್ಞಾದಿ ಕರ್ಮ —

ಸಿದ್ಧವನು ಶರಣಾರ್ತನಿಗೆ ಒಯ್ಯುತಿಹುದೆ
ಸಾತ್ವಿಕ ಕರ್ಮವು ಧರ್ಮವೋ ಜಗದೆ ನೋಡೆ!

" ೧೧ "

"ಪೋಲ ಕಿರೀಟವಂತೆ, ಜೀವಿಗಳ ಗತಿಗಾಗಣವು
ಮನೆತನ ಕುಲದವಿಷ್ಟು ಇನ್ನೆಲ್ಲ ತೆರವು —
ಕೀಳ್ಮೆ ಮೇಲಾಟಿಕೆಯನು ನಡೆಸುತಿಹ ಕರ್ಮ
ಅಹಂಭಾವದಲಿ ನಡೆಸುತಿಹ ಲೋಕ ಕಾರ್ಯ,
ಬರಿ ಕಪಟತನದಿಂ ಸಾಗುವಾ ರೀತಿ ನೀತಿ —
ಸರ್ವವು ರಾಜಸ ಗತಿಕಾವು — ಅಂತಿಹುದು ಖ್ಯಾತಿ,"
ಎಂದು ಮಹರ್ಷಿಯು ಒಂದೊಂದನದನಿತ್ತು,
ವಿವರಿಸಿದನೋ ನರಗೆ ಅದಂತೆ ಗೀತೋಕ್ತಿ!

" ೧೨ "

"ಶಾಸ್ತ್ರಗಳ ಆಧಾರವಿಲ್ಲದಿಹ ಭಕ್ತಿ,
ಶಾಸ್ತ್ರೋಕ್ತವಲ್ಲದಾ ದ್ರವ್ಯಗಳ ಶಕ್ತಿ,
ವೇದೋಕ್ತ ಮಂತ್ರಗಳು ಇಲ್ಲದಿಹ ಪೂಜೆ,
ದಕ್ಷಿಣೆ ಸಮರ್ಪಣೆಗಳಿಲ್ಲದಿಹ ಶ್ರದ್ಧೆ, —
ಮನೊಂದು ವಿಧಿಯಿಲ್ಲ ಗತಿಯಿಲ್ಲ ಕೇಳಾ
ದೈವಾರ್ಪಣಾ ಭಾವ ಬಯಕೆ ಅದಕೆ ಇಲ್ಲ —
ಎಂಬಂತೆ ನಡೆಸುತಿಹ ಕರ್ಮಗಳು ಇಹವೆ
ತಾಮಸದ ನೀತಿಯಿಂದೆನಿಸುವುದು ನರನೆ!

" ೧೩ "

"ಕೇಳ್ ತಪೋನಿಷ್ಠನಿಗಳಾ ವಿವರವನು,
ಪೂಜಿಪುದು ಬ್ರಾಹ್ಮಣೋತ್ತಮರನು ನೋಡು;
ಸತ್ಕರಿಸುವುದು ಗುರುಗಳನು ಹಿರಿಯರನು,
ವಿದ್ವತ್ಪೂರ್ಣ ಸಾಧುರನು ಬುಧರನು ಸರ್ವರ್,
ಶಾಂತಿಸಹ ಶುಚಿತ್ವದಿ ಋಜುತ್ವಗಳನೆಲ್ಲ,
ಬ್ರಹ್ಮಚರ್ಯವು ಅಹಿಂಸಾದಿಗಳನೆಲ್ಲ, —
ಅಂತಿರ್ದೊಡದೆ ಕೇಳ್ವೆ ಭಕ್ತ ಜನ ಕುಲವು
ಆಚರಿಪ ದೈಹಿಕ ತಪಸ್ಸಿದೆ ನಿಜವು!

" ೧೪ "

"ಕೇಳುತಿರು ವಾಚಿಕವೋ ತಪವದಿನ್ನೊಂದು
ಜನಮನವ ನೋಯಿಸದ ಒಲುಮೆಯುತ ಅಂತು,
ಸಿಟ್ಟುತನದಲಿ ಬಿಟ್ಟು ನುಡಿಯ ಕೇಳುತ್ತ
ಹಿತಕರವು ಅತಿಪ್ರಿಯವು ಆದ ನುಡಿಯುತನ,
ಕೇಳುತಲಿ ಆಡುತಲಿ ವಿನಯದಲಿ ನಿತ್ಯ
ವೇದಾಧ್ಯಯನದೊಡೆಯು ಶ್ರುತಿ ಸ್ಮೃತಿಗಳನು

1399

ವಾಚಿಪ್ರದು ಜ್ಞರಿಸುವುದು ಸಾಧುವುದು ಎಲ್ಲ,
ವಾಚಿಕ ತಪಸ್ಸಿನವು ಎಂದೆನಿಪುದಂತೆ!

" ೧೫ "

"ಮನೋತೃಪ್ತಿಯೊಡೆ ಸೌಮ್ಯತೆಯನಂತು ತೋರಿ,
ಮಿತಭಾಷಿಯೊಲು ಮೌನದ ವಿಚಾರ ಸಾರಿ,
ಸಾಧನಾ ಗತ್ಯಾ ಮನವ ಧ್ಯಾನಾಭಿಯೋಗ,
ಇಂದ್ರಿಯದ ಸಂಯಮದ ಶುದ್ಧತೆ ಭಾವ,
ರಂತೆಯ ತದೇಕ ಚಿತ್ತದ ಶುದ್ಧ ಸಿದ್ಧಿ —
ಇವು ಮಾನಸಿಕ ತಪವು ಕೇಳ್ ರವಿ ಪ್ರಸಿದ್ಧಿ!"
ಎಂದೆನುತ ಹರಿ ಹೇಳ್ದನೆಂದೊಂದನಂತೆ
ತಪೋವ್ರತದಾ ವಿವಿಧ ಯೋಗವನು ಬಿಳಿದೆ.

" ೧೬ "

"ಇವು ಮನೋವಾಕ್ಕಾಯ ಕೊಪ್ಪಿಯಿಹ ತಪವೊ
ಶ್ರೈಷ್ಠವು ವಾಚ್ಯ ಮಾನಸಿಕ ತಪದಂತೆ,
ಇವು ಮೂರು ವಿಧ ತಪೋನಿಯಮವಿದು ನೋಡ
ಫಲಾಪೇಕ್ಷೆಯಿಡದೆ ಶ್ರದ್ಧೆ ನಡೆಸುತಲಿ ನಿರುತ,
ಅತಿ ಶ್ರದ್ಧೆಯಲಿ ತಪೋಬದ್ಧವಾಗಿದ್ದು
ನಡೆಸುವವರಿಗಳುವ ಭಾವ ಭಾವಗಳುಳ್ಳಂತೆ
ಶುದ್ಧತೆಯಲಿ ದೊರೆತುದೆ 'ಸಾತ್ವಿಕವು ನಿಜವೊ,
ಅದುವೆ ಕೇಳ್ ಸತ್ವಗತನಾದಾ ತಪೋವ್ರತವೊ!

" ೧೭ "

"ಜನದಿಂದ ಮಾನ್ಯತೆಯ ಪಡೆಯಲೆಂದೆನುತ
ಜನದ ಪೊಗಳಿಕೆಗೆ ತಾನ್ ಗುಳಾಗಲೆನುತ
ಪರರ ಸ್ತುತಿ ಸ್ತೋತ್ರಗಳ ಪಡೆಯಲೆಂದೆನುತ
ಫಲಾಪೇಕ್ಷೆಯಾ ಕಾಂಕ್ಷೆಯಲಿ ನಡೆಸಿ ಕಾರ್ಯ,
ಅಹಂಕಾರದ ಪ್ರದರ್ಶನದೊಡೆಯ ಪೂಜೆ,
ತೋರಿಕೆಗೆ ಕಪಟತನದಿಂದ ಗತಿಹ ನಲಿ
ಆ ಸ್ವರೂಪ ಸಮರ್ಪಣ ನಿರರ್ಥಕವೊ ಮಿತ್ರ,
ಆ ತಪವೆ ರಾಜಸಗತನಾದ 'ನೀತಿಯೆಂದೆನಿಸೆ!

" ೧೮ "

"ಕೇಳ್ ಲೆತ್ತ ಗಾಂಡೀವಿ, ಲೋಕದ ಕಾಟಿದ್ಯಾ,
ಅವಿವೇಕ ಅತ್ಯಮತದ ಲೆಸಗುತಿಹ ಕಾರ್ಯ,
ಹಟ ಚಟ. ಕಾಟೊಕ್ಕಿಗೆಂದೆನ್ನುತಲಿ ತಪವು,
ಪರರ ಪೀಡೆಸಿಗೆ ಎಂದು ನಡೆಸುತಿಹ ವ್ರತವು,
ತನ್ನ ತಾನ್ ಅಳಿದೆಯ ಇತರರನು ದಣಿಸಿ,
ತಮೋಗತನಾದ ತೀರ್ಕ ಸದ್ದೋಕದಲ್ಲಿ,

ಹರಿಸಾವುದೊಡೆ ಲೋಕದಾ ಹಾನಿ ಬಯಸಿ 1400
ಗೈಯುತ್ತಿಹ ತಪವದುವೋ ತಾಮಸದ ನೀತಿ!

॥ ೧೯ ॥

"ಅಂತಿರಲು ಕೇಳ್ ಸಾತ್ವಿಕಾ ಗುಣದ ಮೇಲ್ಮೆ
ಪ್ರತಿಫಲವನಿಚ್ಛಿಸದೆ ನೀಡುತ್ತಿಹ ಒಲ್ಮೆ,
ದೇಶವನು ಕಾಲವನು ಪಾತ್ರವನು ಎಲ್ಲ,
ಗಣಿಸುತ್ತಲಿ ಗೌರವದಿ ನೀಡುತ್ತಿಹ ದಾನ,
ತನಗೆ ಹಿತವೆಸಗದಿಹನಿಗು ತನ್ನ ದುಮ್ಮಾನ,
ತನಗೆ ಉಪಕಾರವನು ಬಯಸದಿದೆ ದಾನ,
ನೀಡುವುದೆ ಲೋಕದಲಿ ಸುಂದರವು ಮಿತ್ರ
ಅದುವೆ ಸಾತ್ವಿಕ ದಾನವೋ ಜಗದಿ ಕೇಳಾ!

॥ ೨೦ ॥

"ಫಲವನು ಅಪೇಕ್ಷಿಸುತ್ತೆ ಮಾಡುತಿಹ ದಾನ,
ನಿತ್ಯ ಪ್ರತ್ಯುಪಕಾರವನು ಬಯಸಿ ದಾನ,
ಸ್ವಾರ್ಥದ ದ್ವೇಷದಾ ಆಕಾಂಕ್ಷೆಯೊಡನೆ,
ಬರಿ ಅಲ್ಪ ದ್ರವ್ಯವನು ದಾನವೆಂದೀಯುತ,
ಬೇಡದಿಹ ವಸ್ತುಗಳನೆಲ್ಲವನು ಅಂತೆ
ಉಪಕಾರಕೆಂದೆನುತ ನಿತ್ತೇಲ ನೀಡುತ,
ಅದುವೆ ಲೋಕವ ಹರಿಕೆಗೊಳ್ಳಿಸುತಿಹ ದುಮ್ಮಾನ,
ರಾಜಸದ ದಾನವದುವೋ ಕೇಳು ಪಾರ್ಥ!

॥ ೨೧ ॥

"ಅಂತಿರಲು ತಾಮಸದ ತಾಪವದನೆಲ್ಲ,
ಏನೆಂದು ಹೇಳುತಿಹೆ ಕೌಂತೇಯ ಕೇಳಾ!
ಏನೊಂದು ಪರಿಣಾಮದಾ ಅರಿವೆಯಿಲ್ಲದೆ
ಕಾಲ ಗುಣ ನೀತಿ ದೇಶ ಪಾತ್ರವದನಂತೆ
ಗಣಿಸದೆ ಅಲಕ್ಷ್ಯದಲಿ ಕೊಡುತಲಿಹ ದಾನ
ಸನ್ಮಾನ ಸತ್ಕಾರ ಸತ್ಪಾತ್ರಗಳನಾ
ಲಕ್ಷಿಸದೆಯೋ ದುರಭಿಮಾನದಲಿ ಕೊಡುವ
ನೀಚವದು ತಾಮಸದ ದಾನವೆಂದೆನಿಸಾ!

॥ ೨೨ ॥

"ಅರ್ಜುನನೆ, 'ಓಂ' ಎಂಬ ಓಂಕಾರದೊಡನೆ
ಪ್ರತ್ಯಕ್ಷತ ಅನಾದಿಯಿಹ ತಿರುಮಂತ್ರ ಒಂದೇ;
ಓಂ - ತತ್ - ಸತ್ ಎನುತ ಧ್ವನಿ ಪ್ರತಿಧ್ವನಿಸುತಿಹುದು,
ವೇದೋಕ್ತವೋ ಪೂರ್ಣ ಮಂತ್ರವದು ನಿಜವು;
ವೇದಾದಿಗಳು ಯಜ್ಞ ಬ್ರಾಹ್ಮಣರು ಎಲ್ಲ,
ಉತ್ಪನ್ನದುವೊ ಓಂಕಾರದಾ ನಾದದೊಡನಾ—

ಆನ್ ಆದಿಶಕ್ತಿ ಮೂಲವೋ ಈ ಜಗದಾದಿಯಾಗಿ,
ಇದೆ ಸನಾತನ ಯೋಗದಾ ಕಾಲವದುವಾ!

" — ೨೩ "

"ಸತ್ ಬ್ರಹ್ಮವಾದಿಗಳು ಎನಿಸುತಿಹ ಯಜ್ಞ
ದಾನವೂ ತಪೋವ್ರತವೂ ಶಾಸ್ತ್ರೋಕ್ತ ಕರ್ಮಗಳ್,
ಪೂಜೆಯು ಘನಸ್ವರಗಳ್ ವಿಧಿಯು ನಿಯಮಗ್
ಸರ್ವವೂ 'ಓಂ'ಕಾರದ ಆ ಝೇಂಕಾರದಿಂದ,
ಗೀರ್ವಾಣ್ಗ ಪದಮಾನ ಉಚ್ಚರಣೆಯಿಂದ
ಹರಿನಾಮ ಹರಸ್ತೋತ್ರದಾ ಚೆಲುವಿನಿಂದ,
ಆರಂಭವಾಗುತಿಹ ನಭದುದ್ದ ಗಾನ,
ಹರಿ ಪಾದದಾ ಪೂಜೆ ಓಂಕಾರ ನಾದಾ!

" — ೨೪ "

"ಮೋಕ್ಷಾರ್ಥಿಗಳೂ ಫಲಾಪೇಕ್ಷೆಯೇನಿಲದೆ
ನಡೆಸುತಿಹ ಯಜ್ಞ ತಪೋದಾನಗಳು ಜಗದಿ
ಹಲವಾರು ದಿವ್ಯ ವಿಶೇಷ ಕ್ರಿಯೆಗಳು ಪೂರ್ತಿ
'ತತ್'ಎಂಬ ಪದ ಬ್ರಹ್ಮವಾಚಕವು ಆಗಿ,
ಪದನಾದ ಕನಿತವಾದ ಉಚ್ಚರಣೆಯಿಂದ
ಹೋಮ ಹವನಾದಿಗಳ ಮೇಳಗಳಲಿಲ್ಲ,
ಜರುಗುತಿಹರದುವೆ 'ತತ್'ಎಂಬ ಪದಮಂತ್ರ),
ದೇವತ್ವವದುವ ಆಸ್ತಿ-ತತ್ಎಂಬ ಸೂತ್ರ!

" — ೨೫ "

"ಸತ್" ಶಬ್ದವದು 'ಸತ್ಯ'ವೆಂಬುವದರ ದ್ಯೋತಕ,
ಈ ವಿಶ್ವ ಸೃಷ್ಟಿಗಿದೊ 'ಸತ್' ಆದುವೆ ಸೂತ್ರ,
ಸರ್ವೋತ್ತಮವಾದುದಿಹುದೆ 'ಸತ್' ನಿಜವು,
ಯಾಗ ಯಜ್ಞಾದಿಗೆ 'ಸತ್' ನಾಂದಿ ಇದೆ ಕೇಳು!
ಚಿತ್ ಶಕ್ತಿ ತತ್ ಸೂಕ್ತಿಗಳವು ಸತ್ ಜಗದಿ
ಸತ್ ಚಿದಾನಂದನವನೇ ಆತ ಕೇಳ್ತೆ!
ಸತ್ ಕಾಲವು ಸತ್ ಬಲವು ಸತ್ ಬುದ್ಧಿಯೆಲ್ಲ
ಸತ್ ಬ್ರಹ್ಮ ಸತ್ ಧರ್ಮವೆಲ್ಲ ಸತ್ ಯೋಗ!

" — ೨೬ "

"ಏನೇನು ವಿಧಿಯುಕ್ತ ಕರ್ಮಗಳು ಜಗದಿ,
ದಾನ ಧರ್ಮವು ತಪೋವ್ರತಗಳವು ಎಲ್ಲದಿ,
ಸ್ಮರಣವು ದೃಢತಪವು ಮನದೊಲವು ಕೂಡಿ
ಸತ್ ನಿಯತವು ಸದ್ಭಾವನದ ಬಾಳು ಸೇರಿ
ಸತ್ ಜನವು ಸತ್ ವಿಧಿಯು ಸತ್ ಚಿಂತನೆಗಳು
ಸತ್ ಮಂತ್ರದಾ ವರವು ಎಂದೆನಿಸಿರೆ ನೀನು,"

ಎಂದೆನುತ್ತ ಗೋವಿಂದನತ್ತ ಮುದದಿಂ ಅಂದು
ಹೇಳಿದನು 'ಸತ್'ಮತಂತ್ರದಾ ಗೂಢವನ್ನು! —

" ೨೭ "

"ಎಲೆ ಸವ್ಯಸಾಚಿ ಕೇಳು, ಶ್ರದ್ಧೆಯೊಳಿಲದೆ
ಕೈಕೊಂಡ ಯಾಗಗಳು ಯಜ್ಞಗಳು ಜಗದೆ,
ಶಾಂತಿಯು ಅಶ್ರದ್ಧೆಯಲಿ ಎಸಗಿದಾ ತಪವು
ದಾನ ಧರ್ಮವು ಕರ್ಮವೆಲ್ಲ ಇಹಪರದಲ್ಲಿ,
ವ್ಯರ್ಥವು ನಿರರ್ಥಕವೆಂದೆನಿಸುವುದು ಪಾರ್ಥ,
'ಅಸತ್' ಎಂದವು ಲೋಕದಲಿ ಧ್ವನಿಸುತಿಹುದಾ!
ಸತ್-ಅಸತ್‌ಗಳಲಿ ಜಗವು ಜಾಗೃತಿಹುದಲ್ಲಾ!"
ಎಂದು ಹರಿ ಹೇಳ್ದ ಶ್ರದ್ಧಾತ್ರಯವಿದ ಹುರುಳಿದೋ!

" ೨೮ "

—— x ——

(ಹದಿನೇಳನೇ ಅಧ್ಯಾಯ ಸಂಪೂರ್ಣವು.)

—— x ——

ಅಧ್ಯಾಯ ೧೮ – ಮೋಕ್ಷ ಸನ್ಯಾಸ ಯೋಗ!

"ಎಲೆ ಮಹಾಬಾಹೋ ಕೇಳು, ಮನದ ಉದ್ವೇಗ
ಹೋಗಿಸಿ ವಿಗದೀನತೆ ಸನ್ಯಾಸವದು ತ್ಯಾಗ?
ಹೇ ಹೃಷೀಕೇಶ ಏನ್ ಸ್ವರೂಪವೋ ಅದರ?
ಕರ್ಮ ಸನ್ಯಾಸವದರ ರೂಪವೇನು?
ಕರ್ಮತ್ಯಾಗದ ಯೋಗವೇನದುವೋ ಹೇಳು
ಗೆಲ್ಗೆ ಇವುಗಳೆರಡರಲಿ ಇಹ ಮಾಯೆಯದನು
ತಿಳಿಯಲಿಚ್ಛಿಸಿ ಮೋಕ್ಷ ಸನ್ಯಾಸ ಯೋಗ –
ಹೇ ಕೇಶಿಸಂಹಾರಕ ಹೇಳೆಂದ ಅವನು!"

"೧"

"ಕೃಷ್ಣನಲಿ ಈ ಪರಿಯಲಿ ಅರ್ಜುನನು ಅಂದು
ತಲೆದೂಗುತಲಿ ಹರಿಯು ಹೇಳಿದನು ಇಂತು:
"ಫಲ್ಗುಣನೆ, ಕೇಳಲಿಕ್ಕೆ ಫಲಾಪೇಕ್ಷೆಯಲಿ
ನಡೆಸುತಿಹ ಕರ್ಮಗಳ ತ್ಯಜಿಸುವುದೆ ಜಗದಿ
ಸನ್ಯಾಸವೆಂದೆನಿಸಿ ಕರ್ಮಫಲವದಕೆ
ಆಶಿಸದೆಯೇ ಸರ್ವವನು ಪರಿತ್ಯಾಗಿಸೆ
ಅದು ತ್ಯಾಗವೆಂದೆನ್ನುವರು ವಿದ್ವಜ್ಜನರು
ಕೇಳು ಕರ್ಮ ಸನ್ಯಾಸ ತ್ಯಾಗವಿದು ನಿಜವು!

"೨"

"ಕರ್ಮಗಳು ಕಾಮ ಮೋಹಾದಿಗಳಿಗಿಹದೆ
ರಾಗ ದ್ವೇಷಾದಿಗಳಿಗೆಡೆಯಾಗಿ ಅಂತೆ
ಇರೆ ಅದುವೋ ತ್ಯಾಜ್ಯವೆಂದೆನ್ನುವರು ಕೆಲರು,
ಅಂತೆಯೆ ಲೋಕದಲಿ ಎಸಗುತಿಹ ಕೆಲವು
ಯಜ್ಞಗಳು ದಾನವು ತಪೋವ್ರತಗಳೆಂಬ
ಧಾರ್ಮಿಕ ಕರ್ಮಗಳು ತ್ಯಾಜ್ಯವೆನಲ –
ಎಂದೆನುತ ಹೇಳಿಹರು ಪಂಡಿತರು ಕೆಲರು –
ಕರ್ಮಾಕರ್ಮಗಳಲ್ಲಿ ಭೇದವಿಹುದಿಂತು!

"೩"

"ಹೇಳುವೆನು ಸಂದೇಹಕೆಡೆಯಾದ ವಿಷಯ
ಆ ನಿಶ್ಚಯದಿ ಹೇಳುತಿಹೆ ಅದನೆ ಕೇಳು!
ತ್ಯಾಗದಲಿ ಇವೆ ಮೂರು ತರವದುವೋ ಪಾರ್ಥ
ಕರ್ಮತ್ಯಾಗವು ಒಂದು ಫಲತ್ಯಾಗವೊಂದು;
ಅಂತೆಯೇ ಕರ್ತೃತ್ವ ತ್ಯಾಗವೊಂದಿಹುದು –
ಇಂತಿಹ ವೈವಿಧ್ಯದಲಿ ಇಹ ಭೇದವನ್ನು

1404

ವಿಪರೀತವೆನಿಸೊ ಮಿತ್ರ ಕೇಳಿತಿತ್ತ ಉದಿಸಿ,"
ಎಂದೆನುತಲಾ ಹರಿಯದು ಹೇಳಿದನೊ ಕೇಳು!

" ೪ "

"ಯಜ್ಞಗಳು ಯಾಗಗಳು ದಾನವು ತಪಸ್ಸು
ನಿಷ್ಕಾಮದಾ ತಾವೆನಿಕ ಕರ್ಮಗಳವು,
ಮನೋ ಸಂಸ್ಕಾರವನು ಬೆಳೆಸುವ ಮಾರ್ಗ,
ನಿತ್ಯವೂ ಅನುಸರಿಸಲಿಹ ಲೋಕಧರ್ಮ;
ಯಜ್ಞವು ತಪವು ದಾನಗಳು ಮನುಜ ನಿತ್ಯ
ಪಾಪಗಳ ನೀಗಿಸುವ ಸಾಧನವು ಕೇಳು,"
ಎಂದು ವಸುದೇವಸುತ ಹೇಳಿದನು ನರಗೆ
ಮೋಕ್ಷವನು ಹೊಂದಲಿಹ ಬಗೆ ಇದೇನೆನುತ!

" ೫ "

"ನಿತ್ಯ ವಿಧಿಗನುವಾಗಿ ಕರ್ಮಗಳನೆಸಗಿ
ಶಾಸ್ತ್ರೋಕ್ತ ಕ್ರಿಯೆಗಳ ಶ್ರದ್ಧೆಯಿಂದೆಸಗಿ
ತಾನು ತನ್ನ ತನ್ನದೆಂಬಹಂಕಾರ ಬಿಟ್ಟು
ಫಲಾಪೇಕ್ಷೆಯು ಕಾಂಕ್ಷೆಯನು ಪೂರ್ತಿ ತೊರೆದು
ನಿಷ್ಕಾಮ ನಿಸ್ವಾರ್ಥ ಭಾವದಲಿ ದಿವ್ಯ
ಜ್ಞಾನವನು ದಾನವನು ಧರ್ಮವನು ಎಲ್ಲ
ನಡೆಸಿದೊಡೆ ಅದೆ ದೈವ ಪ್ರಿಯವಾದ ಕರ್ಮ
ಎಂದನಾ ನಿಶ್ಚಯದಿ ನೆಚ್ಚಿಕೆಯೊ ಪಾರ್ಥ!

" ೬ "

"ಫಲದಾಸೆ ಕೇಳಿನ್ನ ನಿತ್ಯ ವಿಧಿ ನಿಯಮಾ
ನೈತಿಕ ನೈಮಿತ್ತಿಕಾ ಕರ್ಮಗಳನೆಲ್ಲಾ,
ಜೀವಾತ್ಮಗೊಪ್ಪಿಹ ಕರ್ತವ್ಯಗಳನ್
ಎಸಗದೆಯೆ ಸನ್ಯಾಸದಿ ಮೋಹದಿಂದ
ಬಾಳ್ವೆಡದೆ ಅಶ್ರುತವು ಅಪ್ರಿಯವು ನಿಜವಾ
ಅಜ್ಞಾನದಲಿ ಜನ ಜಾಡ್ಯಾನ್ಯದಿಂದಾ
ಕರ್ಮಗಳನೆಸಗದೆಯೆ ಇದ್ದರದೂ ಜಗದಿ
ತಾಮಸದ ತ್ಯಾಗವೆಂದೆನ್ನುವರೊ ನಿಜದಿ!

" ೭ "

"ದೇಹವನು ದಣಿಸುತಿಹ ಅಂಜುತಲಿ ಕೇಳು
ಶರೀರಶ್ರಮದ ಕಾರ್ಯಕೆ ಹೆದರಿಗಳು ತರವಾ
ದುಃಖಿಯದೆ ಆಲಕ್ಷ್ಯದಲಿ ಕರ್ಮಗಳನಂತ
ಎಸಗದೆಯೆ ಇದ್ದರದೆ ರಾಜಸದ ಗುಣವು,
ರಜೋಗುಣದಾ ತ್ಯಾಗವದು ನಿಷ್ಫಲವೋ,
ಜೀವಾತ್ಮನಿಗೆ ಒಪ್ಪದಿಹ ಹಿಂದು ಭೋಗ."

ಎಂದೆನುತ ನರಹರಿಯು ಹೇಳಿದನು ಸಿರಿಗಾಡಿ
ಗೀತೋಕ್ತಿಯಾ ಸೂಕ್ತಿಗಳನಿಂತು ಓದಿ!

" ೮ "

"ಕರ್ಮದಿಂದ ತನ್ನತನದಹಂಕಾರ ಬೆಳೆದು
ಕಾಮ್ಯಫಲವಿದೆನಪೇಕ್ಷಿಸದೆಯೇ ಇದ್ದು,
ದುಃಖತಿ ಶಾಸ್ತ್ರೋಕ್ತನಾಗಿ ವೃದ್ಧಿಯಾಗುತಿ ನಿತ್ಯ
ದ್ವೈವ ಕಾರ್ಯವನು ತನ್ನ ಕರ್ತವ್ಯವೆನುತ
ಕರ್ಮಫಲದಾ ತ್ಯಾಗವನೆ ಶ್ರೇಯವಾಗಿ
ಕರ್ಮಾಭಿಮಾನದಿಂದ ಕರ್ಮವನು ಎಸಗಿ
ಬಾಳುತಿಹನವನದೇ ಸಾತ್ವಿಕದ ತ್ಯಾಗ
ಸತ್ವಗುಣದಿಂದುಂಟಾಗುವ ಕರ್ಮಯೋಗ!

" ೯ "

"ಹಿತಾಹಿತರನು ಹಿತಕಾರ್ಯಗಳನೆಲ್ಲ
ದ್ವೇಷಿಸದೆ ಇದ್ದರಿಹುದವರೇ ಸತ್ವಗುಣವೋ,
ಶುಭಾಶುಭರನು ಶುಭ್ರಕಾರ್ಯಗಳನೆಲ್ಲ
ಮಿತಿಮೀರಿ ಪೊಗಳದೆಯೆ ಇದ್ದರೆ ನೋಡ
ಸಾತ್ವಿಕವು ಅದೆ ಸಾತ್ವಿಕಾ ತ್ಯಾಗ ಜಗದಿ—
ಅಂತಹರು ಸತ್ವಗುಣ ತ್ಯಾಗಿಗಳು ಎನುತ
ಖ್ಯಾತರಾಗುವರವರೇ ಜ್ಞಾನಿಗಳು ಪಾರ್ಥ,
ಅದುವೆ ಕೇಳ್ ಸಾತ್ವಿಕರ ಸತ್ವವಿದು ಜೀವಾ!

" ೧೦ "

"ದೇಹಾತ್ಮನೋ ತನ್ನ ದೇಹವಿರುವವರೆಗೆ
ಕರ್ಮಗಳನಾ ದೇಹದಿಂದ ಎಸಗದಂತೆ
ಇರುವುದದಕೆ ಸಾಧ್ಯವೇನಿಲ್ಲ ಕೇಳು ಮಿತ್ರ,
ದೇಹವಿರುವವರೆಗಂತು ಕರ್ಮದಿಂ ಜೀವಾ
ಇರುವುದಂತದರಿಂದ ನಿಶ್ಚಯವು ಕರ್ಮ
ಫಲಾಪೇಕ್ಷೆಯೇನಿಲ್ಲದೆ ನಡೆಸುಹನೆ ಕೇಳಿ
ಆತನದುವೆ ತ್ಯಾಗಿಯೆಂದೆನಿಸಿಯುವನೊ ಪಾರ್ಥ"
ಎಂದೆನುತ ಹೇಳಿದನು ಗೋಪಾಲಕೃಷ್ಣ. —.

" ೧೧ "

"ಕರ್ಮದಿಂ ಕೇಳ್ ಇಷ್ಟವು ಪ್ರಿಯವೊಂದೊಂದು
ಅಂತೆಯೇ ಅನಿಷ್ಟದಾ ಅಪ್ರಿಯವೊಂದಂತು—
ಅದರೊಡೆಯೆ ಅವುಗಳ ಮಿಶ್ರಣವು ಎಂಬಂತೆ
ಇಷ್ಟವು ಅನಿಷ್ಟವಿವು ಮಿಶ್ರಿತಃ ಮೂರಂತೆ;
ಕರ್ಮಫಲವಿದು ಮೂರು ಬಗೆಯಾಗಿಹುದು ನೋಡಿತ್ತ
ಫಲಾಪೇಕ್ಷೆಯೊಡೆ ಬಾಳ್ವರನು ಬಿಡದಿರದನೆ!

ನಿಷ್ಕಾಮದ ನಿಸ್ವಾರ್ಥದ ಬಾಳಿನ ತ್ಯಾಗಿ
ಈ ತ್ರಿಪದಿಗಳನಿತ್ತ ಹೊಂದಿಸೀ ಶಿವದಿ ।

" ೧೧ "

"ಸರ್ವ ವಿಧದಾ ಸಮತ್ವವಹ ಕರ್ಮಗಳನಾ
ಗೆಯ್ಯುತ್ತಿಯಾ ಬಹು ಕರ್ಮ ಅಕರ್ಮಗಳನಾ,
ಎಲೆ ಧನಂಜಯ ಕರ್ಮಗಳ ಸಿದ್ಧಿಗಾಗಿ
ಪರ ತಾತ್ವಿಕಾ ಜ್ಞಾನರೂಪದ 'ಸಾಂಖ್ಯ'
ಸಿದ್ಧಾಂತಗಳಿಂದ ಹೇಳುತವದನಲ್ಲ
ಸರ್ವಗ್ರಾಹ್ಯವೊ ಐದು ಕಾರಣಗಳನ್ನು
ಹೇಳುವೆನು ಎಲೆ ಮಿತ್ರ" ಎಂದೆನುತ ಹರಿಯು
ಸರಸೋಕ್ತಿಯಿಂದಲಿ ವ್ಯಕ್ತಗೊಳಿಸಿದನು ತಾನು,

" ೧೨ "

"ಆತ್ಮನಿಗೆ ಇಹ ಸ್ಥಾನ ದೇಹವದು ಒಂದು,
ಎರಡನೆಯದಾ ಕರ್ತ ಜೀವಾತ್ಮನಂತು,
ವಿವಿಧ ಕರ್ಮೇಂದ್ರಿಯಗಳವು ಮೂರನೆಯವು
ಪ್ರಾಣವು ಅನೇಕ ವ್ಯಾಪಾರವದು ನಾಲ್ಕು;
ಕೇಳ್ ದೈವವದೆ ಐದನೆಯ ಸ್ಥಾನವಂತು
ಸಮಾಂತರಮಾರ್ಗವಿದಿಯಹ ಅಧಿದೈವ ಅವನು
ಪರಮಾತ್ಮನೆಯೆ ಅವನು, ಹೇ ಪಾರ್ಥ ಕೇಳು,"
ಎಂದೆನುತಲಂದಿನಾ ಭಗವಂತನಂದು!

" ೧೪ "

"ಮನೋವಾಕ್ಕಾಯದಿಂ ಪ್ರಾರಂಭಗೊಂಡು
ಕರ್ಮಗಳು ಧರ್ಮ ಸಮ್ಮತವಾಗಿ ಇರುತ,
ಇದಿರ್ಗಡೆಯು ಅಂತಿಲ್ಲದಿದಿರ್ಗಡೆಯು ಜಗದಿ
ಗೆದ್ದಾತ್ಮದಿಂದೆಸಗುವಾ ಕರ್ಮಗಳಿಗೆ
ಕೇಳ್ ಶರೀರವು ಆತ್ಮವಾ ಇಂದ್ರಿಯಗಳು
ಪ್ರಾಣಾಪಾನವು ದೈವವದೆಂ ಐದದು ರೂಪು
ತತ್ವಜ್ಞಾನದ ರಹಸ್ಯದಿ ಹೇಳುವ ಮಿತ್ರ
ಕರ್ಮಗಳಿಗಿಂದಿವೇ ಕಾರಣ ನಿಜದಿ ಕೇಳು!

" ೧೫ "

"ಇಂತಿರುವ ಜೀವದಿರೆ ದೈವ ಪ್ರೇರಣೆಯು
ಶಕ್ತಿಯಿಂದಲಿ ಹರಿಯುವುದು ಎಂದು ತಿಳಿಯಾ!
ತಿಳಿಯದೆಯೆ ತಾನು ಜೀವಾತ್ಮನನ್ನು
ತಾನೆಯೇ ಎಲ್ಲದಕು ಕರ್ತೃವೆಂದೆನುತ,
ಮತಮತಾಂತರದಾ ಮರುಳುಗೊಳ್ಳಾಗಿ ಇಹನು,
ಶುದ್ಧಿ ಜ್ಞಾನವು ಇಲ್ಲದಾ ಮೂಢ್ಯದಿಹರು;

1407

ನಿಷ್ಕಾಮ ಕರ್ಮಗಳ ಪ್ರೇರಕ ಶಕ್ತಿ —
ಅದ ತಿಳಿಯದೆಯೆ ತೊಳಲುತಿಹರೆಂತೊ ಕೇಳ್ತೆ!

" ೧೬ "

"ಎಲೆ ಕಿರೀಟಿಯೆ, ಅರಿತ್ತು ಜಗದಿ ತಾಮ,
ತಾಮೆಯೆ ನಿರ್ಮಮನು ನಾನೆನೆಮೆನುತ,
ಅಹಂಭಾವದ ಹಿಗ್ಗದೆಯೆ ಇರುವವರು,
ಉದಾರಮರು ಬುದ್ಧಿ ಸಿದ್ಧಿಗಳೆ ಎಲ್ಲ
ಕರ್ಮಫಲದಲಿ ಅಂಟದೆಯೆ ಇರುವುದೆಂತೊ,
ಅಂತಹರು ಜನ ಜೀವಿಗಳ ಕೊಂದೊಡಂತೊ,
ಕೊಲೆಪಾತಕರುಯೆಂದು ಎನಿಸರವರಂತು,
ಕರ್ಮಗಳ ಬಂಧನಕೆ ಸಿಲುಕರವರು!

" ೧೭ "

"ಜ್ಞಾನವೆಂದೊಡೆ ಅರಿವ ತಿಳುವಳಿಕೆ ನಿಜವೊ,
ಜ್ಞೇಯವದು ತಿಳಿಯಲಿಹ ಕರ್ಮವೆಂದೊಳಿಸೊ;
ಕರ್ತ ಜ್ಞಾತೃನವನೆಯೆ ತಿಳಿಯುವವನು —
ಇವು ಕರ್ಮಪ್ರೇರಕವು ಮೂರು ಬಗೆಯಹುದು!
ಅನಿತಲ್ಲದೆಯೆ ಕೇಳ್ ಮನವ ದೇಹವೊಂದು,
ದೇಹವದು ಮಾಳ್ಪ ಕೆಲಸವು ಮತ್ತೆ ಒಂದು;
ಮಾಳ್ಪವನೆ ಇನ್ನೊಂದು ಎಂಬಂತೆ ಮೂರು
ವಿಧವಹುದು ಕೇಳ್ ಕರ್ಮವು ಕರ್ತೃಯೆಂದು —

" ೧೮ "

"ಭೇದ ಪ್ರಭೇದಗಳು ಇರೆ ಲೋಕದಲ್ಲಿ
ಜ್ಞಾನ ಕರ್ಮವು ಕರ್ತೃಗಳು ಎಂದು ಕೂಡೆ,
ಸತ್ವ ರಾಜಸ ತಮೋಗುಣ ಭೇದದಿಂದ
ಮೂರು ವಿಧವಿರೆ ಅದುವ ಕೇಳ್ ಮನಸೊಗೊಟ್ಟು;
ಕೇಳ್ ಧನಂಜಯ ನೀನ್, ಕೇಳುವೆನು ನಿನಗೆ
ಗುಣವಿಮರ್ಶೆಯನಂತು ಮಾಳ್ಪೆ ಆನ್ ಇಂದೇ;
ಆ ಮೂರು ಗುಣಭೇದಗಳು ಇವೆಯೊ ಜಗದಿ
ವಿವರಿಸುವೆನೊಂದೊಂದನಿದ ಕೇಳೆನೆ ಕೇಳ್ತೆ!

" ೧೯ "

"ಎಲೆ ಮಿತ್ರ, ಆತ್ಮವದು ಈ ನಿಮ್ಮ ಕಣ್ಗೆ,
ಬೇರೆ ಮನವ ರೂಪದಲಿ ಬೇರೆ ಬೇರೆ
ಇರುವಂತೆ ತೋರ್ದೊಡೆಯು ಅವಿನಾಶಿ ಆತ್ಮ
ಒಂದೊಂದರಾಂತ್ರ ತಪ್ಪುದಿಹ ಆತ್ಮ
ಜೀವಾತ್ಮನೇ ಜಡಾಜಡ ಜೀವಿಗಳಲಿ
ಸಮ ನೀಲ ರೂಪನಾಗಿಹ ನೆಂಬುದನು

ತಿಳಿದವನವಾರಿಹನೊ ಅವನ ಆ ಅರುಹು
ಸಾತ್ವಿಕದ ಜ್ಞಾನವೆಂದೆನಿಸಿಕೊಳುವುದು ನಿಜವು!

" ೨೦ "

"ಅನಿತಲ್ಲದೆಯೆ ಬೇರೆ ಅಗೋಚರನೊ ಆತ್ಮ
ಸಹಸ್ರರು ಕೋಟ್ಯದಿ ಜೀವಿಗಳಲ್ಲಿಲ್ಲ,
ವಿವಿಧಾಕಾರದ ದೇಹಗಳಿಗೊಪ್ಪುವಂತೆ
ಚರಾಚರ ಜೀವಿಗಳೊಳಿಲ್ಲದಿರಲಂತೆ
ಪ್ರಾಣವು ಆಧಾನದೊಳೆ ವಿವಿಧ ಗುಣಾವನದೆ
ವಿವಿಧ ರೂಪದೆ ಅಡಗಿಹುದನೆಂಬುದನು
ತಿಳಿಯುವಾ ತಿಳುಹುವದು ಅರಿಲ್ಲ ಇದೆಯೊ
ಅವನರುಹುವದೆ ರಾಜಸದ ಜ್ಞಾನ ನಿಜವೊ!

" ೨೧ "

"ಕಾರ್ಯವದನೊಂದನ್ನೆ ನಡೆಸುತದರಿಂದೆ
ಫಲವಾರು ಬಗೆಯು ಫಲವನು ಅರಿವಂತೆ
ಅತ್ಯಾಸೆಯುಳ್ಳ ವಾಸ್ತವವು ಇಲ್ಲದನು
ಅಲ್ಪ ಫಲವದಕಾಗ್ಯೆ ಪಡೆದು ತಾನ್ ಅಂತು,
ಸಾಧ್ಯವಲ್ಲದುದನು ಸಾಧ್ಯವೆಂದ್ಯೋಚಿಸ,
ಗಾಂಭೀರ್ಯವಾರಾರೊ ಅವರಾ ಅಲ್ಪಜ್ಞಾನ
ತಾಮಸವು ಎಂದೆನಿಸುವುದು ಜಗದಿ ಕೇಳುತೆ,
ಮನೋಭಾವದು ಇದು ಭೇದವಿದನರಿಯೆ!

" ೨೨ "

"ಕರ್ಮಗಳನೆಸಗುತಿಹನೀ ಜಗದಿ ನೋಡೆ
ತಾನ್ ಸ್ವಧರ್ಮ ಕರ್ಮಗಳ ಕರ್ತವ್ಯವೆಂದೆನುತಲಿ,
ಮಮಕಾರ ಅಹಂಕಾರವನು ತೊರೆದವನು
ರಾಗ ದ್ವೇಷಾದಿಗಳನಿಲ್ಲ ತೊರೆದವನು
ಕರ್ಮದಾ ಫಲವದಕೆ ಆಶಿಸದೆಯುದು
ನಿಷ್ಕಾಮದ ಕರ್ಮದೆ ತಾನ್ ನಿರತನಾಗಿದು
ನಡೆಸುತಿಹ ಕರ್ಮವದಾವುದೊ ಜಗದಿ ನೋಡೆ.
ಅದುವೆ ಸಾತ್ವಿಕ ಕರ್ಮವೆಂದೆನಿಸುತಿಹುದೆ!

" ೨೩ "

"ಕರ್ಮವನು ನಿಷ್ಠೆಯಿಂದೆಸಗುತಲಿ ನಿತ್ಯ,
ತಾನೆಯೇ ಕರ್ತನದೆ ಕಲ್ಪವೆಂದೆನುತ
ಸ್ಪರ್ಧಿಸುತಲಿ ಭಾವಿಸುತಲಂತೆಯೇ ಅವನು
ಫಲವನ್ನು ಇಚ್ಛಿಸುತ ಫಲದಿಂದ ಸುಖಿದು
ಸುಖಿಸುತಿಹನಾ ಕರ್ಮವದೆ ಕೇಳು ನಿಜದಿ
ರಾಜಸದ ಕರ್ಮವೆಂದೆನ್ನುವರು ಕೇಳ್ವೆ,"

ಎಂದೆನುತಲಾ ಹರಿಯು ಹೇಳಿದನು ಒಲಿದು,
ಗುಣತ್ರಯಾಂಕಿತ ಕರ್ಮಾಕರ್ಮವಿದೇನೆಂದು!

" ೨೪ "

"ತಾನ್ ಎಸಗಿದಾ ಕರ್ಮವದರಂತ್ಯವನು
ಅದರಿಂದ ತನಗಾಗುತಿಹ ಹಾನಿಯನು
ಲೋಕಕದರಿಂದಾಗುವಾ ದೋಷವನು
ಕರ್ತೃವದರಾ ಗೈಮೆಯಾ ಶಕ್ತಿಯನು—
ಗಣಿಸದೆಯೆ ಮೋಹದಲಿ ಅಜ್ಞಾನದಿಂದ
ಪ್ರಾರಂಭಿಸುವ ಕಾರ್ಯವದು ಪೇಳ್ವೆ ಮಿತ್ರಾ
ತಾಮಸದ ಕರ್ಮವೆಂದದನು ಮರೆ, ಜನವು,
ಸರ್ವರದನರಿತಿಹರು ಫಲ್ಗುಣನೆ ಕೇಳು!

" ೨೫ "

"ಕರ್ಮದೊಳು ನಿಷ್ಠವನು ಕರ್ಮಿಯಂತಿದ್ದು
ತಾನೆಯೆಂಬ ಕರ್ತನೆಂಬಹಂಕಾರ ಬಿಟ್ಟು,
ಸಿದ್ಧಿಸಿದೊಡೆ ಕಾರ್ಯ ಹಿಗ್ಗದೆಯೆ ಇದ್ದು,
ಅಸಿದ್ಧಿಯುಂಟಾದೊಡೆಯು ಕುಗ್ಗದೆಯೆ ತಾನು,
ಸ್ಥಿತಪ್ರಜ್ಞನೊಲು ಧೈರ್ಯದಲಿ ನಿತ್ಯಯಿದ್ದು
ಧೈರ್ಯ ಉತ್ಸಾಹದಲಿ ದಿನಗಳನು ಕಳೆದು
ಜೀವಿಸುವ ನರಯೋಗಿ ಅವನೆಯೇ ಜಗದಿ
ಸಾತ್ವಿಕತ್ವದ ಕರ್ತನೆಂದೆನಿಸುವನು ಕೇಳು!

" ೨೬ "

"ಕಾಮ್ಯಫಲವನು ಕೋರ್ಕೆಯನು ನಿತ್ಯ ಬಯಸಿ
ಲೋಭದಲಿ ಸಿರಿಯನು ನಿತ್ಯ ಸಂಗ್ರಹಿಸಿ
ಹಿಂಸಾತ್ಮಕನದಲಿ ಪರಪೀಡನೆಯನು ಎಸಗಿ
ಮನಸಾವಾಕ್ಕಾಯದಲಿ ತಾನ್ ಅಶುಚಿಯಾಗಿ
ಜಯವನು ಪಡೆಯೆ ತಾನ್ ಹೋರಿಸುತ ದರ್ಪ
ಸೋತೊಡದು ಕಳವಳದಿ ಕೊರಗುತಲಿ ನಿತ್ಯ
ಅಳುತಿರುವನೋ ಅವನೆ ರಜೋಗುಣಕರ್ತ,
ರಾಜಸನು ಅವನೆಂದು ಅನ್ನುವರು ಪ್ರಾಜ್ಞ!

" ೨೭ "

"ಕೇಳಿಲ್ಲಿ ಹೇಳುತಿರುವದಾ ಕರ್ಮವನು
ಎಸಗಲು ಅಯೋಗ್ಯರೆಂದೆನಿಸಿಹರು ಜನವು
ಸೋಮಾರಿ ವ್ಯಭಿಚಾರಿ ಅವಿಚಾರಿಗಳವೊ
ವಂಚಕರು ಕಾಮುಕರು ಗರ್ವಹೀನರಂತೊ—
ನಿಷ್ಪ್ರಯೋಗದ ಕಾರ್ಯದಲಿ ನಿರತರಿರುವ
ತಾಮಸ ಪ್ರವೃತ್ತಿಗೆ ಕೇಳ್ ಕರ್ತರವರೆಂದು

ಕೇಳುವವರಿಗೆ ಏಕೆ ನೀರಸವೆ" ಎಂದೆನುತ ಹರಿಯು
ಸಾರಿದನಿಗೊ ಪಾಂಡವಗೆ ಗೀತೋಕ್ತಿಯನ್ನು!

" ೧೮ "

"ಕೇಳಲಿಕ್ಕೆ ಕೇಳುವನು ಬುದ್ಧಿಯು ಜ್ಞೇಯಗಳವು
ಗುಣತ್ರಯವನು ಹೊಂದಿರುವುದೆಂದಿಕ್ಕೆ ಅಂತು;
ಸತ್ವಾದಿ ಗುಣಗಳನು ಆಶ್ರಯಿಸಿ ಇರುವುದು,
ಸಮಸ್ತವು ತ್ರಿಗುಣಗಳಿಗೆ ಬದ್ಧವಾಗಿಹುದು,
ಕೌಂತೇಯ, ಅದಕ್ಕೆ ಕೇಳುವೆನು ಅದನೆ
ಗುಣಭೇದಗಳು ಮೂರು ಇಹ ಬಗೆಯುವನ್ನು!"
ಎಂದೆನುತಲಾ ಹರಿಯು ಹೇಳಿದನು ಒಲಿದೆ
ಅಸ್ತ್ರದಗ ಅಧ್ಯಾಯದ ಕೊನೆಯ ಮಾತನ!

" ೧೯ "

"ಧರ್ಮದಿ ಪ್ರವೃತ್ತಿಯು ನಿವೃತ್ತಿಯು ರಹಸ್ಯ
ಅದರೊಡೆಯು ಕಾರ್ಯವು ಅಕಾರ್ಯಗಳನಂತು,
ಅಂತೆಯೆ ಭಯಾಭಯವು ಮಾಯೆಯಿಹುದಿಹದೆ;
ಸಂಸಾರದಾ ತೆರೆಯು ಮೋಕ್ಷವದನಂತೆ
ಬುದ್ಧಿ ಜ್ಞಾನಗಳಿಂದಲೇ ಅರಿತು ಅದನಾ
ಸಮಭಾವಿ ಸಮಶೀಲನಹನದನು ಎಲ್ಲ
ತಿಳಿಯುವ ಜಗದಲಿ ಅದೆ ಸತ್ವಗುಣವಾಗೆ,
ಸಾತ್ವಿಕದ ಸಾರವದು ಕೇಳಲಿಕ್ಕೆ ಪಾರ್ಥ!

" ೨೦ "

"ಧರ್ಮವು ಅಧರ್ಮಗಳನೆಲ್ಲವನು ನಮದಿ,
ಕಾರ್ಯವು ಅಕಾರ್ಯಗಳ ಸಮದೂಗಿ ಕೇಳು,
ಯಥಾವತ್ತಾಗಿ ತಾನ್ ತಿಳಿಯಲಾರದೆಯೆ
ಇರುವಾತ್ಮ ಬುದ್ಧಿಯು ವಿಷಯಗಳ ನಮದಿ
ಅರುಹದಿಹ ಮನವದು ರಾಜಸವು ಎನುತ
ಅದೆ ರಜೋಗುಣವೆಂದು ಕೇಳುವರಿಗೊ ಪಾರ್ಥ,"
ಎಂದೆನುತಲಾ ಪುಂಡರೀಕಾಕ್ಷನಂದು
ಪಾಂಡವಗೆ ಹೇಳಿದನಿಗೊ ಗಹನವಿದನಂದು.

" ೨೧ "

"ಮನೆನಲಿಗೊ ಅರ್ಜುನನೆ, ತಾಮಸದ ಮನವು!
ಧರ್ಮವೆ ಅಧರ್ಮವೆಂದೆಣಿಸುವ ಮನವು;
ಅಂತೆಯೇ ಅಧರ್ಮವನು ಧರ್ಮವೆಂದೆನುತ
ಅಜ್ಞಾನದಾ ಮೋಹಕತನದಲಿ ಸರ್ವ
ವಿಷಯಗಳನೆಲ್ಲ ವಿಪರೀತದಲಿ ಗ್ರಹಿಸಿ
ಮನವನ್ನು ಕದಡಿಸುವ ಮಾದಿಗಳು ಬಳಿಸಿ

ತೋರುತಿಹ ಚಾಪಲ್ಯವದೆ ತಮೋಗುಣವು
ತಾಮಸದ ತವರು ಅದುವೇ ಬುದ್ಧಿವಂತನಪ್ಪ !

|| ೨೧ ||

"ಯೋಗಬಲದಿಂದ ಪಡೆದಾ ಸಿದ್ಧಿಯಿಂದೆ
ಹೊಂದಿದಾ ಧೈರ್ಯದಿಂದೀ ಮನುಜನಿಹದಿ
ಪ್ರಾಣೇಂದ್ರಿಯದ ಮನೋವ್ಯಾಪಾರವನ್ನು
ತಾನ್ ಸಂಯಮಾ ಬಲದಿ ನಿಗ್ರಹಿಸಿ ತನ್ನ
ಇಂದ್ರಿಯಗಳನು ಧೈರ್ಯದಿ ತಾನು ನಿರುತ
ತಡೆದಿಡುವನಾತನೇ ಅವನ ಕ್ರಿಯೆಗಳು
ಸಾತ್ವಿಕದ ಧೈರ್ಯವೆಂದೆನಿಸುವುದು ನೆನಸೆ,"
ಎಂದೆನುತ ಹರಿ ಹೇಳಿದನು ಧನಂಜಯನಿಗೆ!

|| ೨೨ ||

"ಅತ್ಯಾಗ್ರಹಿಯೋ ಫಲಾಕಾಂಕ್ಷೆಗೂ ಮೂಲ;
ಇಹದ ಸಿರಿ ಸಂಪತ್ತುಗಳ ಬಯಸಿ ನಿತ್ಯ
ಧರ್ಮಾರ್ಥಗಳ ಸಾಧನೆಗೆ ಮನೋಬಲವ
ಬಳಸಿ ಪ್ರಾಣದಾನ ಶಕ್ತಿಯನು ಕೇಳಾ
ನಿಶ್ಚಲದಿ ಸಾಧಿಸುವ ನೀತಿಯನು ನಿಜದಿ
ರಾಜಸದ ಧೈರ್ಯವೆಂದೆನ್ನುವರೋ ನರನೆ,"
ಎಂದೆನುತ ಶ್ರೀಕೃಷ್ಣ ಹೇಳಿದನು ಅಂದು,
ರಜೋಗುಣದಾ ಬಂದ ಅಂತವನು ಅಂತು!

|| ೨೩ ||

"ಓ ಪಾರ್ಥ ಕೇಳು ಹೇಳ್ವೆ ಮಾನವನು ಇಹದಿ
ಮಿತಿಯನತಿಕ್ರಮಿಸುತಲಿ ಭಯಭೀತಿಯಿಂದೆ
ಇರುವನದರೊಡನೆಯೆ ಮದದ ದುಃಖವು ನಿದ್ರೆ
ವಿವಿಧ ಬಗೆಯಾ ವಸ್ತುಗಳ ಮೋಹ ಚಿಂತೆ,
ಲೋಭ ಕ್ರೋಧವು ಮೋಹ ಮತ್ಸರವು ಎಲ್ಲ,
ಬಿಡದಿರುತಲಿ ಹೀನಬುದ್ಧಿಯುತ ಕೇಳಾ
ವರ್ತಿಸಲು ಎಡೆಗೊಡುವ ಧೈರ್ಯವದು ಕೇಳ್ವೆ,
ತಾಮಸದ ಧೈರ್ಯವದೆಂದೆನ್ನುವುದೀ ಜಗದಿ.

|| ೨೪ ||

"ಭರತಕುಲ ಪುತ್ರ ಕೇಳೊ, ಮಾನವ ಚರಿತ್ರ!
ನಿರಂತರದಭ್ಯಾಸ ಬಲದಿಂದ ಮನುಜ
ಆ ಪಡೆದನು ಮತ್ತೆ ತಾನ್ ಉದ್ಧರಿಸಿ ನಿತ್ಯ
ತೃಪ್ತಿಯನು ಹೊಂದುತಲಿ ದುಃಖಗಳ ಕಳೆವ
ಸಂತೃಪ್ತ ಜೀವನಕೆ ಪೋಷಕವು ಆದ
ಸುಖವದರ ಮೂರು ಬಗೆಯನು ಈಗ

ಹೇಳುವೆನು ಕೇಳ್ ಎಲೈ ಗಾಂಡೀವಿ ನೀನು,
ಗೀತೋಕ್ತಿ ಸೂಕ್ತಿಯು ಸಮರ್ಥಿಸುವುದು ಇಂತು.

"೩೭"

"ಪ್ರಾರಂಭದಭ್ಯಾಸದಾ ವೇಳೆಯಲ್ಲಿ
ಜೀವನವೆ ಅಹಿತಾನುಭವವಾಗಿ ತೋರಿ
ಬಾಳು ಇರುವುದು ಕಹಿಗೊಂಡು ವಿಷದವೋಲು ಆಗಿ
ಕಡೆಗಂತು ಪರಿಣಾಮ ಪವಿತ್ರವಾಗಿ
ಅಮೃತ ಸಮಾನ ಸುಖ ನೈರ್ಮಲ್ಯವಾಗಿ
ಜೀವಾತ್ಮಜ್ಞಾನದಿಂದದು ವಿಕಸವಾಗಿ
ಇರಲಂತು ಸುಖವದುವೆ ಸಾತ್ವಿಕದ ಸುಖವು
ಚಿದ್ರೂಪ ಮೋಹನನನೊಲಿಸುವಾ ಸುಖವು!

"೩೮"

"ವಿಷಯೇಂದ್ರಿಯದ ಶಕ್ತಿನಿಂದೊದಗುವಂಥ
ರಸ ನಿಮಿಷಗಳ ಸರಸದಾ ಭೋಗದಂಥ
ಸುಖವದುವು ಪ್ರಾರಂಭದಲಿ ಪ್ರಿಯವು ಎನಿಸಿ
ದಿನದಿಂದ ದಿನಕದುವು ಅಪ್ರಿಯವು ಆಗಿ
ಕೊನೆಗಂತು ಕಹಿಗೊಂಡು ವಿಷದಂತೆ ಆಗಿ
ಇರುವ ರಾಜಸ ಸುಖವು ಎಂದೆನಿಸುತಿಹುದು,"
ಎಂದು ಮನವಾಂತು ಆಲಿಸುತಿದ್ದ ನರಗೆ
ಹೇಳಿದನು ಮಧುಸೂದನನು ಇಂತು ಅಂದು.

"೩೯"

"ಪಾರ್ಥ ಕೇಳ್, ಮತ್ತೆರವು ಸುಖವು ಈ ಭುವದಿ!
ಪ್ರಾರಂಭದಲಿ ಎಂತೊ ಅಂತೆ ಕೊನೆಯಾಗೆ,
ಆದಿಯಿಂದಂತ್ಯದಾ ವರೆಗಂತು ನಿಜದಿ
ಬುದ್ಧಿ ಮೋಹದಿ ಮನವ ಕದಡಿಸುತಲಂತೆ
ನಿದ್ರೆಯು ಆಲಸ್ಯವು ಪ್ರಮಾದಗಳು ಹಲವು
ಒಡಗೂಡಿ ಜೀವನವ ಕಹಿಗೊಳಿಸಿ ಇದುವು
ತಾಮಸದ ಸುಖವೆಂದು ಹೇಳುವರು ಮಿತ್ರ
ಗುಣತ್ರಯದ ವೈವಿಧ್ಯವಿಂತಿಹುದು ಕೇಳು — !

"೪೦"

"ಹೇ ಪೃಥಾತನಯ ಕೇಳ್, ಈ ಭೂಮಿಯಲ್ಲಿ
ನಭೋಲೋಕದಾ ಸ್ವರ್ಗದಾ ತಾಣದಲಿ
ಸುರಲೋಕ ದೇವತೆಗಳಲಿ ಅಂತು ಸರ್ವ
ಈ ಪರಿಗೆ ಬಂಧನದ ಸತ್ವ ರಜಸ್ತಮದಾ
ಪ್ರಕೃತಿಯ ಗುಣಮೂರರಿಂದ ಬಿಡಲಾದ
ಜೀವಿಗಳೆ ವಿಶ್ವದಲಿ ಇಲ್ಲವೆಂದರಿಯು —

ಪ್ರವೃತ್ತಿಗನುಗುಣದಾ ಕರ್ತವ್ಯವದಕೆ ಅನುವಾಗಿ
ಲೋಕಗಳನು ಉರುಳಿಸುತಿಹ ವಿಶ್ವರಥದಲ್ಲಿ.

" ೪೦ "

"ಎಲೆ ಪರಂತಪ ಕೇಳು, ಲೋಕವಿದರಲ್ಲಿ
ಬ್ರಾಹ್ಮಣನು ಕ್ಷತ್ರಿಯನು ವೈಶ್ಯನು ಶೂದ್ರರಿಲ್ಲಿ
ಜನ್ಮಗುಣಾನುಸಾರವಾಗಿಯೆ। ಸ್ವಭಾವವನ್ನು
ತಾವೆ ಹೊಂದಿಹ ಜನ್ಮದಲಿ ಪಡೆದು ಅಂತು
ಹೊಂದಿಹ ಸ್ವಭಾವದಿಂದಾದ ಗುಣವು
ಗುಣಗಳಿಗೆ ಅನುವಾದ ಕರ್ಮವವು ಕೇಳು
ವಿಧಿ ನಿಯಮಕನುವಾಗಿ ನಡೆಯುತಿಹುದಂತು
ವಿವಿಧ ಗುಣ ಕರ್ಮಗಳು ವಿವಿಧ ಜನರಿಂದು!

" ೪೧ "

"ಭೂಮಿಯಲಿ ಬ್ರಾಹ್ಮಣರಿಗೊಪ್ಪುತಿಹ ಕರ್ಮ,
ಶಮ ದಮಗಳಾದಿ ಇಂದ್ರಿಯ ಸಂಯಮನವು,
ತಪ ಶೌಚ ತಾಳ್ಮೆ ಆರ್ಜವಾದಿಗಳು ನಿಯಮವು,
ಜ್ಞಾನವು ಮತು ಜತೆಗೆ ವಿವೇಚನೆ ಆಸ್ತಿಕ್ಯ—
ಶಾಸ್ತ್ರೋಕ್ತ ಕರ್ಮಗಳು ನೀತಿಗಳು ಎಲ್ಲ
ಬ್ರಾಹ್ಮಣ್ಯವನು ಕಾಯ್ದು ಲೋಕಗುಣವದುವಾ,"
ಎಂದೆನುತ ಗೀತಾರಹಸ್ಯವನು ಕೃಷ್ಣ
ಹೇಳಿದನು ಗುಣ ಸ್ವಭಾವ ಕರ್ತವ್ಯವನು ಎಲ್ಲ!

" ೪೨ "

"ಭೂಮಿಯಲಿ ಕ್ಷತ್ರಿಯನಿಗೊಪ್ಪುತಿಹ ಕರ್ಮ
ಶೌರ್ಯತನ ತೇಜಸ್ಸು ಧೈರ್ಯವು ಸಾಮರ್ಥ್ಯ,
ಸಮರದಲಿ ಹೆದರಿ ಹಿಂದಿರುಗದಿಹ ಕೇಳು
ಕೆಚ್ಚಿನಲಿ ಕಾದುವುದು ಆಳುವುದು ರಾಜ್ಯ,
ದಾನ ಧರ್ಮಾದಿಗಳ ಔದಾರ್ಯ ಕಾರ್ಯ
ಕ್ಷತ್ರಿಯನ ಜನ್ಮವಿಧಿಗನುವಾದ ಕರ್ಮ,"
ಎಂದೆನುತ ಮುರಹರಿಯು ಹೇಳಿದನು ನರಗೆ,
ಕ್ಷತ್ರಿಯ ಶಿರೋಮಣಿಗೆ ಧನಂಜಯನಿಗದನೆ.

" ೪೩ "

"ಭೂಮಿಯಲಿ ವೈಶ್ಯರಿಗೆ ತಕ್ಕುದಿಹ ಕರ್ಮ
ಜನಕೊಪ್ಪುದಾ ಕೃಷಿ ಗೋರಕ್ಷಣೆಯ ನೇಮ,
ವಾಣಿಜ್ಯ ವ್ಯವಹಾರಾದಿಗಳೆಲ್ಲವದುವೆ
ವೈಶ್ಯರಾ ಕುಲಧರ್ಮವದೆ ಕರ್ಮ ನಿಜವೆ!
ಶೂದ್ರರಿಗೆ ಒಪ್ಪುತಿಹುದು ಸೇವಾಭಿಮಾನ,
ದ್ವಿಜ ಕ್ಷತ್ರಿಯರು ವೈಶ್ಯರಾ ನೇಮವೆಲ್ಲ;

ಸರ್ವರೊಡೆ ಸಮಗೂಡಿ ಗೈಯುತ್ತಿರುವ ಧರ್ಮ,
ಅತಿಶಿಷ್ಟ ಕುಲ ಕರ್ಮಗೊಂಡಿರಾ ನಿತ್ಯ ನೇಮಾ!

" ೪೪ "

"ಕರ್ಮದಲಿ ಭೇದದಲಿ ವಾದಗಳು ಹಲವು —
ಅಂತಿದೆಲ್ಲದರೊಳಗೆ ತನಗೆ ಹಿತವಾದುದನ್ನು
ಮಾನವನು ತಾನಾಗಿ ಸಾಧಿಸಿದೊಡಂತು
ಪಡೆಯುವನು ಪರಮೋತ್ತಮ ಪದವಿಯನ್ನು;
ಹೇಳುವೆನು ಫಲ್ಗುಣನೆ, ಮಾನವನು ಇಹದಿ
ತಾನಾಗಿಯೆ ಗೈದು ಹೊಂದುತಿಹ ಭಕ್ತಿ —
ಕರ್ಮವದನಿತ್ತವನು ವಿವರಿಸುವೆನಿಂದು,
ಕರ್ಮನಿರತರು ಪಡೆಯುವಾ ಸಿದ್ಧಿಯನ್ನು —,

" ೪೫ "

"ಸರ್ವ ಚರಾಚರ ಜೀವಿಗಳ ಜನನಕಾರು,
ಲೋಕಗಳೊಳಗೆಲ್ಲ ವ್ಯಾಪಿಸಿಹನು ಯಾರು,
ಪರಮೋತ್ತಮನನು ಅವನನೇ ಜನವು ಎಲ್ಲ
ತಾವ್ ಪಡೆದ ಕರ್ಮಫಲಕನುವಾಗಿ ಕೇಳಿ
ಆರಾಧಿಪರೊ ನಿತ್ಯ ಪೂಜಿಪರು ಅಂತು!
ಪಡೆಯುವರು ಪರಮಗತಿಯನು ನಿಜದಿ ಅವರು!"
ಎಂದು ಹರಿ ಹೇಳಿದನು ತನ್ನ ಗೆಳೆಯಾಳಿಗೆ
ಮಾನದಲಿ ಆಲಿಸುತಲಿದ್ದ ಫಲ್ಗುಣಂಗೆ!

" ೪೬ "

"ಕೇಳಿಲ್ಲಿ ಸ್ವಧರ್ಮದಲಿ ಗುಣವಿಲ್ಲವೆಂದು
ಸ್ವೀಕರಿಸುತಲಿ ಪರಧರ್ಮವನು ಅಪ್ಪು ಅಂತು,
ನಿಷ್ಠೆಯಲಿ ಆಚರಿಸದೊ ಜಗದಲ್ಲಿ ಸಾರ್ಥ
ತನ್ನ ಕುಲಧರ್ಮ ಶ್ರೇಯಸ್ಕರವೊ ಮಿತ್ರ!
ಸಹಜವಹ ಕರ್ಮವನು ಶ್ರದ್ಧೆಯಲಿ ಎಸಗೆ
ಪಾಪವಿತ್ತು ಬಾಧಿಸವು, ಪಾಂಡವನೆ ಕೇಳು."
ಎಂದೆನುತ ಶ್ರೀಹರಿಯು ಹೇಳಿದನು ಅಂದು,
ಸಾರಥಿಯು ತಾನ್ ಎಂಬುದನೆ ಅಂತು ಮರೆತು.

" ೪೭ "

"ತಾನ್ ಹೊಂದಿದಾ ಕರ್ಮಫಲವನನುಸರಿಸಿ
ಪಡೆದ ಕುಲಧರ್ಮದಲಿ ದೋಷಗಳು ತುಂಬಿ
ಇದ್ದೊಡೆಯು ಅದು ತ್ಯಜಿಸದಿರುವುದೇ ಹಿತವು!
ಧೂಮವಿದೆ ಅಗ್ನಿಯನು ಆವರಿಸಿ ಸುತ್ತ
ಇರುವಂತೆ ಕರ್ಮಗಳು ಕಾರ್ಯಗಳೊಳೆಲ್ಲ
ದೋಷಗಳು ದುಃಖಗಳು ಅಪ್ಪಿಹವು ನಿತ್ಯ

ಇರುತಿಪ್ಪದು ಶಾಂತಿಯು ಅನಿವಾರ್ಯ ಅದುವೊ,"
ಎಂಬುದನು ವಸುದೇವಸುತ ನಂದನಂದನ!

" ೪೮ "

"ವಿಷಯಗಳೊಳಾಸಕ್ತಿಯನ್ನಿಡದೆ ಆಸೆ
ಸ್ಪೃಹೆಯಿದ್ದ ಸಿದ್ಧಿಯುಂದಲಿ ಮನವ ಜಯಿಸಿ
ನಿಸ್ಪೃ, ಹತೆಯಿಂದ ಕೇಳ್ ಫಲ ತ್ಯಾಗ ಗೈದು
ನಿಷ್ಕಾಮದಿಂದ ಸತ್ಕರ್ಮವನೆ ತಾನು
ಎಸಗುತಲಿ ವಿಧಿ ಕರ್ಮ ತ್ಯಾಗದಿಂದಿಹದೆ
ಪಡೆಯುವನೊ ಪರ ಕರ್ಮಯೋಗಿ ತಾನ್ ಕಡೆಗೆ,
ಪರಮೋತ್ತಮಾ ಸಿದ್ಧಿಯನು ಅಂತು ನಿಜದಿ—
ಅದೆ ಅಲೋಕದಾ ಕರ್ಮವಿದೆ ನಿಯಮ ಕೇಳ್ಗೆ!—

" ೪೯ "

"ಸಿದ್ಧಿಯನು ಪೊಂದಿ ಪ್ರಸಿದ್ಧಿಯನು ಪಡೆದ
ಜಿಜ್ಞಾಸಿ ಕೇಳ್ ಜಗದಿ ಜ್ಞಾನವನೆ ನಿತ್ಯ
ಪಡೆಯುತಲಿರೆ ಪ್ರಮುಖ್ಯ ಪ್ರಾಪ್ಯವಾದಂಥ
ಬ್ರಹ್ಮವನೆ ಸೇರುವನದೆಂತೆಂಬುದನ್ನು,
ಮೋಕ್ಷದಾ ಸಾಧನೆಗೆ ಪಡೆವಾಪ್ತದೆನುತಾ
ನಿಷ್ಠೆದಾಲ ಪೇಳುವೆನು ಕೌಂತೇಯ ಕೇಳು,"
ಎಂದೆನುತ ಪರವಾಸುದೇವ ತಾನ್ ನಗೆ
ಪೇಳಿದನೊ ವೇದಾಂತದಾ ಗಹನವಿದನೆ!

" ೫೦ "

"ಪರಿಶುದ್ಧವಾ ಆತ್ಮಜ್ಞಾನದೊಡಗೂಡಿ
ಧೈರ್ಯದಲಿ ನಿಶ್ಚಯತೆ ಮನವ ನಿಗ್ರಹಿಸಿ
ಶಬ್ದಾದಿ ವಿಷಯಗಳನಹೊ ಪೂರ್ತಿ ತೊರೆದು
ರಾಗ ದ್ವೇಷಾದಿಗಳನಡಗಿಸುತಲಂತು
ದೇಹೇಂದ್ರಿಯಗಳನ್ನು ಜಯಿಸುತಲಿ ತಾನು
ನಿಷ್ಕಾಮ ಕರ್ಮವನು ಸಮನಾಗಿ ಗೈದು
ಮನೋಭ್ರಾಂತಿಗೆ ಎಂತು ಅವಕಾಶ ಕೊಡದೆ
ಆರಿರುವನೋ ಜಗದಿ ಕೇಳಿತ್ತ ಅವನೆ—

" ೫೧ "

"ನಿರ್ಜನ ಪ್ರಶಾಂತವಾದೆಡೆ ವಾಸಿಸುತ್ತ
ಲಘುವಾದ ಆಹಾರವನೆ ಸೇವಿಸುತ್ತ
ಮನೋವಾಕ್ಕಾಯಗಳನೆಲ್ಲವನು ನಿಗದಿ
ತನ್ನ ವಶದಲಿಯಿಟ್ಟು ಸಂತೃಪ್ತನಾಗಿ,
ಧ್ಯಾನಾದಿ ಯೋಗದಲಿ ನಿರತನಾಗಿದ್ದು
ವೇದಾಂತ ಸೂತ್ರವಿದಕನುವಾಗಿ ತಾನು

1616

ವೈರಾಗ್ಯ ಜೀವನವ ನಡೆಸುತ್ತಲಿ ಇರುವ
ಅರುವನೊ ಜಗದಲ್ಲಿ ಹೋಲುತ್ತೈ ಅವನಿ—

॥ ೫೩ ॥

"ಅಹಂಕಾರ ಮಮಕಾರ ಮದ ಕಾಮ ಮೋಹ
ಕ್ರೋಧಾದಿ ದುರ್ಗುಣಗಳನು ಬಲವು ದರ್ಪ,
ಪರಿಗ್ರಹಂ ಪರೀಕ್ಷಿತಾ ತಮೋಗುಣವ
ತೊರೆಯುತಲಿ ಧ್ಯಾನಯೋಗವ ಹಿಡಿದು ನಿತ್ಯ
ಶಾಂತ ಪ್ರಶಾಂತ ಚಿತ್ತದಿ ತಾನು ಅಂತು
ಬ್ರಹ್ಮಾನಂದದ ಭಾವವನು ಹೊಂದುತಿಂದು
ಅಹರ್ನಿಶದಿ ನಿರತವಾದಿ ಜೀವಾತ್ಮ ಜ್ಯೋಯು,
ಸಾತ್ವಿಕದ ಸಂಪತ್ತು ಪರಬ್ರಹ್ಮಭಾವ!

॥ ೫೪ ॥

"ಬ್ರಹ್ಮತ್ವವನು ಹೊಂದಿದಾ ಬ್ರಹ್ಮಯೋಗಿ
ಕರ್ಮಬಂಧವನಂತು ತಾನಾಗಿ ನೀಗಿ
ಆತ್ಮದ ಭಾವದಲಿ ಶುದ್ಧಿಯಲಿ ನಿತ್ಯ
ಮನಸಿಂದು ಅಳಿಸದೆ ಇಚ್ಛಿಸದೆ ಕೇಳಾ
ಮನಸೊಂದರೂ ಶೋಕಿಸದೆ ನೋಡ್ವ ಜಗದಿ
ಸರ್ವ ಜೀವಿಗಳಲ್ಲಿ ಸಮದೃಷ್ಟಿಯಿಂದೆ
ಕಾಣುತಿಹನವನೆ ದೇವನೊ ನನ್ನ
ಪರಿಪೂರ್ಣ ಭಕ್ತಿಯನು ಹೊಂದುತಲಿ ಕೇಳಾ!

॥ ೫೫ ॥

"ಅನಾದಿ ಅನಂತ ಎಂಬುದನು ಎಲ್ಲಾ
ಭಕ್ತವರನವನಂತು ಸದ್ಭಕ್ತಿಯಿಂದಾ
ತಾನ್ ಯಥಾರ್ಥವಾಗಿ ತಿಳಿಯುವನೊ ಹಾರ್ದಿಕ
ನಿಷ್ಠೆಯಿಂದ ದಿವ್ಯತ್ವವನು ತಿಳಿದ ಭಕ್ತ—
ಪರಮೋತ್ತಮ ತನ್ನ ಭಕ್ತಿಯಲಿ ಅವನು
ನನ್ನಲ್ಲಿ ಐಕ್ಯವನು ಹೊಂದುವನೊ ನಿಜವು,"
ಎಂದೆನುತ ಶ್ರೀಕೃಷ್ಣನೆಂದನಾ ನರಗೆ
ಚಿತ್ ಶಕ್ತಿ ಭಕ್ತಿಯ ರಹಸ್ಯವಿದನಂತೆ.

॥ ೫೬ ॥

"ಕೇಳ್ ಸರ್ವ ಕರ್ಮಗಳು ಧರ್ಮಗಳನೆಲ್ಲ
ನನಗಾಗಿ ನನ್ನನ್ನೆ ಅಡಿ ದೈವವೆನುತ
ಉದ್ದೀಪಿಸುತ್ತಲಿನ್ನ ಮಹತ್ವವನು ಜಗದಿ
ಹೊಂದುವನೊ ಚಿರಂಜೀವಿ ಪದವಿಯನು ನಿಜದಿ!
ಅದಕೊಡೆಯ ಪರಮೋತ್ತಮ ಸ್ಥಾನವನ್ನು
ಪಡೆಯುವನು ನನ್ನ ಅನುಗ್ರಹದಿಂದಲವನು;

1417

ಶ್ರದ್ಧೆಯಿಂದ ಭಕ್ತಿಯಿಂದ ಕರ್ಮವನು ನಡೆಸಿ
ಪರಮನನು ಶಾಶ್ವತದ ಸ್ವರ್ಗಕ್ಕಾಯತ ನೀತಿಗೆ!

॥ ೫೬ ॥

"ಪಾರ್ಥನೆ, ಮನದಲ್ಲಿ ಕರ್ಮಗಳನ್ನು ನನಗೆ
ಅರ್ಪಿತವು ಎಂದೆನ್ನುತ ನನ್ನನ್ನೆ ನಿಜದಿ
ಕಾರಣಗಳ ಪರಮೋತ್ತಮನು ಎಂದು ಎನುತ
ಕರ್ಮಗಳನು ಜ್ಞಾನಯೋಗದೊಡನೆ ನಿರುತ
ಬೆರೆಸುತಲಿ ಭಕ್ತಜನ ನನ್ನಲ್ಲಿ ನಿತ್ಯ
ನೆಟ್ಟ ಮನದಾ ದೃಢತನದಲ್ಲಿ ಚಿತ್ತ
ಅನವರತ ಪೂಜಿಸುವವನೋ ಇಹದಿ
ಹೊಂದುವನು ಪರಮಪದವನು ಅವನು ನಿಜದಿ!

॥ ೫೭ ॥

"ಕೇಳಿಲ್ತೆ ಓ ಸವ್ಯಸಾಚಿ ನೀನ್ ಎನ್ನ,
ನನ್ನಲಿಯೆ ಮನವಿಟ್ಟು ನನ್ನನ್ನೆ ನಿತ್ಯ
ನಂಬಿದೊಡೆ ಕೇಳ್ ಎನ್ನನುಗ್ರಹದ ಬಲದಿ
ದಾಟುವಿಯೊ ದುಃಖಗಳ ಸೇತುವನು ಜಗದಿ;
ಅಂತಲ್ಲದೆಯೆ ಕೇಳು ಅಹಂಕಾರದಲಿ
ನೀನೆನ್ನ ನುಡಿಗಳನು ಆಲಿಸದೆ ಇಲ್ಲಿ
ಇದ್ದೊಡೆಯೆ ಕೇಳ್ ಕೆಡುವೆ ಹೊಂದುವೆ ನೀನು,
ದುರ್ಗದಲಿ ಪತನವಾಗುದುವೆ ಗತಿಯಂತು!

॥ ೫೮ ॥

"ಎಲೆ ಧನಂಜಯನೆ, ನೀನು ಈ ವೇಳೆಯಲ್ಲಿ
ಆ ಜ್ಞಾನದಹಂಭಾವದಲಿ ಸಮರವನ್ನು
ಎಸಗದೆಯೆ ಇರಲು ನೀನ್ ಯೋಚಿಸಿದೊಡಂತಾ—
ಅದುವು ನಿರರ್ಥಕ ಪಾರ್ಥ ಕೇಳಲಿ ಇಷ್ಟಾರ್ಥ!
ಓ ನರನೆ, ನಿನ್ನನು ಕ್ಷತ್ರಿಯ ಪ್ರಕೃತಿಯೆ
ನಿನ್ನಿಂದಲೇ ಯುದ್ಧದಾ ಕಾರ್ಯವನ್ನು
ಮಾಡಿಸುವುದಲ್ತೆ ಮಿತ್ರ, ನಿಶ್ಚಯವು ಅದುವೊ,
ಕೇಳ್ ಎಲ್ಲ ವಿಧಿನಿಯಮ ಅಂತಹುದು ನಿಜವೊ!

॥ ೫೯ ॥

"ಕೌಂತೇಯನೆ, ನೀನ್ ಕ್ಷತ್ರಿಯನಿಹೆ ಅಲ್ತೆ ಕೇಳು,
ಕ್ಷತ್ರಿಯನ ಧರ್ಮವದಕೊಪ್ಪುತಿಹುದನ್ನು,
ನಡೆಸಲಿಲ್ತೆ ಮೋಹದಿ ನೀನ್ ತೋರಿಲ್ತೆ ಕಾರ್ಯ
ಅಜ್ಞಾನದಾ ದುಃಖದಲಿ ನಿನ್ನ ಕಾರ್ಯ
ನಡೆಸದಿದ್ದೊಡೆಯೆ ನೀನ್ ಕೇಳಿಲ್ತೆ ಪಾರ್ಥ
ನಿನಗರಿಯದೆಯೆ ನಿಜದಿ ಸಮರವ ನಿನ್ನಿಂದ

ಮಾಡಿಸುವುದರೊ ನೀನು ಮನಸಿಲ್ಲದೊಡೆಯು,
ಅಂತಿಹುದಲ್ತೆ ಪ್ರಾರಬ್ಧ ಸಿತ್ಯಾದ್ರಿಸವಂತು!

॥ ೬೦ ॥

"ಅರ್ಜುನನೆ, ಏನ್ ಎಂತು ಎಂದೆನಲೊ ಈಗ?
ಇಹನು ಸರ್ವೇಶ್ವರನು ಲೋಕಗಳಲೆಲ್ಲ:
ಜೀವಿಗಳ ಹೃದಯದಲಿ ನೆಲೆಸಿಹನೆ ಅವನು
ದೇಹಾತ್ಮನಾಗೊ ದೇಹದಾ ಯಂತ್ರವನು
ತಿರುಗಿಸುತಲಿಹನು ಕೇಳ್ ಕಡೆ ದೈವ ಮಾಯೆ
ಕಪಟನಾಟಕ ಸೂತ್ರಧಾರಿಯೊಲು ಇಹನೈ,"
ಎಂದೆನುತಲಾ ಹರಿಯು ನರನಾಗಿ ಬಂದು
ಹೇಳಿದನೊ ತನ್ನ ಘನ ಆಳಿಯನು ಅಂದು.

॥ ೬೧ ॥

"ಹೇ ಭಾರತಕುಲ ಪುತ್ರ, ಕೇಳಿನಿದ ಕೇಳು,
ಶರಣಾಗಿರೈ ಎಲ್ಲ ಸರ್ವಭಾವದಿಂದು;
ಹೃತ್ಪೂರ್ವಕದಿ ನೀನು ಶರಣಾಗಿ ಹರಿಗೆ
ದೈವಾನುಗ್ರಹದಿಂದ ಪೊಂದಲೈ ಒಲದಿ
ಪರಶಾಂತಿ ಪರಮೋತ್ತಮ ಪದವಿಯನ್ನು
ಪೊಂದುವೆಯೊ ಶಾಶ್ವತಮಾ ಸುಖವನ್ನು ನೀನು —"
ಎನುತ [illegible] ಅಧ್ಯಾಯದ ಗೀತೆಯಲಿ
ಹೇಳಿದನೊ ವೇದಾಂತ ಸಮಾಧಾನವನ್ನೆ!

॥ ೬೨ ॥

"ಎಲೆ ಕಿರೀಟಿಯೆ ಕೇಳ್ ರಹಸ್ಯಗಳಲೆಲ್ಲ
ಅತಿ ರಹಸ್ಯವು ಯೆನಿಪ ಸರ್ವಗಳ ಜ್ಞಾನ
ಭಕ್ತಿಯು ಸ್ವರೂಪವು ಗುಣತ್ರಯಗಳನ್ನು
ಸನ್ಯಾಸ ತ್ಯಾಗ ವಿವಿಧ ಬಗೆ ಯೋಗಗಳನೆಲ್ಲ;
ನಡೆಸು ನೀನ್ ಕಾರ್ಯವನು ತೋರಿದೊಲು ನಿನಗೆ
ಉಪದೇಶದಾದೇಶವಿದ ಮರೆಯದಂತೆ,"
ಎಂದನು ಶ್ರೀ ಗೋಪಾಲಕೃಷ್ಣನದ ಹೇಳಿ
ತಲೆದೂಗುತಲಿ ಅರ್ಜುನನ ಮಾಧ್ಯ ನೋಡಿದ್ದೆ!

॥ ೬೩ ॥

"ಅತಿ ಗಹನವಾದೊಂದು ಮಾತಿಯದನೀಗ
ಗಹನತರದಾ ವಿಷಯದಿಂದಲಿ, ಕೇಳಾ,
ಪುನರಪಿ ಆನ್ ಹೇಳುವೆನು ಹೇ ಪ್ರಿಯಾತನಯ,
ನೀನ್ ಎನ್ನ ಆಪ್ತನಿಹೆ ನಿಜವದೈ ಪಾರ್ಥ!
ಹೇಳುವೆನೊ ಆನ್ ನಿನ್ನ ಹಿತವ ಬಯಸುತಲಿ
ಪರ ಭಕ್ತಿಯೋಗವದರಾ ಸೂಕ್ಷ್ಮವನ್ನೆ!

1419

ತಿಳಿಸಿದನು ಜನ್ಮಾಂತರಕೆ ಸಲುವಂಥ
ಪ್ರೀತಿ ಸಲ್ಲುತಿಗಳ ಸೂಕ್ತಿಗಳನಂತು ಈಗ—

" ೬೪ "

"ಹೇ ಧನಂಜಯನೆ, ನನ್ನ ನುಡಿಯನು ಕೇಳು ಇದನು,
ದಿಟ್ಟತನದಲಿ ನೆಟ್ಟನೆಯ ಮನವನಿಟ್ಟು
ನನ್ನಲಿಯೆ ಭಕ್ತಿಯನು ಇರಿಸು ನನ್ನ ಸ್ಮರಿಸು
ನನ್ನ ಆರಾಧಿಸುತ್ತಿ ನಮಿಸುವನು ಕೇಳು,
ಅಂತಾದೊಡೆಯೆ ನೀನು ಸೇರುವಿಯೊ ನನ್ನ,
ನೀನ್ ಎನಗೆ ಪ್ರಿಯತಮನೆಂದನವ್ಯವೆನೊ ಮಿತ್ರ;
ಸಂಶಯ ಬಿಡು ಆನ್ ಹೇಳುತ್ತಿಹೆನಿದನು
ಪ್ರತಿಜ್ಞಾ ಪೂರ್ವಕದೊಡೆ ಹೇಳಿದೆನು ಎಲ್ಲ!

" ೬೫ "

"ಜಗದಿ ಇಹ ವಿವಿಧ ಮತ ಧರ್ಮವಿದನೆಲ್ಲ
ತ್ಯಜಿಸುತ್ತಲಿ ಕೇಳುತ್ತ ಕೌಂತೇಯನೆ ಎನ್ನ!
ಪಾಪಗಳು ಇರೆ ಸತತ ಹಿಂದರದೆಯು ಅವಕೆ
ಶರಣಾಗಿರ್ತ್ವ ನಿನಗೆ ಅನಿಹೆನು ನಿಜದಿ!
ಆನ್ ಸರ್ವ ಪಾಪವದರಿಂದ ಕೇಳ್ ನಿನ್ನ
ಬಿಡಿಸುವೆನು ಮರುಗದಿರು ಮಾಳ್ಪೆ ತ್ರಾಹಿ;
ಮಾಳ್ ಧರ್ಮದ ಸನ್ನದ್ಧನಾಗು ನೀನ್ ಇನ್ನ,
ಅನಿಹೆನು ಇಲ್ಲಿಹೆನು ಮರುಂದಿಹೆನು ಮಾಳ್ಪು!

" ೬೬ "

"ಆನ್ ಹೇಳಿಹ ನುಡಿ ರಹಸ್ಯವಿದನೆಲ್ಲ
ಪಾಪಾತ್ಮರಿಗು ತಪೋಹೀನರಿಗು ಕೇಳ,
ಭಕ್ತಿ ಪ್ರೀತಿಯಿಂದೆನ್ನ ನೋಡದಿಹಗಂತು
ದ್ವೇಷದಲಿ ನಿಂದಿಸುವ ದುಷ್ಟಮೂರ್ಖರಿಗು,
ಹೇಳದಿರು ಗಹನವಹ ವಿಷಯಗಳನು
ಕೇಳುವವನು ಹಳಿಯುತಿಹ ಕೇಡಿಗರಿಗದನು,"
ಎಂದೆನುತ ಭಗವಂತ ನಂದನಂದನನು
ಹೇಳಿದನು ಭಗವದ್ಗೀತಾ ಸಾರವ ಕೇಳ!

" ೬೭ "

"ಕೇಳುತಿರು ಅರ್ಜುನನೆ, ಕಡೆಗೊಂದೆ ಬಂತು;
ಈ ರಹಸ್ಯದ ವಿಷಯವಿದನೆಲ್ಲ ಕೇಳ್ವ—
ಅರಿಸು ಭಕ್ತರಿಗೆ ಹೇಳುವನೊ ಬಿಡದೆ
ಆವನಿನ್ನು ಅವನು ಪಡೆಯುವನು ಜ್ಞಾನ ನಿಜದಿ!
ಸೇರುವನೊ ಆವನಿನ್ನು ಸ್ವರ್ಗದಲಿ ಮತ್ತೆ,
ಸಂದೇಹವದು ಬೇಡವೋ ಧನಂಜಯನೆ,"

ಎಂದೆನುತಲಾ ಹರಿಯು ಹೇಳಿದನು ತನ್ನ 1420
ಮಾಯಾ ಮಹತ್ತ್ವವನು ಮಾನವನಿಗಾಗ!

" ೧೮ "

"ಕೇಳ್ ಮತ್ಪ್ರತ್ಯಕ್ಷೋಪದೇಶದಲಿ ಸ್ವೀಕರಿಸುವವರೆಲ್ಲ
ಆ ಮನುಜರೇ ನನಗೆ ಅತಿ ಪ್ರಿಯತಮರು ನಿಜವು;
ಭಕ್ತವರರನು ಮೀರಿಹರು ಇಲ್ಲ ಬೇರೆ,
ಮುಂದಿನಾ ದಿನಗಳಲಿ ಅಂತಿಹರು ನನಗೆ;
ಪ್ರಿಯ ಭಕ್ತರಾರೊ ಎಲ್ಲಿ ಇರಲಾರರಂತೆ
ಆಸ್ ಮತಿಹೀನರಾ ಭಕ್ತರೇ ನನಗೆ ಹಿತರು,"
ಎಂದನು ಹರಿ ನಾರಾಯಣನು ಹೇಳ್ದನದು
ತನ್ನ ಶಿಷ್ಯ ಭಕ್ತವರ ಕೌಂತೇಯಗಂದು.

" ೧೯ "

"ಕೇಳಿತ್ತೆ ಪಾಂಡವನೆ ಆವ್ ಇಲ್ಲಿ ಕೂಡಿ
ನಡೆಸಿದೀ ಧಾರ್ಮಿಕದ ಸಂವಾದವಿಲ್ಲಿ
ಧರ್ಮವನೆ ಬೋಧಿಸುವ ವಿಷಯವಿದನೆಲ್ಲ
ಆರ್ ಅಧ್ಯಯನ ನಡೆಸಿ ಪಠಿಸುವನೊ ಕೇಳಾ,
ಅಂತಹವನು ಪರಜ್ಞಾನ ಯಜ್ಞದಿಂದೆನ್ನ
ಆರಾಧಿಸುವನೆಂದೆನುತ ತಿಳಿವೆ ಮಿತ್ರ,
ಧರ್ಮಯಜ್ಞವನೆಸಗಿ ಶಕ್ತಿಸದನಿಂದ
ಗ್ರಹಿಸುವನೊ ಗಾಂಡೀವಿ ಕೇಳ್ ನನ್ನನಿಂದು.

" ೨೦ "

"ಅಹಹಾ ಅರ್ಜುನನೆ, ನುಡಿಗಳಿದನೆಲ್ಲ
ಅರಿಸದಿದೊಡೆ ಹಿಡಿಯು ಕೇಳ್ ಶ್ರದ್ಧೆಯಲಿ ನನ್ನ
ದ್ವೇಷಿಸದೆ ಅಸೂಯೆ ಅವಗೆ ಇಲ್ಲದೆಯೆ ಕೇಳ್ವ
ಗೀತೆಯಿದನಾಲಿಸುವ ನರವನು ಅವನೇ
ಪಾಪದಿಂದಲೆ ತಾನು ಪಾರಾಗಿ ಇಹದಿ
ಸೇರುವನು ಕಡೆಗಿನ್ನ ಭಕ್ತವರರನ್ನು—
ಕೇಳ್ ಪುಣ್ಯಾತ್ಮರುಗಳು ನೀಡಿಗಾ ಉತ್ತಮನು
ಪಡೆಯುವನು ಪರಮ ಗತಿಯನು ಪಾರ್ಥ ನಿಜವು!

" ೨೧ "

"ಎಲೆ ಮಿತ್ರ, ಆಲಿಸಿದೆಯೊ ಇದನು ಎಲ್ಲ
ಈ ಪರಿಗೆ ಆಸ್ ಅಂದುದನು ನಿಶ್ಚಯಿಂದ?
ಆಲಿಸಿದೆಯೊ ಹೇಳು, ಅದರಿಂದ ಅಂದು
ನಿನ್ನ ಮನದಾಳದಲಿ ಅಡಗಿದ್ದ ತಮವು
ಅಜ್ಞಾನದಾ ಕತ್ತಲೆಯು ಹರಿಯಿತೇನೈ?
ಜ್ಞಾನೋದಯವು ಆಯಿತೆ? ಹೇಳು ಧನಂಜಯ?"

ಇಂತು ಭಗವಂತ ನರನೊಳು ಉಲಿದು ನೋಡಿ
ಗೀತಾಮೃತವ ಇದನು ಉಣಿಸಿದನು ನರಗೆ!

|| ೭೩ ||

ಇಂತೆನಲು ಫಲ್ಗುಣನು ಹರಿಗೆ ಇನಿತೆಂದಾ:-
"ಅಚ್ಯುತನೆ ಎನ್ ಅನುಗ್ರಹಿತನಾದೆ ಕೇಳಾ,
ಅಜ್ಞಾನವದು ಕಳೆದು ಸ್ವಜ್ಞಾನವನ್ನು,
ತ್ವತ್ಪದ ಯಥಾರ್ಥ್ಯವದು ತಿಳಿದೆ ಎನ್ ದೇವಾ,
ಸಂದೇಹವದು ತೊಲಗಿ ಮನವಂತು ಬೆಳಗಿ
ಪರಮಾರ್ಥ ಜ್ಞಾನದ ಹೊಂಬೆಳಕನ್ನು ತೋರಿ
ನೆಲೆಹಿಡಿದೆನೊ ಗೋಪಾಲ ನೀನ್ ಚೋರಪಾಲ,
ನಡೆವೆ ಎನ್ ನೀನ್ ವಿಧಿಸಿದಾ ತೆರನ ಕೇಳಾ!"

|| ೭೪ ||

ಹರಿ-ಪಾರ್ಥರಾ ಸಂಭಾಷಣೆಯಂತು ನಡೆಯೆ
ಧೃತರಾಷ್ಟ್ರ ಸಂಜಯರು ಒಂದೆಡೆಯುಲಿದನೆ
ನೋಡುತ್ತಲಿ ಸಂಜಯನು ಇಂತೆಂದ ನೃಪಗೆ:
"ಓ ರಾಜ, ಸಮರಾಂಗಣದ ಮಧ್ಯೆ ಇಂದೆ
ಶ್ರೀಕೃಷ್ಣ ಗಾಂಡೀವಿಯರು ನಡೆಸಿದಂತಾ
ಅಧ್ಯಾತ್ಮ ವೇದಾಂತ ಬೋಧಾಂತವದನಾ
ಆಲಿಸುತ್ತೆ ರೋಮಾಂಚನದೆ ಮೈ ಕಣ್ಗಳವೊ
ನಡುಗುತಿಹುದೇನ್ ಹೇಳಲೊ ಇಂದು ನಾನೊ?

|| ೭೫ ||

"ಅತಿ ರಹಸ್ಯವೊ ಮಾತು ಸಂವಾದವಿದುವೊ
ಯೋಗ ಶಾಸ್ತ್ರದ ಗಹನವಾದನೆಲ್ಲವಂತೊ,
ಪರಮಾತ್ಮ ಹರಿ ಕೃಷ್ಣ ಸಾಕ್ಷಾತ್ತು ಇಲ್ಲಿ,
ಫಲ್ಗುಣನಿಗದ ಕೇಳ್ ಸಾರವಾಹಿಯಾಗಿ
ಹೇಳುತ್ತಿರೆ ಆಲಿಸಿದೆ ವ್ಯಾಸಾನುಗ್ರಹದಿ
ಗೀತಾಮೃತವ ಸೇವಿಸುವ ಭಾಗ್ಯ ಪಡೆದೆ,"
ಎಂದೆನುತ ಸಂಜಯನು ಧೃತರಾಷ್ಟ್ರಗಂದು
ಹೇಳಿದನೊ ನಡೆದುದನು ಎಲ್ಲವನು ತಾನು!

|| ೭೬ ||

"ಕುರುಪತಿಯೆ, ಕೇಳುತ್ತೆ ಹೇಳ್ವೆನಿದನದನೆ,
ಅದ್ಭುತವೊ ಅಧ್ಯಾತ್ಮವಿದು ಗೀತಾ ವಾರ್ತೆ!
ಕೃಷ್ಣಾರ್ಜುನರು ನಡೆಸಿದಾ ಮಾತುಕತೆಯಾ
ನೆನೆಯುತ್ತಿಹೆನಹೊ ನಾನು ಕ್ಷಣಕ್ಷಣಕು ಕೇಳಾ,
ಮುಳುಗುತಿಹೆನಾನಂದದಲಿ ಅದನೆ ನೆನೆದು
ಓ ರಾಜ, ಎನ್ ರಾಜ್ಯ, ಇದೆ ಪುಣ್ಯವಂತ!"

ಎಂದೆನುತ ತಿಳಿದೊ ಸಂಜಯನು ಕುರುಡು ನೃಪನಿಗೆ 1422
ಹೇಳಿದನು ತಾನ್ ಹೊಂದಿದಾನಂದವಿದನೆ!

॥ ೭೬ ॥

"ನೆನೆಯುತಿಹೆ ಹೇ ರಾಜ ವರ ವಿಶ್ವರೂಪ
ಅತ್ಯದ್ಭುತವೊ ದಿವ್ಯ ಮಾಯೆಯ ಹೊಳಪು;
ವನಿನತಿಯೊ ವರ ವಾಸುದೇವನಾ ಮಹಿಮೆ,
ಯೋಗಗಳನೆಲ್ಲವನು ತಾನ್ ಹೊತ್ತ ಬಲ್ಮೆ;
ಅತ್ಯಾಶ್ಚರ್ಯದಿ ನೆನೆವೆ ಹೇ ರಾಜ ಕೇಳ್ವೆ,
ಮಗದೊಮ್ಮೆ ಆನ್ ನೆನೆವೆ ಕುರುಪತಿಯೆ ಅದನೆ,"
ಎಂದೆನುತಲಾ ಯೋಗಿ ಸಂಜಯನು ನೃಪನಿಗೆ
ಕಿರಗಾಂತು ಹೇಳ್ದನಿಕೊ ಜಿಲುಮಾತಿನ ಗೀತೆ!

॥ ೭೭ ॥

"ಕೇಳಿತ್ತೆ ಕುರುಪತಿಯೆ, ಕೊನೆಗಂತು ಹಿಮ್ಮೆ,
ಯೋಗೇಶ್ವರನು ಕೃಷ್ಣ ಯಾವೆಡೆಯಲಿಹನೊ,
ಅಲ್ಲಿಹನು ವರ ಧನಂಜಯನಂತು ನಿಜವೊ;
ಮತ್ತರಿಹರಿಯು ಧನುರ್ಧಾರಿಯರು ಎಲ್ಲಿ ಇಹರೊ,
ಅಲ್ಲಿಹರು ಲಕ್ಷ್ಮೀ ಭೂಲಕ್ಷ್ಮೀ ಜಯಲಕ್ಷ್ಮೀ,
ಸಿರಿ ಸಂಪದದಿ ಯೋಗವಾ ನ್ಯಾಯ ನೀತಿ —
ಕೇಳ್ ಭೂಕೈಲಾಸವೊಂದಾಗಲದೆ ರಾಜ್ಯ,
ಹೇ ರಾಜವದೆ ತೇಜವದೆ ಓಜ-ಪ್ರಾಜ್ಯ!!!"

॥ ೭೮ ॥

—— x ——

(ಹದಿನೆಂಟನೇ ಅಧ್ಯಾಯ ಸಂಪೂರ್ಣವು)

—— x ——

ಜೈ ಜಗತ್

J. K. Mukhanji,
Vancouver B.C.
Canada
20/6/82.

ಪಿ. ಮಾ. ಮುತ್ತಣ್ಣ.
20/6/1982.

ಎಂದೆನುತ ತಲೆದೊ ಸಂಜಯನು ಕುರುಪತಿ ನೃಪಗೆ 1493
ಹೇಳಿದನು ತಾನ್ ಪೊಂದಿದಾನಂದವಿದನೆ!

" ೭೬ "

"ನೆನೆಯುತಿಹೆ ಶ್ರೀರಾಜ ವರ ವಿಶ್ವರೂಪವು
ಅತ್ಯದ್ಭುತವು ದೈವ ಮಾಯೆಯಾ ಪೊಳಪು;
ವನಿಸುತೊ ಪರ ವಾಸುದೇವನಾ ಮಹಿಮೆ,
ರೋಮಗಳು ನಿಲ್ಲುವವು ತಾನ್ ಪೊತ್ತ ಬಲ್ಕೆ;
ಆತ್ಯಾಶ್ಚರ್ಯದಿ ನೆನೆವೆ ಶ್ರೀರಾಜ ಕೇಳ್ವೆ,
ಮಗದೊಮ್ಮೆ ಆನ್ ನೆನೆವೆ ಕುರುಪತಿಯೆ ಆದನ್ನೆ,"
ಎಂದೆನುತಲಾ ಯೋಗಿ ಸಂಜಯನು ನೃಪಗೆ
ಬೆರಗಾಂತು ಹೇಳ್ದನಿಕೊ ಚೆಲುವಾರ್ತ ಗೀತೆ!

" ೭೭ "

"ಕೇಳಿತ್ತೆ ಕುರುಪತಿಯೆ, ಕೊನೆಗಂತು ಸುಮ್ಮೆ,
ಯೋಗೇಶ್ವರನು ಕೃಷ್ಣ ಯಾವೆಡೆಯಲಿಹನೊ,
ಅಲ್ಲಿಹನು ಪರ ಧನಂಜಯನಂತು ನಿಜವು;
ಪುರಹರಿಯು ಧನುರ್ಧಾರಿಯವರು ಎಲ್ಲಿ ಇಹರೊ,
ಅಲ್ಲಿಹರು ಲಕ್ಷ್ಮಿ ಭೂಲಕ್ಷ್ಮಿ ಜಯಲಕ್ಷ್ಮಿ,
ಸಿರಿ ಸಂಪದದಿ ಯೋಗವಾ ನ್ಯಾಯ ನೀತಿ —
ಕೇಳ್ ಭೂಕ್ವೆಲಿಸವೊಂದಾಗಲದೆ ರಾಜ್ಯ,
ಶ್ರೀ ರಾಜವದೆ ತೇಜವದೆ ಜಿ-ಭೂಜ್ಯ!!!"

" ೭೮ "

(ಹದಿನೆಂಟನೇ ಅಧ್ಯಾಯ ಸಂಪೂರ್ಣವು)

ಜೈ ಜಗತ್

[illegible],
Vancouver B.C
Canada
20/6/182.

ಟಿ. ಮ. [illegible].
20/6/1982.

ಪರಿಶಿಷ್ಟ

ಶ್ರೀ ಕೃಷ್ಣನಿಗೆ ಇಲ್ಲಿ ಬಳಸಲಾದ ಕೆಲವು ಹೆಸರುಗಳು:—

ಕೃಷ್ಣ, ಹರಿ, ನರಹರಿ, ಮುರಾರಿ, ವಾಸುದೇವ, ಕಾಳೀಯ ಮರ್ದನ, ಗೋಪಾಲ, ಗೋವಿಂದ, ಜನಾರ್ದನ, ಪಾರ್ಥಸಾರಥಿ, ಪುಂಡರೀಕಾಕ್ಷ, ಮಧುಸೂದನ, ದೇವಕೀನಂದನ, ಸರ್ವೇಶ್ವರ, ಭಗವಂತ, ವಸುದೇವಸುತ ಇತ್ಯಾದಿ.

ಅರ್ಜುನನನ್ನು ಕುರಿತಾಗಿ ಇರುವ ಈ ಪ್ರಸಿದ್ಧ ಹತ್ತು ಹೆಸರುಗಳನ್ನು ಇಲ್ಲಿ ಉಪಯೋಗಿಸಲಾಗಿದೆ:—

ಅರ್ಜುನ, ಕೌಂತೇಯ, ಗಾಂಡೀವಿ, ಧನಂಜಯ, ನರ, ಫಲ್ಗುಣ, ಪಾರ್ಥ, ಸವ್ಯಸಾಚಿ, ಕಿರೀಟಿ, ಪೃಥಾತನಯ.

ವೇದಗಳು — ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ. (ಭಗವದ್ಗೀತೆಯನ್ನು ಐದನೇ ವೇದವೆಂಬುದಾಗಿ ಹಿಂದಿನಿಂದಲೇ ಹೇಳುತ್ತಾ ಬಂದಿದ್ದಾರೆ.)

ತ್ರಿಲೋಕಗಳು:— ಸ್ವರ್ಗ, ಮರ್ತ್ಯ, ಪಾತಾಳ.

ಸಾಂಖ್ಯಯೋಗ — ನಿತ್ಯ, ನಿರಂತರ ಆತ್ಮಸನ್ನಿಧಾನದಿಂದ ಕೂಡಿದ ಮತ್ತು ಗುಣತ್ರಯಾದಿಗಳ ಮೂಲಕ, ಪ್ರಕೃತಿಯನ್ನು ತಿಳಿಯುವ ಮಾರ್ಗ; (ಇದರ ಮಹತ್ವವಾದ ಅರ್ಥವು ತುಂಬಾ ವಿಸ್ತೃತವಾಗಿದೆ.)

ಹದಿನಾಲ್ಕು ಲೋಕಗಳು — ಭೂಲೋಕ, ಭುವರ್ಲೋಕ, ಸುವರ್ಲೋಕ, ಮಹರ್ಲೋಕ, ಜನೋಲೋಕ, ತಪೋಲೋಕ ಮತ್ತು ಸತ್ಯಲೋಕ ಎಂದು ಮೇಲಿನ ಲೋಕಗಳು.

ಅತಲ, ವಿತಳ, ಸುತಳ, ತಳಾತಳ, ರಸಾತಳ, ಮಹಾತಳ, ಪಾತಾಳ- ಎಂಬುದಾಗಿ ಕೆಳಗಿನ ಏಳು ಲೋಕಗಳು.

ಸಪ್ತ ಋಷಿಗಳು — ಮರೀಚಿ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು ಮತ್ತು ವಸಿಷ್ಠ.

ಮನುಗಳು — 1. ಸ್ವಾಯಂಭುವ, 2. ಸ್ವಾರೋಚಿಷ, 3. ಉತ್ತಮ, 4. ತಾಮಸ, 5. ರೈವತ 6. ಚಾಕ್ಷುಷ, 7. ವೈವಸ್ವತ, 8. ಸೂರ್ಯ- ಸಾವರ್ಣಿಕ, 9. ದಕ್ಷ ಸಾವರ್ಣಿಕ, 10. ಬ್ರಹ್ಮ ಸಾವರ್ಣಿಕ, 11. ಧರ್ಮ ಸಾವರ್ಣಿಕ, 12. ರುದ್ರ ಸಾವರ್ಣಿಕ, 13. ರೌಚ್ಯ, ಮತ್ತು 14. ಇಂದ್ರ ಸಾವರ್ಣಿಕ ಎಂಬೀ ಹದಿನಾಲ್ಕು ಮನುಗಳು.

ಹನ್ನೆರಡು ಸೂರ್ಯರು — 1. ಧಾತಾ 2. ಆರ್ಯಮಾ 3. ಮಿತ್ರ, 4. ವರುಣ, 5. ಇಂದ್ರ, 6. ವಿವಸ್ವಾನ್, 7. ಪರ್ಜನ್ಯ, 8. ಪೂಷ್ಣ, 9. ಅಂಶುಮಾನ್, 10. ಗಭಸ್ತಿಮಾನ್, 11. ತ್ವಷ್ಟ್ರ, 12. ವಿಷ್ಣು.

ಹನ್ನೊಂದು ರುದ್ರರು — 1. ವೀರಭದ್ರ 2. ಶಂಭು 3. ಗಿರೀಶ 4. ಅಜೈಕಪಾತ್ 5. ಅಹಿರ್ಬುಧ್ನ್ಯ, 6. ಪಿನಾಕಿ, 7. ಸ್ಥಾಣು, 8. ಪಶುಪತಿ, 9. ಭವ, 10. ಉಗ್ರ ಮತ್ತು 11. ತ್ರಿಲೋಚನ.

ಎಂಟು ವಸುಗಳು — 1. ಧರ 2. ಧ್ರುವ 3. ಸೋಮ 4. ಅಹ 5. ಅನಿಲ 6. ಅನಲ 7 ಪ್ರತ್ಯೂಷ 8. ಪ್ರಭಾಸ.

ಪಂಚ ಭೂತಗಳು — 1. ನೆಲ 2. ಜಲ 3. ಅಗ್ನಿ 4. ವಾಯು ಮತ್ತು 5. ಆಕಾಶ.

ಜ್ಞಾನೇಂದ್ರಿಯಗಳು — 1. ಕಿವಿ 2. ಕಣ್ಣು 3. ಮೂಗು 4. ನಾಲಗೆ ಮತ್ತು 5. ಚರ್ಮ.

ಕರ್ಮೇಂದ್ರಿಯಗಳು — 1. ಬಾಯಿ 2. ಪಾದ 3. ಪಾಣಿ 4. ಪಾಯು ಮತ್ತು 5. ಗುಹ್ಯ. (ಹೀಗೆ ಹತ್ತು ಇಂದ್ರಿಯಗಳು — ಇವಕ್ಕೆ ಹನ್ನೊಂದನೇದಾಗಿ "ಮನಸ್ಸು" ಇದನ್ನು ಸೇರಿಸುವರು).

ಶಬ್ದಾದಿ ವಿಷಯಗಳು — 1. ಶಬ್ದ 2. ಸ್ಪರ್ಶ 3. ರೂಪ 4. ರಸ ಮತ್ತು 5. ಗಂಧ.

ಭೋಜ್ಯ ವಿಧಗಳು — 1. ಭಕ್ಷ್ಯ 2. ಭೋಜ್ಯ 3. ಲೇಹ್ಯ 4. ಚೋಷ್ಯ ಮತ್ತು 5. ಪಾನೀಯ.

ಹದಿನೆಂಟರ ಮಹತ್ವ — ಭಗವದ್ಗೀತೆಯಲ್ಲಿ ಒಟ್ಟಾಗಿ ಹದಿನೆಂಟು ಅಧ್ಯಾಯಗಳು; ಇದಕ್ಕೆ ಆಧಾರವಾಗಿ ಹದಿನೆಂಟು ಪುರಾಣಗಳು; ಮಹಾಭಾರತದಲ್ಲಿ ಒಟ್ಟಾಗಿ ಹದಿನೆಂಟು ಪರ್ವಗಳು, ಕುರುಕ್ಷೇತ್ರ ಯುದ್ಧ ಹದಿನೆಂಟು ದಿನಗಳು —.

ಚಾತುರ್ವರ್ಣ್ಯ: — ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬೀ ನಾಲ್ಕು ಜಾತಿಗಳನ್ನು, ಆಯಾ ಜನರು ನಡೆಸುತ್ತಿರುವ ಉದ್ಯೋಗಕ್ಕನುಸಾರವಾಗಿ ಹೆಸರಿಂದ ಇಲ್ಲಿ ಪ್ರಸ್ತಾಪಿಸಿದೆ.

ಗುಣತ್ರಯ — ಸತ್ವ, ರಜಸ ಮತ್ತು ತಾಮಸ ಗುಣಗಳನ್ನು ಇಂದಿನ ಮನೋಗತಕ್ಕನುಸಾರವಾಗಿ ಮತ್ತು ವೈಜ್ಞಾನಿಕವಾಗಿ ಇಲ್ಲಿ ವಿವರಿಸಲಾಗಿದೆ.

ಷಡ್ವೈರಿಗಳು — ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ. (ಇವುಗಳಲ್ಲಿ "ಮೋಹ" ಇದು ಕಾಮದಿಂದ ಬಂದುದು, ಆದರೆ ಕಾಮವೆಂಬ ಆದಿಪದ ಮೊದಲೇ ಬಂದಿರುವುದರಿಂದ "ಮೋಹ" ಎಂಬುದರ ಬದಲಿಗೆ "ಭಯ" ಇದನ್ನು ಹೇಳಬಹುದು. ಈ "ಭಯ" ದಲ್ಲೂ ಹಲವು ತರವಿದೆ. ಪ್ರಾಣಭಯ, ಮಾನಭಯ, ರಾಜಭಯ, ವೈರಿ ಭಯ, ಅಗ್ನಿ ಭಯ, ನೀರು ಭಯ, ಇನ್ನೊಬ್ಬನಿಂದ ಅಪಾಯ ಸಂಭವಿಸುವುದೋ ಎಂಬ ಭಯ, ವಾಹನ ಭಯ, ಭವಿಷ್ಯವೇನಾಗುವುದೋ ಎಂಬ ಭಯ ಇತ್ಯಾದಿಗಳನ್ನು ಹೇಳಬಹುದು.)